ISSN: 2320-9941

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
LITERATURE, CULTURE - RESEARCH QUARTERLY PEER - REVIEWED JOURNAL
ISSN: 2320-9941
ಸಂಪುಟ: 09, ಸಂಚಿಕೆ 01, ಜನವರಿ - ಮಾರ್ಚ್ 2025
VOLUME: 09, ISSUE: 01, JANUARY - MARCH 2025

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

ಸೃಜನಶೀಲ : ಸಣ್ಣ ಕಥೆ

ಉಲೂಪಿ - ಡಾ. ಜ್ಯೋತಿ ಕೆ. ಬಿ

ಸೃಜನೇತರ : ಸಂಶೋಧನೆ

ಬಸವಣ್ಣನವರ ವಚನಗಳಲ್ಲಿ ಜೀವನಪ್ರೀತಿ - ಡಾ. ಮೀನಾಕ್ಷಿ
ವೈರಮುತ್ತು ಸಾಹಿತ್ಯ - ಜನಪರ ಕಾಳಜಿ – ಮಲರ್ ವಿಳಿ ಕೆ
ಬಾಣನ ಕಾದಂಬರಿ: ಕರ್ಣಾಟಕ ಕಾದಂಬರಿಯ ಕಥಾ ಸ್ವರೂಪ ಒಂದು ವಿವೇಚನೆ - ಡಾ. ಪ್ರಸನ್ನಕುಮಾರ್ ಕೆ
ಬದಲಾದ ಕಾಲಘಟ್ಟದಲ್ಲಿ ಕನ್ನಡ ಸಣ್ಣ ಕಥಾ ಸಾಹಿತ್ಯದ ನೆಲೆಬೆಲೆ - ಹೊನ್ನರಾಜು ಎಸ್. ವಿ
ಖಂಡಕಾವ್ಯದಲ್ಲಿ ಮುಟ್ಟಿನ ಅಂಶಗಳು - ಡಾ. ಚಿಕ್ಕಣ್ಣ. ಬಿ. ಎಸ್
ಕನಕದಾಸರ 'ರಾಮಧಾನ್ಯ ಚರಿತ್ರೆ'ಯಲ್ಲಿ ವರ್ಗ ಸಂಘರ್ಷ - ಡಾ. ಶರಣಪ್ಪ ಆಡಕಾರ
ಬೆಣ್ಣೆಕಲ್ಲು ಶಾಸನ – ಒಂದು ವಿಶ್ಲೇಷಣೆ - ರಘುಪ್ರಸಾದ ಟಿ
ಅನುಭವ ಮಂಟಪ - ತಾತ್ವಿಕ ವಿಚಾರಗಳು - ಡಾ. ಸಂತೋಷ್ ಕುಮಾರ್ ಆರ್. ಎಂ
ಎಚ್. ಟಿ. ಪೋತೆ ಅವರ ಕಥೆಗಳಲ್ಲಿ ಪ್ರತಿರೋಧದ ನೆಲೆಗಳು -ಕಿರಣ ವಲ್ಲೇಪುರೆ
ಎಂ. ಎಸ್. ವೇದಾ ಅವರ ಕಾದಂಬರಿಗಳಲ್ಲಿ ಸ್ತ್ರೀ - ಡಾ. ಮೈತ್ರಿ ಭಟ್
ವಚನ ಮತ್ತು ದಾಸ ಸಾಹಿತ್ಯ : ಅನುಸಂಧಾನ - ಡಾ. ಹೆಚ್.ಎಂ. ಮಲ್ಲಿಕಾರ್ಜುನ
ಭಾಷೆ ಮತ್ತು ಸಂಸ್ಕೃತಿ : ಬಾಂಧವ್ಯ - ರಾಜೇಶ್ವರಿ ವೈ. ಎಂ
ನಾಟ್ಯಾಣ್ವಾಂಶಗಳ ಮೂಲಕ ಭಾಷಾ ಕೌಶಲಗಳ ಕಲಿಕಾ ಪ್ರಯೋಗ - ದಿವಾಕರ ಜೆ
ಮಹಿಳಾ ಅಂಕಣ ಬರಹಗಳಲ್ಲಿ ಸಾಮಾಜಿಕ ಚಿಂತನೆ - ಭವ್ಯ ಎಂ.ಎಸ್
ಉಸುರಿನ ಪರಿಮಳವಿರಲು – ಡಾ. ರವಿಶಂಕರ್ ಎ.ಕೆ
ಸುಧಾ ಮೂರ್ತಿಯವರ ಕಾದಂಬರಿಗಳಲ್ಲಿ ಪತ್ತೆದಾರಿಯ ತಂತ್ರ (ಋಣ ಕಾದಂಬರಿ ಅನುಲಕ್ಷಿಸಿ) - ಡಾ. ಮಹಾಂತೇಶ್ ದುರಗಣ್ಣವರ
TRANSLATION AND TRANS CREATION: RECREATING HISTORY IN VASUDHENDRA'S 'TEJO TUNGA BHADRA' - DR. JAYASHREE B

ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ

literature, culture - Research Quarterly Peer - Reviewed journal

ISSN: **2320–9941**

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

ಸಂಪುಟ: 09, ಸಂಚಿಕೆ 01, ಜನವರಿ – ಮಾರ್ಚ್ 2025

VOLUME: 09, ISSUE: 01, January - March 2025

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಪ್ರಕಟಣೆ :
ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ
ತೋಟದ ಮನೆ ನಂ 107(25)
ಕಂಚಾಘಟ್ಟ ಹೊಸ ಬಡಾವಣೆ
ತಿಪಟೂರು 572201
e-mail: prathispandha@gmail.com
wibsite : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಡಾ. ಸರಸ್ವತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಬಿ.ಎಂ.ಎಸ್ ಸ.ಪ್ರ.ದ.ಕಾ, ಹುಳಿಯಾರು
ತುಮಕೂರು ಜಿಲ್ಲೆ, ಕರ್ನಾಟಕ

Dr. Saraswati K. B
Associate Professor, Department of English
BMS GFGC, Huliyar
Tumkur District, Karnataka

ಡಾ. ದತ್ತಾತ್ರೆಯ ಎಂ
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ
ಶಿವಮೊಗ್ಗ ಜಿಲ್ಲೆ, ಕರ್ನಾಟಕ

Dr. Dattatreya M.
Associate Professor, Department of English
Kuvempu University, Jnanasahyadri,
Shankaraghatta
Shivamogga Dist, Karnataka

ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

Dr. M. Rangaswamy
Assistant Professor,
Department of Kannada
University Of Madras,
Chenni, Tamil Nadu

ಡಾ. ಜ್ಯೋತಿ ಕೆ. ಬಿ.
ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Jyoti K. B.
Professor, Department of English
Govt. First Grade College, Koratagere,
Tumkur District, Karnataka

ಡಾ. ಗೋವಿಂದರಾಯ ಎಂ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ
ತುಮಕೂರು ಜಿಲ್ಲೆ, ಕರ್ನಾಟಕ

Dr. Govindaraya M.
Associate Professor
Department of Kannada
Govt. First Grade College, Madhugiri
Tumkur District, Karnataka

ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು, ಸ್ವಾಯತ್ತ, ವಸಂತನಗರ
ಬೆಂಗಳೂರು, ಕರ್ನಾಟಕ

Anitha K. V.
Assistant Professor, Department of Kannada
Mount Carmel College Autonomous, Vasanthnagar
Bengaluru, Karnataka

ಡಾ. ರವಿಶಂಕರ್ ಎ. ಕೆ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ, ಕೆ. ನಾರಾಯಣಪುರ
ಬೆಂಗಳೂರು, ಕರ್ನಾಟಕ

Dr. Ravishankar A. K.
Assistant Professor, Department of Kannada
Kristu Jayanti College Autonomous, K. Narayanapura
Bengaluru, Karnataka

ಸಿದ್ಧರಾಮಯ್ಯ ಡಿ. ಎಂ
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Siddaramaiah D. M
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

ಪ್ರೊ. ರಾಮು ಟಿ. ಡಿ.
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Ramu T. D
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ಸಂಪಾದಕೀಯ...

To seek is to suffer - Zen Quote

ತನ್ನ ಜೀವನದ ಉತ್ಕೃಷ್ಟ ಹಂತದಲ್ಲಿ ಹಣ, ಪ್ರೀತಿಸುವ ಕುಟುಂಬ, ಜನಪ್ರಿಯತೆ, ಹೆಸರು, ಸಾಹಿತ್ಯ ಸೃಜನಶೀಲತೆಗಾಗಿ ವಿಶ್ವಮಾನ್ಯತೆ ಎಲ್ಲವನ್ನೂ ಗಳಿಸಿ, ತನ್ನ ಮಧ್ಯಪ್ರಾಯದಲ್ಲಿ ಇದ್ದಕ್ಕಿದ್ದ ಹಾಗೆ, ಇವೆಲ್ಲವೂ ತನ್ನ ಜೀವನಕ್ಕೆ ಯಾವುದೇ ಅರ್ಥ ನೀಡುವುದರಲ್ಲಿ ಸೋಲುತ್ತಿವೆ ಎಂದು ಅನ್ನಿಸಿದ ಆ ಕ್ಷಣದಲ್ಲಿ ಲಿಯೋ ಟಾಲ್ಸ್‌ಟಾಯ್‌ಗೆ ಸಾವಿನ ಭಯದ ಪರಿಚಯವಾಗಿತ್ತು.

ಯುದ್ಧ ಮತ್ತು ಶಾಂತಿ, ಅನ್ನಾಕರೇನಿನಾದಂತಹ ಶ್ರೇಷ್ಠ ಕೃತಿಗಳ ರಚನೆಯಿಂದಾಗಿ ರಷ್ಯಾ ಮತ್ತು ಸಮಸ್ತ ವಿಶ್ವದ ಸಾಹಿತ್ಯ ವಲಯದಲ್ಲಿ ತಾನು ಮಾನ್ಯನು ಎಂಬ ಸಂಗತಿಯೇ ಅವನ ಅಂತರಾಳದ ತಳಮಳವನ್ನು ಮತ್ತೂ ಹೆಚ್ಚಿಸಿತು. ತನ್ನ ಕತೆಯೊಂದರ ಪಾತ್ರ ತಾನೇ ಆದಂತಾಗಿ, ಜೀವನದ ಜಾಲದಲ್ಲಿನ ದಾರಿಯ ಬೆಳಕು ಮುಸುಕಾಗಿ, ಅಸ್ತಿತ್ವದ ಸತ್ಯಗಳು ಉತ್ತರವಿಲ್ಲದ ಪ್ರಶ್ನೆಗಳನ್ನು ಕೇಳತೊಡಗಿದಾಗ ಈ ಮಹಾನ್ ಲೇಖಕ ಕುಸಿಯತೊಡಗಿದ. ಎಲ್ಲವೂ ನಶ್ವರ, ಯಾವುದಕ್ಕೂ ಅರ್ಥವಿಲ್ಲ ಎಂಬ ಭಾವ ದಟ್ಟವಾಗತೊಡಗಿದಂತೆ ಹುಚ್ಚೇ ಹಿಡಿದಂತಾಯಿತು.

ಇಲ್ಲಿಯವರೆಗೂ ಸುಖ ಕೊಡುತ್ತಿದ್ದ ಎಲ್ಲವೂ – ಯಶಸ್ಸು, ಬರವಣಿಗೆ, ಕೀರ್ತಿ, ಯಜಮಾನಿಕೆ, ಹೊಗಳಿಕೆ, ಅರ್ಥ ಕಳೆದುಕೊಂಡು ಶೂನ್ಯತೆ ಆವರಿಸಿತು. ಹಗಲುಗಳು ಶುಷ್ಕವಾದಂತೆನ್ನಿಸಿ, ರಾತ್ರಿಯಾಗುವುದನ್ನೇ ಕಾಯುವಂತಾಯಿತು. ನಿದ್ರೆಯಲ್ಲಿ ಸ್ವಲ್ಪ ಹೊತ್ತು ನಿರಾಳ, ಮತ್ತದೇ ಕಾಡುವ ಉತ್ತರವಿಲ್ಲದ ಅಸಂಖ್ಯೆ ಪ್ರಶ್ನೆಗಳು.

ಯಾವುದೂ ಶಾಶ್ವತವಲ್ಲ, ಎಲ್ಲವೂ ಬದಲಾವಣೆಗೆ ಬದ್ಧವಾದದ್ದು ಎಂಬುದರ ಅರಿವು ಅಸಾಧ್ಯವಾದ ಸಂಶಯಕ್ಕೆ ಎಡೆಮಾಡಿತ್ತು. ಈ ಗೋಜಲಿನಿಂದ ತಪ್ಪಿಸಿಕೊಳ್ಳುವುದು ಕಠಿಣವಾಗಿ, ತಾನು ಏನೂ ತಿಳಿಯದ ಅಜ್ಞಾನಿ ಎಂದೆನಿಸಿ ಜೀವ ಕುಸಿಯಿತು, ಸಂಭ್ರಮ ಹೊರೆಯಾಯಿತು.

ಯೌವನದಲ್ಲಿ ಕಾಡಬೇಕಾದ ಈ ಪ್ರಶ್ನೆಗಳು, ಮುಪ್ಪು ಹತ್ತಿರವಾದಾಗ, ದೇಹ ನಿಶ್ಯಕ್ತವಾದಾಗ, ಇಡೀ ಜೀವನದ ಒಂದು ಕ್ಷಣವನ್ನೂ ಆ ದಿಕ್ಕಿನಲ್ಲಿ ಯೋಚಿಸದೇ ಇದ್ದಾಗ ಎದುರಾಗಿದ್ದು ದುರಂತವಾಗಿತ್ತು. ದೇಹದಲ್ಲಿ ಕಸುವಿದ್ದಾಗ ಆಳವಾದ ತಾತ್ವಿಕ ಜಿಜ್ಞಾಸೆಗಳಿಗೆ ಉತ್ತರವನ್ನು ತಿಳಿದು ಮಾಗಿರ ಬೇಕಾದ ಪ್ರಾಯದಲ್ಲಿ ದಿಕ್ಕೇ ತೋಚದಂತಹ ಭೀಕರ ಅನುಭವ. ಈ ಸಾವನ್ನೇ ಹೋಲುವ ಅನುಭವವನ್ನು, ಸಾವು ಸಮೀಪಿಸಿದಾಗ ಆಗುವ ತೊಳಲಾಟಗಳನ್ನು ಸಮರ್ಥವಾಗಿ ಹಿಡಿದಿಡುವ ಕತೆ 'ದಿ ಡೆತ್ ಆಫ್ ಇವಾನ್ ಇಲಿಯಾವಿಚ್'.

ಸಮಾಜದ ಅವಶ್ಯಕತೆಗಳಿಗೆ ಅನುಗುಣವಾಗಿ ಅದರ ಆಸೆ–ಆಮಿಷಗಳಿಗೆ ತಕ್ಕಂತೆ ಬದುಕನ್ನು ರೂಪಿಸಿಕೊಂಡಿರುವ ಇವಾನ್ ತಪ್ಪಿತಸ್ಥನಲ್ಲ. ಯಾವ ಪಾಪವನ್ನೂ ಮಾಡಿಲ್ಲ. ಆತ ಬದುಕಿದ್ದು ಸಾಮಾಜಿಕ ಆಣತಿಯಂತೆ, ಧರ್ಮದ ಕಟ್ಟಳೆಯಂತೆ, ಎಲ್ಲರೂ ಒಪ್ಪುವಂತೆ, ನಾಟಕೀಯವಾಗಿ. ಸಮಾಜದ ಕಣ್ಣಿನ ಬೆಳಕಾಗಿ. ತಾನು ಹೀಗೆ ಬದುಕಿದ್ದು ಸಹಜವಲ್ಲ ಎಂದು ಅನ್ನಿಸಿದ್ದು ಸಾವಿಗೆ ಮೂರು ದಿನ ಮೊದಲು. ಆ ಮೂರು ದಿನದಲ್ಲಿ, ಸಾವಿನ ಹಾಸಿಗೆಯಲ್ಲಿ ಮುಪ್ಪಿನ ಮುದುಕ ಏನು ಮಾಡಬಲ್ಲ!

ಡಾ. ಸರಸ್ವತಿ ಕೆ. ಬಿ
ಸಂಪಾದಕರು

ಸಲಹಾ ಮಂಡಳಿಯ ಅಭಿಪ್ರಾಯಗಳು

ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಸೃಜನಶೀಲ ವಿಚಾರಗಳ ಜೊತೆಯಲ್ಲಿ ಸಂಶೋಧನೆ, ವಿಮರ್ಶಾ ಪ್ರಕಾರಗಳು ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆಯುತ್ತಿರುವ ಇಂದಿನ ಸಂದರ್ಭದಲ್ಲಿ ಪ್ರತಿಸ್ಪಂದ ಪತ್ರಿಕೆಯು ಹೊಸ ಹೊಸ ಆವಿಷ್ಕಾರ ಮತ್ತು ವಿಭಿನ್ನ ಆಲೋಚನೆಗಳನ್ನು ಅನಾವರಣಗೊಳಿಸುವ ಮುಖ್ಯ ಸಂಶೋಧನಾ ಪತ್ರಿಕೆಗಳಲ್ಲಿ ಒಂದಾಗಿರುವುದು ಸಂತಸದ ಸಂಗತಿ. ವಿದ್ಯಾರ್ಥಿಗಳ, ಅಧ್ಯಾಪಕರ ಮತ್ತು ಸಂಶೋಧಕರ ಭಾವನೆ ಮತ್ತು ವಿಭಿನ್ನ ಬರಹಗಳ ಒತ್ತಾಸೆಯ ವೇದಿಕೆಯಾಗಿ ನಾಡಿನ ಓದುಗರ ಮನ ಗೆದ್ದಿದೆ ಎಂದರೆ ತಪ್ಪಾಗಲಾರದು. ಓದು – ಬರಹ, ಆಲೋಚನೆ – ಅಭಿಪ್ರಾಯ, ಸಲಹೆ – ಸಂವಾದ, ಸ್ಪಂದನೆ – ಪ್ರತಿಸ್ಪಂದನೆ ಜಾಗತಿಕ ಮಟ್ಟದಲ್ಲಿ ಮಾನ್ಯತೆ ಗಳಿಸುತ್ತಿರುವ ಕಾಲಘಟ್ಟದಲ್ಲಿ ಅನೇಕ ಬರಹಗಾರರ ಭವಿಷ್ಯಕ್ಕೆ ಮತ್ತು ವರ್ತಮಾನದ ಅನೇಕ ಸವಾಲುಗಳಿಗೆ, ತಲ್ಲಣಗಳಿಗೆ ಉತ್ತರವಾಗಿ ಪ್ರತಿಸ್ಪಂದದ ಎಲ್ಲಾ ಸಂಚಿಕೆಗಳು ಹೊರ ಬರುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ. ಇದಕ್ಕೆ ಶ್ರಮಿಸುತ್ತಿರುವ ಎಲ್ಲರೂ ಅಭಿನಂದನಾರ್ಹರು. ಅಂತಾರಾಷ್ಟ್ರೀಯ ಮಾನ್ಯತೆ ಪಡೆದ ಪತ್ರಿಕೆಗಳಲ್ಲಿ ಲೇಖನಗಳೇ ಪ್ರಕಟವಾಗುತ್ತಿಲ್ಲವೆಂಬ ಕೊರಗಿನ ಮಧ್ಯೆ ಅತ್ಯಂತ ಉತ್ಸಾಹದಿಂದ ಬರಹಗಾರರನ್ನು ಪ್ರೋತ್ಸಾಹಿಸುತ್ತಿರುವ ಸಂಪಾದಕರು ಮತ್ತು ಸಲಹಾ ಮಂಡಳಿಯ ಆಶಯವನ್ನು, ಈ ಅವಕಾಶವನ್ನು ವಿಚಾರವಂತ ಬರಹಗಾರರು ಬಳಸಿಕೊಳ್ಳಬೇಕೆಂದು ವಿನಂತಿಸುತ್ತೇನೆ, ಧನ್ಯವಾದಗಳು.

ಡಾ. ಗೋವಿಂದರಾಯ ಎಂ.

ಪ್ರತಿಸ್ಪಂದವು ಒಂಬತ್ತನೇ ಸಂಪುಟವನ್ನು ವಿಭಿನ್ನವಾಗಿ ಆಲೋಚಿಸಿ ಪ್ರಕಟಿಸುತ್ತಿರುವುದು ಸಂತಸದ ವಿಚಾರ. ಸಂಶೋಧಕರಿಗೆ, ಸೃಜನಶೀಲ ಬರಹಗಾರರಿಗೆ ಮುಕ್ತವೇದಿಕೆಯಾಗಿ ರೂಪಿಸಿರುವ 'ಪರಿಕಲ್ಪನೆ' ಅರ್ಥಪೂರ್ಣವಾಗಿದೆ. ಈ ಸಂಚಿಕೆಯು ವಿವಿಧ ಮಾದರಿಯ ವಿಭಿನ್ನ ವಿಷಯಗಳನ್ನು ಸಂಕಲಿಸಿದೆ. ಭಾಷೆ, ಕಾವ್ಯ, ವಚನ ಸಾಹಿತ್ಯ, ಅನುವಾದ, ಕಥಾ ಸಾಹಿತ್ಯ, ಕೃತಿ ಅಧ್ಯಯನ ಹೀಗೆ ಹತ್ತಾರು ನೋಟಗಳು ಗಂಭೀರ ಲೇಖಕರಿಂದ ಒಡಮೂಡಿರುವುದು ಹರ್ಷನೀಯ. ಇದನ್ನು ಅಧ್ಯಯನಕಾರರಿಗೆ ಉಚಿತವಾಗಿ ಲಭ್ಯವಾಗಿಸಿರುವುದರಿಂದ ಜಗತ್ತಿನ ಯಾವುದೇ ಮೂಲೆಯಿಂದಲೂ ಪ್ರತಿಸ್ಪಂದಕ್ಕೆ ಪ್ರತಿಕ್ರಿಯಿಸಬಹುದು. ಈ ವಿಚಾರವೇ ಈ ಪತ್ರಿಕೆಯ ಹಿರಿಮೆಯಾಗಿದೆ. ಶುಭವಾಗಲಿ.

ಡಾ. ರವಿಶಂಕರ್ ಎ.ಕೆ

ISSN : 2320-9941
Linking ISSN (ISSN-L): 2320-9941
Key-title: Prathispandha
Title proper: Prathispandha.
Country: India
Medium: Print
Last modification date: 01/09/2014
Type of record: Confirmed
ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ಪರಿವಿಡಿ

ಸೃಜನಶೀಲ : ಸಣ್ಣ ಕಥೆ

1. ಉಲೂಪಿ – **ಡಾ. ಜ್ಯೋತಿ ಕೆ. ಬಿ** **1**

ಸೃಜನೇತರ : ಸಂಶೋಧನೆ

1. ವೈರಮುತ್ತು ಸಾಹಿತ್ಯ : ಜನಪರ ಕಾಳಜಿ
– ಡಾ. ಮಲರ್ ವಿಳಿ ಕೆ **5**
2. ಬಾಣನ ಕಾದಂಬರಿ: ಕರ್ಣಾಟಕ ಕಾದಂಬರಿಯ ಕಥಾ ಸ್ವರೂಪ ಒಂದು ವಿವೇಚನೆ
– ಡಾ. ಪ್ರಸನ್ನಕುಮಾರ್ ಕೆ **12**
3. ಬಸವಣ್ಣನವರ ವಚನಗಳಲ್ಲಿ ಜೀವನಪ್ರೀತಿ
– ಡಾ. ಮೀನಾಕ್ಷಿ **16**
4. ಬದಲಾದ ಕಾಲಘಟ್ಟದಲ್ಲಿ ಕನ್ನಡ ಸಣ್ಣ ಕಥಾ ಸಾಹಿತ್ಯದ ನೆಲೆಬೆಲೆ.
– ಹೊನ್ನರಾಜು ಎಸ್. ವಿ **20**
5. ಖಂಡಕಾವ್ಯದಲ್ಲಿ ಮುಟ್ಟಿನ ಅಂಶಗಳು
– ಡಾ. ಚಿಕ್ಕಣ್ಣ. ಬಿ. ಎಸ್ **25**
6. ಕನಕದಾಸರ 'ರಾಮಧಾನ್ಯ ಚರಿತ್ರೆ'ಯಲ್ಲಿ ವರ್ಗ ಸಂಘರ್ಷ
– ಡಾ. ಶರಣಪ್ಪ ಆಡಕಾರ **32**
7. ಬೆಣ್ಣೆಕಲ್ಲು ಶಾಸನ : ಒಂದು ವಿಶ್ಲೇಷಣೆ
– ರಘುಪ್ರಸಾದ ಟಿ **37**
8. ಅನುಭವ ಮಂಟಪ – ತಾತ್ವಿಕ ವಿಚಾರಗಳು
– ಡಾ. ಸಂತೋಷ್ ಕುಮಾರ್ ಆರ್. ಎಂ **42**
9. ಎಚ್. ಟಿ. ಪೋತೆ ಅವರ ಕಥೆಗಳಲ್ಲಿ ಪ್ರತಿರೋಧದ ನೆಲೆಗಳು
– ಕಿರಣ ವಲ್ಲೇಪುರೆ **48**
10. ಎಂ. ಎಸ್. ವೇದಾ ಅವರ ಕಾದಂಬರಿಗಳಲ್ಲಿ ಸ್ತ್ರೀ
– ಡಾ. ಮೈತ್ರಿ ಭಟ್ **55**
11. ವಚನ ಮತ್ತು ದಾಸ ಸಾಹಿತ್ಯ : ಅನುಸಂಧಾನ
– ಡಾ. ಹೆಚ್.ಎಂ. ಮಲ್ಲಿಕಾರ್ಜುನ **60**
12. ಭಾಷೆ ಮತ್ತು ಸಂಸ್ಕೃತಿ : ಬಾಂಧವ್ಯ
– ರಾಜೇಶ್ವರಿ ವೈ. ಎಂ **67**
13. ನಾಟ್ಯಾಣ್ವಾಂಶಗಳ ಮೂಲಕ ಭಾಷಾ ಕೌಶಲಗಳ ಕಲಿಕಾ ಪ್ರಯೋಗ
– ದಿವಾಕರ ಜೆ **73**
14. ಮಹಿಳಾ ಅಂಕಣ ಬರಹಗಳಲ್ಲಿ ಸಾಮಾಜಿಕ ಚಿಂತನೆ
– ಭವ್ಯ ಎಂ. ಎಸ್ **80**
15. ಉಸುರಿನ ಪರಿಮಳವಿರಲು
– ಡಾ. ರವಿಶಂಕರ್ ಎ. ಕೆ **87**
16. ಸುಧಾ ಮೂರ್ತಿಯವರ ಕಾದಂಬರಿಗಳಲ್ಲಿ ಪತ್ತೆದಾರಿಯ ತಂತ್ರ (ಋಣ ಕಾದಂಬರಿ ಅನುಲಕ್ಷಿಸಿ)
– ಡಾ. ಮಹಾಂತೇಶ್ ದುರಗಣ್ಣವರ **90**
17. Translation and Trans Creation : Recreating History in Vasudhendra's 'Tejo Tunga Bhadra'
- Dr. Jayashree B **97**

6

ಸೃಜನಶೀಲ : ಸಣ್ಣ ಕಥೆ

***

ಉಲೂಪಿ

***

ಡಾ. ಜ್ಯೋತಿ ಕೆ. ಬಿ.
ಪ್ರಾಧ್ಯಾಪಕರು, ಆಂಗ್ಲ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೊರಟಗೆರೆ,
ತುಮಕೂರು (ಜಿ)

ಮುಖ ಉದಿಸಿಕೊಂಡು ಹೋದಳು ಮೊಮ್ಮಗಳು. ನಾಗಿಯಬ್ಬೆ, "ಯಾಕೆ ಪುಟ್ಟ ಉಲೊಪಿ, ಇನ್ನೂ, ಕತ್ತಿ ವರಸೆ ಅಭ್ಯಾಸ ಮಾಡ್ತಾನೆ ಇದಾಳೆ ಊರ್ವಸಿ. ನೀನು ಯಾಕೆ ಹೊರಟೆ? ಊರ್ವಸಿ, ನೀನೆ ಉತ್ತಮ, ಕತ್ತಿ ವರಸೆಯಲ್ಲಿ, ದಿನಾಲೂ ಏನಾದ್ರೂ ಒಂದು ಇದೇ ಇರುತ್ತೇವೆ, ಊಲೂಪಿ ನಿನಗೆ?" ಊಲೂಪಿ ಎದುರುತ್ತಿರಿಸಿದಳು, "ನಿನ್ನಿಂದಾನೆ, ಎಲ್ಲಾ ಆಗೊದು. ಯಾವಾಗ್ಲೂ ಊರ್ವಸಿಯನ್ನೇ ಬೆಂಬಲಿಸತ್ತಾ ಇರು, ತಿರುಮಲೇಶ, ಅವನ ಗುರಿಗಳು ಯಾಕೆ ಅಷ್ಟು ಸರಿ ಇರುತ್ತೆ! ನೀನು, ನಮಗೆ ಒಳ್ಳೆ ಗುರುಗಳನ್ನು ಇಟ್ಟಿಲ್ಲ, ಮೊದ್ಲಿಂದ ತಿರುಮಲೇಶ, ತಿಪ್ಪಣ್ಣರಿಗೆ ಎಲ್ಲಾರ್ಗೂ, ಗಂಗವಾಡಿಗೆ, ಕಲ್ಲುವಾಡಿಗೆ ಕಳ್ಸಿ ಕತ್ತಿ ವರಸೆ ಕಲ್ಸಿದ್ದೀಯ, ನಮಗೆ ಮಾತ್ರ ಇಲ್ಲೇ, ಅದಕ್ಕೆ ನಮಗೆ ಸರಿಯಾಗಿ ಗುರಿ ಹೂಡಿಯೋಕೆ ಆಗ್ತಾ ಇಲ್ಲ. ಹಾರೋದು, ನಗೆಯೋದು, ಗುರಿ ಇಡುವುದು. ಎಲ್ಲಾ ಸಣ್ಣ ವಯಸ್ಸಿನಲ್ಲೇ ಕಲ್ಸ ಬೇಕು. ಈಗ ದೊಡ್ಡವರಾದ್ಮೇಲೆ ಭಾರ ಆಗಿರ್ತೀವಿ, ಸಣ್ಣದರಿಂದ ರೂಡಿ ಮಾಡ್ಸ ಬೇಕು".

"ಸುಮ್ನಿರು ಊಲೂಪಿ, ಈಗಿನೂ, ಹೊರಗಾಗುವ ದಿನ ಬಂದಿರೋದ್ರಿಂದ ದೇಹ ತೂಕವಾಗಿರುತ್ತೆ, ಇನ್ನಾಲು ದಿನ ಆದ್ಮೇಲೆ ಪ್ರಯತ್ನಿಸು ಖಂಡಿತ ನೀನು ಕೋಟೆಯ ಮೇಲಿರುವೆ. ಸೈನಿಕನವರೆಗೆ ಹಾರಿ ಅವನ ಕತ್ತಿ ತಂಡರಿಸ್ತೀಯ ನೊಡು ಬೇಕಾದ್ರೆ, ಅಲ್ಲೇನೆ?" ಲಲಿತಾ ಅಂತ ತರಬೇತಿದಾರಳನ್ನು ಕೇಳಿದ್ಲು, ನಾಗಿಯಬ್ಬೆ ಅಜ್ಜಿ. "ಇಲ್ಲ ಅಜ್ಜಿ, ನೀನು ಪಕ್ಷಪಾತ ಮಡ್ತಾ ಇದ್ದೀಯ" ಅಂತ ಅಳುತ್ತಾ ಕೂತ ಊಲೂಪಿಗೆ, ಮಹಿಳಾ ಸೈನಾಧಿಪತಿ ಕಾತ್ಯಾಯಿನಿ ಎಷ್ಟು

ಹೇಳಿದ್ರೂ ಸಮಧಾನ ಆಗಲಿಲ್ಲ.

ನೀನು ನನಗೆ ಅನ್ಯಾಯ ಮಾಡಿದ್ದೀಯ ಅಷ್ಟೇ, ನಾಗಿಯಬ್ಬೆ ನೋಡು ಅದಕ್ಕಾಗಿ ಈ ಗೋಪುರದ ತುದಿಯನ್ನೇರಿ ಹಾರಿ ಕೈ ಕಾಲು ಮುರಿದು ಕೊಳ್ತೀನಿ ನೋಡು, ಎಂದು ದುಡೆ ದುಡವೆ ಏರುವ ಪುಟ್ಟ ಬಾಲಕಿಯ ಸಿಟ್ಟು, ಕೋಪವನ್ನು ನೋಡಿ ಮಹಾ ಸೇನಾನಿ ನಾಗಿಯಬ್ಬೆ ಬೆವೆತು ಹೋದಳು. ಏನಾದ್ರೂ ಅಚಾತುರ್ಯ ಮಾಡಿಕೊಂಡು ಬಿಟ್ಟರೆ, ಏನು ಮಾಡಬಲ್ಲನೆ? ಏನು ಸಾಮ್ರಾಜ್ಯ ಕಟ್ಟಿದರೇನು? ಎಷ್ಟು ಪ್ರಾಂತ್ಯಗಳನ್ನು ಜಯಿಸಿದರೇನು? ಒಬ್ಬ ಪುಟ್ಟ ಬಾಲಕಿಯ ಮನ ಒಲಿದಲಾರದಾದೆನಲ್ಲಿ ಎಂದು ಗಡ ಗಡನೆ ನಡುಗಿ, ಅಳುತ್ತಾ ದುರ ದುರನೆ ಮೆಟ್ಟಿಲು ಏರುತ್ತಾ ಹೋಗುವುದರೊಳಗೆ ಮಹಿಳಾ ಸೇನಾನಿ ಕಾತ್ಯಾಯಿನಿ ಹಾಗೂ ಸೇನಾ ನಾಯಕಿ ಭ್ರಮೆರಾಂಬೆಯರು ಬೀಳಬಲ್ಲ ಮಗುವನ್ನು ಆಕಾಶದಲ್ಲಿ ಹಾರಿ ಎದೆ ಗವಚಿಕೊಳ್ಳಲು ಸಜ್ಜಾದರು. "ನೀವು ಇಲ್ಲಿ ಹಿಡಿದು ಕೊಳ್ಳುವಿರಾದರೆ, ನಾನು ಅಲ್ಲಿ ಹಾರುವೆ" ಎಂದು ಊಲೂಪಿ ಹೆದರಿಸಿ ತೊಡಗಿದಳು.

"ಇಷ್ಟಕ್ಕೆ ಏನೇ ನಾನು ಇಷ್ಟ ಕಷ್ಟ ಪಟ್ಟಿದ್ದು, ನಿನ್ನ ಉಜ್ವಲ ಭವಿಷ್ಯ ನೋಡಲೆಂದು ನಾನು ಬೆಳೆಸಿದೆನಾದರೆ, ಈ ಕಣ್ಣುಗಳಿಂದ ಸಾವು ನೋಡಲೇನು ನಾನು, ಅದಕ್ಕಿಂತ ನನಗೆ ಸಾವು ಮೊದಲಾಗಲಿ" ಎಂದು ಅಬ್ಬರಿಸಿ ಅಳತೊಡಗಿದ ನಾಗಿಯಬ್ಬೆಯನ್ನು ಶೃಶೂಷೆ ಮಾಡಲು ಸೇವಕಿಯರು ಓಡಿದರು.

ಸರಿ, ರಾಜಕುಮಾರರೆಲ್ಲ ಓಡಿ ಬಂದರೂ, ಊಲೂಪಿಯನ್ನು ಸಮಾಧಾನ ಪಡಿಸಲಾಗಲಿಲ್ಲ, ರವಿತೇಜ "ನಾನು ಹೇಳಿಕೊಟ್ಟೇನು ಬಾರೆ, ಊಲೂಪಿ ಕತ್ತಿವರಸೆ". ರಮಣ ಅಂದ "ನೀನಾನ್ನೂ ಚಿಕ್ಕವಳು ಊಲೂಪಿ, ದಿನ ಕಳೆದಂತೆ ಕೈಯಲ್ಲಿ ಶಕ್ತಿ ಬಂದ ಹಾಗೆ ನಿನಗೂ ಕಠಾರಿ, ಕತ್ತಿವರಸೆ ಎಲ್ಲಾ ಬರುತ್ತೆ ಬಾ ಮರಿ".
ತುನುಜ ಅಂದ "ತುಂಬಾ ದೊಡ್ಡ ಕತ್ತಿ ಬೇಡ, ಚಿಕ್ಕದು ತಗೋ ಬೇಕಿತ್ತು ನೀನು ಯಾಕೆ ದೊಡ್ಡದು ತಗೊಂಡೆ ಅದಕ್ಕೆ ನಿನಗೆ ಹಿಡಿಯಲಾಗಿಲ್ಲ".

"ಪುಟ್ಟ ಸಂದರಿ ನೀನು ಊಲೂಪಿ, ನಿನ್ನಂಥ ಗೊಂಬೆಯನ್ನು ಕಳೆದುಕೊಂಡು ನಾವು ಯಾವ ಸಮಾಧಾನದ ಜೀವನ ಮಾಡಿಯಾವೆ, ಯಾರು ಬೇಕು ಹೇಳು ಊಲೂಪಿ ನಿನಗೆ ಪಾಠ ಮಾಡಲು? ಅಂಥವರನ್ನೇ ನೇಮಕ ಮಾಡುವೆ" ನಾಗಿಯಬ್ಬೆ ದೈನ್ಯರಿಂದ ನುಡಿದಳು.

"ನೀನೆ ಬೇಕಜ್ಜಿ ನನಗೆ, ನೀನು 28 ಸೈನಿಕರನ್ನು ಒಂದೇ ಬಾರಿ ಕತ್ತರಿಸಿ ಬಿಸಾಕಿದ್ದೀಯ ನೊಳೆಂಬಾವಾಡಿಯ ಗಡಿಯಲ್ಲಿ ಅಷ್ಟೂ ಕರಡಿಗಳನ್ನು ಒಂದೇ ಏಟಿಗೆ ಕತ್ತರಿಸಿ ಬಂದಿದ್ದೀಯ, ನಿನಗೆ ನನ್ನಂಥ ಶಿಷ್ಟರನ್ನು ಕಂಡರೆ ಉದಾಸೀನ ಏಕೆ? ನನಗೆ ಕತ್ತಿ ವರಸೆ ಕಲಿಸುವವರೆಗೂ ನೀನು ವಿರಮಸುವುದಿಲ್ಲ ಸುತ್ತಿದಲ್ಲಿ ವೆಂದು ಭಾಷಾ ಕೂಡು, ಬರುತ್ತೇನೆ".
"ಇಗೋ ಕಂದ– ಭಾಷೆ ಕೊಡುವೆ. ಇಂದು ರಾತ್ರಿಯೀ ನಿನ್ನ ಮೊದಲ ಪಾಠ ಬಾ ಮಗು, ಬೇಕಾದರೆ ಭಟ್ಟಾರಕರ ಬಳಿ ಹೋಗೋಣ, ಅವರಿಂದ ಕೂಡ ಕೆಲ ಪಾಠಗಳು ಆಗಲಿ ನಿನಗೆ".

ಭಟ್ಟಾರಕರು, "ರಾಜ ಮಾತೆ, ನಿಮ್ಮ ಕನಸು ನಮ್ಮ ಕೆಲಸ. ಮಗುವಿಗೆ ಮೊದಲು, ಕೆತ್ತಿಯ ಉದ್ದ, ಅಗಲಿ, ಹಿಡಿಕೆ, ತೂಕ, ದಪ್ಪ ಎಲ್ಲದನ್ನೂ ಊಹಿಸಿ ತನ್ನ ಕೈಯಿದಷ್ಟೂ ದೇಹದ ಅಗಲ, ತೂಕ ಎಲ್ಲವೂ ಎಷ್ಟು ಅನ್ನವ ಅಂದಾಜು ಮಾಡಿ ಕತ್ತಿ ಆರಿಸಿಕೊಳ್ಳಬೇಕು, ನಂತರ ಹಲವು ಬೀಸುಗಳ ಅಭ್ಯಾಸ, ಎದುರಾಳಿಯ ತೂಕ, ಎತ್ತರ, ಕತ್ತಿಯ ಅನುಸಾರ ಅವನಿಂದ ಬರುವ ವರಸೆಗಳ ಅಂದಾಜು ಎಲ್ಲವನ್ನೂ ಅಂದಾಜಿಸಬಲ್ಲ ಚಾಣಾಕ್ಷತೆ, ಎಲ್ಲಾ ಶಾಂತವಾದ ಮನಸ್ಸಿನಿಂದಷ್ಟೆ, ತಾಳ್ಮೆ, ಅರಿವು ಪ್ರಜ್ಞೆಗಳ ಬೆಳವಣಿಗೆಯಿಂದ ತಿಳಿದುಕೊಳ್ಳವುದಾಗಿದೆ. ಮೊದಲು ನೀವು ಹೀಗೆ ಒಂದು ತಾಸು, ಎರಡು ತಾಸು ಕರೆದುಕೊಂಡು ಬಂದರೆ ವಿದ್ಯೆ ಬರುವುದಿಲ್ಲ. ಇಲ್ಲೆ ಒಂದೆರೆದು ದಿನ ಇರಲಿ, ನಿಧಾನವಾಗಿ ಕಾಡಿನಲ್ಲಿ ಬೇಟೆಗೆ ಹೋದಾಗ ನಾವು ಅಭ್ಯಾಸ ಮಾಡಿಸುತ್ತೇವೆ, ನೀವು ಇಲ್ಲಿಯೇ ಈ ಹೆಣ್ಣು ಮಕ್ಕಳನ್ನು ಬಿಟ್ಟ ಹೋಗಿ, ಈಗ ಸರಿಯಾದ ಕಾಲ, ಅವರು ಮೈನೆರೆಯುವ ಹೊತ್ತಿಗೆ ಮತ್ತೆ ಕರೆದು ಕೊಂಡು ಹೋಗಿ ಎಂದು ಭಟ್ಟರಕರು ಅಂದರು, ಎಲ್ಲವೂ ಶಾಸ್ತ್ರೋಕ್ತವಾಗಿಯೇ ಆಗಬೇಕು, ಮೊದಲು ಖಡ್ಗ ಹಿಡಿಯಲು ತೂಕ ಸಹಿಸುತ ಪಾಠಗಳು ನಂತರ ತಂತ್ರಗಳು, ದೇಹದ ಕಸರತ್ತು ಎಲ್ಲಾ ಪಾಠಗಳೂ ಆಗಲಿ ಆಮೇಲೆ ತನ್ನಿಂದ ತಾನೆ ಕತ್ತಿ ವರಸೆ ಬರುತ್ತದೆ".

ಎಲ್ಲಾ ಅಭ್ಯಾಸದ ಪ್ರಾಥಮಿಕ ಪೂಜೆಗಳಾದ ಮೇಲೆ ನಾಗಿಯಬ್ಬೆಯವರಿಗೆ ಮೊಮ್ಮಕಳನ್ನು ಅಲ್ಲಿ ಬಿಟ್ಟು ಹೊರಟರು. ಸುಂದರ ಗೊಂಬೆ ಊಲೂಪಿ ಮುಖ ಊದಿಸಿ, ಊಬ್ಬಿಸಿ ಬಂದು ಭಟ್ಟಾರ ಕರಿಗೆ ನಮಿಸು ಅಜ್ಜಿಯನ್ನೂ ಒಮ್ಮೆ ನೋಡಿ, ನೀನೆ ಹೇಳಿಕೊಡು ಅಂದರೆ, ಇಲ್ಲಿಗೆ ತಂದಿದ್ದಾರೆ ಅಜ್ಜಿ ಎಂದು ಪ್ರಶ್ನೆ ಕೇಳಿಯೇ, ಭಟ್ಟಾರಕರಿಗೆ ನಮ್ಮಿಸರಿಸಿದಳು. "ವಿನಯ ಮಗು, ನನಗಿಂತ ಪ್ರಾಥಾಮಿಕ

ಉಪಚಾರ ಗುರುಗಳೇ ಮಾಡಬೇಕು, ನಂತರದ ನಿನಗೆ ಕತ್ತಿ ವರೆಸೆ ಬಂದ ಮೇಲೆ ಹೆಚ್ಚಿನ ಕೌಶಲ್ಯ ಹಾಗೂ ಪಟ್ಟು ಕಲಿಸುವೆ, ಹೆಂಗಸಿಗೆ ಆಗಿರುವಂಥರುವುಗಳು" ಅಂದಳು ನಾಗಿಯಬ್ಬೆ.

ಮುಖ ಊದಿಸಿ, ಕಠಿಣವಾಗಿರುವ ಊಲೂಪಿಯನ್ನು ಭಟ್ಟಾರಕರು, ಶಿಷ್ಯರಿಗೆ ಒಪ್ಪಿಸುತ್ತಾ, "ಈಕೆಯ ನಿಷ್ಟುರತೆಯನ್ನು ನೋಡಿದರೆ ಈಕೆಗಿಂತ ಪಟ್ಟುಗಳನ್ನು ಊರ್ವಸಿ ಬೇಗ ಕಲಿಯಬಲ್ಲಳು. ಅವಳಿಗೆ ಅಹಂಕಾರ (ತಾನೆ ಶ್ರೇಷ್ಠ) ಅನ್ನುವುದು ಇನ್ನೂ ತಲೆಗೆ ಹೊಕ್ಕಿಲ್ಲ, ಮುಂದುವರಿದ ತಂಡಕ್ಕೆ ಹಾಕಿ, ಊಲೂಪಿ ದಡ್ಡ ಹುಡುಗರ ಗುಂಪಿನಲ್ಲಿ ಇರಲಿ, ಒಂದಿಷ್ಟು ಪಟ್ಟುಗಳ ಜೊತೆ, ಹಾಳೊರಿಗೆ ಉಳಿದವೇ ಗೌಡ ಎನ್ನುವ ಭಾವನೆಯನ್ನು ಬೆಳೆಸಿ, ಪಂದ್ಯವನ್ನು ಇಟ್ಟು, ಊರ್ವಸಿಯನ್ನು ಎದುರಾಗಿಸಿ, ಊಲೂಪಿಯನ್ನು ಹಿಂದುಳಿದಿರುವ ಪೆಟ್ಟುಗಳನ್ನು ಕಲಿಯಲು ಪ್ರೇರೇಪಿಸೋಣ".

ಒಬ್ಬ ಬೇಡರ ಹುಡುಗಿ, ಊಲೂಪಿಯನ್ನು ಸೋಲಿಸುವವರೆಗೂ ಎಂದೂ ಎದೆಯುಬ್ಬಿಸುವುದನ್ನು ನಿಲ್ಲಿಸಿರಲಿಲ್ಲ ಊಲೂಪಿ. ಭರ್ಜಿ ಎಸೆತ, ಮರ ಹತ್ತುವುದು, ಕಲ್ಲು ಬೀಸುವುದು, ಇಲಿ ಹಿಡಿಯುವುದು, ಮೀನು ಹಿಡಿಯುವುದು, ಬಲೆ ಬೀಸುವುದು ಎಲ್ಲದರಲ್ಲೂ ಬೇಡರ ಹುಡ್ಗಿಯದ್ದು ಎತ್ತಿದ ಕೈ. ಬೇಡರ ಹುಡುಗಿಯ ಕೈಯಲ್ಲಿ ಸೋತ ಕೂಡಲೆ, ಅಜ್ಜಿಯನ್ನು ನೋಡಲೇ ಬೇಕೆಂದು ಊಲೂಪಿ ಅಳುತ್ತಾ, ಇದ್ದಾಳೆ, ಊರಿಗೆ ಹೋಗ್ತೇನೆಂತ ಹಠ ಹಿಡಿದಿದ್ದಾಳೆ, ಯೋಜನೆಗಳನ್ನು ದಾಟಿ ಕಾಡಿನಾಚೆ ಕದ್ದು ಓಡಿ ಹೋಗೋಣ ಅಂತಲೂ ಯೋಜನೆ ಮಾಡಿದ್ದಾಳೆ, ಆದ್ರೆ 100 ಗಾವುದ ಊರಿಗೆ ನಡೆದು ಹೋಗುವುದು ಅಸಾಧ್ಯ ಅನ್ನುವುದು ಕೂಡ ಆಕೆಗೆ ಗೊತ್ತು. "ನಿನ್ನ ಹೊಟ್ಟೆಕಿಚ್ಚಿನಿಂದ, ನಿನಗೆ ವಿದ್ಯೆ ಬರ್ತಿಲ್ಲ ಊಲೂಪಿ" ಅಂದ್ಲು ಊರ್ವಸಿ. ಶಿಕ್ಷೆಗೆ ಹೋಗ್ತೀಯ ಅಂತಲೂ ಎಚ್ಚರಿಸಿದಳು. ಊರ್ವಸಿ ಬೇಡ, ಶಿಕ್ಷೆ ತಪ್ಪಿಸಿಕೊಳ್ಳೂದಕ್ಕೆ ಆದ್ರೂ, ಸಾಧಾರಣ ಪ್ರದರ್ಶನ ಮಾಡು. ಅಂತೂ ಮೂರು ತಿಂಗಳಿನ ಕೊನೆಯಲ್ಲಿ ಊಲೂಪಿಯ ಮುಖದ ಮಾಂಸ ಖಂಡಗಳು ಸಡಿಲವಾದವು. ಶಾಂತವಾಗ್ತಾ ಬಂದ್ಲು. ಮೊದಲು ಹಗ್ಗ ಹಿಡಿಯಲು ಕಲಿತು ಕೊಂಡಳು. ಸಮತೋಲನ ಮಾಡುವುದು, ದೇಹದ ತೂಕವನ್ನು ನಿರ್ವಹಿಸುವುದು ಆಮೇಲೆ ನಿಧಾನವಾಗಿ ಮೇಲೆರುವ ಕೌಶಲ್ಯಗಳು, ಹೀಗೆ ಹಲವಾರು ಸಣ್ಣ ಆಯುಧಗಳ ಚಲನಾ ಕೌಶಲ್ಯದಲ್ಲಿ ದುರ್ಬಲಳಾದರೂ, ದೊಡ್ಡ ದೊಡ್ಡ ಆಯುಧಗಳನ್ನು ನಿಯಂತ್ರಿಸುವಲ್ಲಿ ಊಲೂಪಿ ನಿಷ್ಣತಳಾದಳು. ಇನ್ನೇನು ಕುದುರೆಗಳ ಮೇಲೆ ಹಾರುವ, ನಗೆಯುವ ಕೌಶಲಗಳು ಬಂದವು ಇನ್ನೇನು ಆನೆಗಳೊಂದಿಗೆ, ಮಾವುತರೊಂದಿಗೆ ಹೊಂದಿಕೊಳ್ಳಬೇಕೆನ್ನುವಷ್ಟರಲ್ಲಿ, ಪೋರಿ ಹೆಣ್ಣಾಗಿದ್ದಾಳೆ ಎಂಬ ಸುದ್ದಿಗೆ ಬಂದೊಡನೆ ನಾಗಿಯಬ್ಬೆ ಸಾರೋಟಿನೊಡನೆ ಹೊರಟು ಬಂದಳು. "ನನಗೆ ಹುಡುಗಿಯಾಗಲು ಇಷ್ಟವಿಲ್ಲ ಅಜ್ಜಿ" ಊಲೂಪಿ ಬೇಡಿದಳು. ಈಗ ಹಠ ಕಮ್ಮಿಯಾಗಿದೆ, ಆದರೂ ಮೊದಲಿನ ಬಿರುಸು ಇದ್ದೇ ಇದೆ. ಆರೈಕೆ ತೀವ್ರವಾದ ಹಾಗೆ ಊಲೂಪಿಯ ಹಠ ತಾರಕಕೇರಿತ್ತು. ಉಂಡೆಗಳು, ಬಿಸಿ ಅಡುಗೆ, ಸ್ನಾನ, ಶೃಂಗಾರ, ಆರೈಕೆ, ಎಲ್ಲಾದರೂ ಹಠ. ಅರಮನೆಯಲ್ಲಿ ದೊಡ್ಡ ಸಂಭ್ರಮ ಅದರೆ ಹುಡುಗಿಯ ಕೋಣೆಯಲ್ಲಿ ಸದಾ ಅಳು, ಹಠ, ಸಿಟ್ಟು ಚಲಪಿಲ್ಲಿ ಆಗಿರುವ ಉಂಡೆಗಳು, ಸಖಿಯರ ಮುಖದ ಮೇಲೆಯೇ ಬಿಸಿನೀರು ಎರಚುವುದು ಹೆಚ್ಚಾಯಿತು.

"ನಿನಗೇನು ವಿದ್ಯಾ ತಾನೇ? ಆಶ್ರಮಕ್ಕೆ ನಾನೇ ಕಳುಹಿಸಿ ಬರುವೆ ತಿಂಗಳು ಆರೈಕೆ. ನಾನೇ ಪಾಠ ಹೇಳುವೆ ಆ ಭಟ್ಟಾರಕರು ಏನು ಹೇಳಿದ್ದಾರೋ, ನಾನು ಯುದ್ಧ ಭೂಮಿಗೆ ಕರೆದೊಯ್ಯುವೆ. ರಣರಂಗದಲ್ಲಿ ಸೈನಿಕರನ್ನು ಚೆಂಡಾಡಲು ನಿನ್ನನ್ನೇ ಬಿಡುವೆ. ಸ್ವಲ್ಪ ದಿನ ಕಂದ. ಈ ಹೊತ್ತಿನಲ್ಲಿ ನೀನು ಆರೈಕೆ ಚೆನ್ನಾಗಿ ಮಾಡಿಸಿಕೊಂಡೆಯಾದರೆ, ನೂರು ಆನೆ ಬಲ ಸಂಗ್ರಹವಾಗುತ್ತದೆ ನಿನ್ನ ದೇಹದಲ್ಲಿ". "15 ದಿನ ಆಯ್ತಲ್ಲ ಅಜ್ಜಿ ನನ್ನನ್ನು ಹೊರಗೆ ಕಳೆದುಕೊಂಡು ಹೋಗು. ನನಗೆ ಈ ಬಿಸಿನೀರು ಅಂಗಮರ್ಧನ, ನೃತ್ಯ, ಸಂಗೀತ ಎಲ್ಲವೂ ಬೇಜಾರಾಗಿದೆ ನನಗೆ. ಒಂದೇ ಉದ್ದೇಶವಿದೆ ನನಗೆ ಅದು ಶೃಂಗೇಶನನ್ನು ಕತ್ತಿವರಸೆಯಲ್ಲಿ ಸೋಲಿಸಬೇಕು".

"ಸುಮ್ಮನಿರು ಕಂದ, ನಿನ್ನ ಕೈಗಳಿಗೆ ಶಕ್ತಿ ಇನ್ನೂ ಇಲ್ಲ. ಈಗಷ್ಟೇ ಭಯ ಪುಡಿಯಾಗಿದೆ. ಸೊಂಟ ಬಿಗಿಯಾಗಲಿ. ದೇಹ ಎತ್ತರವಾಗಲಿ" ಅಂದರು. ನಾಗಿಯಬ್ಬೆಯು ಮೇಲುದನಿಯಲ್ಲಿ ಸಖೀಯರಿಗೆ "ಯಾವ ಕಾರಣಕ್ಕು, ಊಲಿಪಿಗೆ ಸೌಂದರ್ಯ, ವನಪು, ವೈಯಾರ ಕಲಿಸುವ ಕೆಲಸಕ್ಕೆ ಹೋದರೆ ಆಕೆ ದಂಗೆ ಏಳ್ತಾಳೆ, ಅವಳಿಗೆ ಪುರುಷ ವರಸೆ, ಶೈಲಿ, ಶಕ್ತಿ. ಬಗ್ಗೆ ಮಾತ್ರ ಮಾತನಾಡಿ. ಮತ್ತೆ ಕೆರಳಿ ಬಿಟ್ಟಾಳು. ನಾನಂತೂ 20 ಗಾವುದ ದೂರ ಆಲಂಬರ ಬಳಿ ಕಾಳಗಕ್ಕೆಳಿದಿದ್ದೇನೆ. ಅವರು ಹಾವು, ಪಾರಿವಾಳ, ಕರಡಿ ಎಲ್ಲವನ್ನು ನಮ್ಮ ಮೇಲೆ ಪ್ರಯೋಗಿಸುತ್ತಿದ್ದಾರೆ. ಅವರನ್ನು ಹಂಬದಿಯಿಂದ ಸದೆಬಡಿಯಲು ಸೈನಿಕರನ್ನು ಹುರಿದುಂಬಿಸಲು ಹೊರಟಿದ್ದೇನೆ. ಆ ಕಾರ್ಯ ಆಗುವವರೆಗೂ ಬರಲಾಗುವುದಿಲ್ಲ. ಹುಷಾರಿನಲ್ಲಿರಲಿ, ಮಗುವಿಗೆ ಭ್ರಮನಿರಸನ ಆಗುವ ಯಾವ ಕಾರ್ಯವನ್ನು ಮಾಡದಿರಿ. ಇಲ್ಲಿ ಬಂದಾಳು ಅಲ್ಲಿ ಒಂದಾಳು ನಾಳೆ ನಾಳೆದ್ದು ಅಂತ ದಿನ ತಳ್ಳಿರಿ".

ರಾಧ ಅಂದಳು "ಇಲ್ಲ ಮಾತೆ, ಆಕೆ ಉಪ್ಪರಿಗೆಯ ಕಿಟುಕಿಯಾದರೂ ಹಾರಿ ನಮ್ಮ ಹಿಂದೆ ಬಂದಾಳು, ನೀವು ಎರಡು ದಿನ

ಇಲ್ಲಿದ್ದು ಆಕೆಯನ್ನು ಸಂತೈಸಿಯೇ ಹೋಗಿರಿ."

ನಾಗಿಯಬ್ಬೆ "ಏನು ಮಾಡಲಪ್ಪ, ಈ ತುರ್ತಿನಲ್ಲಿ?, ಹೇಳು ಊಲೂಪಿ, ನೀನು ಸಮಾಧಾನವಾಗಿರ್ತೀಯಾ, ಊಲೂಪಿ". ಉತ್ತರಿಸಿದಳು ಊಲೂಪಿ "ಇಲ್ಲಬ್ಬೆ, ನೀನು ಇಲ್ಲಿ ಇರಲ್ಲ".

ನಾಗಿಯಬ್ಬೆ ತೀರ್ಮಾನಿಸಿದಳು "ಆಗಿದ್ದು ಆಗಲಿ, ನನ್ನ ಕುದುರೆಯೇರಿ ಬರ್ತಾಳೆ ಬಿಡು". ಊಲೂಪಿಯ ತಾಯಿ, "ಹಸಿ ಮೈ, ಮುಂದೆ ಹೆತ್ತು ಹೊರಬೇಕಾದ ದೇಹ, ಈಗಲೇ ದಣಿಯಬೇಕೆ"?

ನಾಗಿಯಬ್ಬೆ "ಈ ಹಠದಿಂದ ಆಕೆ ಹೊರಗೆ ಬರಬೇಕಾದರೆ, ಅನುಭಾವವಿಲ್ಲದೆ ಸಾಧ್ಯವಿಲ್ಲ ಸೋತು, ಸೋತು ಹಣ್ಣಾಗಿ ಪರಿಪಕ್ವತೆಗೆ ಬರಬೇಕು".

***

ಸೃಜನೇತರ : ಸಂಶೋಧನೆ

***

ವೈರಮುತ್ತು ಸಾಹಿತ್ಯ – ಜನಪರ ಕಾಳಜಿ

***

ಡಾ. ಮಲರ್ ವಿಳಿ ಕೆ.
ಕನ್ನಡ ಪ್ರಾಧ್ಯಾಪಕರು, ಬಹು ಭಾಷಾ ವಿಭಾಗ
ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಬೆಂಗಳೂರು

ಸಾಹಿತ್ಯ ಜೀವನದ ಪ್ರತಿಬಿಂಬ. ಸಮಾಜಕ್ಕೆ ಹಿಡಿದ ಕನ್ನಡಿ. ಸಾಹಿತ್ಯ ಎನ್ನುವುದು ಸಾಹಿತಿಯು ತನ್ನ ಜೀವನದ ಅನುಭವಗಳನ್ನೂ ಜೀವನದ ದೃಷ್ಟಿಯನ್ನೂ ಅಭಿವ್ಯಕ್ತಿಗೊಳಿಸುವ ಶಬ್ದ ಮಾಧ್ಯಮ. ಈ ಅಭಿವ್ಯಕ್ತಿಯು ಸಹೃದಯರನ್ನು ತಲುಪಬೇಕೆಂಬ ನಿಶ್ಚಿತ ಗುರಿಯೂ ಸಾಹಿತಿಗೆ ಇರುತ್ತದೆ. ಸಾಹಿತಿಗೆ ಒದಗುವ ಜೀವನಾನುಭವಗಳು ಹಾಗೂ ಆ ಮೂಲಕ ಒದಗುವ ಜೀವನದೃಷ್ಟಿಗೆ ಮುಖ್ಯ ಆಧಾರ ಅವನ ಸಮಕಾಲೀನ ಜನಜೀವನವೇ ಆಗಿರುತ್ತದೆ. ಸಾಹಿತಿಯೂ ಈ ಜನಜೀವನದ ಅಂಗವೇ ಆಗಿರುತ್ತಾನೆ. ಇಲ್ಲಿನ ಎಲ್ಲ ಚಟುವಟಿಕೆಗಳೂ ಸಮಸ್ಯೆಗಳೂ ಸಾಹಿತಿಯನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸುತ್ತುವರಿದಿರುತ್ತವೆ. ಆ ಅನುಭವಗಳಲ್ಲಿ ಸಾಹಿತಿಯು ಸಕ್ರಿಯವಾಗಿ ಭಾಗಿಯಾಗಿರಲಿ ಅಥವಾ ತನ್ನ ಸುತ್ತಲಿನದನ್ನು ಸೂಕ್ಷ್ಮವಾಗಿ ಗಮಿನಿಸಿದ ಮಾತ್ರದಿಂದ ಆ ಅನುಭವವನ್ನು ಗಳಿಸಿರಲಿ, ಅದು ಆತನ ಜೀವನ ದೃಷ್ಟಿಯನ್ನು ರೂಪಿಸುವಷ್ಟು ಆಳವಾಗಿ ಅವನ ಚಿಂತನ ಕ್ರಮದಲ್ಲಿ ಸೇರಿಕೊಂಡರೆ. ಆ ಅನುಭವವನ್ನು ಪ್ರಾಮಾಣಿಕವೆಂದು ಪರಿಗಣಿಸಬಹುದು. ಸಾಹಿತ್ಯದಲ್ಲಿ ಈ ಪ್ರಾಮಾಣಿಕ ಅನುಭವದ ಅಭಿವ್ಯಕ್ತಿ ಇರಬೇಕಾದದ್ದು ಒಂದು ಪ್ರಾಥಮಿಕ ಅಗತ್ಯ ಈ ಅಬಿವ್ಯಕ್ತಿ ಕಲಾತ್ಮಕವಾಗಿಯೂ ಸಫಲವಾಗಿದ್ದರೆ ಒಂದು ಅಮೂಲ್ಯ ಸಾಹಿತ್ಯ ಕೃತಿಯಾಗಲಿ, ಕವಿತೆಯಾಗಲಿ ಸೃಷ್ಟಿಯಾಗುತ್ತದೆ.

ಬೆಲೆಯಿಂದಕ್ಕುಮೇ ಕೃತಿ ಗಾವಿಲ!
ಭುವನದ ಭಾಗ್ಯದಿಂದಮಕ್ಕುಂ
ನೋಳ್ಪಂ ಬೆಲೆಗೊಟ್ಟು ತಾರ
ಮಧುವಂ ಮಲಯಾನಿಲನಂ, ಮನೋಜನಂ, ಕೌಮುದಿಯಂ

ಈ ಮೇಲಿನ ಪದ್ಯ ನೇಮಿಚಂದ್ರನ ನೇಮಿನಾಥ ಪುರಾಣದಲ್ಲಿ ಬರುತ್ತದೆ. ಸಾರ್ವಕಾಲಿಕ ಸತ್ಯವಾಗಿ ಎಂದೆಂದಿಗೂ ಉದಾಹರಣೆಗೆ ಅರ್ಹ ಸಾಲುಗಳಾಗಿವೆ.

ನಿಜ ಒಂದು ನಾಡಿಗೆ ಒಂದು ಒಳ್ಳೆಯ ಕೃತಿ ಒಂದು ಒಳ್ಳೆಯ ಕಲೆ, ಆವಿಷ್ಕಾರ ಇವೆಲ್ಲಕ್ಕೂ ಸಹ ಆ ನಾಡಿನ ಸೌಭಾಗ್ಯವೂ ಇರಬೇಕಾಗುತ್ತದೆ. ಅನೇಕ ಸಾಹಿತಿಗಳು ಕಲಾವಿದರು ವಿಜ್ಞಾನಿಗಳು ಈ ನಾಡಿನ ಸೌಭಾಗ್ಯದಿಂದ ಕೊಡುಗೆಯನ್ನು ನೀಡಿದ್ದಾರೆ. ಅಂತೆಯೇ ವೈರಮುತ್ತುರವರೂ ಸಹ ಸಮಕಾಲೀನ ತಮಿಳು ಸಾಹಿತ್ಯ ಲೋಕದಲ್ಲಿ ಮಾತ್ರವಲ್ಲದೆ ಭಾರತದಾದ್ಯಂತ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಕವಿ, ಲೇಖಕರು, ಉತ್ತಮ ಸಾಹಿತಿ, ಪ್ರಸಿದ್ಧ ವಾಗ್ಮಿ, ಗೀತೆ ರಚನೆಕಾರರಾಗಿ ಪ್ರಸಿದ್ಧರಾಗಿದ್ದಾರೆ. ಇವರ ಸಾಹಿತ್ಯಕ ಕೊಡುಗೆಗಾಗಿ ಪದ್ಮಭೂಷಣ ಪ್ರಶಸ್ತಿ ಹಾಗೂ ಅವರ 'ಕಳ್ಳಿಕ್ಕಾಟ್ಟು ಇದಿಗಾಸಂ' ಎಂಬ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿಯ ಅನುವಾದಿತ ಕೃತಿ 'ಕಳ್ಳಿಗಾಡಿನ ಇತಿಹಾಸ' ಕುವೆಂಪು ಭಾಷಾ ಭಾರತಿ ಪ್ರಶಸ್ತಿಗೆ ಭಾಜನವಾಗಿದೆ. ಭಾರತದ ಶ್ರೇಷ್ಠ ಗೀತೆ ರಚನೆಕಾರರು ಎಂದು 7 ಬಾರಿ ರಾಷ್ಟ್ರ ಪ್ರಶಸ್ತಿ ಹಾಗೂ ತಮಿಳಿನ ಅತ್ಯುತ್ತಮ ಗೀತೆರಚನೆಕಾರರೆಂದು 6 ಬಾರಿ ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದಾರೆ. ಒಟ್ಟು 8000 ಚಲನಚಿತ್ರಗೀತೆಗಳು, 45ಕ್ಕೂ ಹೆಚ್ಚು ಸಾಹಿತ್ಯಕ ಕೃತಿಗಳು, ಹಾಗೂ 500 ಪ್ರಾತಿನಿಧಿಕ ಕವಿತೆಗಳ ಮೂಲಕ ಅನನ್ಯ ಕಲ್ಪನಾ ಪ್ರತಿಭೆಯಿಂದ ಸಾಹಿತ್ಯ ಲೋಕದಲ್ಲಿ ಮಿಂಚುತ್ತಿದ್ದಾರೆ. ಸಾಹಿತ್ಯದಲ್ಲಿ ಅನನ್ಯತೆ ಹಾಗೂ ವಿಶ್ವ ಮಟ್ಟದಲ್ಲಿ ಪ್ರಗತಿಪರ ಚಿಂತಕರಾಗಿ ಅದ್ವಿತೀಯ ದೃಷ್ಟಿಕೋನಗಳಿಂದಲೂ ನವ ಚೈತನ್ಯದಿಂದಲೂ ಸಾಹಿತ್ಯ ಲೋಕದಲ್ಲಿ ವಿಹರಿಸುತ್ತಿದ್ದಾರೆ.

"ವೈರಮುತ್ತುರವರ ಕಾವ್ಯಗಳು ಮತ್ತು ಇತರೇ ಬರೆಹಗಳು ಸಾಧಾರಣ ಸಾಹಿತ್ಯದ ರೀತಿಗಿಂತ ಭಿನ್ನವಾಗಿವೆ. ಜೀವನದ ನಿಗೂಢ ಸ್ವರೂಪದ ಚಿಂತನೆ, ವ್ಯಾವಹಾರಿಕ ಚತುರತೆಯಿಂದ, ಸಾಮಾಜಿಕ ಮೌಲ್ಯಗಳಿಂದ ಗಟ್ಟಿ ಕವಿಯಾಗಿದ್ದಾರೆ. ಇವರ ಮನಸ್ಸು ಯಾವಾಗಲೂ ಒಂದು ತೀವ್ರವಾದ ಸಂಯೋಜನೆಯ ಕ್ರಿಯೆಗಳನ್ನು ಒಳಗೊಂಡಿರುತ್ತದೆ. ಅದನ್ನು ನಾವು ಇಲ್ಲಿನ ಕವಿತೆಗಳಲ್ಲಿ ಕಾಣಬಹುದಾಗಿದೆ. ಶಬ್ದ ಪ್ರಯೋಗಗಳ ಚಮತ್ಕಾರದ ಸೋಂಕು ಕಲ್ಪನೆಯ ಲಹರಿ ಪಕ್ವಗೊಂಡು ಇಲ್ಲಿನ ಕವನಗಳು ತೀವ್ರತೆಯನ್ನು ಹೆಚ್ಚಿಸುತ್ತವೆ. ಕಾವ್ಯದ ಯಶಸ್ಸಿನ ಶಕ್ತಿಯಾಗುತ್ತದೆ ಧ್ವನಿ ರಚನೆ ಢಾಳಾಗಿ ಎದ್ದು ಕಾಣುತ್ತದೆ. ಕವಿ ಚೇತನಕ್ಕೆ ಪ್ರಕೃತಿಯೇ ಸ್ಫೂರ್ತಿ. ಅದನ್ನು ವೈರಮುತ್ತು ಅವರ ಹೆಚ್ಚಿನ ಕವಿತೆಗಳಲ್ಲಿ ಸವಿಯಬಹುದು ಎಂಬುದು ಹಿರಿಯ ಪ್ರಬುದ್ಧ ಲೇಖಕರು ಮತ್ತು ಅನುವಾದಕರು ಆದ ಶೇಷನಾರಾಯಣ ಅವರ ಅಭಿವ್ಯಕ್ತಿ.

ಸಾಮಾಜಿಕ ಪ್ರಜ್ಞೆ–ಜೀವನ ಮೌಲ್ಯ

'ಎಲೆ' ಎಂಬ ಕವಿತೆಯಲ್ಲಿ ಎಲೆಯು ಸಹ– ಎಲೆಗಳೊಡನೆ ರೆಂಬೆ ಕೊಂಬೆಗಳೊಡನೆ ಮಾತನಾಡುವ ಸನ್ನಿವೇಶ. ಎಲೆ ಇನ್ನೇನು ಉದುರಿ ಹೋಗುವ ಕೊನೆಯಂಚಿನಲ್ಲಿದ್ದಾಗ ಸಂಯಮದಿಂದ ತನಗೆ ಹೊರಿಸಿದ ಅಪವಾದ, ನಿಂದೆ ವ್ಯಂಗ್ಯವಾಡಿದುದನ್ನು ನೆನಪಿಸಿಕೊಳ್ಳುತ್ತದೆ. ಎಲೆಗೆ ಸಾವು ಸಮೀಪಿಸಿದುದರಿಂದ ಸಹ ಎಲೆಗಳು ನಿರ್ಮತ್ಸರದಿಂದ ಕ್ಷಮಿಸುತ್ತವೆ. ಎಂಥ ಮಾರ್ಮಿಕ ನುಡಿಯನ್ನು ಕವಿ ಎಲೆಯ ಸ್ವಗತದಲ್ಲಿ ನುಡಿಸುತ್ತಾರೆ. ಹಾಗಾದರೆ / ಬಾಳೆಂಬುದು ಅರ್ಥಕೊಡವೇ?/ ಮರಣವೆಂಬುದು ಪೂರ್ಣವೇ? ಮನುಷ್ಯ ಬದುಕಿರುವಾಗ ಸಹಚರರು ಅರ್ಥ ಮಾಡಿಕೊಳ್ಳಬೇಕು ಸಾಯುವ ಕ್ಷಣದಲ್ಲಿ ಸತ್ತಮೇಲೆ ಅರ್ಥೈಸಿಕೊಳ್ಳುವುದರಿಂದ ಬಂದ ಪ್ರಯೋಜನವಾದರೂ ಏನು? ಎಂಬ ಧ್ವನ್ಯಾರ್ಥವಿದೆ. ಕವಿತೆಯ ಸಾಲುಗಳಲ್ಲಿ ಕೊನೆಗೆ ಇದ್ದುದರಲ್ಲೇ ತೃಪ್ತ ಜೀವನ ಸಾಗಿಸಿದ ಎಲೆ "ವಾಸ್ತವವೇ ಸುಖ,/ ಬಯಕೆ ನರಕ"/ ಎಂಬುದಾಗಿ ನಿರ್ಧರಿಸುತ್ತದೆ. ವೈರಮುತ್ತುರವರ ಅನೇಕ ಕವಿತೆಗಳು ನಮ್ಮನ್ನು ವಿವೇಚನೆಯೆಡೆಗೆ ಕೊಂಡೊಯ್ಯುತ್ತದೆ. ರೆಕ್ಕೆಯಾಯಣ ಕವಿತೆಯು ಮನಸ್ಸಿಗೆ ಮರುಕವನ್ನು ತರುವ ಕವಿತೆ" ಶಿಬಿ ಚಕ್ರವರ್ತಿ ಈ ನಾಡಿನವನೆಂಬುದು ಮಾತ್ರ, ಸತ್ತ ಹಕ್ಕಿಗೆ ತಿಳಿಯದಂತಿರಲಿ" ಎನ್ನುತ್ತಾರೆ ಕವಿ. ಬಾಲಕಿ ಮತ್ತು ದೇವತೆ ಕವಿತೆಯು ಕಟು ವಾಸ್ತವವನ್ನು, ಹಾಗೂ ವಿಡಂಬನೆಯನ್ನು ಜೀವನದ ವಿಪರ್ಯಾಸವನ್ನು ತಿಳಿಸುವಂತಹ ಅದ್ಭುತ ಕವಿತೆಯಾಗಿದೆ. ಇವರ 'ರಕ್ತ ಶಾಸನ' ಕವಿತೆಯಲ್ಲಿ ಶ್ರೀಲಂಕಾದಲ್ಲಿ ನಡೆದ ಜನಾಂಗೀಯ ಕಗ್ಗೊಲೆಯನ್ನುಕುರಿತು ಬೀಭತ್ಸ, ಅಸಹಾಯಕತೆ, ದೌರ್ಬಲ್ಯ, ದೌರ್ಜನ್ಯ ಕ್ರೌರ್ಯ ಎಲ್ಲದರ ಸಮ್ಮಿಳನದೊಂದಿಗೆ ದಾರುಣ ಚಾರಿತ್ರಿಕ

ದಾಖಲೆಯಾಗಿ ಪರಿಣಮಿಸಿದೆ. ಯಾವ ಕಾವ್ಯದಲ್ಲಿ ವಾಚ್ಯಕ್ಕಿಂತ ವ್ಯಂಗ್ಯವೇ ಪ್ರಧಾನವಾಗಿದೆಯೋ ಅದು ಉತ್ತಮ; ಇದನ್ನು ಧ್ವನಿ ಕಾವ್ಯ ಎಂದು ಆಲಂಕಾರಿಕರು ಕರೆದಿದ್ದಾರೆ. ಈ ಹಿನ್ನೆಲೆಯಲ್ಲಿ 'ಕೊನೆಹಗಲು' ಎಂಬ ಕವಿತೆಯನ್ನು ಗಮನಿಸಿದರೆ ತಿಳಿಯುತ್ತದೆ. ಅಣುಚಳಿಗಾಲವನ್ನು ಕುರಿತು ಮಾರ್ಮಿಕವಾದ ಎಚ್ಚರಿಕೆ ನೀಡುತ್ತಿದ್ದಾರೆ. ಕವಿ ವ್ಯಂಗ್ಯ ನುಡಿಯಿಂದ ಸೂರ್ಯನಿಲ್ಲದೇ ಹೋದರೇನಂತೆ ಮನುಷ್ಯನೇ ! / ದೇವರನ್ನೇ ಸೃಷ್ಟಿಸಿದ ನೀನು ಶಾಖ ತಾನೇ ಬೇಕು/ಯಾವುದಾದರೂ ಒಂದು ಗ್ರಹವ ಉರಿಸು ಎಂದು ಹೇಳುತ್ತಾರೆ. ಈ ಸಮಾಜದಲ್ಲಿ ಬದಲಾವಣೆಯನ್ನು ತರಬೇಕಾದರೆ ಸಾಹಿತ್ಯದಲ್ಲಿ ವಿಡಂಬನೆಯೂ ಸಹ ಮುಖ್ಯ ಪಾತ್ರವನ್ನು ವಹಿಸುತ್ತದೆ. 'ಎಲ್ಲರೂ ಈ ನಾಡಿನ ಅರಸರು' ಎಂಬ ಕವಿತೆಯಲ್ಲಿ 'ಅರಸರಿಗೆಲ್ಲಯ್ಯಾ ಗೌರವ?/ ಎಲ್ಲರೂ ಈ ನಾಡಿನ ಮಂತ್ರಿಗಳಾಗುವುದು ಎಂದು? /' ಎಂಬುದಾಗಿ ಕವಿ ಪ್ರಶ್ನಿಸುತ್ತಾರೆ. ಆದರೆ ಸ್ವತ: ಕವಿ ಯಾವುದೇ ಮಂತ್ರಿಗಿರಿಯನ್ನು ಬಯಸಿದವರಲ್ಲ ಎಂಬುದು ಬಹಳ ಮುಖ್ಯ ಸಂಗತಿ.

W.H Auden :By the prig, I mean the critic for whom no actual poem is good enough. Since the only one that would be is the poem he would like to write himself but cannot, 'Making knowing and – Judging P. 20 – 21

W.H Auden ಅವರು ಮಾಡುವ ಬೇರೆಯಾದ ವ್ಯಾಖ್ಯಾನ ಇದು. 'ಪ್ರಿಗ್' ಎಂದರೆ ವಿಮರ್ಶಕರಲ್ಲಿ ಒಬ್ಬ. ಅವನಿಗೆ ಸದ್ಯದಲ್ಲಿ ವಾಸ್ತವವಾಗಿ ಇರುವ ಯಾವ ಕವಿತೆಯೂ ಚೆನ್ನಾಗಿಲ್ಲ. ಏನಾದರೂ ಅಂಥ ಕವಿತೆ ಇದ್ದರೆ ಅದನ್ನು ಆತನೇ ಬರೆಯಬೇಕು. ಆದರೆ ಬರೆಯಲಾಗುತ್ತಿಲ್ಲ! ಈ ಮಾತು ವೈರಮುತ್ತು ಅವರು ರಚಿಸಿದ ಕವಿತೆಗಳನ್ನು ಕುರಿತು ಕುಹಕ ವಿಮರ್ಶಕರ ಮನಸ್ಸಿನಲ್ಲಿ ಬಂದ ಪ್ರಶ್ನೆಗೆ ಅವರ ಅಸಹಾಯಕತೆಗೆ ಉತ್ತರವೋ ಎಂಬಂತಿದೆ. ತಾವೂ ಹೀಗೆ ಬರೆಯಬಹುದಿತ್ತು ಅಂತ ಅನ್ನಿಸಿದರೂ ಬರೆಯಲಾಗದು ಎಂಬುದೇ ನಿಜ. ಇಂಥಲ್ಲಿ ಯಾವುದೇ ಉತ್ತಮ ಕವಿಯ ಶ್ರೇಷ್ಠತೆಯ ಉನ್ನತಿಯನ್ನು ಮನಗಾಣಬಹುದು.

ಬರಹದಲ್ಲಿ ತೊಡಗಿರುವ ಯಾರಿಗೇ ಆದರೂ ತಾನು ಬದುಕುತ್ತಿರುವ ಸಮಾಜದ ಎಲ್ಲಾ ಬಗೆಯ ಒಳ ಪದರುಗಳ ಸಾಮಾನ್ಯ ಜ್ಞಾನ ಮತ್ತು ಸೂಕ್ಷ್ಮವಾದ ಸಾಮಾಜಿಕ ಅರಿವು ಇರಬೇಕಾಗುತ್ತದೆ. ಮೊದಲಿಗೆ ಸಹ ಮನುಷ್ಯರನ್ನು ಸಹನೆ, ಪ್ರೀತಿ, ಕಾಳಜಿಯಿಂದ ನೋಡುವ ಮನುಷ್ಯತ್ವದ ಗುಣ ಇರಬೇಕಾಗುತ್ತದೆ. ಭಾರತೀಯ ಸಮಾಜವನ್ನು ಪ್ರಜಾಪ್ರಭುತ್ವದ ನೆಲೆಯಲ್ಲಿ ಸೂಕ್ಷ್ಮವಾಗಿ ಗ್ರಹಿಸಬೇಕಾಗುತ್ತದೆ **"ಕವಿಗಳು ಕಾಲದ ದನಿಯಾಗುವುದು ಅತಿಮುಖ್ಯ"** ಎಂಬ ಬರಗೂರು ರಾಮಚಂದ್ರಪ್ಪನವರ ಮಾತು ಅಕ್ಷರಶ: ನಿಜ. ಈ ಹಿನ್ನೆಲೆಯಲ್ಲಿ ಕಳ್ಳಿಗಾಡಿನ ಇತಿಹಾಸವನ್ನು ಗಮನಿಸೋಣ.

ಕಳ್ಳಿಗಾಡಿನ ಇತಿಹಾಸ

ವೈರಮುತ್ತು ಅವರ ಕಳ್ಳಿಗಾಡಿನ ಇತಿಹಾಸ ಕಾದಂಬರಿಯಲ್ಲಿ 1958 ರಲ್ಲಿ ವೈಗೈ ನದಿಗೆ ಅಣೆಕಟ್ಟು ಕಟ್ಟಿದುದರಿಂದ ಅಲ್ಲಿನ ಗ್ರಾಮವಾಸಿಗಳು ನಿರ್ಗತಿಕರಾಗಿ ಎಷ್ಟೆಲ್ಲ ಕಷ್ಟಪಟ್ಟು ಹೇಗೆ ಅಲ್ಲಿಂದ ಹೊರಟು ಬಂದರು ಎಂಬ ಕಥಾಹಂದರವನ್ನೊಳಗೊಂಡ ಈ ಕಾದಂಬರಿಯ ಕೇಂದ್ರ ಬಿಂದು ಪೇಯತ್ತೇವನ್ ಎಂಬ ವ್ಯಕ್ತಿ ಹಾಗೂ ಅವನ ಕುಟುಂಬದವರ ಹಾಗೂ ಆತನ ಸುತ್ತಣ ಗ್ರಾಮವಾಸಿಗಳ ನಡುವೆ ನಡೆಯುವ ಘಟನೆಗಳನ್ನಾಧರಿಸಿದ ಈ ಕಾದಂಬರಿಯಲ್ಲಿ ಹಳ್ಳಿಯ ಜನ– ಜೀವನ, ಬಂಜರು ಭೂಮಿ,ಬೇಸಾಯ, ಬಡತನ, ಸಾವು– ನೋವು, ಸಂಕಟ, ದಾಂಪತ್ಯ, ಪ್ರೇಮ, ಶ್ರಮ, ಶ್ರದ್ಧೆ, ಸೋಮಾರಿತನ, ಮೋಸ, ಕಳ್ಳತನ, ಕೊಲೆ, ಶೋಷಣೆ, ಸರ್ಕಾರದ ಬೇಜವಾಬ್ದಾರಿತನ, ಕೌಟುಂಬಿಕ ಜಗಳ. ಬಡತನದಲ್ಲೇ ಹೋರಾಟದ ಬದುಕು, ಮಾನವೀಯತೆ, ಪ್ರಾಮಾಣಿಕತೆ, ತಾಳ್ಮೆ –ಸಹನೆ, ಆತ್ಮ ಗೌರವ ಒಗ್ಗಟ್ಟು, ಹುಟ್ಟಿದ ನೆಲದ ಮೇಲಿನ ಅದಮ್ಯ ಪ್ರೀತಿ, ಇವೆಲ್ಲವೂ ಕೇವಲ ಈ ಕಾದಂಬರಿಯ ಕಳ್ಳಿಪ್ಪಟ್ಟಿ ಎಂಬ ಹಳ್ಳಿಗೆ ಮಾತ್ರವೇ ಸೀಮಿತವಲ್ಲ. ಎಲ್ಲ ನಾಡಿನ ಬಡ ಜನಾಂಗಗಳ ಕಟು ವಾಸ್ತವ ಜೀವನ ಚಿತ್ರಣವೋ ಎಂಬಂತೆ ಕಣ್ಣಿಗೆ ಕಟ್ಟಿದಂತೆ ಚಿತ್ರಿಸಿರುವ ಈ ಕಾದಂಬರಿಯನ್ನು ಓದಲು ಪ್ರಾರಂಭಿಸಿದರೆ ಕೊನೆಯವರೆಗೂ ಕುತೂಹಲದಿಂದ ತನ್ನತಾನೇ ಓದಿಸಿಕೊಂಡು ಹೋಗುತ್ತದೆ. ಡಾ. ವೈರಮುತ್ತುರವರ ಬರವಣಿಗೆ ಶೈಲಿ, ತಂತ್ರ, ವಾಗ್ಜಾಲ, ವಾಗ್ವಿಭವ, ಉಪಮೆ, ರೂಪಕ. ವರ್ಣನೆ, ಹಾಸ್ಯ ವ್ಯಂಗ್ಯ, ಸಂಸ್ಕೃತಿ, ಜೀವನ ಮೌಲ್ಯ, ಪ್ರಗತಿಪರ ಚಿಂತನೆ, ಮೂಢ ನಂಬಿಕೆಯ ನಿವಾರಣೆ, ಬರವಣಿಗೆಯ ಸೊಗಸು ಹೀಗೆ ಹಳ್ಳಿಯ ವಾಸ್ತವ ಚಿತ್ರಣಗಳಿಂದ ಕೂಡಿದ ಗಂಭೀರ ಬರವಣಿಗೆಯಾಗಿದೆ. ಮುತ್ತುಕ್ಕಣ್ಣಿ ಸ್ನಾನ ಮಾಡುತ್ತಿರುವ ಸನ್ನಿವೇಶವೊಂದನ್ನು ಗಮನಿಸೋಣ. ಆಕೆಯ ದೇಹವನ್ನು ನೇವರಿಸಿ ಬಂದ ನೀರು. ಆಕೆ ನೀರಿನಲ್ಲಿ ಮುಳುಗಿ ಎದ್ದಳಲ್ಲಾ– ಅದರಲ್ಲಿ ಬಂದುದೇ ಮಲ್ಲಿಗೆಯ ಕಂಪು. ಜಮೀನ್ದಾರ ಹೀಗೆ ಹಾಡುತ್ತಾನೆ.' ಪಾಚಿ ಹಿಡಿವ ನೀರು. /ಹಲವರು ಕುಡಿವ ನೀರು./ ಒಯ್ಯಾರಿ ಬೆಡಗಿ ಮಿಂದಾಗ/ಸಕ್ಕರೆ ನೀರಾಯಿತಲ್ಲೇ'! ಅಂತ – ಹಾಡಾಗಿ ಹೊಮ್ಮಿತು ಪಾಪಿಯ

ಎದೆಯೊಳಗೆ.. ಗೊತ್ತೋ ಗೊತ್ತಿಲ್ಲದೆಯೋ ಲೇಖಕರ ಮನಸ್ಸಿಗೆ ಬಂದಿದೆ ಈತನ ಮುಂದಿನ ಕಾರ್ಯ. ಅದನ್ನು ಓದುಗರಿಗೆ ಒಂದಿಷ್ಟು ತಿಳಿಸಲು ಪ್ರಯತ್ನಿಸಿದ್ದಾರೆ ಪಾಪಿ ಎಂದು ಸಂಬೋಧಿಸಿ.

'ಏಡಿ ಚಲಿಸಲು ಭತ್ತ/ನರಿಯೋಡಲು ಕಬ್ಬು /ಬಂಡಿಯೋಡಲು ಬಾಳೆ /ತೇರೋಡಲು ತೆಂಗು' ಸುಮ್ಮೆ ಯೋಳಿದ್ರಾ ನಾಣ್ಣುಡಿ?' ಪೇಯತ್ತೇವರ್ ತನ್ನ ಮಗ ಸೋಮಾರಿ ಚಿನ್ನುವಿಗೆ ಹೀಗೆ ಹಾಡಿ ತೋರಿಸುವ ಸಂದರ್ಭದಲ್ಲಿ ಓದುಗರಿಗೆ ಈ ವಿಷಯವನ್ನು ತಿಳಿಸಬೇಕು ಅನ್ನುವ ಅವರ ಸಾಮುದಾಯಿಕ ದೃಷ್ಟಿಯನ್ನು ನೋಡಿ. ಭವಿಷ್ಯದಲ್ಲಿ ವ್ಯವಸಾಯಿಗಳು ಇದನ್ನು ಒಂದು ದಾಖಲೆಯಾಗಿ ಕೂಡ ತೆಗೆದುಕೊಳ್ಳುವ ಸಂಭವ ಉಂಟು. ಮುರುಗಾಯಿಯ ತಂದೆ ನಾಪಿತ ವೆಳ್ಳಯನ್ ಬಳಿ ಪೇಯತ್ತೇವರ್ ಬಂದು ಕ್ಷೌರ ಮಾಡಿಸಿಕೊಳ್ಳಬೇಕಾದರೆ 'ಸೀನು ಬಂದರೆ ಹೇಳಯ್ಯಾ' ಅಂತಾ ಎಷ್ಟು ಸೂಕ್ಷ್ಮವಾಗಿ ಎಚ್ಚರಿಕೆಯನ್ನು ವೆಳ್ಳಯನ್ ಕೊಡುತ್ತಾನೆ ನೋಡಿ ಇದು ನಿಜವಾಗಿಯೂ ಜೀವ ಪರ ಕಾಳಜಿಗೆ ಒಂದು ನಿದರ್ಶನ.

ಸುಪ್ರಸಿದ್ಧ ಅನುವಾದಕಿ ಲೇಖಕಿ ಇಂಗ್ಲಿಷ್ ಪ್ರಾಧ್ಯಾಪಕಿ ಪಾರ್ವತಿ ಜಿ. ಐತಾಳ್ ಅವರು ವೈರಮುತ್ತುರವರ ಕಳ್ಳಿಗಾಡಿನ ಇತಿಹಾಸವನ್ನು ಓದಿ ಉದಯ ವಾಣಿಯಲ್ಲಿ ಮತ್ತು ಜನಪ್ರತಿನಿಧಿ ಪತ್ರಿಕೆಯಲ್ಲಿ ಪುಸ್ತಕ ವಿಮರ್ಶೆಯನ್ನು ಮಾಡುತ್ತಾ "ತಮಿಳು ನಾಡಿನ ಹಿಂದುಳಿದ ಹಳ್ಳಿಯಾದ ಕಳ್ಳಿಕ್ಕಾಟ್ಟಿನ ಕರುಣ ಕಥೆಯನ್ನು ನಿಟ್ಟುಸಿರಿನೊಂದಿಗೆ ನಿರೂಪಿಸುತ್ತದೆ. ಕಥಾವಸ್ತು ಎಷ್ಟು ಗಂಭೀರವೋ ವೈರಮುತ್ತು ಅವರು ಅದನ್ನು ರೂಪಿಸಿದ ಬಗೆಯೂ ಹೃದಯಸ್ಪರ್ಶಿಯಾಗಿದೆ. ನೊಬೆಲ್ ಪ್ರಶಸ್ತಿ ವಿಜೇತ ಪರ್ಲ್ ಎಸ್ ಬಕ್ ಅವರ ಕಾದಂಬರಿ 'ಗುಡ್ ಅರ್ತ್'ನ ನಾಯಕ ವಾಂಗ್ ಲುಂಗ್‌ನನ್ನು ಹೋಲುವ ನಾಯಕನಾಗಿದ್ದಾನೆ. ಕಳ್ಳಿಗಾಡಿನ ಇತಿಹಾಸದ ಪೇಯತ್ತೇವರ್" ಎನ್ನುತ್ತಾರೆ

ಪ್ರಸಿದ್ಧ ಪತ್ರಕರ್ತರು ವಿಮರ್ಶಕರೂ ಆದ ವೆಂಕಟೇಶ್ ಮಾನು ಅವರು ಕಳ್ಳಿಗಾಡಿನ ವಿಮರ್ಶೆಯನ್ನು ಬುಕ್ ಬ್ರಹ್ಮದಲ್ಲಿ ಹಾಗೂ ಕಂಪಿಲ ವಾಣಿಯಲ್ಲಿ ಎರಡು ಭಾಗವಾಗಿ ಬರೆದಿದ್ದಾರೆ. ಕಳ್ಳಿಗಾಡಿನ ಇತಿಹಾಸ ಕಾದಂಬರಿಯ ರಚನೆಗೆ ಲೇಖಕರ ಮನೋ ಭೂಮಿಕೆಯ ಸಿದ್ಧತೆಯ ಪರಿಯೂ ಉತ್ತಮ ಶ್ರೇಣಿಯ ಸಾಹಿತ್ಯ ರಚಿಸುವ ಲೇಖಕರ ವ್ಯಕ್ತಿತ್ವದ ಭಾಗವಾಗಿಯೂ ಆಗುತ್ತದೆ. ಕಾದಂಬರಿಯ ವಸ್ತು ಕೇಂದ್ರದಿಂದ ದೂರ ಸಿಡಿಯದಂತೆ ಓದುಗರನ್ನು ಸೆಳೆದಿರುವ ಬಿಗಿ ಬಂಧದ ಆಕರ್ಷಣೆಯೂ ಆಗಿ ಈ ಕಾದಂಬರಿಯ ಅಧ್ಯಯನದ ವಸ್ತುವೇ ಆಗಿದೆ.

ಮಲಯಾಳಂ ಕನ್ನಡ ಅನುವಾದಕರಾದ ಕೆ. ಪ್ರಭಾಕರನ್ ಅವರು ಕೆಂಡ ಸಂಪಿಗೆಯಲ್ಲಿ ಕಳ್ಳಿಗಾಡಿನ ಪುಸ್ತಕ ವಿಮರ್ಶೆಯಲ್ಲಿ ಹೀಗೆ ಬರೆದಿದ್ದಾರೆ. 'ಕಳ್ಳಿಗಾಡಿನ ಇತಿಹಾಸ' ಎಂಬ ಶೀರ್ಷಿಕೆಯಿದ್ದರೂ ಇದು ಪ್ರಪಂಚದ ಯಾವುದೇ ಅಭಿವೃದ್ಧಿ ಹೊಂದದ ಅಥವಾ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ನಡೆಯುವ ಶೋಷಿತ ಸಮುದಾಯದ ಇತಿಹಾಸವೇ ಆಗಿದೆ.

ಪ್ರೊ. ಶಿವರಾಮಯ್ಯನವರು ನ್ಯಾಯಪಥ ಎಂಬ ಪತ್ರಿಕೆಯಲ್ಲಿ ಕಳ್ಳಿಗಾಡಿನ ಇತಿಹಾಸ ಕಾದಂಬರಿಯನ್ನು ಕುರಿತು ಪುಸ್ತಕ ವಿಮರ್ಶೆ ಬರೆಯುತ್ತಾ ಹೀಗೆ ಹೇಳುತ್ತಾರೆ. "ವೈರಮುತ್ತುರವರ ಕಳ್ಳಿಗಾಡಿನ ಇತಿಹಾಸ ಇದು ರಾಮಾಯಣವಲ್ಲ– ಗ್ರಾಮಾಯಣ" ಪುನರನುಭವಿಸಿ ಹೇಳಿದ್ದು ಸಾಹಿತ್ಯ. ಉಳಿದದ್ದು ಕೇವಲ ವರದಿ ಅಥವಾ ವಾರ್ತೆ ಎಂದು ಕುವೆಂಪು ಹೇಳುವಂತೆ ಕಳ್ಳಿಗಾಡಿನ ಇತಿಹಾಸವನ್ನು ವೈರಮುತ್ತು ಪುನರನುಭವಿಸಿ ಹೇಳಿದ್ದಾರೆ ಎಂಬುದಾಗಿ ಕಾದಂಬರಿಯ ಬಗ್ಗೆ ಮೆಚ್ಚುಗೆಯನ್ನು ಸಲ್ಲಿಸಿದ್ದಾರೆ. ಮುಂದುವರಿದು "ಮಣ್ಣಿಂದ ಕಾಯ, ಮಣ್ಣಿಂದ ಜೀವ ತನ್ನ ಹುಟ್ಟೂರಿನ ಕಳ್ಳುಬಳ್ಳಿ ಕಡಿದುಕೊಂಡ ಲೇಖಕರು ಅಣೆಕಟ್ಟೆ ಕಟ್ಟುವ ಪೂರ್ವದ ತನ್ನೂರಿನ ಬದುಕಿನ ಜೀವನದಿಗೆ ಭಾವಾತ್ಮಕ ಅಕ್ಷರ ಅಣೆಕಟ್ಟು ನಿರ್ಮಿಸಿ ಧನ್ಯರಾದರು" ಎನ್ನುತ್ತಾ, ವೈರಮುತ್ತು ಅವರ ಉಪಮೆಗಳನ್ನು ಆಸ್ವಾದಿಸಿ ಕನ್ನಡದ ಕವಿ ಉಪಮಾಲೋಲ ಲಕ್ಷ್ಮೀಶನಿಗೆ ಹೋಲಿಸಿದ್ದಾರೆ. ಪರಿಸರದ ಬಗ್ಗೆ ಕಾಳಜಿ, ಸಾಮಾಜಿಕ ಪ್ರಜ್ಞೆಯಿಂದ, ಸಮಾಜದ ಸರ್ವಾಂಗೀಣ ಪ್ರಗತಿಗಾಗಿ, ಉಳಿವಿಗಾಗಿ ಇಂಥ ಕೃತಿಗಳನ್ನು ರಚಿಸಲು ಆಸ್ಪದವನ್ನು ನೀಡುತ್ತದೆ.

ಈ ಹಿನ್ನೆಲೆಯಿಂದ ಮೂನ್ರಾಂ ಉಲಗಪ್ಪೋರ್ ಎಂಬ ಕಾದಂಬರಿಯಲ್ಲಿ ಬರುವ ಅಂಶಗಳನ್ನು ಗಮನಿಸೋಣ. ಇದು ಒಂದು ವೈಜ್ಞಾನಿಕ, ಹಾಗೂ ವ್ಯವಸಾಯಕ್ಕೆ ಸಂಬಂಧಿಸಿದ ಕಾದಂಬರಿಯಾಗಿದೆ.

ಜಾಗತಿಕ ತಾಪಮಾನವನ್ನು ಕುರಿತು ಹನ್ನೆರಡು ವರ್ಷಗಳ ಹಿಂದೆಯೇ ಬರೆದ ಕಾದಂಬರಿ ಇವರು ದೂರದೃಷ್ಟಿಯುಳ್ಳ ಸಾಹಿತಿ ಜಗತ್ತಿನ ಸಮಸ್ತವೂ ಇವರ ಬರವಣಿಗೆಗೆ ವಸ್ತುವಾಗಿ ಪರಿಣಮಿಸಬಲ್ಲುದು. ಇದೊಂದು ವಿಶಿಷ್ಟ ಕಾದಂಬರಿ. ಇಲ್ಲಿ ಆಧುನಿಕತೆ, ತಾಂತ್ರಿಕತೆ, ವೈಜ್ಞಾನಿಕತೆ, ಶೈಕ್ಷಣಿಕ ವಿಚಾರಗಳು, ಸಾಮಾಜಿಕ ಕಾಳಜಿ, ವ್ಯವಸಾಯದ ಪ್ರಾಮುಖ್ಯತೆ, ಸಂಸ್ಕೃತಿ, ದೇಸೀ ಆಹಾರದ ಪ್ರಾಧಾನ್ಯತೆ, ಬಡತನ, ಜಾಗತಿಕ ತಾಪಮಾನದ ಲೇಖನ, ಅದರ ಪ್ರಸಿದ್ಧಿ, ಆ ಲೇಖನದ ಅನುವಾದ, ಗಾಂಧಿ ಗ್ರಾಮದ ವಿಶ್ವವಿದ್ಯಾಲಯಕ್ಕೆ ಸಂಶೋಧನಾ ವಿದ್ವಾಂಸರಾಗಿ ವಿದೇಶಗಳಿಂದ ಬರುವ ಎಮಿಲಿ, ಇಶಿಮುರ, ತಮಿಳುನಾಡಿನ ಚಿನ್ನ ಪಾಂಡಿ, ಇವರ ಲೇಖನಗಳ

ಮೂಲಕ ಜಾಗತಿಕ ಸಮರದಿಂದ ಭಾರತ ಮತ್ತು ವಿಶ್ವವೇ ಯಾವ ರೀತಿ ಪರಿಸರ ಮಲಿನಗೊಂಡು ತೊಂದರೆಗೆ ಒಳಗಾಗಲಿದೆ ಹಾಗೂ ಆಹಾರದ ಸಮಸ್ಯೆಯನ್ನು ಎದುರಿಸಲಿದೆ ಭವಿಷ್ಯದಲ್ಲಿ ಎಂಬ ಎಲ್ಲ ಸಂಗತಿಗಳನ್ನು ಲೇಖಕರು ಸಮೀಕ್ಷೆ ಮಾಡಿ ಅದರ ಮೂಲಕ ವಿಶ್ವ ಪ್ರಜ್ಞೆಯುಳ್ಳವರಾಗಿ, ಜನರಿಗೆ ಜಾಗೃತಿಯನ್ನು ಮೂಡಿಸುತ್ತಿದ್ದಾರೆ. (ಕನ್ನಡದಲ್ಲಿ ನಾಗೇಶ್ ಹೆಗಡೆ ಅವರು ತಮ್ಮ ಲೇಖನಗಳ ಮೂಲಕ ಜಾಗೃತಿಯನ್ನು ಮೂಡಿಸುತ್ತಿರುವಂತೆ)

ಈ ಕಾದಂಬರಿಯಲ್ಲಿ ಚಿನ್ನಪಾಂಡಿ ಮತ್ತು ಎಮಿಲಿಯ ಪ್ರೇಮ ಪ್ರಸ್ತಾಪ, ಚಿನ್ನ ಪಾಂಡಿ ತನ್ನ ಹಳ್ಳಿಗೆ ವಿದೇಶದಿಂದ ಬಂದ ಸಂಶೋಧಕರನ್ನು ಕರೆದು ಕೊಂಡು ಹೋಗುವುದು ಹಾಗೂ ಅಲ್ಲಿ ತಂಗಿದ್ದು ಗ್ರಾಮವನ್ನು ಪರಸರ ಪ್ರಜ್ಞೆಯ ಮೂಲಕ ಸ್ವತಃ ತಾನು ಮತ್ತು ವಿದೇಶಗಳಿಂದ ಬಂದ ಸ್ನೇಹಿತರೊಂದಿಗೆ ಸಾಮಾಜಿಕ ಹಿತ ಕಾರ್ಯಗಳಲ್ಲಿ ಪ್ರವೃತ್ತರಾಗುವುದು. ಪ್ಲಾಸ್ಟಿಕ್ ಮುಂತಾದ ತ್ಯಾಜ್ಯ ವಸ್ತುಗಳಿಂದ ಏನಾದರು ಪ್ರಯೋಜನಕ್ಕೆ ಬರುವ ಹಾಗೆ ಮರುಬಳಕೆ ಮಾಡುವುದು. ಆ ಹಳ್ಳಿಯ ಒಬ್ಬರ ಮನೆಗೆ ಮತ್ತೊಂದು ಮನೆಯ 12 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಹೋಗಿ ಒಂದು ವಾರಗಳವರೆಗೆ ತಂಗುವುದು ಅದೇ ರೀತಿ ಆ ಮಗುವಿನ ಮನೆಗೆ ಈ ಮನೆಯ ಮಗು ಹೋಗಿ ತಂಗುವುದು ಹೀಗೆ ಭಾವೈಕ್ಯತೆಗೆ ನಾಂದಿ ಹಾಡುವುದು. ಇಲ್ಲಿಯ ಪದ್ಧತಿ ಅಜ್ಜ ಅಜ್ಜಿ ಅತ್ತೆಯ ಹೆಸರಲ್ಲಿ ಮರವನ್ನು ನೆಟ್ಟು ಪೂಜೆ ಮಾಡುವುದನ್ನು ನೋಡಿ ಎಮಿಲಿ ಮತ್ತು ಇಷಿಮುರಾ ಸಂತಸವನ್ನು ಅಚ್ಚರಿಯನ್ನು ವ್ಯಕ್ತಪಡಿಸುವುದು. ಹೊಲದಲ್ಲಿ ಪೊಂಗಲ್ ಮಾಡುವುದು ಹಾಗೂ ಆ ಪೂಜೆಯ ಸಂದರ್ಭದಲ್ಲಿ ಸುನಾಮಿಯಲ್ಲಿ ಆತ ಕಳೆದುಕೊಂಡ ತಂದೆ ತಾಯಿಗಳ ಹೆಸರಿನಲ್ಲಿ ಅವರಿಬ್ಬರಿಗೂ ಒಂದೊಂದು ಎಳೆಯ ಬೆಳೆದ ಅರಳಿ ಮರವನ್ನು ತಂದು ನೆಟ್ಟು ಪಾತಿ ಕಟ್ಟಿ ನೀರನ್ನು ಎರೆದು ಹೂ ಮುಡಿಸಿ ಪೂಜೆ ಮಾಡುವುದು, ವೈರಮುತ್ತು ಎಂಬ ಕವಿಯ ಪರಿಚಯ, ಪರಿಚಯವಾದ ಈ ಸಂಶೋಧಕರ ಮೂಲಕ ತಾನೂ ಏನನ್ನಾದರೂ ಕಲಿಯಬಹುದು ಎಂಬ ಕವಿಯ ಜ್ಞಾನ ದಾಹ, ವಿನಯ ಹಾಗೂ ತನ್ಮೂಲಕ ಪಶ್ಚಿಮ ಘಟ್ಟಗಳ ಪ್ರಯೋಜನದ ಬಗ್ಗೆ ಅಮೂಲ್ಯ ಸಂಗತಿಗಳನ್ನು ವಿದೇಶಿಯರಿಗೆ ತಿಳಿಸುವ ನೆಪದಲ್ಲಿ ನಮ್ಮ ನಾಡಿನವರಿಗೆ ಪರಿಸರ ಮಾಲಿನ್ಯದ ತಡೆಯ ಅಗತ್ಯ ಮತ್ತು ದುರಾಸೆಯಿಂದ ಪಶ್ಚಿಮ ಘಟ್ಟಗಳನ್ನು ನಾಶಪಡಿಸದೆ ಉಳಿಸಿಕೊಳ್ಳಬೇಕು ಎಂಬ ಜಾಗೃತಿ ಮೂಡಿಸುವುದು ತನ್ಮೂಲಕ ಅದಮ್ಯ ನಿಸರ್ಗ– ಜೀವನ ಪ್ರೀತಿಯನ್ನು ವ್ಯಕ್ತಪಡಿಸಿರುವುದನ್ನು ಸಹ ಕಾಣಬಹುದು. ಕೊನೆಗೆ ಕಾದಂಬರಿಯಲ್ಲಿ ಚಿನ್ನಪಾಂಡಿ ವಿದೇಶಕ್ಕೆ ಹೋಗಲು ವಿಮಾನದಲ್ಲಿ ಕುಳಿತಿರಬೇಕಾದರೆ ಆತನಿಗೆ ಯಾವುದೋ ಸಂದೇಶ ಬಂದಿದೆ ಎಂದು ತಿಳಿಸುತ್ತಾರೆ. ಇಳಿದು ಬಂದು ಸಂಚಾರಿ ದೂರವಾಣಿಯ ಮೂಲಕ 'ಜೀವ ಹಾನಿಯಾಗಿದೆ ಬೇಗ ಊರಿಗೆ ಹಿಂತಿರುಗಿ ಬಾ' ಎಂಬ ಮಾತನ್ನು ಕೇಳಿದ ಕೂಡಲೇ ಹಳ್ಳಿಗೆ ಹೋಗಿ ತನ್ನ ತಂದೆ ಹಿಡಿದು ಅರ್ಧದಲ್ಲಿ ಬಿಟ್ಟಿದ್ದ ಸೆನಿಕೆಯನ್ನು ತೆಗೆದು ವ್ಯವಸಾಯದ ಕೆಲಸಕ್ಕೆ ಅಣಿಯಾಗುತ್ತಾನೆ ಎಂಬುದರಲ್ಲಿ ಕಾದಂಬರಿ ಕೊನೆಗೊಳ್ಳುತ್ತದೆ. ಭಾರತದ ಮುನ್ನಡೆಗೆ ಅಂದರೆ ವ್ಯವಸಾಯಕ್ಕೆ ಭವಿಷ್ಯದಲ್ಲಿ ಹೆಚ್ಚು ಒತ್ತು ಕೊಡಬೇಕು ಎಂಬ ಮಾರ್ಮಿಕ ದನಿಯೂ ಸಂದೇಶದೊಂದಿಗೆ ಪರೋಕ್ಷವಾಗಿ ನಮ್ಮ ನಾಡು ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಾದ ಜವಾಬ್ದಾರಿಯ ಎಚ್ಚರಿಕೆಯೂ ಆಗಿದೆ.

ಮಹಾ ಕವಿತೆ

ಇದೊಂದು ಅದ್ಭುತ ಮಹಾಕಾವ್ಯ ಪಂಚ ಭೂತಗಳ ಬಗ್ಗೆ ಅದರ ಮೂಲವನ್ನು ವೈಜ್ಞಾನಿಕ ಸಂಗತಿಗಳನ್ನು ಅದರೊಟ್ಟಿಗೆ ಮೊದಲಿಗೆ ಮನುಕುಲ ಬದುಕಬೇಕಾದರೆ ಪ್ರಥಮ ಚಿಕಿತ್ಸೆಯ ರೀತಿ ಸದ್ಯಕ್ಕೆ ಇರುವ ಭೂಮಿಯನ್ನು ರಕ್ಷಿಸಿ ಉಳಿಸಿಕೊಳ್ಳಬೇಕು ಎಂಬುದರ ಕಡೆಗೆ ಗಮನ ಸೆಳೆಯುವ ಕಾವ್ಯ. ಇದರ ಜೊತೆಗೆ ಜೀವನ ಕ್ರಮವನ್ನು, ಬಾಳಿನ ಸಂಗತಿಯನ್ನು, ಜೀವಪರ ಕಾಳಜಿಯನ್ನು, ವಿಶ್ವ ಮಾನವ ಪ್ರೇಮವನ್ನು, ಶಾಂತಿ ಸಂದೇಶವನ್ನು ತಿಳಿಸುವ ಮಹಾಕಾವ್ಯ. ಪರಿಸರವನ್ನು ಕಾಪಾಡಿಕೊಳ್ಳಲೇ ಬೇಕಾದ ಜಾಗೃತಿ ಪ್ರತಿಯೊಬ್ಬನಲ್ಲಿಯೂ ಮೂಡಿಸುವಂಥದ್ದು.

ಇದುವರೆಗೂ ಹೀಗೊಂದು ಮಹಾಕಾವ್ಯವನ್ನು ಯಾರಾದರೂ ಬರೆದಿರುವರೆ? ಇಲ್ಲವೆಂದೇ ಅನ್ನಿಸುತ್ತಿದೆ. ವಿಶಿಷ್ಟ ವೈಜ್ಞಾನಿಕ ಹಾಗೂ ಜೀವನ ಕ್ರಮದ ಸಮ್ಮಿಶ್ರಣ ಈ ಮಹಾಕಾವ್ಯ. ಅಣು ಚಳಿಗಾಲವನ್ನು ಕುರಿತು ಮಾರ್ಮಿಕ ಎಚ್ಚರಿಕೆಯನ್ನು ನೀಡುತ್ತಿದ್ದಾರೆ. ಕಡಲ ನೆಲ ಮಾಡುವುದು / ನೆಲವ ಕಡಲಾಗಿಸುವುದು/ಭುವಿಯ ಯುಗ ಮನರಂಜನೆ./ ಮನು ಕುಲದ ಉನ್ನತಿಯನ್ನು ಉಳಿಕೆಯನ್ನು / ಬರೆದು ಹೋಗುವುದು/ ಮಣ್ಣೆಂಬ ಮಾಧ್ಯಮವಲ್ಲವೇ? ಎಂದು ಮಹಾಕಾವ್ಯದಲ್ಲಿ ಜ್ಞಾನ ಮಿಶ್ರಿತ ಅಚ್ಚರಿಯನ್ನು ವ್ಯಕ್ತ ಪಡಿಸುತ್ತಾರೆ.

'ಕರುವಾಚ್ಚಿ ಕಾವ್ಯಂ' 2006ರಲ್ಲಿ ರಚಿಸಿದ ಈ ಕಾದಂಬರಿ ಇಲ್ಲಿಯ ನಾಯಕಿ ಹಳ್ಳಿಗಾಡಿನ ಒಂದು ಬಡಕುಟುಂಬದಲ್ಲಿ ಹುಟ್ಟಿದ ಸ್ತ್ರೀ ತನ್ನ ಜೀವನದಲ್ಲಿ ಅಷ್ಟು ನೋವು ಸಂಕಟಗಳನ್ನು ಅನುಭವಿಸಿಯೂ ಜೀವನ ಪಥದಲ್ಲಿ ಸಾಗುತ್ತಿರುವ ಒಂದು ಪಾತ್ರ ಆಕೆಯನ್ನು

ನೋಡಲು ಒಬ್ಬ ಸ್ವಾಮೀಜಿ ಬರುತ್ತಾರೆ ಆ ಸನ್ನಿವೇಶ ಈ ಕಾದಂಬರಿಯ ಕೇಂದ್ರ ಬಿಂದು ಆತ ಹೇಳುತ್ತಾನೆ ನಿನ್ನ ಅನುಭವದೊಂದಿಗೆ ನನ್ನ ಜ್ಞಾನವನ್ನು ಪರೀಕ್ಷಿಸಲು ಬಂದೆ, ಎಂದು ಹೇಳುತ್ತಾ ಸಂಭಾಷಣೆ ಸಾಗುತ್ತದೆ. ಲೇಖಕರು ಸ್ವಾಮೀಜಿಯ ಮೂಲಕ ಪ್ರಶ್ನೆಗಳನ್ನು ಕೇಳುತ್ತಲೇ, ಓದುಗರಿಗೆ ಒಂದು ಹೆಣ್ಣು ಅಬಲೆಯಲ್ಲ ಎಂಬುದನ್ನು ಬಹಳ ಅರ್ಥ ಪೂರ್ಣವಾಗಿ ಅವಳಿಗೂ ಮನುಷ್ಯ ಸಹಜ ಬಯಕೆಗಳು ಉಂಟು ಆದರೂ ನಿಜವಾದ ಗೆಲುವು ಇರುವುದು ಸಂಘರ್ಷಗಳಲ್ಲಿ ಅಲ್ಲ. ಬದುಕಿನಲ್ಲಿ ಆಕಸ್ಮಿಕವಾಗಿ ಬರುವ ಎಲ್ಲ ಅಡೆತಡೆಗಳನ್ನು ಮೌನವಾಗಿ ತಾಳ್ಮೆಯಿಂದ ಸಹಿಸಿಕೊಳ್ಳಬೇಕು ಎಂಬ ಅವಳ ಉತ್ತರವನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಕೊನೆಗೆ ಸ್ವಾಮೀಜಿ "ನನ್ನ ಜ್ಞಾನ ನಿನ್ನ ಅನುಭವದ ಎದುರಿಗೆ ಸೋತಿದೆ ಮಗಳೇ" ಎನ್ನುತ್ತಾರೆ. ನಿಜಕ್ಕೂ ಪ್ರತಿ ಪದದಲ್ಲಿಯೂ ತಾತ್ವಿಕತೆಯೇ ಅಡಗಿದೆ.

'ತಣ್ಣೀರ್ ದೇಸಂ' ಎಂಬ ಕೃತಿ ಮತ್ತೊಂದು ಸೊಗಸಾದ ಅಪ್ರತಿಮ ಕೃತಿ. ಕವಿಯೇ ತಿಳಿಸುವ ಹಾಗೆ ಇದುವರೆಗೂ ಎಲ್ಲರೂ ನೈದಲ್ ಎಂಬ ಜೀವನಕ್ರಮದ ಹಿನ್ನೆಲೆಯಲ್ಲಿ ಸಾಕಷ್ಟು ಕಡಲ ತೀರಕ್ಕೆ ಸಂಬಂಧಿಸಿದ ಹಾಡುಗಳನ್ನು ಕಾವ್ಯಗಳನ್ನು ಕೃತಿಗಳನ್ನು ರಚಿಸಿದ್ದಾರೆ. ಆದರೆ ಎಲ್ಲರಿಗಿಂತ ಭಿನ್ನವಾಗಿ ಆಲೋಚಿಸುವ ಈ ಕವಿ ನಿಸರ್ಗ ಪ್ರೇಮಿ ಇಲ್ಲಿಯೂ ನೀರಿನ ಒಳಗೆ ದೋಣಿಯಲ್ಲಿ ಪಯಣಿಸುವುದು ಕಡಲನ್ನು ಆರಾಧಿಸುವುದು. ನಾಯಕನ ಹೆಸರು ಕಲೈವಣ್ಣನ್ ನಾಯಕಿಯ ಹೆಸರು ತಮಿಳ್ ರೋಜಾ, ಇವರಿಬ್ಬರ ಸಂಭಾಷಣೆಯಲ್ಲಿ ನಾಯಕನು ನೀರಿನ ಬಗ್ಗೆ ಕೊಡುವ ಸುದೀರ್ಘ ವೈಜ್ಞಾನಿಕ ವಿವರಗಳು ಹಾಗೂ ಪರಸ್ಪರ ಇವರ ಮಾತುಕತೆಗಳು ರಮಣೀಯವಾಗಿವೆ. ಪೂರ್ವನಿರ್ಧರಿತವಾಗಿಯೇ ಇಲ್ಲಿಯ ನಾಯಕಿಗೆ ತಮಿಳ್ ರೋಜಾ ಎಂದು ಹೆಸರಿಟ್ಟಿರಬೇಕು. ನಾಯಕಿ ನೀರಿನಲ್ಲಿ ಸಿಲುಕಿ ಪ್ರಜ್ಞೆ ಕಳೆದುಕೊಂಡು ನಂತರ ಆಕೆಗೆ ಪ್ರಜ್ಞೆ ಬರುತ್ತದೆ. ಕಾದಂಬರಿಯ 'ಅಂತ್ಯ ಇನ್ನು ತಮಿಳ್'ಗೆ ಮರಣವಿಲ್ಲ ಎಂಬ ಧ್ವನ್ಯಾರ್ಥ ಗಮನಾರ್ಹ. ತಮಿಳಿನಿಂದಲೇ ಬೆಳೆದು ತಮಿಳನ್ನೇ ನೆಚ್ಚಿ ತಮಿಳು ಭಾಷೆಯಿಂದಲೇ ತನ್ನ ಉನ್ನತಿಯನ್ನು ಸಾಧಿಸಿ ಉಳಿದವರಿಗೂ ಮಾರ್ಗದರ್ಶಿಯಾಗಿದ್ದಾರೆ ಇಂಥ ತಮಿಳು ನಿತ್ಯ ನಿರಂತರ. ಈ ತಣ್ಣೀರ್ ದೇಸಂ ಎಂಬ ಕೃತಿಯ ಬಗ್ಗೆ ತನ್ನ ಅನಿಸಿಕೆಯನ್ನು ಹೀಗೆ ವ್ಯಕ್ತ ಪಡಿಸುತ್ತಾರೆ.

ತಣ್ಣೀರ್ ದೇಸಂ ಕೃತಿಯನ್ನು ಸಾಹಿತ್ಯದ ಯಾವ ಪ್ರಕಾರಕ್ಕೆ ಸೇರಿಸುವುದೆಂದು ಹೆಚ್ಚು ಚಿಂತಿಸುವ ಬುದ್ಧಿಜೀವಿಗಳಲ್ಲಿ, "ವೈಜ್ಞಾನಿಕ ವಾದಿಗಳಲ್ಲಿ 50ವರುಷಗಳ ಕಾಲ ನನಗೊಂದು ನಿಡಿದಾದ ಕ್ಷಮೆ ನೀಡಬೇಕೆಂದು ಕೋರುವೆನು" ಎನ್ನುತ್ತಾರೆ. ಈ ಕೃತಿಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ನನಗೆ ಒಂದು ತಲೆಮಾರು ಬೇಕಾಗಿದೆ, ಎಂದು ತಮ್ಮ ಮುನ್ನುಡಿಯಲ್ಲಿ ತಿಳಿಸಿದ್ದಾರೆ. ಇದನ್ನು ಓದಿದಾಗ ನನಗೆ ಅಚ್ಚರಿ ಎನಿಸಿತು ಕನ್ನಡದಲ್ಲಿ ಹೆಚ್ಚಿಗೆ ಕಡಲಿಗೆ ಸಂಬಂಧಿಸಿದ ಕೃತಿಗಳು ಇಬ್ಬರು ಮೂವರು ಅಷ್ಟೇ ರಚಿಸಿದ್ದಾರೆ ಎಂದು ಓದಿದ ನೆನಪು ಬರುತ್ತಿದೆ. (ಭೌಗೋಳಿಕ ಪರಿಸರದ ಕಾರಣ) ತಮಿಳು ನಾಡಿನಲ್ಲಿ ಕಡಲಿಗೂ ಕಡಲ ತೀರಕ್ಕೂ ಸಂಬಂಧಿಸಿದ ನೈದಲ್ ಜೀವನಕ್ರಮವನ್ನು ಕುರಿತು ಹೆಚ್ಚು ಮಂದಿ ಸಾಹಿತ್ಯವನ್ನು ರಚಿಸಿದ್ದಾರೆ. 1996ರಲ್ಲಿ ತನ್ನ ಕೃತಿ ಹಳೆಯ ತಲೆಮಾರುಗಳಿಗಿಂತ ಸ್ವಲ್ಪ ಭಿನ್ನವಾಗಿ ರಚಿಸಬೇಕು ಎಂಬ ಕಾರಣ ಕಡಲ ಒಳಗೆ ಕಥೆಯ ಎಳೆಗಳು ನೇಯಲ್ಪಟ್ಟಿವೆ.

ತಮಿಳಾಟ್ರುಪ್ಪಡೈ – ಆಟ್ರುಪ್ಪಡೈ ಎಂಬ ಒಂದು ಸಾಹಿತ್ಯ ಪ್ರಕಾರ ತಮಿಳಿನಲ್ಲಿ ಉಂಟು. ವೈರಮುತ್ತು ರವರು ಸುಮಾರು 3000 ವರುಷಗಳ ತಮಿಳು ಕವಿಗಳನ್ನು ಕವಿ ಕೃತಿಗಳನ್ನು ಅಂದರೆ ಪ್ರಾಚೀನ ಕವಿಕೃತಿಗಳಿಂದ ಹಿಡಿದು ಇಂದಿನ ಕವಿವರ್ಯರವರೆಗೂ ಆಯ್ಕೆ ಮಾಡಿಕೊಂಡು ಒಂದು ಸಂಶೋಧನಾತ್ಮಕ ಲೇಖನಗಳ ಸಂಕಲನವನ್ನು ಬರೆದು ಭವಿಷ್ಯದ ಯುವ ಪೀಳಿಗೆಗೆ ಒಂದು ಮಾರ್ಗದರ್ಶಿಯಾಗಿರಲಿ ಎಂಬ ಸದುದ್ದೇಶದಿಂದಲೇ ತನ್ನ ಭಾಷೆ, ತಮಿಳು ಸಂಸ್ಕೃತಿ, ಸಾಹಿತ್ಯದ ಮನ್ನಣೆಯನ್ನು ಏರೆತ್ತರಕ್ಕೆ ಕೊಂಡೊಯ್ದಿದ್ದಾರೆ.

'ಇದುವರೈ ನಾನ್' 1983 ರಲ್ಲಿ ಇದುವರೆಗೂ ನಾನು ಎಂಬ ಆತ್ಮ ಚರಿತ್ರೆ ಬರೆದಿದ್ದಾರೆ. ತನ್ನ 28ನೇ ವಯಸ್ಸಿಗೇ ಎಂಥ ಪರಿಪಕ್ವತೆ! ಜೀವನ ಚರಿತ್ರೆ ಎಂದು ಹೇಳಲು ಬಯಸದ ಕವಿ ಈ ಕೃತಿಯಲ್ಲಿ ಕೂಡ ಅನೇಕ ಸಾಮಾಜಿಕ ವಿಷಯಗಳನ್ನು ಕಾಣಬಹುದು. ಒಬ್ಬ ವ್ಯಕ್ತಿಯ ಬಡತನ, ಸಂಕಟ ನೋವು, ಅವಮಾನ, ಎಲ್ಲವೂ ಪ್ರಸಿದ್ಧಿ, ಕೀರ್ತಿ ಇವೆಲ್ಲದರ ಒಂದು ಸಮ್ಮಿಶ್ರಣ ಕವಿತೆಯ ಸ್ವರೂಪದಿ ಹೊರ ಬಂದಿದೆ. ಚರಿತ್ರೆ ಎಂಬುದು/ ಪ್ರತ್ಯೇಕ / ಮನುಷ್ಯನ /ಪರಿಚಯದ ಮುಖಪುಟವೇ /ಅಲ್ಲ /ಅದು / ಅಂತ್ಯವ ಅರಸುವ/ ಒಂದು ಸಮುದಾಯದ/ ಒಟ್ಟು ವಿಳಾಸ. ಕವಿಯ ಮಾತು ಎಷ್ಟು ಔಚಿತ್ಯಪೂರ್ಣವಾದುದು ಸಾಮಾಜಿಕ ಕಣ್ಣೋಟಕ್ಕೆ ಎಂಬುದು ಗಮನಾರ್ಹ.

ಸಣ್ಣ ಕಥಾ ಸಂಕಲನದಲ್ಲೂ ಇಡೀ ಸಮಾಜದ ಚಿತ್ರಣವನ್ನು ಸಾಮುದಾಯಿಕ ಸೂಕ್ಷ್ಮ ಕಣ್ಣೋಟದಿಂದ ನೋಡಿ ಅದರ ಓರೆ ಕೋರೆಗಳನ್ನು ತಿದ್ದುವ ಹಾಗೂ ಜಾಗೃತಿಯನ್ನು ಮೂಡಿಸುವ ಹಾಗೂ ಈ ಸಮಾಜದಲ್ಲಿ ಇಂತಹ ಮನೋಭಾವದವರಿದ್ದಾರೆ. ಎಂಬುದನ್ನು

ಪಾರದರ್ಶಕವಾಗಿ ತಿಳಿಸುವಂತೆ ಬರೆದಿದ್ದಾರೆ. 'ಸ್ವಲ್ಪ ಹೊತ್ತು ಮನುಷ್ಯನಾಗಿದ್ದವನು' ಕಥೆಯೇ ಸಮಾಜಕ್ಕೆ ಹಿಡಿದ ಕನ್ನಡಿಯಂತಿದೆ. ಮೀನಿನ ಬಗ್ಗೆ ಇರುವ ಕಥೆ ಒಂದು ಕಾರ್ಟೂನ್ ಚಿತ್ರಕ್ಕೆ ಬಳಸಿಕೊಳ್ಳುವಂತೆ ಇರುವ ಸೊಗಸಾದ ಕಥೆಯಾಗಿ ಮೂಡಿ ಬಂದಿದೆ.

ಟಿ. ಎಸ್. ಎಲಿಯಟ್ ಪೊಯೆಟ್ ಮತ್ತು ಮೈನರ್ ಪೊಯೆಟ್ ಬಗ್ಗೆ ಪ್ರಸ್ತಾಪಿಸುತ್ತಾ ಹೆಚ್ಚು ಕವಿತೆಗಳನ್ನು ಬರೆದವರು ಮೈನರ್ ಪೊಯೆಟ್ ಸಾಲಿಗೂ ಬರಬಹುದು. ಕಡಿಮೆ ಕವಿತೆಗಳನ್ನು ರಚಿಸಿದವರು ಮೇಜರ್ ಪೊಯೆಟ್ ಆಗಬಹುದು. ಒಟ್ಟಿನಲ್ಲಿ ಯಾರ ಕವಿತೆಗಳನ್ನು ಮತ್ತೆ ಮತ್ತೆ ಓದಲು ಇಚ್ಛಿಸುತ್ತೇವೋ ಅಂತಹ ಕವಿಯನ್ನು ಮೇಜರ್ ಪೊಯೆಟ್ ಎಂದು ಕರೆಯಬಹುದು. T.S Eliot on poetry and poets P-52 ಎನ್ನುತ್ತಾನೆ. ಈತನ ಮಾತು ಇಲ್ಲಿ ಗಮನಾರ್ಹ. ವೈರಮುತ್ತು ಅವರ ಕವಿತೆಗಳಾಗಲಿ ಅವರ ಉಳಿದ ಸಾಹಿತ್ಯವಾಗಲಿ ಜನರು ಮತ್ತೆ ಮತ್ತೆ ಓದಲು ಇಚ್ಛಿಸುತ್ತಾರೆ. ಹಾಗೂ ಸ್ಫೂರ್ತಿಯಾಗಿದೆ ಕೆಲವರಿಗೆ. ಅದಕ್ಕೆ ಇಗೋ ಇಲ್ಲಿ ಎರಡು ಉದಾಹರಣೆ ಗಮನಿಸೋಣ. 1978ರಲ್ಲಿ ಬರೆದ ವೈರಮುತ್ತು ಅವರ ನಡತ್ತುಂಗಳ್ ಅನುವಾದಿತ ನಡೆಸಿರಿ ಕವಿತೆಯ ಪ್ರಭಾವ ಬೀರಿ ಇತಿಹಾಸವೆಂದರೆ ಅಂತಾ ಒಂದು ಕವಿತೆಯನ್ನು ಉದ್ಧಟ ಎಂಬ ಕವನ ಸಂಕಲನದಲ್ಲಿ ಬರೆದಿದ್ದಾರೆ ಎಂ. ಆರ್. ಶಿವರಾಮಯ್ಯ ಅವರು. ಅರ್ಪಣೆ ಚಿದಾನಂದ ಮೂರ್ತಿ, ವೈರಮುತ್ತು ಮತ್ತು ಅನುವಾದಕಿಯ ಹೆಸರು ದಾಖಲಿಸಿದ್ದಾರೆ. ವೀಕ್ ಎಂಡ್ ವಿತ್ ಹರೀಶ್ ಶ್ರೀನಿವಾಸನ್ ವಾರಕ್ಕೆ ಒಂದು ಸಲ ಕಂಪನಿಯಲ್ಲಿರುವವರು ಹೊಲ ಗದ್ದೆಗಳಿಗೆ ಹೋಗಿ ಕೂಲಿಯಿಲ್ಲದೆ ಉಳುಮೆಗೆ ನೆರವು ನೀಡಿ ಬರಲು ಕಾರಣ ವೈರಮುತ್ತುರವರ ಮೂನ್ರಾಂ ಉಲಗ ಪೋರ್ ಪ್ರೇರಣೆ ಎಂಬುದನ್ನು ಗೂಗಲ್ ನಲ್ಲಿ ದಾಖಲಿಸಿದ್ದಾರೆ.

ಸಾಹಿತ್ಯದಲ್ಲಿ ಸದಾ ಪ್ರಯೋಗ ಶೀಲತೆ ಜೀವನ ಮೌಲ್ಯಗಳನ್ನು ತಿಳಿಸಲು ಕಾದಂಬರಿ, ಕವಿತೆಗಳೇ ಆಗಬೇಕಾಗಿಲ್ಲ ಚಲನಚಿತ್ರಗೀತೆಗಳು ಎಲ್ಲದರಲ್ಲೂ ವಸ್ತುನಿಷ್ಠ ವಾಸ್ತವ ಮಾರ್ಗವೇ ಅವರ ಸಾಹಿತ್ಯ ಕೃತಿಗಳಲ್ಲಿ ಕಂಡುಬರುತ್ತದೆ. ವೈರಮುತ್ತುರವರು ಕವಿತೆ, ಕಾವ್ಯ, ಕಾದಂಬರಿ ಸಣ್ಣ ಕಥೆಗಳು, ಸಂಶೋಧನಾ ಕೃತಿಗಳು ಚಲನಚಿತ್ರ ಗೀತೆಗಳು, ಕಿರುತೆರೆಗೆ ಹಾಡುಗಳು, ಚಲನ ಚಿತ್ರಕ್ಕೆ ಸಂಭಾಷಣೆಗಳು ಆತ್ಮ ಚರಿತ್ರೆ, ಸಾಹಿತ್ಯದ ಬಗ್ಗೆ ಭಾಷಣ, ಸಂವಾದ, ಸಂದರ್ಶನ, ಟ್ವಿಟರ್ ಮತ್ತು ಎಲ್ಲ ಮಾಧ್ಯಮಗಳಲ್ಲೂ ಸಮುದಾಯವನ್ನು ಸಾಮಾಜಿಕ ದೃಷ್ಟಿಕೋನಗಳಿಂದ ನೋಡುತ್ತಾ, ಒಳಿತನ್ನು ಹರಸುತ್ತಾ, ವಿನೂತನ ಸಂಗತಿಗಳನ್ನು ತಿಳಿಸುತ್ತಾ, ಸಮಾಜದ ನೋವಿಗೆ ಸ್ಪಂದಿಸುತ್ತಾ, ವೈಚಾರಿಕತೆಯನ್ನು ಎತ್ತಿ ಹಿಡಿಯುತ್ತಾ, ಮೃದು ನುಡಿಗಳಿಂದ ಉಪದೇಶಿಸುತ್ತಾ, ಎಲ್ಲರಲ್ಲಿಯೂ ಸ್ನೇಹ – ಪ್ರೀತಿ ತೋರುತ್ತಾ ತನ್ನ ಜೀವನವನ್ನು ತಮಿಳಿಗೂ ಸಾಹಿತ್ಯಕ್ಕೂ ಸಮಾಜದ ಸರ್ವಾಂಗೀಣ ಪ್ರಗತಿಗೂ ಸಮರ್ಪಿಸುತ್ತಾ ಇರುವ ಒಬ್ಬ ಮೇರು ಸಾಹಿತಿಯಾಗಿ, ಇದ್ದಾರೆ. ಇವರಿಗೆ ಸಂದ ಬಿರುದು ಪ್ರಶಸ್ತಿಗಳು ಅಗಾಧ, ಪ್ರಶಸ್ತಿಗಳಿಂದ ಇವರಿಗೆ ಸಿಗುವ ಗೌರವದೊಂದಿಗೆ ಇವರ ಮೂಲಕ ಪ್ರಶಸ್ತಿಗೂ ಗೌರವ ಸಿಕ್ಕಂತೆ ಎಂಬುದು ನನ್ನ ಅಭಿಮತ. ಇವರೊಬ್ಬ ಯುಗಪರ್ವರ್ತಕರು ಎಂಬುದು ಸತ್ಯ.

ಪರಾಮರ್ಶನ ಗ್ರಂಥಗಳು:

1. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ., ಕರ್ನಾಟಕ ಸಾಹಿತ್ಯ ಅಕಾಡೆಮಿ, ಎರಡನೇ ಆವೃತ್ತಿ– 2006
2. ಡಾ. ಕೆ. ಕೃಷ್ಣಮೂರ್ತಿ: ಕನ್ನಡ ಕಾವ್ಯ ಪ್ರಕಾಶ, 1–4ಃ, 59 5 ಬಿ. – ಪು. 13, 16, 17
3. ವಿಮರ್ಶೆಯ ಪೂರ್ವ ಪಶ್ಚಿಮ ಡಾ. ಶಿವರುದ್ರಪ್ಪ 15ನೇ ಆವೃತ್ತಿ, ಸಪ್ನಾ ಬುಕ್ ಹೌಸ್.
4. ತೊಂಡುಮೇವು., ಕೆ. ವಿ. ಎನ್., 2022, ಪ್ರಗತಿ ಗ್ರಾಫಿಕ್ಸ್
5. ಅಮೃತ ಮತ್ತು ಗರುಡ., ಡಿ. ಆರ್ ನಾಗರಾಜ್., ಮೂರನೇ ಆವೃತ್ತಿ – 2003 ಅಕ್ಷರ ಪ್ರಕಾಶನ
6. ಹೊರೆಸನ ಸಾಹಿತ್ಯ ವಿಮರ್ಶೆ., ಎನ್. ಬಾಲ ಸುಬ್ರಹ್ಮಣ್ಯ., ಎರಡನೇ ಆವೃತ್ತಿ– 1999, ಡಿ. ವಿ. ಕೆ ಮೂರ್ತಿ
7. ಕನ್ನಡ ಸಾಹಿತ್ಯ ಸಮೀಕ್ಷೆ., ಜಿ. ಎಸ್ ಶಿವರುದ್ರಪ್ಪ., 2008., ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ
8. ರಸ ಋಷಿ ರಾಷ್ಟ್ರಕವಿ., ಕುವೆಂಪು., ಡಾ. ಜಿ . ಎನ್ ಉಪಾಧ್ಯ 2024 ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯ
9. ವೈರಮುತ್ತುರವರ 33 ಕವಿತೆಗಳು., ಕ್ರೈಸ್ಟ್ ಪ್ರಕಟಣೆ–2009
10. ಕಳ್ಳಿಗಾಡಿನ ಇತಿಹಾಸ– ಕೇಂದ್ರ ಸಾಹಿತ್ಯ ಅಕಾಡೆಮಿ– ಪ್ರಕಟಣೆ– 2021
11. ತಣ್ಣೀರ್ ದೇಸಂ, ಕರುವಾಚ್ಚಿ ಕಾವಿಯಂ, ಮೂನ್ರಾಂ ಉಲಗ ಪೋರ್, ಆಟ್ರುಪ್ಪಡೈ, ಮುಂತಾದ ವೈರಮುತ್ತು ಅವರ ತಮಿಳು ಕೃತಿಗಳು

***

ಬಾಣನ ಕಾದಂಬರಿ: ಕರ್ಣಾಟಕ ಕಾದಂಬರಿಯ ಕಥಾ ಸ್ವರೂಪ ಒಂದು ವಿವೇಚನೆ

***

ಡಾ. ಪ್ರಸನ್ನಕುಮಾರ್ ಕೆ
ಸಹಾಯಕ ಪ್ರಾಧ್ಯಾಪಕ
ಡಾ. ಎನ್‌ಎಸ್‌ಎಎಂ ಪ್ರಥಮ ದರ್ಜೆ ಕಾಲೇಜು
(ನಿಟ್ಟೆ ಡಿಮ್ಡ್ ಟು ಬಿ ಯೂನಿವರ್ಸಿಟಿ) ಬೆಂಗಳೂರು–89

ನಾಗವರ್ಮ ಕವಿಯು ಹತ್ತನೇ ಶತಮಾನದ ಅಂತ್ಯ ಭಾಗದಲ್ಲಿ ಬದುಕಿ ಬಾಳಿದ ಕವಿ. ಕರ್ಣಾಟಕ ಕಾದಂಬರಿ, ಛಂದೋಂಬುದಿ ಎಂಬ ಎರಡು ಮೇರು ಕೃತಿಗಳಿಗೆ ಮೆರುಗು ಕೊಟ್ಟ ಕೀರ್ತಿ ನಾಗವರ್ಮ ಕವಿಗೆ ಸಲ್ಲುತ್ತದೆ.

ಕರ್ಣಾಟಕ ಕಾದಂಬರಿಯನ್ನು ಬರೆದ ನಾಗವರ್ಮನು ತನ್ನ ವಿಚಾರವನ್ನಾಗಲೀ, ತನ್ನ ಪೋಷಕನ ದೇಶ ಕಾಲ ವಿಚಾರಗಳಾಗಲೀ ಅಥವಾ ತನಗಿಂತ ಈ ಮೊದಲು ಕೃತಿ ರಚನೆ ಮಾಡಿದ ಯಾವ ಕವಿಯ ಸುಳಿವೂ ಸಿಗುವುದಿಲ್ಲ. ಆದರೆ ಸಂಸ್ಕೃತ ಬಾಣ ಕವಿಯೊಬ್ಬನನ್ನು ಮಾತ್ರ ಸ್ಮರಿಸಿಕೊಂಡಿರುವುದನ್ನು ಕಾಣಬಹುದು. "ಬಾಣನವಲಂ ವಂದ್ಯಂ ಪೆರರ್ ವಂದ್ಯರೆ?"[1] ಎಂದು ಹೇಳಿಕೊಂಡಿದ್ದಾನೆ.

ಬಾಣ ಸಂಸ್ಕೃತದ ಕವಿ, ಸುಮಾರು ಏಳನೇ ಶತಮಾನದಲ್ಲಿ ಬದುಕಿ ಬಾಳಿದವನು. ಹರ್ಷವರ್ಧನನ ಆಸ್ಥಾನದಲ್ಲಿ ಆಶ್ರಯ ಪಡೆದುಕೊಂಡು, 'ಹರ್ಷಚರಿತೆ' ಮತ್ತು 'ಕಾದಂಬರಿ' ಕೃತಿಗಳನ್ನು ರಚಿಸಿದ್ದಾನೆಂದು ತಿಳಿದು ಬರುತ್ತದೆ. ಬಾಣನ ಕಾದಂಬರಿ ಮಹಾ ಪ್ರೌಢವಾದ ಸಂಸ್ಕೃತ ಗದ್ಯಕಾವ್ಯ. ಇದರಲ್ಲಿ ಬಾಣನ ವರ್ಣನೆ ಮುಗಿಲು ಮುಟ್ಟಿದೆ ಎನ್ನಬಹುದು. ಅವನ ಕಥನ ಕೌಶಲ ಸನ್ನೀವೇಶ ಎಂತಹ ಓದುಗರನ್ನೂ ಸಹ ಬೆರಗಾಗಿಸುತ್ತದೆ. ಬಾಣನ ಕವಿತಾ ಪ್ರತಿಭೆ ಅನನ್ಯವಾದುದು. ಈ ಕಾವ್ಯದಲ್ಲಿ ಪೂರ್ವ ಭಾಗ ಮತ್ತು ಉತ್ತರ ಭಾಗಗಳೆಂದು ಎರಡು ಭಾಗಗಳಿವೆ. ಬಾಣನು ಪೂರ್ವಧವನ್ನು ಬರೆದು ಕಾಲವಶನಾದನು. ಅದರ ಕೊನೆಯಲ್ಲಿ ನಾಯಕಿ ಕಾದಂಬರಿಯ ಆರಂಭದ ಮಾತು ಅರ್ಧಕ್ಕೆ ನಿಂತು ಹೋಗಿದೆ. ಉತ್ತರ ಭಾಗವನ್ನು ಆತನ ಮಗನಾದ

ಭೂಷಣ ಭಟ್ಟನು ಬರೆದು ಮುಗಿಸಿದನು. ಈ ಕೃತಿಯು ಇಬ್ಬರು ನಾಯಕರುಗಳ ಎರಡು ಜನ್ಮಗಳ ಕಥೆಯನ್ನು ಮನೋಹರವಾಗಿ ಚಿತ್ರಿತವಾಗಿದೆ. ಮಹಾಶ್ವೇತೆ–ಪುಂಡರೀಕರ ಪ್ರಥಮ ಸಂದರ್ಶನ ಕಥೆಯನ್ನು ಓದುವಾಗ ಆ ಇಬ್ಬರೂ ವ್ಯಕ್ತಿಗಳು ನಮ್ಮೆದುರಿಗೆ ನಿಂತಂತೆ ಭಾಸವಾಗುತ್ತದೆ. ಈ ನೆಲೆಯಲ್ಲಿ ನೋಡಿದಾಗ ಬಾಣನ ಅಪ್ರತಿಮ ಪ್ರತಿಭೆ, ಸನ್ನಿವೇಶ ಸೃಷ್ಟಿಸುವ ಚಿತ್ರಣಗಳು ಮೈನವಿರೇಳಿಸುತ್ತದೆ. ಅಸಂಭವ ಎನ್ನಿಸುವಂತಹ ಅದ್ಭುತ ಘಟನಾವಳಿಯನ್ನು ಬಾಣಭಟ್ಟ ಅತ್ಯಂತ ಸಹಜವೆಂಬಂತೆ ನಿರೂಪಿಸಬಲ್ಲ ಜಾಣ್ಮೆ ಹೊಂದಿದ್ದಾನೆ.

ಈ ಜಾಣ್ಮೆಗೆ ನಿದರ್ಶನಾರ್ಥಕವಾಗಿ ಸಣ್ಣ ಸನ್ನೀವೇಶವೊಂದನ್ನು ಇಲ್ಲಿ ತಿಳಿಯೋಣ; ಬಾಣನ ಕಾವ್ಯದಲ್ಲಿನ ಗಂಧರ್ವ ಪುತ್ರಿ ಮಾನವ ಲೋಕದ ರಾಜಪುತ್ರನ ರೂಪಕ್ಕೆ ಮೋಹಿಸಿ ಒಲಿಯುತ್ತಾಳೆ. ವಿರಹ ಪೀಡಿತನಾದ ಋಷಿ ಪುತ್ರನೊಬ್ಬ ಚಂದ್ರನಿಗೆ ಶಾಪಹಾಕಿ ಅವನು ಭೂಲೋಕದಲ್ಲಿ ಹುಟ್ಟುವಂತೆ ಮಾಡುತ್ತಾನೆ. ಚಾರಣನೊಬ್ಬನ ಶಾಪದಿಂದ ಇನ್ನೊಬ್ಬ ಋಷಿ ಕುಮಾರ ಕುದುರೆಯ ಜನ್ಮ ಪಡೆಯುತ್ತಾನೆ. ಇಂತಹ ಹಲವು ಅದ್ಭುತ ಪ್ರಮೇಯಗಳನ್ನು ಬಾಣಭಟ್ಟ ಕೇವಲ ಸಹಜವಾದ ರೀತಿಯಲ್ಲಿ ಚಿತ್ರಿಸಬಲ್ಲ ಪ್ರೌಢಿಮೆಯನ್ನು ಹೊಂದಿದ್ದಾನೆ.

ಬಾಣನ ಕಾದಂಬರಿಯಲ್ಲಿ ಕಥೆಗಿಂತ ವರ್ಣನೆಯೇ ಹೆಚ್ಚು. ಆದರೆ ಕಥೆ ಹೇಳುವುದರಲ್ಲಿ ಅವನು ನಿಪುಣ ಬಹುಶಃ ಅವನು ಹುಟ್ಟು ಕಥೆಗಾರನಿರಬಹುದೆಂದು ಅನಿಸುವುದರಲ್ಲಿ ಅತಿಶಯೋಕ್ತಿಯಲ್ಲ!. ಕಥೆ ಹೇಳ ತೊಡಗಿದರೆ ಶೋತೃಗಳು ತದೇಕ ಚಿತ್ತರಾಗಿ ಮೈಯೆಲ್ಲಾ ಕಿವಿಯಾಗಿ ಕೇಳುತ್ತಾರೆ. ವರ್ಣಿಸಬೇಕಾದ ವ್ಯಕ್ತಿ, ವಸ್ತು, ಸನ್ನಿವೇಶ, ಯಾವುದನ್ನಾದರೂ ಒಬ್ಬ ಚಿತ್ರಕಾರ ವಿವಿಧ ಬಣ್ಣಗಳಿಂದ ಸುಂದರವಾದ ಚಿತ್ರ ಬಿಡಿಸುತ್ತಾನೆಯೋ ಹಾಗೆ ಬಾಣಭಟ್ಟ ತನ್ನ ಪದ ವಿನ್ಯಾಸ ಚಮತ್ಕಾರದಿಂದಲೇ ತೋರಿಸುತ್ತಾನೆ.

ರವೀಂದ್ರನಾಥ ಠಾಕೂರರು ಕಾದಂಬರಿಯನ್ನು ಕುರಿತಂತೆ 'ಒಂದು ಸಮಗ್ರ ಚಿತ್ರಶಾಲೆ'ಯೆಂದು ವರ್ಣಿಸಿದ್ದಾರೆ. "ಇದರಲ್ಲಿ ಒಂದು ಚಿತ್ರಪರಂಪರೆಯೇ ಇದೆ. ಅಚ್ಚೋದ ಸರೋವರ, ತಾರಾಚಲ ಶಿಖರದ ಬಳಿಯ ಸಿದ್ಧಾಶ್ರಮ, ಕಾದಂಬರಿಯ ಕನ್ಯಾಂತಃಪುರ, ಜಾಬಾಲಿ ಋಷಿಗಳ ಆಶ್ರಮ, ಮುದಿ ಬೇಡನೊಬ್ಬನ ಹಕ್ಕಿಯ ಬೇಟೆ, ಶೂದ್ರಕನ ಸಭೆ–ಹೀಗೆ ಒಂದೊಂದು ಪ್ರಸಂಗವು ಓದುಗರ ಹೃದಯದಲ್ಲಿ ಅಚ್ಚೊತ್ತಿದಂತೆ ನಿಲ್ಲುವ ಅದ್ಭುತ ಚಿತ್ರಗಳಾಗಿವೆ." ಎಂದು ಹೇಳುತ್ತಾರೆ. ಹೃದಯ ಸಂವೇದಕವಾದ ಅದ್ಭುತ ಕಥೆಯನ್ನು ಈ ಕ್ಷಣಕ್ಕೆ ಮೆರೆಯಿಸಬಲ್ಲ ಶಕ್ತಿ ಈ ಸುಂದರ ಶಬ್ದ ಚಿತ್ರಗಳದ್ದಾಗಿದೆ. ಎಂಥ ಸಣ್ಣ ವಿಷಯವೂ ಬಾಣನ ಗಮನಕ್ಕೆ ಸಿಕ್ಕಿದರೆ ರಮ್ಯತರವಾಗುತ್ತದೆ. ಬಾಣ ತನ್ನ ಕಾದಂಬರಿ ಕಾವ್ಯವನ್ನು ಅರ್ಧಾಂತವಾಗಿಯೇ ಬಿಟ್ಟು ಹೋದನು. ಆತ ಬರೆದಿಟ್ಟ ಕಾವ್ಯವನ್ನು ಪೂರ್ವಭಾಗವೆಂದು ಕರೆಯುವುದು ವಾಡಿಕೆ. ಬಾಣ ಪರಂಧಾಮ ಸೇರಿದ ಬಳಿಕ ಅವನ ಮನೋದಯವನ್ನು ಬಲ್ಲವನಾದ ಮಗನು ಅದೇ ಶೈಲಿಯಲ್ಲಿಯೇ ಬರೆದು ಅಲ್ಲಿಯವರೆಗೂ ನಡೆದದ್ದನ್ನು 'ಪೂರ್ವಾರ್ಧ' ಎಂದು ಹೆಸರಿಸಿ, ನಂತರದ್ದನ್ನು 'ಉತ್ತರಾರ್ಧ'ವೆಂದು ಹೆಸರಿಟ್ಟು ಪೂರ್ಣಗೊಳಿಸಿದನು. ಕನ್ನಡದ ನಾಗವರ್ಮನು ಬಾಣ ಭೂಷಣಭಟ್ಟರಿಬ್ಬರ ಕೃತಿಯಾದ ಕಾದಂಬರಿಯನ್ನು ಇಡೀಯಾಗಿ ಕನ್ನಡಕ್ಕೆ ಅನುವಾದ ಮಾಡಿ ಕೃತಕೃತ್ಯನಾಗಿದ್ದಾನೆ. ನಾಗವರ್ಮ ಕನ್ನಡ ಮತ್ತು ಸಂಸ್ಕೃತ ಎರಡರಲ್ಲಿಯೂ ಪಾಂಡಿತ್ಯ ಪಡೆದಿದ್ದ ಕವಿಯಾಗಿದ್ದ. ಆದ್ದರಿಂದಲೇ ಅವನ ಕರ್ಣಾಟಕ ಕಾದಂಬರಿ ಮೂಲ ಸಂಸ್ಕೃತ ಕೃತಿಯಷ್ಟೇ ಸೊಗಸಾಗಿದೆ. ನಾಗವರ್ಮನು ಇದನ್ನು ಗದ್ಯಕಾವ್ಯವಾಗಿಯೇ ಬರೆದಿದ್ದರೆ ಬಾಣನ ಸಂಸ್ಕೃತ ಪದಪುಂಜಗಳನ್ನೇ ಉಳಿಸಿಕೊಂಡು ಕೊನೆಯಲ್ಲಿ ಕನ್ನಡ ಪ್ರತ್ಯಯಗಳನ್ನು ಜೋಡಿಸಿ ಸಂತೃಪ್ತನಾಗುತ್ತಿದ್ದನೋ ಹೇಗೋ! ಪುಣ್ಯಕ್ಕೆ ನಾಗವರ್ಮ ಹಾಗೆ ಮಾಡಲಿಲ್ಲ. ದೀರ್ಘ ಸಮಾಸಗಳಿಂದ ಕೂಡಿ ಪಾಂಡಿತ್ಯ ಪ್ರೌಢಿಮೆಗಳ ಗಣಿಯಂತಿರುವ ಈ ಮಹಾ ಗದ್ಯಕಾವ್ಯವನ್ನು ನಾಗವರ್ಮ ಚಂಪೂ ಕಾವ್ಯವನ್ನಾಗಿ ಪರಿವರ್ತಿಸಿಕೊಂಡಿದ್ದಾನೆ.

ಸಂಸ್ಕೃತ ಮೂಲದಲ್ಲಿರುವ ಶ್ಲೇಷ ವಿರೋಧಭಾಸ ಕಾವ್ಯ ಅಲಂಕಾರಗಳ ಸಮಸ್ತ ವೈಭವವನ್ನು ಕನ್ನಡದಲ್ಲಿ ತರಲು ಸಾಧ್ಯವಾಗುವುದಿಲ್ಲ. ಆದರೆ ಇದರಿಂದ ಕನ್ನಡ ಕೃತಿಯ ಮೇಲ್ಮೆ ಹೆಚ್ಚಿದೆಯೇ ಹೊರತು ತಗ್ಗಿಲ್ಲವೆಂದು ಹೇಳಬಹುದು. ಹಾಗೆಯೇ ನಾಗವರ್ಮನ ಈ ಸತ್ಕೃತಿಯು ಸುಲಭವಾಗಿ ಸಹೃದಯ ಮನಸ್ಸುಗಳನ್ನು ರಸಪ್ರವಾಹದಲ್ಲಿ ತೇಲಿಸಬಲ್ಲುದಾಗಿದೆ. ಇದಲ್ಲದೆ ಅನುವಾದವಾದರೂ ನಾಗವರ್ಮ ಕವಿಯ ಪ್ರತಿಜ್ಞೆ ಕಥನ ಕೌಶಲ್ಯಗಳಿಂದ ಕನ್ನಡ ಕಾದಂಬರಿ ಒಂದು ಸ್ವತಂತ್ರ ಕಾವ್ಯದಂತೆ ರಾರಾಜಿಸುತ್ತದೆ ಎಂದರೆ ತಪ್ಪಾಗಲಾರದು. ಹೀಗಾಗಿಯೇ ನಾಗವರ್ಮನನ್ನು ಕನ್ನಡ ಬಾಣಭಟ್ಟನೆಂದು ಕರೆದಿರುವುದು.

ಕಾದಂಬರಿ ಕಥೆ ಕೊನೆಯಿಂದ ಪ್ರಾರಂಭವಾಗಿ ಹಿಂದಕ್ಕೆ ಸುರುಳಿಯನ್ನು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಶೂದ್ರಕ ರಾಜನು ತನ್ನ ಆಸ್ಥಾನದಲ್ಲಿ ಕುಳಿತಿದ್ದಾಗ ಸ್ವರ್ಗಕ್ಕೆ ಏರುತ್ತಿದ್ದ ತ್ರಿಶಂಕು ಮಹಾರಾಜನು ಭಾಗ್ಯಲಕ್ಷ್ಮೀ ಇಂದ್ರನ ಅಹಂಕಾರದಿಂದ ಕೆಳಕ್ಕೆ ಬಿದ್ದಳೊ ಎಂಬಂತೆ ಸುಂದರಳಾದ ಚಂಡಾಲ ಕನ್ಯೆಯೊಬ್ಬಳು ಪಂಜರಸ್ಥ ಗಿಳಿಯೊಂದರೊಡನೆ ಆತನ ಆಸ್ಥಾನಕ್ಕೆ ಬರುತ್ತಾಳೆ. ಅದನ್ನು ಹೊತ್ತು ತಂದಿದ್ದ ಚಂಡಾಲ ಬಾಲಕನು ಅದನ್ನು ರಾಜನ ಮುಂದಿರಿಸುತ್ತಾನೆ. ಆಗ ಅದು ಹೀಗೆ ಹೇಳುತ್ತದೆ.

"ವೀರರ ವೀರ ವಿಮುಕಾ।

ಹಾರಂ ಭವಧರಿವಧೂಸ್ತ ನದ್ವಿತಯಂ ಕ

ಣ್ಣೀರಿಂ ಮಿಂದೆದೆಗಿರ್ಚಿಂ।

ದೋರಂತಿರೆ ಬೆಂದು ಚರಿಸುತಿರ್ಪುದು ತಪಮಂ"[2]

ಎನ್ನುವ ಮಾತುಗಳಿಂದ ರಾಜನು ಸಂತೋಷಗೊಳ್ಳುತ್ತಾನೆ. ಅನಂತರ ಅದನ್ನು ರಾಜಮಾತೆಯ ಬಳಿ ಹತ್ತಿರ ಕಳುಹಿಸುತ್ತಾನೆ. ರಾಜಮಾತೆಯ ಗೃಹದಿಂದ ಬಂದ ಗಿಳಿಯನ್ನು ಸವರುತ್ತಾ, ಅದರ ವೃತ್ತಾಂತವನ್ನು ಕೇಳುತ್ತಾನೆ. ಆಗ ಅದು 'ತನ್ನ ಜನ್ಮಾಂತರಗಳ ಕಥೆಯನ್ನು ಹೇಳುತ್ತದೆ. ಅದು ವಿಂಧ್ಯೆಯಲ್ಲಿ ಹುಟ್ಟಿ ಬೇಡನ ಕೈಯಿಂದ ಆಕಸ್ಮಿಕವಾಗಿ ತಪ್ಪಿಸಿಕೊಂಡು ಜಾಬಾಲಿಯ ಆಶ್ರಮವನ್ನು ಸೇರಿಕೊಳ್ಳುತ್ತದೆ. ಆಶ್ರಮದ ಋಷಿಗಳು ಅದರ ಪೂರ್ವ ಜನ್ಮ ವೃತ್ತಾಂತವನ್ನು ಕೇಳ ಬಯಸಿದಾಗ, ಜಾಬಾಲಿ ಋಷಿ ಅದರ ಪೂರ್ವ ಜನ್ಮಾಂತರವನ್ನು ತಿಳಿಸುತ್ತಾನೆ. ಆ ಸಂದರ್ಭದಲ್ಲಿ ಚಂದ್ರಾಪೀಡನ ಬಗ್ಗೆ ಬರುತ್ತದೆ. ಅವನು ಬೇಟೆಗೆಂದು ಹೋದವನು ಅಚ್ಛೋದ ಸರೋವರದ ತೀರದಲ್ಲಿದ್ದ ಸಿದ್ಧಾಶ್ರಯ ತನದಲ್ಲಿ ಮಹಾಶ್ವೇತೆಯನ್ನು ಕಂಡು, ಆಕೆಯಿಂದ ಕಾದಂಬರಿಯ ಸ್ನೇಹ ಸಂಪಾದಿಸುವುದಲ್ಲದೆ! ಮಹಾಶ್ವೇತೆಯ ಪೂರ್ವ ಜನ್ಮ ವೃತ್ತಾಂತವನ್ನು ಕೇಳುತ್ತಾನೆ. ಹೀಗೆ ನಾಗವರ್ಮ ತನ್ನ ಕಾವ್ಯ ಕಥೆಯನ್ನು, ಪಾತ್ರಗಳನ್ನು ಸ್ಮೃತಿಯಲ್ಲಿ ಉಳಿಯುವ ಹಾಗೆ ರಚಿಸಿದ್ದಾನೆ.

ಬಾಣಭಟ್ಟನ ಕಾದಂಬರಿ ಅದು ತನ್ನ ಸ್ವಂತದ್ದಲ್ಲ! ಬದಲಾಗಿ ಅವನು ಗುಣಾಢ್ಯನ ಬೃಹತ್ಕಥೆಯ ಪೈಶಾಚಿ ಭಾಷೆಯ ಕೃತಿಯಿಂದ ಆಯ್ದುಕೊಂಡಿರುವುದಾಗಿದೆ. ಆದರೆ ಇದರ ಬಗ್ಗೆ ಅವಲೋಕನ ಮಾಡಿದಾಗ; ಪ್ರಾಕೃತ ಭಾಷೆಯಿಂದ ಈ ಕಥೆ ಬಾಣಭಟ್ಟನ ದೆಸೆಯಿಂದ ಸಂಸ್ಕೃತಕ್ಕೆ ಬಂತು ಎಂದು ಹೇಳಬಹುದು. ಅದರೆ ನಾಗವರ್ಮ ಇದನ್ನು ತನ್ನ ಆಶ್ರಯದಾತನಾದ ಚಂದ್ರರಾಜನ ಸಂತೋಷಾರ್ಥವಾಗಿ ಕನ್ನಡಕ್ಕೆ ತಂದನೆಂದು ತಿಳಿದು ಬರುತ್ತದೆ.

ಈ ಕೃತಿ

'ರಾಜೇಂದ್ರ ಚಂದ್ರಾಂಕನೊಳ್'

ಸಂಗತಿವತ್ತು ಆದಂ ತ್ರಿಲೋಕೀಸಹಚರಿ'ಯಾಯಿತು!

ಎಂದು ಹೇಳುವಲ್ಲಿ ನಾಗವರ್ಮ ಮೂಲ ಕೃತಿಯ ಹಲವು ವರ್ಣನಾಭಾವಗಳನ್ನು ಅನಿವಾರ್ಯವಾಗಿ ಬದಲಾಯಿಸಿ ಕೊಂಡಿದ್ದಾನೆಂದು ತೋರುತ್ತದೆ.

ಕಥೆಯನ್ನು ರಮಣೀಯವಾಗಿ ಹೇಳುವ, ಕಟ್ಟುವ ಆಸಕ್ತಿ ನಾಗವರ್ಮನದ್ದಾಗಿದೆ. ಆದರೆ ಕವಿ ಇಲ್ಲಿ ಕೇವಲ ಅನುವಾದಕನಾದ್ದರಿಂದ ಸ್ವತಂತ್ರವಾಗಿ ಕೆಲವು ಸಂದರ್ಭಗಳನ್ನು ಸೃಷ್ಟಿ ಮಾಡಲು ಸಾಧ್ಯವಾಗಿಲ್ಲವೆಂದು ತೋರುತ್ತದೆ. ಕಾರಣ ಪಾತ್ರಗಳ ಗುಣ ವಿಕಾಸ, ವಿಶೇಷಣದಲ್ಲಿ ಏನೂ ವ್ಯತ್ಯಾಸ ಮಾಡುವಂತಿರಲಿಲ್ಲ. ನಾಗವರ್ಮ ಮೂಲದ ಸ್ವಾರಸ್ಯವನ್ನು ತನ್ನ ಹತೋಟಿಯಲ್ಲಿ ಆದಷ್ಟು ತರಲು ಶ್ರಮಿಸಿ ಕೃತಕೃತ್ಯನಾಗಿದ್ದಾನೆ. ಯಾಕೆಂದರೆ; ಕೃತಿಯ ಶೀರ್ಷಿಕೆ ಕಾದಂಬರಿಯೆಂದಿದ್ದರೂ ಗ್ರಂಥದ ಅರ್ಧಬಾಗ ಮುಗಿಯುವವರೆಗೆ ಕಾದಂಬರಿಯ ಪ್ರಸ್ತಾಪವೇ ಕಂಡು ಬರುವುದಿಲ್ಲ. ಮೊದಲು ಮಹಾಶ್ವೇತೆ–ಪಂಡರೀಕರ ಪ್ರಣಯ ಪ್ರಸಂಗದ ಕಥೆ ಬರುತ್ತದೆ.

ಶ್ವೇತ ಕೇತು ಮಹಾಮುನಿಯು ಲಕ್ಷ್ಮೀಯೆಂಬ ಅಪ್ಸರ ಸ್ತ್ರೀಯರಲ್ಲಿ ಪಡೆದ ಪುಂಡರೀಕನು ತಂದೆಯ ನೇತೃತ್ವದಲ್ಲಿ ವಿದ್ಯಾರ್ಜನೆ ಪಡೆದು ಕಪಿಂಜಲ ಮುನಿಯೊಡನೆ ಒಮ್ಮೆ ಕೈಲಾಸಕ್ಕೆ ಹೋಗಿ ಶಿವದರ್ಶನ ಪಡೆದು ಬರುತ್ತಾನೆ. ಈ ಕಡೆ ಅಚ್ಛೋದ ಸರೋವರದಲ್ಲಿದ್ದ ಗಂಧರ್ವ ಚಕ್ರೇಶ್ವರನ ಮಗಳು ಮಹಾಶ್ವೇತೆಯನ್ನು ಕಂಡು ಮೋಹ ಪರವಶನಾಗುತ್ತಾನೆ. ಮಹಾಶ್ವೇತೆಯೂ ಈ ಮುನಿಕುಮಾರನ ಕಂಡು ಮೋಹಿಸಿದಳು ಅವರಿಬ್ಬರೂ ಸಂಭಾಷಣೆಗೆ ತೊಡುಗುವಷ್ಟರಲ್ಲಿ ಮಹಾಶ್ವೇತೆಯ ತಾಯಿ ಹೇಳಿ ಕಳುಹಿಸಿದ್ದರಿಂದ ಇಬ್ಬರೂ ವಿರಹ ಪೀಡಿತರಾಗುತ್ತಾರೆ. ಪುಂಡಲೀಕ ಮುನಿಯಾಗಿದ್ದರೂ ವಿರಹ ತಾಳಲಾರದೆ ವಿಭ್ರಾಂತನಾಗಿ, ಪ್ರಾಣವೇ ಹೋದಂತಾಗುತ್ತದೆ. ಆಗ ಅವನ ದುಸ್ಥಿತಿಯನ್ನು ಕಂಡ ಕಪಿಂಜಲನು ಹಂಸನ ಅರಮನೆಯನ್ನು ಹೊಕ್ಕು ಗೆಳೆಯನ ಸಂಕಟವನ್ನು ಮಹಾಶ್ವೇತೆಯಲ್ಲಿ ತೋಡಿಕೋಳ್ಳುತ್ತಾನೆ. ಆದರೆ ಕಪಿಂಜಲನ ಮಾತಿಗೆ ಬೆಲೆಕೊಟ್ಟು ಮಹಾಶ್ವೇತೆ ಅಚ್ಛೋದ ಸರೋವರ ಸೇರುವ ಹೊತ್ತಿಗೆ ಪುಂಡಲೀಕ ವಿರಹ, ದುಃಖದಿಂದ ಮರುಗಿ ಸಾಯುತ್ತಾ, ಆಕಾಶದಲ್ಲಿ ಬೆಳಗುತ್ತಿದ್ದ ಚಂದ್ರನನ್ನು ಕಂಡು ಅವನೆ ತನ್ನ ದುಃಖಕ್ಕೆ ಕಾರಣನೆಂದು ಭಾವಿಸಿ ಎರಡು ಸಲ ಮಾನವನಾಗಿ ಹುಟ್ಟಿ ವಿರಹ ವೇದನೆಯನ್ನು ಅನುಭವಿಸೆಂದು ಶಾಪವನ್ನಿತ್ತು ಪ್ರಾಣ ಬಿಟ್ಟಿದನು. ನಿರಪರಾಧಿಯಾದ ಚಂದ್ರ ಈ ಮುನಿ ಶಾಪಕ್ಕೆ ಸಿಟ್ಟುಗೊಂಡು ತನ್ನೊಡನೆ ಅವನೂ ಮಾನವ ಜನ್ಮವೆತ್ತಿ ವಿರಹ ವೇದನೆಯನ್ನು ಅನುಭವಿಸಲೆಂದು ಪ್ರತಿಶಾಪಕೊಟ್ಟನು. ಈ ಶಾಪ, ಪ್ರತಿಶಾಪಗಳೇ ಈ ಕಾವ್ಯದ ಮುಂದಿನ ಘಟನಾವಳಿಯ ಮೂಲವಾಗಿದೆ.

ಮಹಾಶ್ವೇತೆ ಪುಂಡರೀಕನ ಮರಣದಿಂದ ಮೂರ್ಛಿತಳಾದಳು. ಅನಂತರ ಚಂದ್ರಮಂಡಲದಿಂದಳಿದು ಬಂದ ಒಬ್ಬ ದಿವ್ಯ ಪುರುಷ ಪುಂಡರೀಕನ ದೇಹವನ್ನು ಬೆನ್ನಿಗೆ ಹೊತ್ತುಕೊಂಡು ಹೋಗುತ್ತಿದ್ದುದ್ದನ್ನು ಅವಳು ಗಮನಿಸಿದಳು. ಅದನ್ನು ಕಂಡ ಕಪಿಂಜಲ ಕೋಪೋದ್ರಿಕ್ತನಾಗಿ ಆ ದಿವ್ಯ ಪುರುಷನನ್ನು ಬೆನ್ನಟ್ಟಲು ಗಗನಕ್ಕೇರಿದನು. ಇತ್ತ ಮಹಾಶ್ವೇತೆ ಜೀವನದಲ್ಲಿ ಜಿಗುಪ್ಸೆ ಉಂಟಾಗಿ, ಪ್ರಾಣವನ್ನು ತ್ಯೇಜಿಸಲು ಹೋದಾಗ ಚಂದ್ರಲೋಕದ ದಿವ್ಯ ಪುರುಷ ಅವಳಿಗೆ ಸಮಾಧಾನ ಹೇಳಿ ಪುಂಡರೀಕನನ್ನು ಮತ್ತೆ ಬದುಕಿಸುವುದಕ್ಕಾಗಿಯೇ ಅವನನ್ನು ಚಂದ್ರ ಲೋಕಕ್ಕೆ ಹೋಯ್ಯುತ್ತಿರುವುದಾಗಿ ಹೇಳುತ್ತಾನೆ. ಆಗ ಮಹಾಶ್ವೇತೆ ಅಚ್ಚೋದ ಸರೋವರದಲ್ಲಿ ಸ್ನಾನ ಮಾಡಿ ಮುನಿವೇಶ ಧರಿಸಿ ಹತ್ತಿರದ ಸಿದ್ಧಾಶ್ರಮ ಸೇರಿ ಶಿವರಾಧನೆ ಮಾಡುತ್ತಾ, ಪುಂಡರೀಕನ ಪುನರ್ದರ್ಶನಕ್ಕಾಗಿ ಕಾಲ ಸಾಗಿಸುತ್ತಿದ್ದಳು. ಕಾದಂಬರಿಯ ಒಂದು ಪದ್ಯದಲ್ಲಿ ಗಿರೀಶ ಚಂಚಜ್ಜಟಾಚಾಲ ಜೂಟ ವ್ಯೋಮ ಪ್ರೋದ್ಭಾಸಿ ಚಂದ್ರನನ್ನು ಹೊಗಳಿ ಅವನು ತ್ರಿಭುವನ ಜನಕ್ಕೆ ಎಂದೆಂದೂ ಆನಂದಮಯವನ್ನುಂಟು ಮಾಡಲೆಂದು ಪ್ರಾರ್ಥಿಸಿದ್ದಾರೆ. ಈ ಚಂದ್ರ ಪ್ರಾರ್ಥನೆ ಮೂಲ ಗ್ರಂಥವಾದ ಸಂಸ್ಕೃತ ಕಾದಂಬರಿಯಲ್ಲಿ ಇಲ್ಲ. ಆದ್ದರಿಂದ ಇದು ನಾಗವರ್ಮನ ಸ್ವಂತ ವಿಚಾರ ಬಹುಶಃ ಅವನು ಚಂದ್ರನೆಂಬ ಒಬ್ಬ ರಾಜನ ಆಶ್ರಿತನಾಗಿದ್ದು, ಕೃತಿ ರಚನೆ ಮಾಡಿರಬಹುದೆಂದು ತೋರುತ್ತದೆ. ಇದಕ್ಕೆ ತಕ್ಕ ಹಾಗೆ ಕಾವ್ಯದ ಏಳನೆಯ ಪದ್ಯದಲ್ಲಿ ಚಂದ್ರನೆಂಬ ಹೆಸರಿನ ಒಬ್ಬ ಅರಸನ ಉಲ್ಲೇಖ ಹೀಗಿದೆ.

'ಕೃತಿಪತಿ ನರೇಂದ್ರಚಂದ್ರಂ
ಕೃತಿಯಂ ಪೇಲ್ದಂ ಬುಧಾಬ್ಜವನಕಳಹಂಸಂ
ಕೃತಿ ಕಾದಂಬರಿಯೆನೆ ಸತ್ಕೃತಿ
ಕಥಿತ ಕಥಾವತಾರಮೇಂ ಕೇವಳಮೇ'[3]

ಕೃತಿಪತಿಯೆಂದರೆ ಸಾಮಾನ್ಯವಾಗಿ ಕವಿಯ ಪೋಷಕ ತನ್ನ ಕಾದಂಬರಿಯನ್ನು ನರೇಂದ್ರ ಚಂದ್ರನಿಗೆ ಅರ್ಪಿಸಿದ್ದಾರೆ. ಈ ಚಂದ್ರ ರಾಜ ಯಾರೋ? ಎಲ್ಲಿಯವನೋ? ಅವನ ಆಶ್ರಯದಲ್ಲಿ ನಾಗವರ್ಮ ಕವಿ ಯಾವಾಗ ಇದ್ದನೋ ತಿಳಿಯದು. ಆತನ ಬಾಳ ಕಥೆ ಎಷ್ಟರ ಮಟ್ಟಿಗೆ ಕಾದಂಬರಿಯ ಕಥೆಯನ್ನು ಹೋಲುತ್ತದೆಯೋ 'ಇದಮಿತ್ಥಂ' ಎಂದು ಹೇಳಲು ಸರಿಯಾದ ಸಾಧನಗಳಿಲ್ಲವೆಂದು ಹೇಳಬಹುದು.

ಒಟ್ಟಾರೆಯಾಗಿ ಕರ್ಣಾಟಕ ಕಾದಂಬರಿಯು ಮುಗ್ಧ ಮನಸುಗಳ ಕಥೆಯನ್ನು ಹೇಳುತ್ತಾ, ಒಂದಾಗದೇ ಇರುವ ಹೃದಯಗಳನ್ನು ಮತ್ತೆ ಒಂದಾಗಬೇಕೆಂಬ ಮನೋಭಾವನೆಯನ್ನು ತಂದೊಡ್ಡುತ್ತದೆ. ದುರಾದೃಷ್ಟಗಳು ಏನೇ ಇದ್ದರೂ, ವಿಧಿ ಲಿಖಿತದಂತೆ ಮತ್ತೆ ಎರಡು ಮನಸುಗಳು, ಜೀವಗಳು ಮತ್ತೊಂದು ಸಂದರ್ಭ, ಸನ್ನಿವೇಶದಲ್ಲಿ ಒಂದಾಗುತ್ತಾರೆಂಬ ಕಥಾನಕವನ್ನು ಕವಿ ಬಹಳ ಚೆನ್ನಾಗಿ ನಿರೂಪಿಸಿದ್ದಾರೆ.

ಕೊನೆ ಟಿಪ್ಪಣಿಗಳು :

1. ರಾಜಪ್ಪ ದಳವಾಯಿ. (2010). ಕನ್ನಡ ಸಾಹಿತ್ಯ ಕೋಶ. ದಳವಾಯಿ ಪ್ರಕಾಶನ. ಅಧ್ಯಾಪಕರ ನಿವಾಸಗಳು, ಜ್ಞಾನಭಾರತಿ. ಬೆಂಗಳೂರು
2. ತ. ಸು ಶಾಮರಾಯ. (2010) ಕನ್ನಡ ಸಾಹಿತ್ಯ ಚರಿತ್ರೆ, ಪುಟ ಸಂಖ್ಯೆ–32, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
3. ಅದೇ ಪುಸ್ತಕ, ಪುಟ ಸಂಖ್ಯೆ–33.

ಪರಾಮರ್ಶನ ಗ್ರಂಥಗಳು:

1. ತ. ಸು ಶಾಮರಾಯ. (2010) ಕನ್ನಡ ಸಾಹಿತ್ಯ ಚರಿತ್ರೆ, ಪುಟ ಸಂಖ್ಯೆ–32, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ರಾಜಪ್ಪ ದಳವಾಯಿ. (2010). ಕನ್ನಡ ಸಾಹಿತ್ಯ ಕೋಶ. ದಳವಾಯಿ ಪ್ರಕಾಶನ. ಅಧ್ಯಾಪಕರ ನಿವಾಸಗಳು, ಜ್ಞಾನಭಾರತಿ. ಬೆಂಗಳೂರು
3. ಗಂಗಾಧರನ ಮಡಿವಾಳೇಶ್ವರ ತುರಮರಿ. (2006). ಬಾಣ ಕಾದಂಬರಿ, ಸುವರ್ಣ ಸಾಹಿತ್ಯ ಗ್ರಂಥಮಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–2.
4. ಹ ವೆ ನಾರಾಯಣಶಾಸ್ತ್ರೀ., (1999). ನಾಗವರ್ಮ ವಿರಚಿತ ಕರ್ಣಾಟಕ ಕಾದಂಬರಿ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–18
5. ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ., (1991). ಕನ್ನಡ ಚೆನ್ನುಡಿ. ಪ್ರಿಸಂ ಬುಕ್ಸ್ ಪ್ರೈ.ಲಿ. ಬೆಂಗಳೂರು.
6. ಮೈ. ಶ್ರೀ ನಟರಾಜ. (2009). ಕನ್ನಡ ಕಾದಂಬರಿ ಲೋಕದಲ್ಲಿ ಹೀಗೆ ಹಲವು . ಕನ್ನಡ ಸಾಹಿತ್ಯ ರಂಗ. ನ್ಯೂಜೆರ್ಸಿ, ಯು.ಎಸ್.ಎ ಮತ್ತು ಅಭಿನವ. ಬೆಂಗಳೂರು.
7. ಕೆ. ಅನಂತರಾಮು. (2014). ವಿಷಾದಕಾಂಡ ಕಾದಂಬರಿ. ನಂದಿನಿ ಪ್ರಕಾಶನ. ವಿದ್ಯಾರಣ್ಯಪುರಂ. ಮೈಸೂರು–08.
8. ಡಾ. ಜಿ ಎಸ್ ಅಮೂರ. (1999), ಸಮಕಾಲೀನ ಕಥೆ ಕಾದಂಬರಿ ಹೊಸ ಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು

ಬಸವಣ್ಣನವರ ವಚನಗಳಲ್ಲಿ ಜೀವನಪ್ರೀತಿ

***

ಡಾ. ಮೀನಾಕ್ಷಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ
ಎನ್‌ಎಸ್‌ಬಿ ಅಕಾಡೆಮಿ ಬೆಂಗಳೂರು – 560099
rmeenakshi92@gmail.com

ಬಸವಣ್ಣನವರಾದಿಯಾಗಿ ಎಲ್ಲಾ ಶರಣರು ವಚನ ಚಳುವಳಿಯನ್ನು ನಡೆಸಿದ್ದು ಉಳ್ಳವರ ಶೋಷಣೆಗೆ ತುತ್ತಾಗಿ ನೊಂದು ಬೆಂದ ಜನ ಸಾಮಾನ್ಯರಿಗೆ ಸಮಸಮಾಜವನ್ನು ನಿರ್ಮಿಸುವ ಸಲುವಾಗಿ. ಇದು ಶೋಷಕರ ವಿರುದ್ಧದ ಉಗ್ರಸ್ವರೂಪದ ಹೋರಾಟವಾಗಿರದೇ ಸತ್ಯ, ಸತ್ವದೊಂದಿಗೆ, ಮೌಢ್ಯ ನಿವಾರಣೆಯೊಂದಿಗೆ ಕೈಗೊಂಡ ವೈಚಾರಿಕ ರೂಪದ್ದಾಗಿತ್ತು. ಎಲ್ಲಾ ಆಯಾಮಗಳನ್ನೊಳಗೊಂಡ ಸಾಹಿತ್ಯದಲ್ಲಿ ಜೀವನ ಪ್ರೀತಿಯನ್ನು ಕಾಣಬಹುದಾಗಿದೆ. ಅದರಲ್ಲಿಯೂ ಬಸವಣ್ಣನವರ ವಚನಗಳಲ್ಲಿ ಈ ಅಂಶಗಳನ್ನು ಹುಡುಕುವುದು ಈ ಸಂಶೋಧನಾ ಲೇಖನದ ಉದ್ದೇಶವಾಗಿದೆ.

ಜೀವನಪ್ರೀತಿ ಎಂಬುದು ಬದುಕಿನ ಬಗೆಗಿನ ಕಾಳಜಿಯನ್ನು ತಿಳಿಸುತ್ತದೆ. ದ.ರಾ. ಬೇಂದ್ರೆ ಅವರು "ಜೀವನಪ್ರೀತಿ ಎಂದರೆ ಸುಖ ಮಾತ್ರವಲ್ಲ, ದುಃಖದ ಆಳದಲ್ಲಿ ಹುಟ್ಟಬಹುದಾದ ಅಮೃತ ತತ್ವ"* ಎಂದು ಅಭಿಪ್ರಾಯಿಸುತ್ತಾ, ಬದುಕೆಂದರೆ ಸುಖ–ದುಃಖಗಳ ಸಮಪಾಕವೆಂದು ಅರುಹಿದ್ದಾರೆ.

ಮನುಷ್ಯರಾದಿಯಾಗಿ ಎಲ್ಲಾ ಪ್ರಾಣಿಗಳು ಬದುಕುವಿಕೆಯನ್ನು ಜೀವನ ಎಂದು ಕರೆಯುತ್ತೇವೆ. ಅದರ ಗುಣ ಲಕ್ಷಣಗಳನ್ನು ಹಲವು ಪದಗಳಲ್ಲಿ ತಿಳಿಯಬಹುದು. ಪ್ರೀತಿ ಎಂದರೆ ಕಾಳಜಿ, ಮಮತೆ, ಅಕ್ಕರೆ, ಒಲವು, ಭರವಸೆ, ವಿಶ್ವಾಸ, ನಂಬಿಕೆ, ಕ್ಷಮೆ, ಕರುಣೆ, ಸೈರಣೆ, ಸ್ವಾವಲಂಬನೆ, ದಯೆ, ಜವಾಬ್ದಾರಿ, ಕರ್ತವ್ಯಪ್ರಜ್ಞೆ, ಪ್ರಾಮಾಣಿಕತೆ, ಸತ್ಯ, ಆಸರೆ, ಸೋಲು–ಗೆಲುವು, ಸ್ವಾಭಿಮಾನ, ಕಾಯಕಪ್ರಜ್ಞೆ ಹೀಗೆ ಇನ್ನೂ ಮೊದಲಾದ ಅರ್ಥಗಳನ್ನು ಗುರುತಿಸಲು ಸಾಧ್ಯವಿದೆ.

• https://www.prajavani.net/district/bengaluru-city/literature-bendre702180.html?utm_source

ಬಸವಣ್ಣನವರ ವಚನಗಳು ಮನುಷ್ಯರನ್ನಷ್ಟೇ ಅಲ್ಲದೇ ಸಕಲ ಜೀವಾತ್ಮರನ್ನೂ ಪ್ರೀತಿಸಬೇಕೆಂದು ಬೋಧಿಸುತ್ತವೆ. ಜೀವಸಂಕುಲವನ್ನೆಲ್ಲಾ ಪರಿಗಣಿಸಿದ ಕಾರಣದಿಂದಾಗಿಯೇ ಬಸವಣ್ಣನವರು ಯುಗಪ್ರವರ್ತಕರೆನ್ನಿಸುತ್ತಾರೆ, ಉನ್ನತ ವರ್ಗದವರ ಬೀದಿಯಲ್ಲಿ ಹಾದುಹೋಗುತಿದ್ದ ಸಂಬೋಳಿ ನಾಗಿದೇವನಿಗೆ ಅವರೆಲ್ಲರೂ ಕಲ್ಲಿನಿಂದ ಹೊಡೆದು ಶಿಕ್ಷಿಸಿದಾಗ ಕಣ್ಣು ಕಾಣದೇ ಎಡವಿ ಬೀಳುತ್ತಿದ್ದ ಆತನನ್ನು ಮೇಲೆತ್ತಿದಾಗ ಬಂದೆಯಾ ಬಸವಣ್ಣ ಎಂದು ಭಾವುಕವಾಗಿ ನುಡಿದು ಕಲ್ಯಾಣದಲ್ಲಿ ಎಡವಿ ಬಿದ್ದವರ ಮೇಲೆತ್ತುವವನು ನೀನಲ್ಲದೇ ಮತ್ತ್ಯಾರು ಇದ್ದಾರೆ ಎಂದು ಉಲ್ಲೇಖಿಸಿದ ಮಾತು ಬಸವಣ್ಣನವರ ಜೀವಕಾಳಜಿಯನ್ನು ಪ್ರತಿಬಿಂಬಿಸುತ್ತದೆ. ಆ ಕಾರಣಕ್ಕಾಗಿ ಅವರು ಎಲ್ಲರ ಮೇಲೂ ದಯೆಯನ್ನು ಇರಿಸಿಕೊಂಡಿದ್ದರು ಅದನ್ನೇ ತಮ್ಮ ವಚನಗಳಲ್ಲಿ ಪ್ರತಿಪಾದಿಸಿದ್ದರು.

ದಯವಿಲ್ಲದ ಧರ್ಮವದೇವುದಯ್ಯ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲಿ
ದಯವೇ ಧರ್ಮದ ಮೂಲವಯ್ಯ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ[1]

ಈ ವಚನದಲ್ಲಿ ಬಸವಣ್ಣನವರು ಯಾವುದೇ ಧರ್ಮದಲ್ಲಿ ದಯೆ ಎಂಬುದು ಇರಲೇಬೇಕು ಅದಿಲ್ಲದಿದ್ದರೆ ಅದಕ್ಕೆ ಧರ್ಮದ ಚೌಕಟ್ಟು ಇರುವುದೇ ಇಲ್ಲ, ಮನುಷ್ಯರಷ್ಟೇ ಅಲ್ಲದೇ ಸಕಲ ಪ್ರಾಣಿಗಳೆಲ್ಲರಲಿ ಎಂಬುದನ್ನು ವಿಶೇಷವಾಗಿ ಒತ್ತಿ ಹೇಳಿರುವುದನ್ನು ಇಲ್ಲಿ ಗಮನಿಸಬೇಕು.

ಮಾನವನ ಇತಿಹಾಸದುದ್ದಕ್ಕೂ ಸ್ವಾರ್ಥಪರವಾದ ಚಿಂತನೆಯಿಂದಲೇ ಬದುಕಿರುವುದನ್ನು ಕಾಣುತ್ತೇವೆ. ಆದರೆ ಶರಣರು ಮನುಷ್ಯನಾದವನು ಪಶು,ಪಕ್ಷಿಯಿಂದಲೂ ಬದುಕಿನ ಮೌಲ್ಯವನ್ನು ಅರ್ಥೈಸಿಕೊಳ್ಳಬಹುದೆಂದು ತಿಳಿಸಿ ಹೇಳಿದ್ದಾರೆ. ಅದಲ್ಲದೇ ಕಾಯಕ ಮತು ದಾಸೋಹಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿರುವುದು ಅವರ ವಚನಗಳಲ್ಲಿ ತಿಳಿಯುತ್ತದೆ.

ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವನು?
ಕೋಳಿಯೊಂದು ಕುಟುಕ ಕಂಡರೆ ಕೂಗಿ ಕರೆಯದೆ
ತನ್ನ ಕುಲವೆಲ್ಲವ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ ಕಾಗೆ
ಕೋಳಿಯಿಂದ ಕರಕಷ್ಟ ಕೂಡಲಸಂಗಮದೇವ [2]

ಕಾಗೆ ಮತ್ತು ಕೋಳಿಗಳು ಆಹಾರದ ಒಂದು ಅಗುಳು ಮತ್ತು ಕುಟುಕು ಸಿಕ್ಕರೆ ಅದನ್ನು ಹಂಚಿಕೊಂಡು ತಿನ್ನುವುದಕ್ಕಾಗಿ ತಮ್ಮ ಬಳಗವನ್ನೆಲ್ಲಾ ಕೂಗಿ ಕರೆಯುತ್ತವೆ ಇದು ಜೀವನಪ್ರೀತಿಯ ದ್ಯೋತಕವಾಗಿದೆ. ಆದರೆ ಮನುಷ್ಯನಾದವನು ತನ್ನ ಸ್ವಾರ್ಥಕ್ಕಾಗಿ ಬದುಕುತ್ತಾನೆ. ಆದರೆ ಗಳಿಸಿದ ಅಂಶದಲ್ಲಿ ಒಂದಷ್ಟನ್ನು ಸಮಾಜಕ್ಕಾಗಿ ವಿನಿಯೋಗಿಸಬೇಕು ಅದಿಲ್ಲದಿದ್ದರೆ ಶಿವಭಕ್ತನಾಗಿದ್ದೂ ಕಾಗೆ ಕೋಳಿಯಿಂದ ಕರಕಷ್ಟವೆನ್ನುತ್ತಾರೆ.

ಈ ಜೀವಸಂಕುಲವನ್ನೆಲ್ಲಾ ಒಂದೇ ಎಂದು ಭಾವಿಸಿದ ಬಸವಣ್ಣನವರು ಮನುಷ್ಯರ ನಡುವಿನ ಜಾತಿ ಸಂಬಂಧಿತ ಶ್ರೇಣೀಕರಣವನ್ನು ಖಂಡಿಸುತ್ತಾರೆ ಮತ್ತು ಅದನ್ನು ತೊಲಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರು, ಮನುಷ್ಯನನ್ನು ನೀತಿಯ ಆಧಾರದ ಮೇಲೆ ಪರಿಗಣಿಸಬೇಕೆ ಹೊರತು ಜಾತಿಯ ಹಿನ್ನೆಲೆಯಲ್ಲಲ್ಲ ಎಂಬ ಸತ್ಯವನ್ನು ಪ್ರತಿಪಾದಿಸಿದರು.

ಕೊಲುವನೇ ಮಾದಿಗ ಹೊಲಸ ತಿಂಬುವನೇ ಹೊಲೆಯ
ಕುಲವೇನೋ ಆವಂದಿರ ಕುಲವೇನೋ
ಸಕಲ ಜೀವಾತ್ಮಂಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು[3]

ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವವನು ಕುಲಜನಾಗಿರುತ್ತಾನೆ, ಅವರೆಲ್ಲರೂ ಶರಣರೆಂದು ಪರಿಗಣಿಸಲ್ಪಡುವವರು. ಮತೊಬ್ಬರ ಮನಸ್ಸನ್ನು ಕೊಲ್ಲುವವರು, ಸದಾ ಬಾಯಿಂದ ಸುಳ್ಳನ್ನು ಹೇಳುವವರು ಮಾದಿಗ ಮತ್ತು ಹೊಲೆಯರೆನ್ನಿಸಿಕೊಳ್ಳುತ್ತಾರೆ ಎಂಬ ಅರ್ಥದಲ್ಲಿ ಈ ವಚನವನ್ನು ವ್ಯಾಖ್ಯಾನಿಸಬಹುದು. 'ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯ ಇವನಮ್ಮವ ಇವನಮ್ಮವ

ಇವನಮ್ಮವನೆಂದೆನಿಸಯ್ಯಾ' ಎಂಬ ವಚನವೂ ಸಹಾ ಸಮಾನತೆಯನ್ನು ಬಿಂಬಿಸುವಂತಹ ಪ್ರತಿಯೊಬ್ಬರ ಮೇಲೆ ಪ್ರೀತಿ ಕಾಳಜಿಯನ್ನು ತೋರಿಸುವ ವಚನವಾಗಿದೆ.

ಯಾವುದೇ ಪ್ರಾಣಿಯು ಬದುಕಬೇಕಾದರೆ ಆಹಾರ ಸಂಸ್ಕೃತಿಯನ್ನು ಅನುಸರಿಸುತ್ತದೆ. ಬದುಕಿರುವಷ್ಟು ದಿನ ಅದು ತನ್ನ ಆಹಾರಕ್ಕಾಗಿ ಮಾಡಬೇಕಾದ ಪ್ರಕ್ರಿಯೆಯನ್ನು ತಪ್ಪದೇ ಮಾಡುತ್ತದೆ. ಅಂತಹದ್ದೇ ಒಂದು ಉದಾಹರಣೆಯನ್ನು ಬಸವಣ್ಣನವರ ವಚನದಲ್ಲಿ ಕಾಣಬಹುದು.

ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು
ಕೊಂದಹರೆಂಬುದನ್ನರಿಯದೆ
ಬೆಂದೊಡಲ ಹೊರೆಯ ಹೋಯಿತ್ತು
ಅದಂದೆ ಹುಟ್ಟಿತ್ತು ಅದಂದೆ ಹೊಂದಿತ್ತು
ಕೊಂದವರುಳಿವರೆ ಕೂಡಲಸಂಗಮದೇವ [4]

ಇಲ್ಲಿ ಕುರಿ, ಹಸಿವು, ಕೊಲ್ಲುವವರು ಇದೆಲ್ಲವೂ ಸಾಂಕೇತಿಕವಾದ ಅಂಶಗಳು. ನಮ್ಮ ಬದುಕಿನಲ್ಲಿಯೂ ಸಹಾ ಸಾವೆಂಬುದು ಯಾವಾಗಲಾದರೂ ಬರಬಹುದಾದ ಅತಿಥಿ ಅದರ ಅರಿವಿದ್ದೂ ಕೂಡಾ ಕ್ಷಣಿಕ ಸುಖಕ್ಕಾಗಿ ಹಂಬಲಿಸುತ್ತಾ ಸುಂದರವಾದ ಕ್ಷಣಗಳನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬ ಭಾವದಲ್ಲಿ ಬಸವಣ್ಣನವರು ಈ ವಚನವನ್ನು ಅರುಹಿದ್ದಾರೆ. ಅದಲ್ಲದೇ ಪದಶಃ ಅರ್ಥವನ್ನು ಗ್ರಹಿಸಿದರೂ ಸಹ ಹಸಿವೆಂಬುದು ಜೀವನ ಪ್ರೀತಿಯನ್ನು ತೋರಿಸಿದರೆ ಅದನ್ನು ಪೂರೈಸಿಕೊಳ್ಳಲು ಆಹಾರದ ಮೊರೆ ಹೋಗುವಂತಹ ಕುರಿ ಮುಖ್ಯ ವಿಷಯವಾಗಿದೆ. ಈ ರೀತಿಯಾಗಿ ಜೀವಿಸಲಿಕ್ಕಾಗಿ ತೆರಳಿದ ಜೀವಿಯನ್ನು ಕೊಲ್ಲುವಂತಹ ಮನುಷ್ಯ ಎಷ್ಟು ದಿನ ಬದುಕಿರಲು ಸಾಧ್ಯ ಎಂಬ ಅಂಶವನ್ನೂ ಸಹ ಈ ವಚನದಲ್ಲಿ ಮನಗಾಣಬಹುದಾಗಿದೆ.

ಜೀವನ ಪ್ರೀತಿಯೊಳಗೆ ವೈಚಾರಿಕತೆ, ಕಾಳಜಿ, ಜವಾಬ್ದಾರಿಯನ್ನು ಪ್ರತಿಬಿಂಬಿಸುವಂತಹ ಅಂಶಗಳು ವಚನ ಸಾಹಿತ್ಯದಲ್ಲಿವೆ. ಬದುಕಿನಲ್ಲಿ ಸಪ್ರಘಾತುಕಗಳನ್ನು ಮಾಡಬಾರದೆಂದು ಬಸವಣ್ಣನವರು ತಿಳಿಸಿದ್ದಾರೆ. ಉತ್ತಮ ವ್ಯಕ್ತಿತ್ವ ನಿರ್ಮಾಣವೂ ಸಹ ಬದುಕಿನ ಪರಮೋದ್ದೇಶಗಳಲ್ಲಿ ಒಂದಾಗಿದೆ. ಆದುದುರಿಂದ ಅವರ ಈ ವಚನ ಮುಖ್ಯವಾದುದಾಗಿದೆ.

ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ, ಇದರ ಹಳಿಯಲುಬೇಡ
ಇದೇ ಅಂತರಂಗಶುದ್ಧಿ ಇದೇ ಬಹುರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ[5]

ಮತ್ತೊಬ್ಬರನ್ನೂ ಕೂಡ ನಮ್ಮಂತೆಯೇ ಎಂದು ಭಾವಿಸುವುದು ನಿಜವಾದ ಜೀವನ ಪ್ರೀತಿಯಾಗಿದೆ. ಆದುದರಿಂದ ಯಾರೊಬ್ಬರನ್ನು ಅನ್ಯಥಾ ಭಾವಿಸದೇ ಸಮಾನ ಚಿಂತನೆಯೊಂದಿಗೆ ಬದುಕನ್ನು ಸಾಗಿಸುವುದು ನಿಜ ಬದುಕಿನ ರೀತಿಯಾಗಿದೆ.

ಬಸವಣ್ಣನವರು ಭಿನ್ನವಾಗಿಯೇ ಬದುಕಿನ ಮೌಲ್ಯವನ್ನು ಅರ್ಥೈಸಿದವರು. ಗುರುಲಿಂಗ ಜಂಗಮಕ್ಕೆ ಮೊದಲ ಆದ್ಯತೆಯನ್ನು ಒದಗಿಸಿದವರು. ಪ್ರೀತ್ಯಾದರಗಳ ಮೂಲಕ ಅವರ ಸೇವೆಯನ್ನಯನ್ನು ಮಾಡುವುದೇ ಬದುಕಿನ ಪರಮೋದ್ದೇಶವೆಂದವರಾಗಿದ್ದಾರೆ.

ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರೆರದರೆ
ಮೇಲೆ ಪಲ್ಲವಿಸಿತ್ತು ನೋಡಾ
ಲಿಂಗದ ಬಾಯಿ ಜಂಗಮವೆಂದು
ಪಡಿಪದಾರ್ಥವ ನೀಡಿದರೆ
ಮುಂದೆ ಸಕಲ ಪದಾರ್ಥವನೀವನು
ಆ ಜಂಗಮವ ಹರನೆಂದು ಕಂಡು ನರನೆಂದು ಭಾವಿಸಿದರೆ
ನರಕ ತಪ್ಪದು ಕಾಣಾ ಕೂಡಲಸಂಗಮದೇವ [6]

ಒಂದು ಮರಕ್ಕೆ ಬೇರು ಇರುವುದು ಕೆಳಗೆ ಎಂಬುದನ್ನು ಅರಿತುಕೊಂಡು ಅದಕ್ಕೆ ನೀರು ಮತ್ತು ಪೋಷಕಾಂಶವನ್ನು ಒದಗಿಸಿದಾಗ ಅದು ಹೇಗೆ ಫಲವನ್ನು ನೀಡುತ್ತದೆಯೋ ಹಾಗೆಯೇ ಶರಣನಾದವನು ಜಂಗಮರಿಗೆ ತನ್ನ ಬದುಕಿನ ಗಳಿಕೆಯನ್ನು ಮನಸ್ಪೂರ್ವಕವಾಗಿ ಸಮರ್ಪಿಸಬೇಕೆಂದು ಬಸವಣ್ಣನವರು ಅರುಹಿದ್ದಾರೆ.

ಒಟ್ಟಾರೆಯಾಗಿ ಬಸವಣ್ಣನವರ ನೂರಾರು ವಚನಗಳಲ್ಲಿ ಜೀವನ ಪ್ರೀತಿಯನ್ನು ಗುರುತಿಸಬಹುದು. ವಚನ ಚಳುವಳಿ ನಡೆದದ್ದು ಸಮಸಮಾಜ ನಿರ್ಮಾಣಕ್ಕಾಗಿ, ಎಲ್ಲರನ್ನೂ ಒಂದೇ ಎಂಬ ತತ್ತ್ವವನ್ನು ಪಾಲಿಸಲಿಕ್ಕಾಗಿ, ಆ ದಿಸೆಯಲ್ಲಿ ಎಲ್ಲಾ ವಚನಕಾರರು ತಮ್ಮದೇ ನಿಸ್ವಾರ್ಥ ಸೇವೆಯನ್ನು ನೀಡಿದ್ದಾರೆ. ತದನಂತರ ಸಂಪ್ರದಾಯವಾದಿಗಳ ದಾಳಿಗೆ ತುತ್ತಾದ್ದರಿಂದ ಸಾವಿರಾರು ವಚನಕಾರರು ಕಲ್ಯಾಣದಿಂದ ಬೇರೆಡೆಗೆ ಸಾಗಬೇಕಾಯಿತು ಅದಲ್ಲದೇ ಸಾವಿರಾರು ವಚನಗಳನ್ನು ನಾಶಗೊಳಿಸಲಾಯಿತು ಎಂಬುದನ್ನು ಇತಿಹಾಸದಿಂದ ತಿಳಿಯಬಹುದಾಗಿದೆ. ಅದೇನೆ ನಡೆದಿದ್ದರೂ ವಚನ ಎಂಬುದು ಕರ್ನಾಟಕದ ಅಸ್ಮಿತೆಯಾಗಿದ್ದು, ಬೇರೆ ಯಾವುದೇ ಭಾಷೆಯಲ್ಲಿಯೂ ಕಾಣಸಿಗದ ಅಪರೂಪದ ಸಾಹಿತ್ಯ ಪ್ರಕಾರವಾಗಿದೆ ಎಂಬುದು ಹೆಮ್ಮೆಯ ಸಂಗತಿಯಾಗಿದೆ.

ಕೊನೆ ಟಿಪ್ಪಣಿಗಳು :

1. ಎಂ.ಎಂ. ಕಲಬುರ್ಗಿ:ಬಸವಯುಗದ ವಚನ ಮಹಾಸಂಪುಟ–1., ವಚನ ಸಂಖ್ಯೆ 247, ಪು.ಸಂ. 29, ಕನ್ನಡ ಪುಸ್ತಕ ಪ್ರಾಧಿಕಾರ 2016
2. ಅದೇ, ವಚನ ಸಂಖ್ಯೆ 438, ಪು.ಸಂ. 43
3. ಅದೇ, ವಚನ ಸಂಖ್ಯೆ 591, ಪು.ಸಂ. 55
4. ಅದೇ, ವಚನ ಸಂಖ್ಯೆ 129, ಪು.ಸಂ. 21
5. ಅದೇ, ವಚನ ಸಂಖ್ಯೆ 235, ಪು.ಸಂ. 28
6. ಅದೇ, ವಚನ ಸಂಖ್ಯೆ 421, ಪು.ಸಂ. 41

ಪರಾಮರ್ಶನ ಗ್ರಂಥಗಳು :

1. ಡಾ. ಎಂ.ಎಂ. ಕಲಬುರ್ಗಿ(ಪ್ರ.ಸಂ): ಬಸವಯುಗದ ವಚನ ಮಹಾಸಂಪುಟ:1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2016
2. ಎಂ. ಚಿದಾನಂದಮೂರ್ತಿ : ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ –5 ವಚನಸಾಹಿತ್ಯ : ಸಪ್ನ ಬುಕ್ ಹೌಸ್ ಬೆಂಗಳೂರು, 2013
3. ಸಿದ್ಧೇಶ್ವರ ಸ್ವಾಮಿಗಳು : ಅಲ್ಲಮಪ್ರಭುದೇವರ ವಚನ–ನಿರ್ವಚನ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು– 2001
4. ರಂ.ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್ : ಪ್ರಕಾಶಕರು ಮೈಸೂರು, 2012

***

ಬದಲಾದ ಕಾಲಘಟ್ಟದಲ್ಲಿ ಕನ್ನಡ ಸಣ್ಣ ಕಥಾ ಸಾಹಿತ್ಯದ ನೆಲೆಬೆಲೆ

***

ಹೊನ್ನರಾಜು ಎಸ್ ವಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಕೆಎನ್‌ವಿವಿಎಸ್ ಕಲಾ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯ,
ಕಿತ್ತೂರು, ಬೆಳಗಾವಿ. ಕರ್ನಾಟಕ.

ಸಂಶೋಧನೆ ಎಂದರೆ ಸತ್ಯದ ಅನ್ವೇಷಣೆಯೇ ಆಗಿದೆ. ಬಚ್ಚಿಟ್ಟಿರುವುದನ್ನು ಬಿಚ್ಚಿಡುವುದೇ ಸಂಶೋಧನೆಯಾಗಿದೆ. ಈ ಮೂಲಕ ಸತ್ಯದ ಅನಾವರಣ ಮಾಡುತ್ತಾ ಜ್ಞಾನದಿಗಂತವನ್ನು ವಿಸ್ತರಿಸುವುದೇ ಆಗಿದೆ. ಅನುಭವಗಳ ಸುಂದರವಾದ ನಿರೂಪಣೆಯೇ ಸಾಹಿತ್ಯ. ಸಾಹಿತ್ಯ ನಿಂತ ನೀರಲ್ಲ ಸದಾ ಹರಿಯುವ ಜೀವನದಿಯಿದ್ದಂತೆ. ಪರಿವರ್ತನಶೀಲತೆ ಸಾಹಿತ್ಯದಲ್ಲಿ ನಿರಂತರವಾಗಿ ಕಂಡುಬರುತ್ತದೆ. ಇದರಿಂದಾಗಿಯೇ ಕನ್ನಡ ಸಾಹಿತ್ಯವು ಇಂದು ನಿತ್ಯನೂತನವಾಗಿ ನಾನಾ ಬಗೆಗಳಲ್ಲಿ ಕವಲೊಡೆದುಕೊಂಡು ಬೆಳೆಯುತ್ತಿದೆ. ಆಧುನಿಕ ಕನ್ನಡ ಸಾಹಿತ್ಯದ ಕಾಲಘಟ್ಟದಲ್ಲಿ ವಿನೂತನವಾದ ಸಾಹಿತ್ಯ ಪ್ರಕಾರಗಳಿದ್ದು ಅವುಗಳಲ್ಲಿ ಮಹಾಕಾವ್ಯ, ಖಂಡಕಾವ್ಯ, ಭಾವಗೀತೆ, ಕಾದಂಬರಿ. ಸಣ್ಣಕಥೆ, ನಾಟಕ, ಪ್ರಬಂಧ, ಜೀವನ ಚರಿತ್ರೆ, ಆತ್ಮಕಥೆ, ಪ್ರವಾಸ ಸಾಹಿತ್ಯ ಹೀಗೆ ಹಲವು ತೆರನಾಗಿ ವರ್ಗೀಕರಿಸಿದೆ. ಇವುಗಳಲ್ಲಿ ಸಣ್ಣಕಥೆಯು ಮೊದಲ ಪಂಕ್ತಿಯಲ್ಲಿ ನಿಲ್ಲುವಷ್ಟರಮಟ್ಟಿಗೆ ಬೆಳವಣಿಗೆಯನ್ನು ಕಂಡಿದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ– ಬಂಡಾಯ, ಸ್ತ್ರೀ–ವಾದ ಹೀಗೆ ಪ್ರಮುಖ ಘಟ್ಟಗಳಲ್ಲಿ ಮಹತ್ವಪೂರ್ಣವಾದ ನೆಲೆಯನ್ನು ಕಂಡುಕೊಂಡಿದೆ.

ಪ್ರಮುಖ ಪದಗಳು :
ಶಾರ್ಟ ಸ್ಟೋರಿ, ಪಾಶ್ಚಾತ್ಯ–ಪೌರ್ವಾತ್ಯ, ನವೋದಯ, ಪ್ರಗತಿಶೀಲ, ನವ್ಯ, ದಲಿತ– ಬಂಡಾಯ, ಸ್ತ್ರೀ–ವಾದ, ಮಾನವಶಾಸ್ತ್ರ, ಅಸ್ಥಿತ್ವವಾದ, ವಾಸ್ತವವಾದ, ದಲಿತ ಪ್ರಜ್ಞೆ, ಕ್ಲಾಸಿಕ್

ಸಂಶೋಧನೆಯ ಉದ್ದೇಶ :

ಬದಲಾದ ಕಾಲಘಟ್ಟದಲ್ಲಿ ಕನ್ನಡ ಸಣ್ಣ ಕಥಾ ಸಾಹಿತ್ಯದ ನೆಲೆಬೆಲೆ ಕುರಿತ ಚರ್ಚೆಯು ಪ್ರಸ್ತುತ ಕಾಲಘಟ್ಟದಲ್ಲಿ ಅತೀಮುಖ್ಯವಾದ ವಿಷಯವಾಗಿದೆ. ಸರ್ವಕ್ಷೇತ್ರಗಳಲ್ಲೂ ಮಾನವನ ಪ್ರಗತಿ ನಾಗಾಲೋಟದಲ್ಲಿದ್ದು ಸಾಹಿತ್ಯವನ್ನೇನು ಹೊರತುಪಡುಸುವಂತಿಲ್ಲ. ಸಣ್ಣಕಥಾಸಾಹಿತ್ಯವು ಮುಖ್ಯಭೂಮಿಕೆಯಲ್ಲಿ ಇದ್ದರೂ ಸಹ ಆಧುನಿಕತೆ ಮತ್ತು ತಾಂತ್ರಿಕ ಪ್ರಗತಿಯ ಕಾರಣದಿಂದಾಗಿ ಮೂಲೆಗುಂಪಾಗುವ ಸ್ಥಿತಿ ನಿರ್ಮಾಣವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅದರ ನೆಲೆಬೆಲೆಯನ್ನು ಅರ್ಥೈಸಿಕೊಂಡು ಉಳಿಸಿ ಬೆಳೆಸಬೇಕಾದ ಅನಿವಾರ್ಯತೆ ಎಲ್ಲರಿಗೂ ಇದ್ದೇ ಇದೆ. ಇದೇ ಉದ್ದೇಶದಿಂದ ಪ್ರಸ್ತುತ ಲೇಖನದ ವಿಷಯ ಮುಖ್ಯವೆನಿಸುತ್ತದೆ.

ಸಂಶೋಧನೆಯ ಸ್ವರೂಪ :

ಸಾಹಿತ್ಯದ ವಿವಿಧ ಬಗೆಗಳಲ್ಲಿ ಒಂದಾಗಿರುವ ಮತ್ತು ಓದುಗರ ಮೆಚ್ಚುಗೆ ಪಡೆದಿರುವ ಸಾಹಿತ್ಯ ಸಣ್ಣಕಥೆಯಾಗಿದೆ. ಈ ಹಿನ್ನೆಲೆಯಲ್ಲಿ ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕಥೆಯ ಸ್ಥಾನ, ಉಗಮ, ಹಿನ್ನೆಲೆ, ಪ್ರೇರಣೆ, ಅಸ್ಥಿತ್ವ, ಪರಿಣಾಮ, ಮೊದಲಾದವುಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದಾಗಿದೆ. ಪ್ರಸ್ತುತ ಕಾಲದಲ್ಲಿ ಸಣ್ಣಕಥೆಗೆ ಎದುರಾಗಿರುವ ಸವಾಲುಗಳು, ಆತಂಕ, ಮುನ್ನೆಲೆಗೆ ತರಲು ಅನುಸರಿಸಬೇಕಾದ ವಿಧಾನಗಳು, ನೆಲೆಬೆಲೆ ಕುರಿತು ಚರ್ಚಿಸುವ ಉದ್ದೇಶವನ್ನು ಹೊಂದಲಾಗಿದೆ.

ಸಂಶೋಧನೆಯ ವ್ಯಾಪ್ತಿ:

ಸಣ್ಣಕಥಾ ಸಾಹಿತ್ಯವು ಉಳಿದ ಪ್ರಕಾರಗಳಿಗಿಂತ ಸಹೃದಯರ ಮೆಚ್ಚುಗೆ ಗಳಿಸಿರುವ ಪ್ರಕಾರವಾಗಿದೆ. ಇದರ ವ್ಯಾಪ್ತಿ ವಿಶಾಲವಾದದ್ದು. ಹೊಸಗನ್ನಡ ಸಾಹಿತ್ಯದಲ್ಲಿನ ನವೋದಯ, ಪ್ರಗತಿಶೀಲ, ನವ್ಯ, ದಲಿತ– ಬಂಡಾಯ, ಸ್ತ್ರೀ–ವಾದ ಹೀಗೆ ಪ್ರಮುಖ ಘಟ್ಟಗಳಲ್ಲಿ ಮಹತ್ವಪೂರ್ಣವಾದ ನೆಲೆಯನ್ನು ಕಂಡುಕೊಂಡಿದ್ದು ಪ್ರಸ್ತುತ ಕಾಲಮಾನದಲ್ಲಿ ಸಣ್ಣಕಥೆ ಹೇಗೆ ಮುಂದುವರೆಯುತ್ತಿದೆ ಎಂಬುದನ್ನು ಅದಕ್ಕೆದುರಾಗಿರುವ ಸವಾಲುಗಳೇನು ಅದರ ಪರಿಸ್ಥಿತಿ ಹೇಗಿದೆ? ಎಂಬುದನ್ನು ವಿಮರ್ಶಾತ್ಮಕ ನೆಲೆಗಟ್ಟಿನಲ್ಲಿ ತಿಳಿಯಪಡಿಸುವುದು ಇದರ ವ್ಯಾಪ್ತಿಯಾಗಿದೆ.

ಸಂಶೋಧನೆಯ ವಿಶ್ಲೇಷಣೆ :

ರೂಪ ಗಾತ್ರದ ದೃಷ್ಟಿಯಿಂದ ಸಣ್ಣಕಥೆ ಕಾದಂಬರಿಗಿಂತ ತುಂಬಾ ಚಿಕ್ಕದು. ಆದರೆ ಕಾದಂಬರಿ ಮಾಡಬಲ್ಲ ಕಾರ್ಯವನ್ನು ಇದು ಮಾಡಬಲ್ಲದು. ಕಡಿಮೆ ಅವಧಿಯಲ್ಲಿ ಓದಿ ಮುಗಿಸುವ ಇದರ ಪರಿಣಾಮ ಮಹಾಕಾವ್ಯದ ಓದಿಗೆ ಸಮಾನವಾದುದೆಂಬ ಅಭಿಪ್ರಾಯವೂ ಇದೆ. ಒಂದು ವಸ್ತು, ಘಟನೆಯನ್ನೊ ಇಟ್ಟುಕೊಂಡು ನಾಲ್ಕಾರು ಪಾತ್ರಗಳ ಮೂಲಕ ಪರಿಣಾಮಕಾರಿಯಾಗಿ ಮೂಡಿಬರುವ ಕತೆಯ ಕಲಾತ್ಮಕತೆ ತುಂಬಾ ಕುಸುರಿನಿಂದ ಕೂಡಿದ್ದಾಗಿರುತ್ತದೆ. ಆಧುನಿಕ ಕಾಲದಲ್ಲಿ ಪಾಶ್ಚಾತ್ಯರಿಂದ ಪ್ರೇರಣೆ ಹೊಂದಿ ಕನ್ನಡದಲ್ಲಿ ಬೇರೊಂದು ಮೈಯ್ಯನ್ನು ಪಡೆದುಕೊಂಡು ಸಾಹಿತ್ಯರಂಗ ಪ್ರವೇಶಿಸಿದ ಸಣ್ಣಕಥೆಯನ್ನು ಕುರಿತು ಪಾಶ್ಚಾತ್ಯ –ಪೌರ್ವಾತ್ಯ ವಿದ್ವಂಸರೂ ಚಿಂತನೆ ಮಾಡುತ್ತಾ ಬಂದಿದ್ದಾರೆ. ಅದರ ಸ್ವರೂಪ ಲಕ್ಷಣಗಳನ್ನು ಸೂತ್ರಬದ್ಧವಾಗಿ ಹಿಡಿದಿಡಲು ಪ್ರಯತ್ನಿಸಿದ್ದಾರೆ. ಹೀಗೆ ಸೂತ್ರೀಕರಿಸಿದ ಹಲವು ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಬಹುದಾಗಿದೆ.

ಎಸ್. ವಿ. ರಂಗಣ್ಣ ಅವರು ಸಣ್ಣಕತೆಯನ್ನು 'ಲಂಗತೊಟ್ಟ ದೊರೆಸಾನಿ; ಸೀರೆಯುಟ್ಟು ಮುತ್ತೈದೆಯಾಗಬಯಸುತಿದ್ದಾಳೆ. ಎಂದಿದ್ದಾರೆ. ಬೇಂದ್ರೆಯವರು 'ಸಣ್ಣಕಥೆಯು ಅಲ್ಪಜೀವಿಗಳ ಮಹಾಕಾವ್ಯ ಎಂದಿದ್ದಾರೆ. 'ಸಣ್ಣಕಥೆ ಎಂಬುದು ಒಂದು ರಸಬಿಂದು, ಅದರ ಗುರಿ ಸೂಜಿಯ ಮೊನೆಯಂತೆ ಚೂಪು. ಅದರ ಶೈಲಿಯ ವೇಗ ಜೂಜಿನ ಕುದುರೆಯ ನಾಗಾಲೋಟ. ಅದು ಉಪಯೋಗಿಸಿಕೊಳ್ಳುವ ಮಾತುಗಳು ಅತೀಸ್ವಲ್ಪ. ತೋರಿಸುವ ಸತ್ಯ ಅದ್ಭುತ. ಸಣ್ಣದರಲ್ಲಿ ದೊಡ್ಡದನ್ನು ಅಡಗಿಸುವ, ಸ್ವಲ್ಪದರಲ್ಲಿ ಬಹಳವನ್ನು ಹೇಳುವ ಚತುರ ಕ್ರಿಯೆ ಅದರದು. 'ಸಣ್ಣಕಥೆಯಲ್ಲಿ ಭವದ ಹಿರಿಮೆ ಇರಬೇಕು. ಭಾವದ ನಿರೂಪಣೆ ಸುಂದರವಾಗಿರಬೇಕು. ಎಂದು ಕೃಷ್ಣಮೂರ್ತಿ ಪುರಾಣಿಕರು ಅಭಿಪ್ರಾಯಪಡುತ್ತಾರೆ. ಹೇಗೋ ಕನ್ನಡದಲ್ಲಿ ಸಣ್ಣಕತೆ ಬೆಳೆದಿದೆ. ಅದು ಆಕಾರದಲ್ಲಿ ಚಿಕ್ಕದಾದರೂ ಪರಿಣಾಮದಲ್ಲಿ ಮಹತ್ವದ್ದಾಗಿದೆ.

ಸಣ್ಣಕಥೆಯು ಕಳೆದ 50–60 ವರ್ಷಗಳಲ್ಲಿ ಅದ್ಭುತವಾದ ಮೆಚ್ಚುಗೆಯನ್ನು ಪಡೆದಿದೆದಿದು ತನ್ನದೇ ಆದ ವಿಶಿಷ್ಟವಾದ ತಂತ್ರವನ್ನು

ರೂಪಿಸಿಕೊಂಡಿದೆ. ಘಟನಾ ಪ್ರಧಾನ, ವಾತಾವರಣ ಪ್ರಧಾನ, ಸ್ವಭಾವ ದರ್ಶನಾತ್ಮಕ ಸಣ್ಣಕಥೆಗಳೇ ಅಲ್ಲದೇ ಸಾಮಾಜಿಕ, ಐತಿಹಾಸಿಕ, ತಾತ್ವಿಕ ರಸೋತ್ಪಾದಕ, ಮನೋವಿಶ್ಲೇಷಣಾತ್ಮಕ ಕಥೆಗಳು ಹೇರಳವಾಗಿ ರಚಿತವಾಗಿವೆ. ಇದಿಷ್ಟು ಕಥಾ ಸಾಹಿತ್ಯಕ್ಕೆ ಸಂಬಂಧಿಸಿದ ಹಿನ್ನೆಲೆಯಾದರೆ ಪ್ರಚಲಿತದಲ್ಲಿ ಕನ್ನಡ ಸಣ್ಣ ಕಥಾ ಸಾಹಿತ್ಯ ಎತ್ತ ಸಾಗುತ್ತಿದೆ ಮತ್ತು ಅದಕ್ಕೆ ಪ್ರತಿಸ್ಪಂದನೆ ಹೇಗಿದೆ ಎಂಬುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕಾಗುತ್ತದೆ. ಈವತ್ತು ಕನ್ನಡ ಕಥಾ ಜಗತ್ತು ತುಂಬಾ ಪ್ರಜ್ವಲವಾದ ಸ್ಥಿತಿಯಲ್ಲಿದ್ದರೂ ಮತ್ತು ಸಾಹಿತ್ಯ ಪ್ರಕಾರಗಳಲ್ಲಿ ತುಂಬಾ ದೊಡ್ಡದಾಗಿ ಬೆಳೆದಿದ್ದರೂ ಸಹ ಎಷ್ಟು ಜನರಿಗೆ ಕಥೆಗಳು ತಲುಪಿವೆ? ಎನ್ನುವ ಪ್ರಶ್ನೆ ಬರುತ್ತದೆ. ಇಂದಿನ ಕಥಾಪ್ರಪಂಚ ಎಲ್ಲರಿಗೂ ತಲುಪುವ ದಿಸೆಯಲ್ಲಿ ಬೇಳೆಯುತ್ತಿಲ್ಲವೇನೊ ಎಂದು ಕೆಲವೊಮ್ಮೆ ಎನಿಸದಿರದು. ನವೋದಯದ ಸರಳ ಮಾದರಿ, ಆಮೇಲೆ ಬಂದ ನವ್ಯದ ಮನೋವಿಶ್ಲೇಷಣಾತ್ಮಕ ಕಥಾ ಪ್ರಪಂಚ, ಪ್ರಗತಿಶೀಲದ ಎಡ ಪಂಥೀಯ ಚಿಂತನೆಗಳು, ದಲಿತ ಬಂಡಾಯಪಂಥಗಳ ಖಡ್ಗವಾಗುವ ಕಥಾಪರಂಪರೆಗಳು ಸುಮಾರು ಅರವತ್ತು ವರ್ಷಗಳ ಕಾಲ ಕನ್ನಡ ಜಗತ್ತನ್ನು ಆಳಿದವು. ಇದರಿಂದಾಗಿ ಕಥೆಗಾರನಿಗೆ ಪೂರ್ವಾಗ್ರಹ ಚಷ್ಮಗಳಿಲ್ಲದೇ ನೋಡಬಹುದಾದ ನೇರ ಗ್ರಹಿಕೆಯ ಕಥಾ ಪ್ರಪಂಚ ವೀಕ್ಷಣೆಗೆ ಸಾಧ್ಯವಾಗಲಿಲ್ಲವೇನೋ ಎನಿಸುತ್ತದೆ. ಈ ಪ್ರತಿಯೊಂದು ಚಳವಳಿಗಳ ಹಿಂದೆ 'ಇಸಂ'ಗಳು ಕೆಲಸ ಮಾಡಿವೆ. ಜನರ ನೋವಿಗೆ ಮಿಡಿವ ಪ್ರಾಣಮಿತ್ರ ಆಗಿವೆ. ಆದರೆ 'ಇಸಂ'ಗಳು ಕಥೆಗಳನ್ನು ನೇರವಾಗಿ ಪ್ರವೇಶಿಸಿದ್ದರಿಂದ ಕಥೆಯ ಕುಸುರಿ ಕುಸಿದು ಆಶಯಗಳೇ ಪ್ರಾಬಲ್ಯ ಗಳಿಸಿದವೆಯೇನೋ ಎಂದು ಅನ್ನಿಸದಿರದು.

ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕಾಳಜಿಗಳು ಸೇರ್ಪಡೆಯಾದವು. ಪಂಜೆ ಮಂಗೇಶರಾಯರು, ಮಾಸ್ತಿ, ಸಿ. ಕೆ ವೆಂಕಟರಾಮಯ್ಯ, ಗೊರೂರು, ಸೇಡಿಯಾಪು ಕೃಷ್ಣಭಟ್ಟ, ಎಮ್ ಎನ್ ಕಾಮತ್, ಮುಂತಾದವರು ತಮ್ಮ ಆಕೃತಿಗಳಲ್ಲಿ ಮಾನವೀಯ ಸಂಬಂಧದ ಹುಡುಕಾಟ ನಡೆಸಿದರು. ನಮ್ಮ ಆದರ್ಶಗಳೇನೆಂಬುದನ್ನು ಚಿತ್ರಿಸುವಲ್ಲಿ ಯಶಸ್ಸನ್ನು ಸಾಧಿಸಿದರು. ಹಾಗಾಗಿ ಆ ಕಾಲಘಟ್ಟದ ಕಥಾ ಸಾಹಿತ್ಯದಲ್ಲಿ ಆಕ್ರೋಶ ಅಬ್ಬರ ಕೇಳಿಸಿತು. 'ನವೋದಯ ಕಥಾಸಾಹಿತ್ಯದಲ್ಲಿ ಪ್ರಕಟವಾದ ಉತ್ಕಟತೆ, ಕಲಾತ್ಮಕತೆ, ಪ್ರಗತಿಶೀಲ ಕಾಲಘಟ್ಟದಲ್ಲಿ ಕಂಡುಬರುವುದಿಲ್ಲ. ಆದರೆ ವಾಸ್ತವವಾದ ತನ್ನ ನೆಲೆಯಲ್ಲಿ ಮತ್ತಷ್ಟು ವಿಸ್ತರಿಸಿಕೊಂಡಿದ್ದು ಪ್ರಗತಿಶೀಲ ಕಥಾಸಾಹಿತ್ಯದ ಮಹತ್ವದ ಅಂಶವಾಗಿದೆ. ಮುಖ್ಯವಾಗಿ ಲೇಖಕ ಮತ್ತು ಓದುಗರ ನಡುವೆ ಸಾಮಾಜಿಕ ಪ್ರಜ್ಞೆಯನ್ನು ತೀವ್ರಗೊಳಿಸಿದ್ದು ಪ್ರಗತಿಶೀಲ ಕಥಾಸಾಹಿತ್ಯ. ಆದರ್ಶ ಹಾಗೂ ಅದರ ವ್ಯಕ್ತಿತ್ವ ನಿರ್ಮಾಣ ನವೋದಯ ಸಾಹಿತ್ಯದಲ್ಲಿ ಹೆಚ್ಚು ಪ್ರಾಮುಖ್ಯವನ್ನು ಪಡೆದಿದ್ದರೆ ಸಾಮಾಜಿಕ ಪ್ರತಿಪಾದನೆ ಪ್ರಗತಿಶೀಲ ಕಥಾಸಾಹಿತ್ಯದಲ್ಲಿ ಪ್ರಾಮುಖ್ಯವಾಯಿತು. ಅದರಿಂದಾಗಿ ಬದುಕಿನ ಆದರ್ಶಮಯತೆ ಮತ್ತು ಸಾಮಾಜಿಕ ಪ್ರಜ್ಞೆ– ಇವೆರಡನ್ನೂ ಒಳಗೊಂಡಂತಹ ಕಥಾಸಾಹಿತ್ಯ ನವೋದಯ ಮತ್ತು ಪ್ರಗತಿಶೀಲರ ಕಾಲಘಟ್ಟದಲ್ಲಿ ಮೂಡಿಬಂದಿತು.

ಸ್ವಾತಂತ್ರೋತ್ತರ ಕಾಲಘಟ್ಟದ ಕಥಾಸಾಹಿತ್ಯವೆಂದರೆ ನವ್ಯ ಮತ್ತು ನವ್ಯೋತ್ತರದ್ದು. ಕನ್ನಡ ಭಾಷೆಯನ್ನು ಸೊಗಸಾಗಿ ದುಡಿಸಿಕೊಂಡು ಅಷ್ಟೇ ಮಾದರಿಯ ಕಥೆಗಳನ್ನು ನೀಡಿದವರೆಂದರೆ ನವ್ಯರು. ಅನಂತಮೂರ್ತಿ, ಯಶವಂತಚಿತ್ತಾಲ, ಶಾಂತಿನಾಥದೇಸಾಯಿ, ರಾಮಚಂದ್ರಶರ್ಮ, ಲಂಕೇಶ್ , ತೇಜಸ್ವಿ, ಸದಾಶಿವ, ಬೆಸಗರಹಳ್ಳಿ ರಾಮಣ್ಣ, ಶ್ರೀ ಕೃಷ್ಣ ಆಲನಹಳ್ಳಿ, ಬರಗೂರು, ಟಿ ಎಂ ಸುಬ್ಬರಾಯ, ಜಯಂತ್ ಕಾಯ್ಕಿಣಿ, ಸದಾಶಿವ, ಮೊದಲಾದವರು ಉತ್ತಮ ಕಥೆಗಳನ್ನು ನೀಡಿದರು. ನವ್ಯತೆ ಕನ್ನಡಸಣ್ಣಕಥೆಯ ವಸ್ತು ಶೈಲಿಯಲ್ಲಿ ಬದಲಾವಣೆ ತಂದಿತು. ತಂತ್ರದಲ್ಲೂ ಅನೇಕ ಬದಲಾವಣೆಗಳನ್ನು ಮೂಡಿಸಿತು. ಭಾಷೆಯ ಬಳಕೆಯ ದೃಷ್ಟಿಯಿಂದ ಈ ಕಥೆಗಾರರು ಅಗಾಧವಾದ ಕೆಲಸವನ್ನು ಮಾಡಿದ್ದಾರೆ. ಇವರ ಕೃತಿಗಳಲ್ಲಿ ತಂತ್ರ ಅಭಿವ್ಯಕ್ತಿ, ಅನಿವಾರ್ಯವಾಗಿದೆ. ಅನುಭವವನ್ನು ಅರಗಿಸಿಕೊಂಡು ಅದರಿಂದ ದೂರನಿಂತು ತದಾತ್ಮ್ಯವನ್ನು ಸಾಧಿಸಿ ವಿಮರ್ಶಕ ಪ್ರಜ್ಞೆಯನ್ನು ಇಟ್ಟುಕೊಂಡು ಕೃತಿ ರಚನೆಗೆ ತೊಡಗಿದರು. ವೀರ್ಯವತ್ತಾದ ಶೈಲಿ ಇವರದು. ಜೀವನದಲ್ಲಿ ಮಾರ್ಗದರ್ಶಕವಾಗುವ ಮೌಲ್ಯಗಳುಂಟೇ ಎಂಬುದೇ ಇವರ ಪ್ರಶ್ನೆ. ಆದ್ದರಿಂದ ಸಮಾಜದ ಸಮಸ್ಯೆಗಳಿಗಿಂತ ವಯುಕ್ತಿಕ ಸಮಸ್ಯೆಗಳಿಗೇ ಇವರ ಕಥೆಗಳಲ್ಲಿ ಹೆಚ್ಚು ಒತ್ತು ಬಿತ್ತು. ಇಂತಹ ವಯುಕ್ತಿಕ ಆಲೋಚನೆಗಳು, ಅನುಭವದ ಉತ್ಕಟತೆಯ ಮೂಲಕ ಸಾರ್ವತ್ರಿಕವಾಗಬಲ್ಲುದೆಂಬುದು ಇವರ ಆಶಯವಾಗಿತ್ತು. ಮನಸ್ಸಿನ ಹೊಯ್ದಾಟ–ತೊಯ್ದಾಟಗಳ ರಹಸ್ಯವನ್ನು ಸಂಕೋಚವಿಲ್ಲದೇ ಚಿತ್ರಿಸಿದರು. ಕುತೂಹಲ ಕೆರಳಿಸುವ ನಿರೂಪಣಾ ಕ್ರಮಗಳನ್ನು ಬಿಟ್ಟುಕೊಟ್ಟು ಘಟನೆಗಳ ಹಿಂದಿನ ಧ್ವನಿಯ ಮೇಲೆ ಅನುಭವದ ಅರ್ಥವಿಶ್ಲೇಷಣೆಯ ಮೇಲೆ ಈ ಕಥೆಗಾರರು ತಮ್ಮಗಮನವನ್ನು ಕೇಂದ್ರೀಕರಿಸಿದರು. ಈ ಪ್ರಯತ್ನದಲ್ಲಿ ಘಟನೆಗಳ ತಾರ್ಕಿಕ ಹೊಂದಾಣಿಕೆಯನ್ನು ಉದ್ದೇಶಪೂರ್ವಕವಾಗಿ ನಿರಾಕರಿಸಿದ್ದರು. ದೇವನೂರು, ಮುಂತಾದವರಲ್ಲಿ ಭಾಷೆಯ ವಿವಿದ ಬಗೆಯ ಲಯಗಳನ್ನು ತಮ್ಮ ಕಥಾಸಾಹಿತ್ಯದಲ್ಲಿ ಅನಾವರಣಗೊಳಿಸಿ ಕೃತಿಗಳಿಗೆ ಅನನ್ಯತೆಯನ್ನು ತಂದುಕೊಟ್ಟರು. ಈ ಕಾಲಘಟ್ಟದಲ್ಲಿ ಕನ್ನಡದ ಸಣ್ಣಕಥೆಗಳ ಸುಗ್ಗಿಯನ್ನೇ ಕಾಣಬಹುದು. ಜ್ಞಾನ ಪ್ರವಾಹ ತಂತ್ರದಮೂಲಕ ಘಟನೆ ಹಾಗೂ ಪರಿಸರದ ವಿವರಗಳನ್ನೆಲ್ಲಾ ಸಾಂಕೇತಿಕವಾಗಿ ಬಳಸಿಕೊಂಡು ಅನುಭವ ಅರ್ಥದ ಪದರುಗಳನ್ನು ವಿಸ್ತರಿಸಿದರು. ಹೀಗಾಗಿ ಸಣ್ಣಕತೆ ಕವಿತೆಗೆ ತೀರಾ ಹತ್ತಿರವಾಯಿತು. ಭಾಷೆಯನ್ನು ಅತ್ಯಂತ ಕಾಳಜಿಯಿಂದ ಬಳಸತೊಡಗಿದರು.

ವಾಸ್ತವವಾದ ನಿರ್ಬಂಧವನ್ನು ಮುರಿದು ಮಾನವಶಾಸ್ತ್ರ ಹಾಗೂ ಅಸ್ಥಿತ್ವವಾದಗಳ ಪ್ರಭಾವವನ್ನು ಕಥೆಗಳಲ್ಲಿ ಮೂಡಿಸಿದರು.

ದೇವನೂರು ಮಹಾದೇವ ಅವರ ದ್ಯಾವನೂರು ಕಥಾಸಂಕಲನದ ಪ್ರಕಟಣೆಯ ನಂತರ ದಲಿತ ಸಂವೇದನೆಗಳ ಹೊಸ ದನಿಯೊಂದು ಕನ್ನಡ ಸಣ್ಣಕಥಾವಾಹಿನಿಯನ್ನು ಸೇರಿಕೊಂಡಿತು. ಕನ್ನಡ ಸಾಹಿತ್ಯದಲ್ಲಿ ದಲಿತ ಪ್ರಜ್ಞೆಯ , ತುಳಿತಕ್ಕೊಳಗಾದವರ ಅದುವರೆಗೂ ಅನಾವರಣವಾಗದಿದ್ದ ಬದುಕು, ಆ ಬದುಕಿನ ಸಂಕೀರ್ಣಗಳು, ಕಥೆಯಲ್ಲಿ ಮೈಪಡೆಯತೊಡಗಿದವು. ಹೊಸ ಸಂವೇದನೆಗಳು, ಹೊಸ ಅನುಭವಗಳು, ವಿಶಿಷ್ಟವಾದ ದೇಸೀಯ ಅಭಿವ್ಯಕ್ತಿ, ಆಡುಭಾಷೆಯ ಬಳಕೆಯಿಂದಾಗಿ ಸಣ್ಣಕಥೆ ಹೊಸ ಆಯಮವನ್ನು ಪಡೆದುಕೊಂಡಿತು. ಕುಂ.ವೀ, ಮೊಗಳ್ಳಿ ಗಣೇಶ್, ಅಮರೇಶ ನುಗಡೋಣಿ, ಮೊದಲಾದವರು ಉತ್ತಮ ಕಥೆಗಳನ್ನು ನೀಡಿದರು. ದಲಿತ ಸಂವೇದನೆಯ ಇನ್ನೊಂದು ಮುಖವೇ ಆದ ಬಂಡಾಯ ಸಂವೇದನೆಯ ಕಥೆಗಳೂ ಆನಂತರದಲ್ಲಿ ಕನ್ನಡದಲ್ಲಿ ಪ್ರಕಟಗೊಂಡವು. ಕನ್ನಡದ ಸಂದರ್ಭದಲ್ಲಿ ಮುಸ್ಲಿಂ ಸಂವೇದನೆಯ ಅನೇಕ ಕಥೆಗಾರರೂ ತಮ್ಮ ಸೃಜನಶೀಲತೆಯಿಂದ ಕನ್ನಡ ಸಣ್ಣಕಥೆಯ ಕ್ಷಿತಿಜವನ್ನು ಹಿಗ್ಗಿಸುವಲ್ಲಿ ತಮ್ಮಕಾಣೀಕೆಯನ್ನು ನೀಡಿದರು. ಹೀಗೆ ಕನ್ನಡ ಸಣ್ಣಕಥಾ ಪ್ರಪಂಚ ಹೊಸ ಸಂವೇದನೆಗಳನ್ನು ಆಯಾ ಕಾಲ ಸಂದರ್ಭದ ಯುಗಧರ್ಮವನ್ನು ಒಳಗೊಳ್ಳುತ್ತ ಶ್ರೀಮಂತವಾಗುತ್ತಾ ಸಾಗುತ್ತಿದೆ. ಹೀಗೆ ಸಣ್ಣಕಥೆಯ ಕ್ಷೇತ್ರದಲ್ಲಿ ಅನೇಕ ಕಥೆಗಾರರು ತಮ್ಮ ಸೃಜನಶೀಲತೆಯಿಂದ ಗಮನ ಸೆಳೆದಿದ್ದಾರೆ. ಅಂಥವರಲ್ಲಿ ಕಾಳೇಗೌಡ ನಾಗವಾರ, ರಾಜಶೇಖರ ನೀರಮಾನ್ವಿ, ಎಂ ಎಸ್ ಕೆ ಪ್ರಭು, ರಾಘವೇಂದ್ರ ಖಾಸನೀಸ, ಎಸ್ ದಿವಾಕರ, ಶಾಂತರಸ, ವೀರಭದ್ರ, ಕರೀಗೌಡ ಬೀಚನಹಳ್ಳಿ, ಕೆ ಸತ್ಯನಾರಾಯಣ, ರಾಘವೇಂದ್ರ ಪಾಟೀಲ, ವಿಒವೇಕ ಶಾನಭಾಗ, ಕೆ ವಿ ತಿರುಮಲೇಶ್, ನಾ. ಡಿಸೋಜಾ, ಬಿ. ಸೋಮಸುಂದರ, ರಮೇಶಹುಲ್ಲೆಕೆರೆ, ಕ್ಯಾತನಹಳ್ಳಿ ರಾಮಣ್ಣ, ಬೋಳುವಾರು ಮಹಮದ್ ಕುಂಞ, ಫಕೀರ್ ಮಹಮ್ಮದ್ ಕಟ್ಪಾಡಿ, ಅಬ್ದುಲ್ ರಶೀದ್, ಬಿ ಎಂ ಬಷೀರ್, ಕುಕ್ಕರಹಳ್ಳಿ ಬಸವರಾಜು ಕೇಶವರೆಡ್ಡಿ ಹಂದ್ರಾಳ, ಜಯಂತ್ ಕಾಯ್ಕಿಣಿ, ವಸುದೇಂದ್ರ, ಮೊದಲಾದವರು. ಪಂಜೆಯವರು, ಶ್ರೀನಿವಾಸರಿಂದ ಹಿಡಿದು ಇಂದಿನವರೆಗೆ ಸುಮಾರು ನೂರುವರುಷಗಳ ಕಥೆಗಾರರ ಕೃತಿಗಳು ಕನ್ನಡ ಸಣ್ಣಕತೆ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಹಾಗೆಂದ ಮಾತ್ರಕ್ಕೆ ಸಣ್ಣಕಥಾ ಪ್ರಪಂಚ ಪರಿಪೂರ್ಣವಾಗಿದೆ ಎಂದಲ್ಲ. ಇತ್ತೀಚೆಗೆ ಇತರ ಭಾಷೆಗಳಿಂದ ಅನೇಕ ಕತೆಗಳು ಅನುವಾದವಾಗಿ ಬರುತ್ತಿರುವುದು ಒಂದು ಸಂತೋಷದಾಯಕ ಸಂಗತಿ.

ನವಕರ್ನಾಟಕ ಪ್ರಕಾಶನ ನಿರಂಜನರ ಸಂಪಾದಕತ್ವದಲ್ಲಿ ವಿಶ್ವಕಥಾಕೋಶ ಮಾಲಿಕೆಯಲ್ಲಿ ಅನುವಾದಿತ ಕಥೆಗಳ 25 ಸಂಪುಟಗಳನ್ನು ಪ್ರಕಟಿಸಿರುವುದು ಭಾರತೀಯ ಭಾಷೆಗಳಲ್ಲಿಯೇ ಒಂದು ದಾಖಲೆ. ಹಾಗೆಯೇ ಕನ್ನಡದ ಅನೇಕ ಉತ್ತಮ ಕಥೆಗಳು ಭಾರತೀಯ ಹಾಗೂ ಹೊರ ದೇಶಗಳ ಭಾಷೆಗೆ ಅನುವಾದವಾಗಿರುವುದು ಗಮನಿಸಬೇಕಾದ ಗಮನಿಸಬೇಕಾದ ಅಂಶ. ಇದೆಲ್ಲವನ್ನು ಗಮನಿಸಿದಾಗ ಕನ್ನಡ ಸಣ್ಣಕತೆಗಳಿಗೆ ಉಜ್ವಲ ಭವಿಷ್ಯವಿದೆ ಎನ್ನಬಹುದು. ಕನ್ನಡದಲ್ಲಿ ಸಣ್ಣಕಥೆಗಳು ಕೇವಲ ಪತ್ರಿಕೆಗಳಲ್ಲಿ ಕಾಣುತಿದ್ದ ಕಾಲವೊಂದಿತ್ತು. ಈಗ ಅವು ಹಲವಾರು ರೂಪದ ಸಂಗ್ರಹದಲ್ಲಿ ಕಾಣುತ್ತಿವೆ. ಲೇಖಕರು ಹೊರತರುವ ಸಂಗ್ರಹಗಳಲ್ಲದೇ ಪ್ರಸಿದ್ದ ಲೇಖಕರ ಪ್ರಾತಿನಿಧಿಕ ಕಥೆಗಳ ಸಂಗ್ರಹಗಳೇ ಹೊರಬರುತ್ತಿವೆ. ಕನ್ನಡ ಸಾಹಿತ್ಯ ಪರಿಷತ್ತು ಉತ್ತಮ ಕಥೆಗಳನ್ನು ಆಯ್ದು ಪ್ರಕಟಿಸಿದೆ. ನ್ಯಾಷನಲ್ ಬುಕ್ ಟ್ರಸ್ಟ್, ಕೇಂದ್ರ ಸಾಹಿತ್ಯ ಅಕಾಡೆಮಿ ಉತ್ತಮ ಸಣ್ಣಕಥೆಗಳ ಸಂಗ್ರಹಗಳನ್ನು ತಂದಿವೆ. ಇತ್ತೀಚಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಶತಮಾನದ ಸಣ್ಣ ಕಥೆಗಳು ಎಂಬ ಸಂಕಲನ ಗ್ರಂಥವನ್ನು ಪ್ರಕಟಿಸಿದೆ. ಸಾಲದ್ದಕ್ಕೆ ಒಬ್ಬನೇ ಲೇಖಕನ ಆಯ್ದಕತೆಗಳ ಸಂಕಲನವೂ ಬರುತ್ತಿವೆ. ವಿವಿಧ ಲೇಖಕರ ಕಥೆಗಳನ್ನೊಳಗೊಂಡ ಬೃಹತ್ ಕಥಾಸಂಕಲನಗಳೂ ಈಚೆಗೆ ಬೆಳಕು ಕಂಡಿವೆ. ಇದಲ್ಲದೇ ಕನ್ನಡ ನಾಡಿನ ವಿವಿಧ ಲೇಖಕಿಯರ ಕಥೆಗಳ ಸಂಕಲನಗಳೂ ಹೊರಬಂದಿವೆ ಬರುತ್ತಿವೆ ಕೂಡಾ. ಇದಕ್ಕೆ ಪತ್ರಿಕೆಗಳ ಪ್ರೋತ್ಸಾಹವೂ ಮುಂದುವರೆದಿದೆ. ಇಂದು ಯಾವ ಪತ್ರಿಕೆಯೂ ಕಥೆಗಳನ್ನು ಪ್ರಕಟಿಸದೇ ಇಲ್ಲ. ಎಲ್ಲಾ ಪತ್ರಿಕೆಗಳಲ್ಲೂ ಸಣ್ಣಕಥಾವಿಭಾಗ ಇದ್ದೇಇದೆ. ಒಂದು ದೃಷ್ಟಿಯಿಂದ ಸಣ್ಣಕಥೆಗಳು ಇಷ್ಟೊಂದು ಪ್ರಮಾಣದಲ್ಲಿ ಹೊರಬರಲು ನಾಡಿನ ಪತ್ರಿಕೆಗಳು ಮಹತ್ವಪೂರ್ಣ ಪಾತ್ರವಹಿಸಿವೆ. ಕೆಲವು ಪತ್ರಿಕೆಗಳು ವಿಶೇಷ ಸಂದರ್ಭಗಳಲ್ಲಿ (ದೀಪಾವಳಿ ವಿಶೇಷಾಂಕ, ಯುಗಾದಿ ವಿಶೇಷಾಂಕ, ಇತ್ಯಾದಿ.) ಆಕರ್ಷಕ ಮೊತ್ತದ ಬಹುಮಾನಗಳನ್ನಿಟ್ಟು ಉತ್ತಮ ಸಣ್ಣಕತೆಗಳನ್ನಿಟ್ಟು ಉತ್ತಮ ಸಣ್ಣಕಥೆಗಳನ್ನು ಆಹ್ವಾನಿಸುತ್ತಿವೆ. ಅಲ್ಲದೆ ಹಲವಾರು ಸಾಹಿತ್ಯಕ ಸಂಘಸಂಸ್ಥೆಗಳು ಆಗಾಗ್ಗೆ ಸ್ಪರ್ದೆಯನ್ನು ಏರ್ಪಡಿಸಿ ಸಣ್ಣಕತೆಗಳನ್ನು ಆಹ್ವಾನಿಸುತ್ತಿವೆ. ಈ ಎಲ್ಲಾ ಕಾರಣಗಳಿಂದ ಸಣ್ಣ ಕಥಾಪ್ರಪಂಚ ಸಮೃದ್ದವಾಗುತ್ತಾ ಸಾಗಿದೆ. ಭಾರತದಾದ್ಯಂತ ನಾವು ಕಥಾ ಜಗತ್ತನ್ನು ಅವಲೋಕಿಸಿದಾಗ, ಕಥೆ ಕಟ್ಟುವುದನ್ನು ಕಲಿಸಲು ಶಾಲೆ ಎಂಬುದಿಲ್ಲ. ಕಥೆ ಬರೆಯುವುದನ್ನು ಕ್ಲಾಸಿಕ್ ಆಗಿ ಸೃಷ್ಟಿಮಾಡಲು ಹೇಳಿಕೊಡುವ ಯಾವ ಪರಿಕರವೂ ಇಲ್ಲ. ಕಥೆಗಾರರಲ್ಲಿ ನಾನು ಒಲಿದಂತೆ ಹಾಡುವೆ ಎನ್ನುವ ಮಂತ್ರದೊಂದಿಗೆ ಬರೆದವರೇ ಹೆಚ್ಚು. ಕಥಾಜಗತ್ತನ್ನು ಪ್ರವೇಶಿಸುವ ಮುನ್ನ ತಮ್ಮ ಅನುಭವ ಮತ್ತು ಜ್ಞಾನವನ್ನು ಕಥಾಭಿತ್ತಿಯ ಮುಖಾಂತರ ಹೇಳಲು ಆರಿಸಿಕೊಂಡಿದ್ದು ನಮ್ಮ ಹಿರಿಯರು ಸಾಗಿದ ಮಾರ್ಗವನ್ನ ಮಾತ್ರ.

ಕಥೆಗಾರ ಮತ್ತು ಕವಿ ಯಾವಾಗಲೂ ತಮ್ಮದೇ ಆದ ಭ್ರಮೆಯಲ್ಲಿ ಬದುಕುತ್ತಿರುತ್ತಾರೆ. ತಾವು ಬರೆದುದ್ದೆಲ್ಲ ಸರ್ವಶ್ರೇಷ್ಟ ಎನ್ನುವ ನಂಬಿಕೆ ಅವರದು. ಇದು ಯಾಕೆ ಹೀಗಾಗುತ್ತದೆಯೆಂದರೆ ಅವರಿಗೆ ನೀವು ಎಲ್ಲಿ ತಿದ್ದಿಕೊಳ್ಳಬೇಕು ಎಂದು ಹೇಳುವವರು ಯಾರು? ತಾನು ಬರೆದಿದ್ದೇ ಸರ್ವಶ್ರೇಷ್ಟ ಎಂಬ ಭ್ರಮೆಯಲ್ಲಿ ಬದುಕುವ ಕಥೆಗಾರನ ಕಿರೀಟವನ್ನು ಕೆಳಗೆ ಇಳಿಸುವವರು ಯಾರು? ಕನ್ನಡ ಕಥೆಗಳಿಗೆ ಓದುಗರು ಕಡಿಮೆ. ಕಥೆಗಳನ್ನು ಯಾರು ಓದಬೇಕು? ಓದುವವರು ಯಾರೆಂದರೆ ಅದೇ ಕಥೆಗಾರರು, ಕವಿಗಳು, ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟವರು ಓದಬೇಕು. ಇತ್ತೀಚಿಗೆ ಅವರೂ ಓದುವುದನ್ನು ಬಿಟ್ಟಿದ್ದಾರೆ. ಕನ್ನಡ ಸಾಹಿತ್ಯ ಲೋಕದಲ್ಲಿ ವಚನಕಾರರು ಮತ್ತು ತತ್ವಪದಕಾರರು ಸೃಷ್ಟಿಸಿದ ಸಾಮೂಹಿಕ ಪ್ರಜ್ಞೆಯ ಜ್ಞಾನವು ಜನಸಾಮಾನ್ಯರನ್ನು ತಲುಪಿದಂತೆ ಆಧುನಿಕ ಕನ್ನಡ ಕಥೆ, ಕಾವ್ಯ ಜನಸಾಮಾನ್ಯರನ್ನು ತಲುಪುವಲ್ಲಿ ವಿಫಲವಾಗಿದೆ. ಜನಸಾಮಾನ್ಯರನ್ನು ತಲುಪುವಲ್ಲಿ ತೇಜಸ್ವಿ, ಲಂಕೇಶ್, ಮೊದಲಾದವರು ಈ ನಿಟ್ಟಿನಲ್ಲಿ ಕಥೆ, ವಿಜ್ಞಾನಲೋಕದ ಕುರಿತ ಬರವಣಿಗೆಯನ್ನು ಅತ್ಯಂತ ಸರಳವಾಗಿ ಸುಲಲಿತವಾಗಿ ಅರ್ಥವಾಗುವ ಫಾರ್ಮಾಟ್‌ನಲ್ಲಿ ಬಳಸಿದರು. ಇದರ ಮುಂದಿನ ಹಂತದಲ್ಲಿ 2ನೇ ಘಟ್ಟದಲ್ಲಿ ಬಂದ ದೇವನೂರು, ಕುಂವೀ, ಮೊಗಳ್ಳಿ, ನುಗಡೋಣಿ, ಹುಳಿಯಾರ್, ಕಾಯ್ಕಿಣಿ, ಅವರ ತಲೆಮಾರಿನ ಕಥೆಗಳು ಕನ್ನಡ ಕಥಾಪರಂಪರೆಯ ಘನತೆಯನ್ನು ಹೆಚ್ಚಿಸಿದವು. ಇಂದು ಕಥಾವಿಮರ್ಶೆಯೂ ಸಹ ವ್ಯೆಕ್ತಿ ಕೇಂದ್ರಿತ ನೆಲೆಯಲ್ಲಿ ನಡೆಯುತ್ತಿರುವುದು ವಿಷಾದದ ಸಂಗತಿಯೇ. ಅಂತೆಯೇ ಕೆಟ್ಟ ಕಥೆಗಳು ಮುಂಚೂಣಿಗೆ ಬರುತ್ತವೆ. ಆದರೆ ಅವುಗಳ ಆಯುಷ್ಯ ತೀರಾ ಕಡಿಮೆ. ಇಂದಿನ ಕಥೆಗಳಲ್ಲಿ ಆದಿಯ ವೇಗ, ತೂಕ, ಆಳ, ಜೀವನದರ್ಶನ, ವೈವಿಧ್ಯಗಳಿಲ್ಲ. ಕಥೆಗಾರರ ವ್ಯಕ್ತಿತ್ವ ಸ್ಫುಟವಾಗಿ ಪ್ರಕಾಶವಾಗುತ್ತಿಲ್ಲ. ತಂತ್ರಗಾರಿಕೆಯಲ್ಲೂ ಏಕಮುಖವಾದ ಅನುಕರಣೆಯೇ ಕಾಣುತ್ತಿದೆ. ಜೀವನ ಶ್ರದ್ಧೆ ಕಡಿಮೆ. ಅಂಧಾನುಕರಣದ ಫಲವಾಗಿ ನೀರಸತೆಗೆ ಎಡೆಯಾಗಿದೆ. ಇಷ್ಟಾದರೂ ಈಗ ರಚಿತವಾಗಿರುವುಗಳಲ್ಲಿಯೇ ಉತ್ತಮ ವರ್ಗದ ಅನೇಕ ಕಥೆಗಳಿವೆ. ವಿಶ್ವದ ಇತರ ಶ್ರೇಷ್ಠ ಕಥೆಗಳೊಂದಿಗೆ ಸ್ಪರ್ದಿಸಬಲ್ಲ ಕಥೆಗಳಿಲ್ಲದಿಲ್ಲ. ಪರಂಪರೆಯನ್ನು ಜೀರ್ಣಮಾಡಿಕೊಂಡು ಬರೆದರೆ ಮತ್ತಷ್ಟು ಸಮರ್ಥ ಕಥೆಗಳು ಬರುವುದರಲ್ಲಿ ಯಾವುದೇ ಅನುಮಾನವಿಲ್ಲ. ಇತ್ತೀಚಿನ ಅನೇಕ ಕಥೆಗಾರರ ಮಹತ್ವಪೂರ್ಣ ಕಥೆಗಳು ಇಂಗ್ಲೀಷ್, ಹಿಂದಿ, ಮರಾಠಿ, ತಮಿಳು, ತೆಲುಗು ಭಾಷೆಗಳಿಗೆ ಪರಿವರ್ತಿತವಾಗಿ ಮನ್ನಣೆ ಪಡೆದುಕೊಂಡಿವೆ.

ಸಂಶೋಧನೆಯ ಫಲಿತಗಳು :

ಒಟ್ಟಿನಲ್ಲಿ ಸಣ್ಣಕಥೆಯು ಪ್ರಾಚೀನ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೆ ಕಾಲಘಟ್ಟ, ಸಂದರ್ಭಗಳಿಗೆ ಅನುಗುಣವಾಗಿ ತನ್ನರೂಪ ದೃಷ್ಟಿ, ಮತ್ತು ಧೋರಣೆಗಳನ್ನು ಬದಲಾಯಿಸಿಕೊಳ್ಳುತ್ತಾ ಬೆಳೆದು ಬರುತ್ತಿದೆ. ಸಮಕಾಲೀನ ಸನ್ನಿವೇಶದಲ್ಲಿಯೂ ಹೊಸ ಹೊಸ ಒಲವುಗಳನ್ನು ಸ್ವೀಕರಿಸುತ್ತಾ ಜನಪ್ರಿಯ ಸಾಹಿತ್ಯ ಪ್ರಕಾರವಾಗಿ ಮುನ್ನಡೆಯುತ್ತಿರುವುದು ಸಣ್ಣಕಥೆಯ ಹೆಗ್ಗಳಿಕೆ. ಈ ಹಿನ್ನೆಲೆಯಲ್ಲಿ ಬದಲಾದ ಕಾಲಘಟ್ಟದಲ್ಲಿ ಹಾಸುಹೊಕ್ಕಾಗಿ ನೆಲೆಯೂರುರುವ ಬಗೆ ಸಣ್ಣಕಥೆಗೆ ಎದುರಾಗಿರುವ ಆತಂಕಗಳೇನು? ಸಣ್ಣಕಥೆಯನ್ನು ಮುಂದುವರಿಸಬೇಕಾಗಿರುವ ಕ್ರಮ, ಪ್ರಸಕ್ತ ಸನ್ನಿವೇಶದಲ್ಲಿ ಪತ್ರಿಕೋದ್ಯಮದಲ್ಲಿ ಸಣ್ಣಕಥೆಯು ಹಾಸುಹೊಕ್ಕಾಗಿ ನೆಲೆಯೂಡಿರುವ ಬಗೆ, ಮೊದಲಾದ ಸಂಗತಿಗಳನ್ನು ಪ್ರಸ್ತುತ ಲೇಖನದ ಮೂಲಕ ಕಾಣಬಹುದಾಗಿದೆ.

ಪರಾಮರ್ಶನ ಸಾಹಿತ್ಯ :

1. ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳು– ಲೇಖಕರು: ಡಾ. ಜಿ. ಆರ್. ತಿಪ್ಪೇಸ್ವಾಮಿ., ಪ್ರಕಟಣೆ: ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ., ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮುಕ್ತಗಂಗೋತ್ರಿ, ಮೈಸೂರು.
2. ಸ್ವರ್ದಾ ಶ್ರೇಯಸ್ಸು– ಕನ್ನಡ ಉಪನ್ಯಾಸಕರ ನೇಮಕಾತಿ ಕೈಪಿಡಿ., ಲೇಖಕರು– ಈರಪ್ಪ ಶಿ ಮಹಾಲಿಂಗಪೂರ., ಪ್ರಕಾಶಕರು: ಅರವಿಂದ್ ಇಂಡಿಯಾ., 6ನೇ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು
3. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ– ಸಂಪಾದಕರು: ಚಿ.ಸಿ. ನಿಂಗಣ್ಣ., ಪ್ರಕಾಶಕರು: ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಸರಸ್ವತಿ ಗೋದಾಮ, ಗುಲ್ಬರ್ಗಾ
4. ಸಾಹಿತ್ಯ ಭಾರತೀ– ಲೇಖಕರು: ಎನ್ ಅನಂತರಂಗಾಚಾರ್., ಪ್ರಕಾಶಕರು:ಆಡಳಿತಾಧಿಕಾರಿ, ಕನ್ನಡ ಪುಸ್ತಕ ಪ್ರಾಧಿಕಾರ,ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು.
5. ಕನ್ನಡ ಸಾಹಿತ್ಯ ಚರಿತ್ರೆ–ಲೇಖಕರು: ತ ಶು ಶಾಮರಾಯ., ಪ್ರಕಾಶಕರು:ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ., ಗೋಕುಲಂ 3 ನೇ ಹಂತ, ಮೈಸೂರು
6. ಕನ್ನಡ ಸಾಹಿತ್ಯ ಸಂಜೀವಿನಿ– ಲೇಖಕರು: ಶಿವಶರಣಪ್ಪ ಮೋತಕಪಳ್ಳಿ., ಪ್ರಕಾಶಕರು: ಮೋತಕಪಳ್ಳಿ ಪ್ರಕಾಶನ., ಸಿದ್ದೇಶ್ವರ ನಗರ, ಗಾಜಿಪುರ, ಗುಲ್ಬರ್ಗಾ
7. ಅಂತರ್ಜಾಲದ ಮಾಹಿತಿ

ಖಂಡಕಾವ್ಯದಲ್ಲಿ ಮುಟ್ಟಿನ ಅಂಶಗಳು

***

ಡಾ. ಚಿಕ್ಕಣ್ಣ. ಬಿ. ಎಸ್.
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬ್ಯಾಡಗಿ
chikkannabs@gmail.com

ನಾಗರೀಕ ಸಮಾಜ ಅಸ್ತಿತ್ವ ಪಡೆದಾಗಿನಿಂದಲೂ ಸಾಮಾಜಿಕ, ಸಾಂಸ್ಕೃತಿಕ ಸ್ತರಗಳನ್ನು ದಾಟಿ ಬಂದಿದೆ. ವಿಷಪ್ರವಾಹದಂತೆ ಜಾತಿಪದ್ಧತಿ ರೂಢಿಯಲ್ಲಿದ್ದು ಅದರ ತುತ್ತ ತುದಿಯೇ ಅಸ್ಪೃಶ್ಯತೆಯಾಗಿದೆ. ಶ್ರೇಣೀಕೃತ ಜಾತಿವ್ಯವಸ್ಥೆ ಮತ್ತು ಅದರೊಳಗಿನ ಅಸ್ಪೃಶ್ಯತೆಯಿಂದ ಇಪ್ಪತ್ತೊಂದನೆ ಶತಮಾನದಲ್ಲು ಮತ್ತಷ್ಟು ವಿಕೃತಗೊಂಡು ಹೊಸ ಸ್ವರೂಪದಲ್ಲಿದೆ. ಜಾತಿಶ್ರೇಷ್ಠತೆಯ ವ್ಯಸನ ಮಹಿಳಾ ಸಮೂಹ ಮತ್ತು ಅಸ್ಪೃಶ್ಯರನ್ನು ನಿಕೃಷ್ಟವಾಗಿ ಕಂಡಿದೆ. ಆರ್ಥಿಕ ಅಭಿವೃದ್ಧಿಯಾಗಲಿ, ನಗರೀಕರಣವಾಗಲಿ ಸಮಾಜದ ರೂಢಿಗತ ಪಿತೃ ಪ್ರಾಧಾನ್ಯತೆ, ಲಿಂಗತಾರತಮ್ಯ, ದೌರ್ಜನ್ಯ ಮತ್ತು ಸ್ಪೃಶ್ಯ ಅಸ್ಪೃಶ್ಯತೆಯ ಮೂಲಭೂತ ಮನಸ್ಥಿತಿಯನ್ನು ಬದಲಿಸಲಾಗಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ರಾಷ್ಟ್ರೀಯತೆ, ಮತ, ಧಾರ್ಮಿಕ, ಜಾತಿ, ಭಾಷೆ, ಪ್ರಾದೇಶಿಕ, ಆಧ್ಯಾತ್ಮಿಕ ಮತ್ತು ಸೈದ್ಧಾಂತಿಕತೆಗಳಾಗಿದ್ದು ಉಸಿರುಗಟ್ಟುವಂತೆ ಮಾಡಿವೆ. ಮಹಿಳಾ ಮತ್ತು ಜಾತಿ ದೌರ್ಜನ್ಯಗಳ ಬಗ್ಗೆ ಆಧುನಿಕ ಬೌದ್ಧಿಕವಲಯದ ಸ್ಪಂದನೆ ಮತ್ತು ಪ್ರತಿಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಅಂಶ ಮತ್ತಷ್ಟು ಸ್ಪಷ್ಟವಾಗುತ್ತದೆ.

ಜಾತಿಪದ್ಧತಿ ಹುಟ್ಟು ಪಡೆದು, ಯಾವ ಹಂತದಲ್ಲಿ ಅಸ್ಪೃಶ್ಯತೆ ತಲೆದೋರಿತು ಎಂಬುದನ್ನು ಕರಾರುವಕ್ಕಾಗಿ ಹೇಳಲು ಆಗದಿದ್ದರೂ ಲಭ್ಯ ಆಧಾರಗಳಿಂದ ವಿಶ್ಲೇಷಣೆಗೆ ಒಳಪಡಿಸಬಹುದು. ಆರ್ಯರು ಭಾರತಕ್ಕೆ ಬರುವಮುಂಚೆ ಮೂಲನಿವಾಸಿಗಳು ನೆಲಸಿದ್ದರು. ಯುದ್ಧ ಕೌಶಲದಲ್ಲಿ ನಿಪುಣರಾದ, ವ್ಯಾವಹಾರಿಕ ಜ್ಞಾನವುಳ್ಳ ಆರ್ಯರ

ದಾಳಿಗೆ ಮೂಲನಿವಾಸಿಗಳು ಸೋತರು. ತಮ್ಮನ್ನು ಶ್ರೇಷ್ಠರೆಂದು ಕರೆದುಕೊಂಡು ಮೂಲನಿವಾಸಿಗಳನ್ನು ದಸ್ಯುಗಳೆಂದು ಸಂಬೋಧಿಸಿದ್ದಲ್ಲದೆ ರಾಕ್ಷಸರೆಂದು ಹೆಸರಿಸಿದರು. ಅಲ್ಪಸಂಖ್ಯಾತರಾಗಿದ್ದ ಆರ್ಯರು ತಮ್ಮದಾದ ದೇಶ ಕೋಶಗಳನ್ನು ಕಟ್ಟಿಕೊಳ್ಳಲು, ಮೂಲನಿವಾಸಿಗಳನ್ನು ಹತ್ತಿಕ್ಕಲು ನಿರಂತರ ಪ್ರಯತ್ನಗಳನ್ನು ನಡೆಸಿದರು. ಅದರ ಮೊದಲ ಪ್ರಯತ್ನವೇ 'ಶ್ರಮ ವಿಭಜನೆ'. ಅದೇ ಚಾರಿತ್ರಿಕವಾದ 'ವರ್ಣಪದ್ಧತಿ'. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ. ನಾಲ್ಕು ವರ್ಣಗಳನ್ನು ಆರ್ಯರು ತಮ್ಮ ಅನುಕೂಲಕ್ಕಾಗಿ ಸೃಷ್ಟಿಸಿಕೊಂಡರು. ಆರ್ಯರ ದಮನ ನೀತಿಗೆ ಇಲ್ಲವೆ ಅವರ ಜೀವನ ವಿಧಾನಗಳಿಗೆ ಬೆರಗಾದ ಮೂಲನಿವಾಸಿಗಳು ಆರ್ಯರೊಂದಿಗೆ ಸಂಘರ್ಷದ ಮೂಲಕ ಅಥವಾ ಸಾಮಿಪ್ಯದ ಮೂಲಕ ಸಂಪರ್ಕವನ್ನಿಟ್ಟುಕೊಂಡಿದ್ದರು. ಆರ್ಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಲು ಪ್ರಯತ್ನ ನಡೆಸಿ ಸಫಲತೆ ವಿಫಲತೆಗಳೆರಡನ್ನು ಅನುಭವಿಸಿದ್ದಾರೆ. ಆರ್ಯರ 'ವರ್ಣನೀತಿ'ಯ ಕ್ರಮಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳಲು ಪ್ರಾರಂಭಿಸಿದ್ದೇ ಇಂದು ಕಿತ್ತುತಿನ್ನುತ್ತಿರುವ 'ಜಾತಿಪದ್ಧತಿ'ಗೆ ನಾಂದಿಯಾಯಿತು. ಸಮಾಜ ಜಾತಿ–ಉಪಜಾತಿಗಳಾಗಿ ಒಡೆಯುತ್ತ ಹೋಗಿ ಮನುಷ್ಯ ಸಂಬಂಧಗಳನ್ನು ನಾಶಮಾಡಿಕೊಂಡು ಜಡವಾಗುತ್ತ ಹೋಯಿತು.

ಜಾತಿಪದ್ಧತಿಯಿಂದ ಚಾಲ್ತಿಗೆ ಬಂದ 'ಅಸ್ಪೃಶ್ಯತೆ' ಆಚರಣೆ ಸಾವಿರಾರು ವರ್ಷಗಳಿಂದಲೂ ಇದೆ. ಅಸ್ಪೃಶ್ಯತಾ ಆಚರಣೆಯಿಂದ ಅಮಾನವೀಯ ಪರಿಸ್ಥಿತಿ ನಿರ್ಮಾಣವಾಗಿ ಸಮಾಜದ ಆಂತರಿಕ ಬದುಕು ನಾಶವಾಗುತ್ತದೆಂದು ಎಚ್ಚೆತ್ತುಕೊಂಡು ಶ್ರೀಸಾಮಾನ್ಯನ ಒಳಿತಿಗಾಗಿ ಹೋರಾಡಿದ ಕೆಲವರಾದರೂ ಇತಿಹಾಸದಲ್ಲಿದ್ದಾರೆ. ಅಂತವರಲ್ಲಿ 'ಗೌತಮ ಬುದ್ಧ' ಮೊದಲನೆಯವನು. ದೊಡ್ಡಪ್ರಮಾಣದಲ್ಲಿ ಚಳುವಳಿ ಮಾಡದಿದ್ದರೂ ಜನಸಾಮಾನ್ಯರ ಸಂವೇದನೆಗಳಿಗೆ ಸ್ಪಂದಿಸಿ ವೈದಿಕಾಚರಣೆಗಳ ವಿರುದ್ಧವಾಗಿ ದನಿಯೆತ್ತಿದನು. ಮನುಷ್ಯರಲ್ಲಿ ಸಮಾನತೆಯನ್ನು ಕಾಣಲು ಹಂಬಲಿಸಿ ಬೌದ್ಧಧರ್ಮ ಸ್ಥಾಪಿಸಿದನು. ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಯ ವಿರುದ್ಧ ಪ್ರಖರವಾಗಿ ಬಸವಣ್ಣ ಹೋರಾಡಿದನು. ಹನ್ನೆರಡನೆ ಶತಮಾನದ ನಂತರ ಇಪ್ಪತ್ತನೆಯ ಶತಮಾನದಲ್ಲೂ ಜಾತಿಪದ್ಧತಿಯ ವಿರುದ್ಧ ಹಲವಾರು ಸುಧಾರಕರು ದನಿಯೆತ್ತಿದ್ದಾರೆ. ಅಸ್ಪೃಶ್ಯತೆಯಿಂದ ನೊಂದವರು ಇಂದಿಗೂ ದಣಿಯುತ್ತಿದ್ದಾರೆ. ಬುದ್ಧ, ಬಸವಣ್ಣ, ಕನಕದಾಸ, ಗಾಂಧಿ, ಅಂಬೇಡ್ಕರ್ ಮತ್ತು ಕುವೆಂಪುರವರ ವಿಚಾರಧಾರೆಯಿಂದ ಪ್ರಭಾವಿತರಾಗಿ ತಾತ್ವಿಕ–ಸೈದ್ಧಾಂತಿಕ, ಆಧ್ಯಾತ್ಮಿಕ–ರಾಜಕೀಯ ನೆಲೆಗಳಲ್ಲಿ ಅಸ್ಪೃಷ್ಯತೆ ನಿವಾರಣೆಗೆ ಇಂದಿಗೂ ಹೋರಾಟಗಳು ನಡೆಯುತ್ತಿವೆ.

ಅಸಮಾನತೆಯಲ್ಲಿದ್ದ ಮನುಷ್ಯ ಸಂಕಟಗಳನ್ನು ನಿವೇದಿಸಿಕೊಂಡು ಬಿಡುಗಡೆ ಪಡೆಯುವಾಗ ಮಾನವೀಯ ನೆಲೆಯನ್ನು ಕಾಣಿಸಲು ತೊಡಗಿಕೊಳ್ಳದಿದ್ದರೆ ಸಾಹಿತ್ಯ ಹುಟ್ಟುತ್ತಿರಲಿಲ್ಲ. ಎಪ್ಪತ್ತರ ದಶಕದಲ್ಲಿ ಅಸಮಾನತೆಯ ವಿರುದ್ಧ ದನಿ ಎತ್ತಿದ್ದರ ಫಲವಾಗಿ ದಲಿತ ಬಂಡಾಯ ಸಾಹಿತ್ಯ ಹುಟ್ಟಿಕೊಂಡಿತು. "ಅಸ್ಪೃಶ್ಯ ಅಥವಾ ದಲಿತ ಎನ್ನುವುದಕ್ಕಿಂತ 'ಮುಟ್ಟಿಸಿಕೊಳ್ಳದವನು' ಎನ್ನುವ ಅವಮಾನ ಇವರನ್ನು ತೀವ್ರವಾಗಿ ಕಾಡಿದೆ. ಮುಟ್ಟಿಸಿಕೊಳ್ಳುವ ಮತ್ತು ಮುಟ್ಟಿಸಿಕೊಳ್ಳದಿರುವ ಸಮುದಾಯಗಳ ಸಂಘರ್ಷದ ರೂಪವೇ ಭಾರತದ ಚರಿತ್ರೆಯಾಗಿದೆ. ಹೀಗಾಗಿ ಮುಟ್ಟಿಸಿಕೊಳ್ಳದಿರುವ ಜಾತಿ ಮತ್ತು ಅಂಥ ಜಾತಿಗಳನ್ನ ಕುರಿತಾದ ಚರ್ಚೆಗಳು ನಿರಂತರವಾಗಿ ನಡೆಯುತ್ತಿವೆ. ಅಂಬೇಡ್ಕರ್ ಅವರು ಈ ಕುರಿತು ಗಂಭೀರವಾಗಿ ಆಲೋಚಿಸಿ 'ಧರ್ಮಗಳ ಬೇರು ಜಾತಿಯಲ್ಲಿ, ಜಾತಿಯ ಬೇರುಗಳು ಅಸ್ಪೃಶ್ಯತೆಯಲ್ಲಿ"[1] ಎಂದು ಅಸ್ಪೃಶ್ಯತೆಯ ಮೂಲವನ್ನು ಗುರ್ತಿಸಿದ್ದರು. ಅಸ್ಪೃಶ್ಯತೆ ಮತ್ತು ಜಾತಿವಿನಾಶ ಈಗಲೂ ಚರ್ಚಿತ ವಿಷಯಗಳಾಗಿವೆ. ಎರಡೂ ಅನುಭವಗಳು ಈಕಾಲಕ್ಕೂ ಆಗುತ್ತಿವೆ. ಎಪ್ಪತ್ತರ ದಶಕವನ್ನು ಸಾಮಾಜಿಕ ಅರಿವಿನ ಕಾಲಘಟ್ಟವೆಂದು ಭಾವಿಸಿದ್ದರೂ ಸ್ಥಾಪಿತ ವ್ಯವಸ್ಥೆಯನ್ನು ಇದ್ದಕ್ಕಿದ್ದಂತೆ ಸರಳಗೊಳಿಸುವುದು ಅಸಾಧ್ಯ. ದಲಿತರು ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ದಮನಕ್ಕೆ ಒಳಗಾಗಿರುವುದರಿಂದ ಅಸಹನೆ, ಅವಮಾನ ಅವರಲ್ಲಿ ಮಡುಗಟ್ಟಿದೆ. ಆದ್ದರಿಂದ ಶೋಷಿತ ಅನ್ಯವರ್ಗಗಳ ಜೊತೆ ಇವರನ್ನು ಪ್ರತ್ಯೇಕಿಸಿ ಗುರ್ತಿಸಲಾಗಿದೆ.

ದಲಿತರಿಗಾದಂತೆ ಅಸ್ಪೃಶ್ಯತೆಯ ಮೊದಲ ಅನುಭವ ಹೆಣ್ಣಿಗಾಗಿದೆ. ಜೈವಿಕ ಕಾರಣಕ್ಕಾಗಿ ಹುಟ್ಟಿನಿಂದಲೂ ಪ್ರತ್ಯೇಕವಾಗಿದ್ದು ಆಚರಣೆಗಳ ನೆಲೆಯಲ್ಲಿ ಧಾರ್ಮಿಕ, ಸಾಂಸ್ಕೃತಿಕ, ಆಧ್ಯಾತ್ಮಿಕವಾಗಿ ಸಂಕಟ ಅನುಭವಿಸಿದ್ದಾಳೆ. ಸಮಾಜ ತನ್ನ ಆಂತರಿಕ ಕ್ರೌರ್ಯವನ್ನು ಮರೆಮಾಚಲು ಸಂಪ್ರದಾಯದ ಹೊದಿಕೆಯನ್ನು ತೊಡಿಸಿದೆ. ಮುಟ್ಟಿನ ಕಾರಣಕ್ಕಾಗಿ ಹೆಣ್ಣು ಅಶುದ್ಧ, ಅಪವಿತ್ರವೆಂದು ಹೇಳಲಾಗಿದೆ. ಮುಟ್ಟನ್ನು ಅಶುದ್ಧವೆಂದು ಸಾರುವ ಮೂಲಕ ಹೆಣ್ಣಿನ ಲೈಂಗಿಕತೆ ಮತ್ತು ಬೌದ್ಧಿಕತೆಯ ಮೇಲೆ ನಿಯಂತ್ರಣ ಸಾಧಿಸಲಾಗಿದೆ. ಆದ್ದರಿಂದ ಅವಳ ಬೌದ್ಧಿಕ ಬೆಳವಣಿಗೆ, ಆತ್ಮವಿಶ್ವಾಸ, ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮಗಳಾಗಿವೆ. ಲಿಂಗ ರಾಜಕಾರಣವು ಮುಟ್ಟನ್ನು ಮೈಲಿಗೆಯಾಗಿ ಮಾಡಿದೆ. ಹೆಣ್ಣು ಹುಟ್ಟಿನಿಂದ ಕೊನೆಯವರೆಗೆ ಅನುಭವಿಸುವ ಅವಮಾನ, ತಾರತಮ್ಯ, ಅಗೌರವಗಳಿಗೆ ಮೂಲ ಕಾರಣ 'ಮುಟ್ಟು' ಆಗಿದೆ.

ಹೆಣ್ಣಿನ ದಮನವೆ ಕುಲದ ಉಚ್ಚ–ನೀಚ ಸ್ಥಿತಿಗಳನ್ನು ನಿರ್ಧರಿಸುವ ಮಾನದಂಡವಾಯಿತು. ಹೊಸದಾಗಿ ಹೇರಲ್ಪಟ್ಟ ಆಚರಣೆಗಳಲ್ಲಿ ಮುಟ್ಟು ಮೈಲಿಗೆ, ಸತಿ ಸಹಗಮನ, ವಿಧವಾ ಪದ್ಧತಿಗಳು ಸೇರಿಕೊಂಡವು. "ಒಂದೆಡೆ ಭಾರತೀಯ ಸಮಾಜದ ವಿವಿಧ ಧರ್ಮ–ಪಂಥ–ಜಾತಿಗಳಲ್ಲಿ ಆಂತರಿಕ ಸಂಘರ್ಷ ನಡೆಯ ತೊಡಗಿರುವಾಗಲೇ, ಇನ್ನೊಂದೆಡೆ ಪ್ರತಿಕೂಲ–ಗ್ರಾಮ–ಸಮುದಾಯದ ನೂರೆಂಟು ದೇವರುಗಳೂ; ಅವರ ಮರೆಸುವ ಗುಡಿ, ಮಠಗಳ ಸಂಖ್ಯೆಯೂ ಹೆಚ್ಚುತ್ತಾ ಹೋಯಿತು. ಹೊರಗಿನಿಂದ ಆಕ್ರಮಣಕಾರರು, ಅವರ ಪಂಥಗಳು, ಆಚರಣೆ ರೂಡಿಗಳೂ ಬಂದ ಮೇಲೂ ಹೆಣ್ಣುಗಳ ಮೇಲಿನ ನಿರ್ಬಂಧ ಮತ್ತಷ್ಟು ಗಟ್ಟಿಯಾಯಿತು. ಉಲ್ಲಂಘನೆಗಳು ಹೆಚ್ಚಿದಂತೆ ಶಿಕ್ಷೆಗಳೂ ಕಠೋರವಾದವು. ಇದೆಲ್ಲದರ ಒಟ್ಟು ಪರಿಣಾಮವೆಂದರೆ ಹೆಣ್ಣನ್ನು ಹೀನಾಯಗೊಳಿಸುವುದು ಮತ್ತು ವಂಚಿಸುವುದು. ಪರಿಣಾಮವಾಗಿ ದೇವತೆಗಳಿಗೂ ಮಹಿಳೆ ಅಸ್ಪೃಶ್ಯಳೆನಿಸಿಕೊಂಡಳು. ಮಡಿಮೈಲಿಗೆ ನೆಪವೊಡ್ಡಿ ಪೂಜೆಗೆ, ಗರ್ಭಗುಡಿಗೆ ಪ್ರವೇಶ ನಿರಾಕರಿಸಲಾಯಿತು. ಮುಟ್ಟು ಸಂಭವಿಸುವ ದಿನಗಳಲ್ಲಿ, ಅದರ ಆಚೀಚಿನ ದಿನಗಳಲ್ಲಿ ಅಸ್ಪೃಶ್ಯಳಾಗಿಯೇ ಉಳಿದಳು. ಕೊನೆಗೆ ಹೆಣ್ಣುದೇವರಿಗೂ ದೂರವೇ ಉಳಿದಳು"[2] ಧರ್ಮಗಳು ಹೆಚ್ಚೆಚ್ಚು ಸಾಂಸ್ಥಿಕಗೊಂಡು ಕಟ್ಟುಪಾಡುಗಳು ಹೆಚ್ಚುತ್ತಾ ಹೋದಂತೆ ಅದರೊಳಗಿಂದ ಹೊಸ ಪಂಥಗಳು ಹೆಣ್ಣಿನ ಸ್ಥಾನಮಾನದ ವಿಷಯದಲ್ಲಿ ಒಂದೇ ರೀತಿ ವರ್ತಿಸಿದವು. ಭಾರತದ ಸಕಲೆಂಟು ಜಾತಿ, ಧರ್ಮಗಳು ಹೆಣ್ಣು–ಗಂಡು ಭೇದಭಾವದ ಮೇಲೆ ಬೆಳೆದವು.

'ಮುಟ್ಟು' ಎಂಬ ಪದ ದಲಿತ ಬರಹಗಾರರನ್ನು ಬಹುವಾಗಿ ಕಾಡಿದೆ. ಅದರ ಬಗ್ಗೆ ಸೂಕ್ಷ್ಮವಾಗಿ ಅಥವಾ ನೇರವಾಗಿಯೇ ವ್ಯಕ್ತಪಡಿಸಿದ್ದಾರೆ. 'ಅಸ್ಪೃಶ್ಯ' ಮತ್ತು 'ಮುಟ್ಟು'ನ್ನು ಇವರು ಒಂದೇ ಅರ್ಥದಲ್ಲಿ ಪರಿಭಾವಿಸಿದ್ದಾರೆ.

"ಬಂದೆನ್ನ ಮುಟ್ಟಿದರೆ ಹುಟ್ಟಿನ ಮುಟ್ಟೆಲ್ಲ
ಸುಟ್ಟು ಹೋದಾವು ತಾಯಿ ಹಟ್ಟೀಲಿ ನೆಲೆಯಾಗು
ಉರಿಮಾರಿ ಮಾರವ್ವ"[3]

ಸಪ್ತಮಾತೃಕೆಯರನ್ನು ಆರಾಧಿಸುವ ಅಸ್ಪೃಶ್ಯ ಒಕ್ಕಲುಗಳು ಹುಟ್ಟಿನಿಂದಲೂ ಸೂತಕದಲ್ಲಿ ಇದ್ದಾರೆ. ಏಳು ಮಂದೆಗಳ ಗೋಳುಸಿರು ತಟ್ಟಿದ ಬಳಿಕ ಭವದ ಜಂತುಗಳು ಹುಟ್ಟಿದವು. ಪ್ರಾಣಿ ಪಕ್ಷಿಗಳನ್ನೆಲ್ಲ ಏಳು ಮಂದೆಮ್ಮಗಳು ಬೆಳಸಿದವು. ಹುಟ್ಟು ಗೆಟ್ಟವರು ಪಾತಾಳ ಕಂಡರು. ನಾಗರೀಕ ಲೋಕದ ಕಣ್ಣಿಗೆ ಬೀಳದೆ ದೇಹವನ್ನೆ ದೇಗುಲವೆಂದು ನಂಬಿಕೊಂಡು ಕಾಲಾತೀತದೊಳಗೆ ಉಸಿರಿಡಿದು ಅಸ್ಪೃಶ್ಯರಾಗಿಯೇ ಬದುಕುತ್ತಿರುವವರಾಗಿದ್ದಾರೆ.

"ಹುಟ್ಟಿನ ಗರ್ಭದೊಳಗಿನ
ಮುಟ್ಟನ್ನು ಕಳೆದು ಬಾರೋ ತಂದೆಯೆ
ಮಣ್ಣಿನಂತೆ ತಣ್ಣಗಿರುವ
ಕೆಂಡದಂತೆ ಉರಿಯುತ್ತಿರುವ
ಜಲಗಣ್ಣಿನಿಂದ ಉಕ್ಕಿ ಬರುವ
ಕಾಲನೆ ಬಕಾಲನೆ
ಕಾಲನೆ ಅಕಾಲನೆ"[4]

ಈ ದೇಹವನ್ನು ಮುಟ್ಟದಿರಿ ಹುಟ್ಟು ಅಸ್ಪೃಶ್ಯತೆಯ ಜಲದಗ್ನಿಯಲ್ಲಿ ಬೆಂದಿದೆ. ವಾಯುವಿನಲ್ಲಿ ಬೆರೆತು ನಿಶ್ಶಬ್ಧವಾದುದಾಗಿದೆ. ರಕ್ತದಲ್ಲಿ ಕಲೆಸಿದ ಅನ್ನವನ್ನು ನುಂಗಿದ ದೇಹ. ದೂರನಿಲ್ಲು. ಮುಟ್ಟಾದ ಹೆಣ್ಣಿನಂತೆ ಜಲವಮುಟ್ಟಿ ಕುಲವಗೆದ್ದು ಬರಬೇಕಾದ ಒತ್ತಡವಿದೆ. ನೆಲದ ಸೃಷ್ಟಿಕರ್ತ ತಮ್ಮ ಕುಲಮೂಲದ ಆದಿಪುರುಷನಾಗಿದ್ದರೂ ಜಾತಿ ಮತ್ತು ಅಸ್ಪೃಶ್ಯತೆಯಿಂದ ದೂರವಿಡಲಾಗಿದೆ. ಆದ್ದರಿಂದ ಅಸ್ತಿತ್ವದ ಇರುವಿಕೆಗಾಗಿ ನೆಲವನ್ನು ಹುಡುಕುತ್ತಿರುವ ದಾರುಣತೆಯಿದೆ.

"ಬನ್ನಿ ಬಂಧುಗಳೆ ಬನ್ನಿ,
ನಿಮ್ಮಂತೆಯೇ ನಾನು ಯೋನಿಜ ಶರೀರನು
ಮುಟ್ಟಿ ನೋಡಿ ಮುಟ್ಟುಗೆಟ್ಟು ನೋಡಿ
ಹುಟ್ಟಿ ನೋಡಿ, ನನ್ನಂತೆ ಹುಟ್ಟಿನೋಡಿ"[5]

ದೇಹವೆಂಬ ದೇಗುಲದಲ್ಲಿ ಮಾಂತ್ರಿಕಶಕ್ತಿಯನ್ನು ಗುರ್ತಿಸುವ ಕವಿ, ಅಸ್ಪೃಶ್ಯರೆಂದು ಪ್ರತ್ಯೇಕಿಸಿ ನೋಡುವುದು ಸರಿಯಲ್ಲವೆನ್ನುತ್ತಾರೆ.

ಪ್ರತಿ ಜೀವರಾಶಿಯು ಯೋನಿಜ ಶರೀರದಿಂದ ಹುಟ್ಟಿದ್ದು ತರಮತವೇಕೆ ಎನ್ನುತ್ತಾರೆ. ಮಾನಸಿಕ ಆಘಾತಕ್ಕೆ ಗುರಿಮಾಡಿರುವದನ್ನು ಖಂಡಿಸುತ್ತ ಅಸ್ಪೃಶ್ಯರಾಗಿ ಹುಟ್ಟಿ ನೋಡಿ, ಮುಟ್ಟು ಗೆಟ್ಟವನನ್ನು ಮುಟ್ಟಿನೋಡಿರೆಂದು ಅಸ್ಪೃಶ್ಯಾನುಭವದ ದಾರುಣತೆಯನ್ನು ಚಿತ್ರಿಸುವರು. ಮುಟ್ಟಿಸಿಕೊಳ್ಳದಿರುವ ನೋವು ಅಪಾರವಾದುದು. ಅದರ ಅನುಭವ ಆಗಬೇಕಾದರೆ ಅಸ್ಪೃಶ್ಯರಾಗಿ ಹುಟ್ಟಿರೆಂದು ಸವಾಲು ಹಾಕುವರು. ಹಾಗೆಯೇ ಪರಸ್ಪರರು ಮುಟ್ಟಿಸಿಕೊಳ್ಳುವ ಮೂಲಕ ಸಮಾನರಾಗುವ ಮಹತ್ವಾಕಾಂಕ್ಷೆಯಿದೆ. ಮನುಷ್ಯನ ಮುಟ್ಟಿಗೂ ಅಕ್ಷರದ ಮುಟ್ಟಿಗೂ ಅಂತರವನ್ನ ಕಂಡುಕೊಂಡಿರುವ ಕವಿ

"ಅಕ್ಷರ ನನ್ನ ಮುಟ್ಟಿತೊ ನಾನು ಅಕ್ಷರ ಮುಟ್ಟಿದೆನೊ ಅಥವಾ
ಅಕ್ಷರ ಮುಟ್ಟಿದ ಬಳಿಕ ನಾನು ಕೆಟ್ಟೆನೊ ನನ್ನ ಮುಟ್ಟಿದ ಬಳಿಕ ಅಕ್ಷರ ಕೆಟ್ಟಿತೊ
ಓ ಅಕ್ಷರವೆ ಕಡೆಗೂ ನಿನ್ನ ಮುಟ್ಟಿದೆನು"

(ದಕ್ಷಕಥಾದೇವಿ ಕಾವ್ಯ ದಕ್ಷಯ್ಯನು ನನ್ನೊಳಗೆ ಇಳಿದು ಲವಣದಂತೆ ಕರಗಿದ ಪರಿ ಎಂತೆಂದರೆ)

"ದಾರಿಯ ನಡಿಗೆಯಲ್ಲಿ ನನಗೆ ಅಕಸ್ಮಾತ್ ಸಿಕ್ಕಿದ ಸಹಜೀವಿ ಅಕ್ಷರ. (ಕನ್ನಡ ಅಕ್ಷರ ಮಾಲೆ) ದಾರಿಮಧ್ಯದಲ್ಲಿ ತಡೆದು ನಿಲ್ಲಿಸಿದ ಅಕ್ಷರ ತನ್ನ ಆತ್ಮಕಥೆಯನ್ನು ಹೀಗೆ ಹೇಳಿತು; ಎಲೆ ಮನುಷ್ಯಜೀವಿಯೆ ಶತಶತಮಾನಗಳ ಕಾಲ ಇಂಡಿಯಾದ ನೆಲದಲ್ಲಿ ನಿನ್ನ ನಾನು ನೋಡದಂತೆ ಬಂಧಿಸಿಡಲಾಗಿತ್ತು. ನಿನ್ನಿಂದ ಮಾತ್ರವಲ್ಲ ಅಖಂಡ ಇಂಡಿಯಾದ ಬಹುಸಂಖ್ಯಾತ ಹೆಣ್ಣು–ಗಂಡು ಜನ ಸಮುದಾಯಗಳು ನನ್ನಕಣ್ಣಿಗೆ ಕಾಣದಂತೆ ಮರೆಮಾಚಲಾಗಿತ್ತು. ನೀನು ಯಾರು ಹೆತ್ತಮಗನೋ ಏನೋ! ನನ್ನನ್ನು ಮುಟ್ಟಿದೆ. ನಿನ್ನ ಸ್ಪರ್ಶಮಾತ್ರದಿಂದಲೆ ನಾನು ಬಂಧಮುಕ್ತನಾದೆ. ಈ ನಾಡಿನ ಅಸ್ಪೃಶ್ಯನೋ, ಸ್ತ್ರೀಯೋ ನನ್ನ ಮುಟ್ಟಿದರೆ ಬಂಧನದಿಂದ ಬಿಡುಗಡೆ ಆಗುವನೆಂಬ ಅರಿವು ಮೈದೋರಿತು. ಬಯಲಿಗೆ ಬಂದೆ. ನಾನು ಯಾವತ್ತಿಗೂ ಕಂಡರಿಯದ ಜಗತ್ತು ನನಗೆ ಕಾಣುತ್ತಿದೆ. ಆಹಾ! ಎಂತಹ ಮಹಾಸ್ಪರ್ಶ, ಎಂತಹ ಮಹಾದರ್ಶನ! ಎಂದು ಅಕ್ಷರವು ಬಹುಬಗೆಯಲ್ಲಿ, ಬಹುವರ್ಣದಲ್ಲಿ ಅಗಣಿತ ಕಣ್ಣುಗಳನ್ನು ತೆರೆದು ನನ್ನೆದುರು ನರ್ತಿಸುತ್ತಿದೆ. ಇದು ಅಕ್ಷರದ ಆತ್ಮಕಥೆಯ ಭಾಗ. ನನ್ನ ಆತ್ಮಕಥೆಯೂ ಅಕ್ಷರದ ಆತ್ಮಕಥೆಯೂ ಏಕೀಭವಿಸಿದ ಫಲ ನನ್ನಕಾವ್ಯ ಪ್ರಯೋಗ"[6] ದಲಿತನೊಬ್ಬ ಅಕ್ಷರವನ್ನು ಮುಟ್ಟಿ ಪವಿತ್ರಗೊಳಿಸಿದನು. ಅವನು ಮುಟ್ಟಿದ್ದರಿಂದ 'ಅಕ್ಷರ ಬಂಧನ'ದಿಂದ ಬಿಡುಗಡೆಗೊಂಡಿತು. ಎನ್ನುವಲ್ಲಿ ಅಕ್ಷರವನ್ನು ಮುಟ್ಟುವ ಪ್ರಕ್ರಿಯೆಯು ವಿಶಿಷ್ಟವಾಗಿದೆ ಹಾಗೂ ಸಾಮಾನ್ಯ ನೆಲೆಯಲ್ಲಿ ಮುಟ್ಟಲು ಸಾಧ್ಯವಿಲ್ಲ. ಯಾರೂ ಮುಟ್ಟದ ಅಕ್ಷರ ಜಗತ್ತಿನ ಪ್ರವೇಶಕ್ಕೆ ತನ್ನದಾದ ಸಿದ್ಧತೆ ಬೇಕೆಂದು ಅಕ್ಷರವನ್ನು ಸಂಕೋಲೆಯಿಂದ ಹೊರತರಲು, ಅನ್ಯರು ಮುಟ್ಟದಿರುವ ಅಸ್ಪೃಶ್ಯತೆಯ ನೋವು ಅಕ್ಷರವನ್ನೂ ಕಾಡಿದೆ.

"ಬಿನ್ನಹಕ್ಕೆ ಬಾಯಾದ ಅಕ್ಷರ, ಮುಟ್ಟು ಮುಟ್ಟು ಅಕ್ಷರ
ನೀ ಮುಟ್ಟದಿರು ಅಕ್ಷರ, ಅವರ ಬಿಟ್ಟು ನನ್ನ ಮುಟ್ಟು
ನನ್ನ ಬಿಟ್ಟು ಅವರ ಮುಟ್ಟು, ಕಟ್ಟಕಡೆಯ ಮನುಷ್ಯನನ್ನು
ಮುಟ್ಟಿ ಹೋಗು ಅಕ್ಷರ"[7]

ಮನುಷ್ಯ ಮನುಷ್ಯರನ್ನು ಮುಟ್ಟುವಲ್ಲಿ ಭೇದವನ್ನು ಗುರುತಿಸುವ ಕವಿ ಅಕ್ಷರವನ್ನು ಆಹ್ವಾನಿಸುವರು. ಅಜ್ಞಾನಕ್ಕೆ, ಅನ್ನಕ್ಕೆ, ದೀವಿಗೆಯಾದ ಅಕ್ಷರವನ್ನು ನೀನಾದರೂ ನನ್ನನ್ನು ಮುಟ್ಟು ಎನ್ನುವರು. ಹಾರವರ ಕೇರಿಯಲ್ಲಿ ಭಿಕ್ಷೆ ಬೇಡುತ್ತೀಯ. ಆದರೆ ಹೊಲೆ ಮಾದಿಗರ ಕೇರಿಯಲ್ಲಿ ಮಿಂಚುಮಾಯೆ ಆಗುತ್ತೀಯ. ಅಂದರೆ ತಳಸಮುದಾಯದವರು ಅಕ್ಷರ ಹಾಗೂ ಶಿಕ್ಷಣ ವಂಚಿತವಾಗಿರು ವುದನ್ನು ಗುರುತಿಸುತ್ತಾ ಶಿಕ್ಷಣವು ಸಮಾಜದ ಕಟ್ಟಕಡೆಯ ಸಮುದಾಯವನ್ನು ಮುಟ್ಟಲಿ ಎಂದು ಆಶಿಸುತ್ತಾರೆ. ಕೆಳಜಾತಿಯವರಿಗೆ ಒಲಿಯದ ಅಕ್ಷರವನ್ನು 'ಮಾಯೆ' ಎನ್ನುತ್ತಾರೆ. ಅಕ್ಷರ ವಂಚಿತರನ್ನಾಗಿ ಮಾಡಿ ಜೀತಕ್ಕಿಟ್ಟ ವ್ಯವಸ್ಥೆಯ ಬಗ್ಗೆ ಆಕ್ರೋಶವಿದೆ. ತಳವರ್ಗದವರ ಹೋರಾಟದಿಂದಾಗಿ ಜೀವವೃಕ್ಷದ ಕೊಂಬೆಗಳಲ್ಲಿ ಫಲಬಿಟ್ಟಿದೆ ಎಂಬ ಆಶಾವಾದವನ್ನೂ ವ್ಯಕ್ತಪಡಿಸುತ್ತಾ

"ಮುಟ್ಟಿ ನೋಡು, ಮುಟ್ಟುಗೆಟ್ಟು ನೋಡು
ಹುಟ್ಟಿನೋಡು ನನ್ನಂತೆ ಹುಟ್ಟಿ ನೋಡು
ಓ ದೇವರೆ! ನೀನು ನನ್ನಂತೆ ಹುಟ್ಟು"[8]

ದಲಿತ ಸಮಾಜದ ನೋವು–ನಲಿವು ತಿಳಿಯಬೇಕಾದರೆ ನೀನು ಕೇವಲ ದೇವರಾದರೆ ಸಾಲುವುದಿಲ್ಲ. ಒಮ್ಮೆಯಾದರೂ ನಮ್ಮಂತೆ ರಕ್ತಮಾಂಸ ಹೊತ್ತ ಸಾಮಾನ್ಯ ವ್ಯಕ್ತಿಯಾಗು, ಅದರಲ್ಲೂ ಶೋಷಿತ ಸಮುದಾಯದ ದಲಿತನಾಗಿ ಹುಟ್ಟಿಬಾ. ತಳಸಮುದಾಯದವರ

ಯಾತನೆ ಎಂತಹದ್ದೆಂದು ಅರ್ಥವಾಗುತ್ತದೆ. ಎಂದು ನೋವನ್ನು ವ್ಯಕ್ತಪಡಿಸುತ್ತಾರೆ. 'ಕಾವ್ಯ ಎನ್ನುವುದು ಒಂದು ಗುಹೆ. ನಾನೇ ಕಟ್ಟಿಕೊಂಡ ಗುಹೆ. ಕಾವ್ಯಗುಹೆಯೊಳಗೆ ನಾನು ತೊದಲುತ್ತೇನೆ. ನನ್ನ ತೊದಲುನುಡಿ ನಿಮಗೆ ಮಾತಾಗಿ ಕೇಳಿಸಲಿ' ಅನಾತ್ಮ ಖಂಡಕಾವ್ಯದ ಪ್ರಾರಂಭದಲ್ಲಿ ತಿಳಿಸುವಂತೆ ಗುಹೆಯೊಳಗೆ ಕೂತು ಕಾವ್ಯವನ್ನು ಧ್ಯಾನಿಸುವರು. ಬಕಾಲನ ಬೆಚ್ಚನೆಯ ಸೆರೆಯಲ್ಲಿರುವ ನಿರೂಪಕ ಸಮಾಜದ ಶೋಷಣೆ ಸಮುದಾಯದ ಮೇಲೆ ಅತೀವವಾಗಿದೆ ಅದಕ್ಕೆ ಉತ್ತರವನ್ನು ನೀಡಲು ಬಾರೆಂದು ಬಕಾಲನನ್ನು ಆಹ್ವಾನಿಸುತ್ತಾರೆ.

'ಮುಟ್ಟು'ವಿನ ಮೂಲಕ ವರ್ತಮಾನದ ಸಂಕಟಗಳನ್ನು ಕಟ್ಟಿಕೊಟ್ಟಿದ್ದಾರೆ. ವರ್ತಮಾನ ಮತ್ತು ಪರಂಪರೆಯ ಶೋಧನೆಗಿಳಿದು ದೇವರನ್ನೇ ಪ್ರಶ್ನಿಸಲಾಗುತ್ತದೆ. ಮುಟ್ಟನ್ನು ಸಮಾಜ ನಿರಾಕರಿಸಿದ್ದು ಅದನ್ನೆ ಸಮುದಾಯದ ಅಸ್ಮಿತೆಯಾಗಿಸುವುದು ಕಂಡುಬರುತ್ತದೆ.

''ಈ ದೇಹ ನನ್ನ ದೇಹ ಇಡೀ ದೇಹ
ಮುಟ್ಟಬಾರದೆಂದು ಕೇಳಿ, ಕೇಳಿ ಕೇಳಿ ಕಟ್ಟಕಡೆಗೆ
ಮುಟ್ಟಬೇಕೆಂದು ಅರಿತು, ಕಾಯವನ್ನು ಕಾಯಕದಿಂದ
ವಿಸರ್ಜಿಸಿದೆ''[9]

ತನ್ನ ದೇಹವನ್ನು ಮುಟ್ಟಬಾರದೆಂದು ಹೇಳಿ ಕೊನೆಗೆ ಯಾಕೆ ಮುಟ್ಟಿಸಿಕೊಳ್ಳಬಾರದೆಂದು ಕೇಳುವ ಕವಿ ಹುಟ್ಟನ್ನು ಸಾರ್ಥಕಪಡಿಸಿಕೊಳ್ಳಲು ದೇಹವನ್ನು ದತ್ತುಕೊಡುವರು. ಆಗಲೂ ಯಾರು ಮುಟ್ಟದಿದ್ದಾಗ ತಮ್ಮ ಚರ್ಮದಿಂದ ಚಪ್ಪಲಿ ಮಾಡಿ ಚಪ್ಪಲಿ ಬಿಡುವ ಜಾಗದಲ್ಲಿ ಬಿಡುವರು. ದೇಹ ಮತ್ತು ಗುಡಿ ಎರಡರಲ್ಲೂ ಶಿವನಿರುವಾಗ ದೇಹವನ್ನು ತ್ಯಜಿಸಲು ಸಾಧ್ಯವೆ. ದೇಹದ ಅಂಗುಲ ಅಂಗುಲವನ್ನು ಶಿವನಿಗೆ ಮಾಲಾರ್ಪಣೆ ಮಾಡುವೆನೆನ್ನುತ್ತಾ ಹುಟ್ಟನ್ನು ಸಾರ್ಥಕಪಡಿಸಿಕೊಳ್ಳುವ ತವಕವಿದೆ. ಸಮಾಜದಿಂದ ಆದಂತಹ ನೋವು ಹತಾಶೆ ಅವಮಾನಗಳಿಂದ ದಲಿತ ಸಮಾಜ ಬೇಸತ್ತಿರುವ ಚಿತ್ರಣವಿದೆ.

ಬದುಕು ನಿರರ್ಥಕವೆಂದು ಸಾಯಲು ನಿರ್ಧರಿಸಿದಾಗ ಅಶರೀರವಾಣಿ ಕೇಳುತ್ತದೆ. ಅದು ಅಧ್ಯಕ್ಷಪೀಠದಿಂದ ರಾಮದಾಸ್ ಕೊಟ್ಟ ಕರೆಯೋಲೆಯಾಗಿರುತ್ತದೆ. ಕವಿಯನ್ನು ಆಹ್ವಾನಿಸುತ್ತ ಪ್ರಾಣಪಕ್ಷಿ ಹಾರಿಬಂತು. 'ಏಳೇಳು ಜನ್ಮಗಳು ಕಳೆದರೂ ಅಳಿದರೂ ನಾನು ನಿನ್ನ ಮುಟ್ಟಿದೆನೆಂದು, ಮುಟ್ಟಿ ಮುಟ್ಟಿ ಮುಟ್ಟಾದೆನೆಂದು ಯಾರಿಗೂ ಹೇಳಬಾರದೆಂದು ಕವಿಯ ಕಿವಿಯೊಳಗೆ ಪಿಸುಗುಟ್ಟುತ್ತದೆ. ವೈಚರಿಕವಾಗಿ ಮುಂದುವರಿದರೂ ಎಲ್ಲರೂ ಮುಟ್ಟಿಸಿಕೊಳ್ಳುವಿಕೆ ಬಗ್ಗೆ ಅಸಹನೆ ತಾಳೆದ್ದಾರೆಂಬ ನೋವು ನಿರೂಪಕರಲ್ಲಿ ಮಡುಗಟ್ಟುತ್ತದೆ. ಭೇದಭಾವ ಇದ್ದೇ ಇದೆ ಹಾಗಾಗಿ

''ನನ್ನನ್ನಾದರೂ ಕರೆದುಕೊ ರುದ್ರ
ಎಲ್ಲಿಯೂ ಸಲ್ಲದವನಾಗಿ, ಇಲ್ಲಿಗೆ ಬಂದಿರುವೆ
ನನ್ನನ್ನಾದರೂ ಕರೆದುಕೊ ರುದ್ರ
ನಾನೇನು ನಿನ್ನ ಮುಟ್ಟುವುದಿಲ್ಲ''[10]

ಅಸ್ಪೃಶ್ಯನನ್ನು ಮುಟ್ಟುದಿರುವ ಅಸಹನೀಯವಾದ ನೋವು, ಸಂಕಟ ಮಡುಗಟ್ಟಿದೆ. ಎಲ್ಲವನ್ನು ಮರೆತು ರುದ್ರಭೂಮಿಗೆ ನಡೆದು 'ನನ್ನನ್ನಾದರೂ ಕರೆದುಕೊ ರುದ್ರ, ಎಲ್ಲಿಯೂ ಸಲ್ಲದವನಾಗಿ ಇಲ್ಲಿಗೆ ಬಂದಿರುವೆ ಕರೆದುಕೊ ನಾನು ನಿನ್ನನ್ನು ಮುಟ್ಟುವುದಿಲ್ಲ' ಎಂದು ಕವಿ ಕೈಜೋಡಿಸಿ ಬೇಡುವರು. ಸ್ವರ್ಗವೆಂಬ ಭ್ರಾಂತಿಗಿಂತ ನರಕದ ಒಂದು ಮೂಲೆಯಲ್ಲಾದರೂ ಜಾಗಕೊಡು. ಹಿಂದಕ್ಕೆ ಮಾತ್ರ ಕಳಿಸಬೇಡ ಎಂಬ ಬೇಡಿಕೆಯಿಡುತ್ತಾರೆ. ಇದಕ್ಕೆಲ್ಲ ಮುಖ್ಯ ಕಾರಣ ಮುಟ್ಟು ಮತ್ತು ಅಸ್ಪೃಶ್ಯತೆಯಾಗಿದೆ.

'ಶ್ರೀಚಂಡಾಲ ಸ್ವರ್ಗಾರೋಹಣಂ'ನಲ್ಲಿ ಮತ್ತೊಂದು ಆಯಾಮದಲ್ಲಿ ಮುಟ್ಟು ಕಂಡುಬರುತ್ತದೆ. ಸಶರೀರ ಸ್ವರ್ಗವೇರುವ ಅಧಮ್ಯ ಆಕಾಂಕ್ಷೆ ಹೊಂದಿದ್ದ ಸತ್ಯವ್ರತನ ಧ್ಯೇಯವನ್ನು ಮೆಚ್ಚುವ ಮಾತಂಗಿ ತಮ್ಮಿಬ್ಬರ ಧ್ಯೇಯದಲ್ಲಿ ಚಂಡಾಲರ ಮರುಹುಟ್ಟು ಅಡಗಿದೆ. ಶೂದ್ರ ಅತಿಶೂದ್ರ ಶ್ರಮಿಕ, ಹೆಣ್ಣು ಇವರಾರಿಗೂ ಮುಕ್ತಿ ಮಾರ್ಗವಿಲ್ಲವೆಂದಳು. ಮಾತಂಗಿಯ ಧ್ಯೇಯವಾದ ಮಾತು, ಆತ್ಮಸ್ಥೈರ್ಯ ಸತ್ಯವ್ರತನಿಗೆ ಸ್ವರ್ಗವೂ ಸಾಟಿಯಿಲ್ಲವೆನಿಸಿತು.

''ನಿಮ್ಮೊಡನಾನಿರ್ಪೆ ನಿಮ್ಮ ಸ್ವರ್ಗಾರೋಹಣಂ
ಕೇವಲ ಎಮ್ಮೀರ್ವರ ಸ್ವರ್ಗಾರೋಹಣಮಲ್ತು
ಮುಟ್ಟು ಮುಟ್ಟುದಿರ್ ಎಂಬ ಬಾಳೆಮಗೆ ಸಾಕು
ಇದಯೋಧ್ಯಗಂಟಿದ ಕಲಂಕಮಲ್ತು
ಭರತಖಂಡದ ದಾರಿದ್ರ್ಯಂ''[11]

ಸತ್ಯವ್ರತನು ಸಶರೀರವಾಗಿ ಸ್ವರ್ಗವೇರುವ ಬಯಕೆಯನ್ನು ವ್ಯಕ್ತಪಡಿಸಿದಾಗ ನಿಮ್ಮೊಡನೆ ನಾನಿರುವೆನೆಂದು ನೈತಿಕ ಸ್ಥೈರ್ಯವನ್ನು ತುಂಬಿದದಳು. ಸ್ವರ್ಗಾರೋಹಣ ಕೇವಲ ಮಾತಂಗಿ ಸತ್ಯವ್ರತರ, ಅಯೋಧ್ಯೆಯ ಮಾತಲ್ಲ. ಭರತಖಂಡಕ್ಕೆ ಅಂಟಿದ ಜಾತಿ, ಮುಟ್ಟು ಎಂಬ ಶಾಪವನ್ನು ತೊಳೆದು ಎಲ್ಲರಿಗೂ ದಕ್ಕುವಂತಾಗಬೇಕು. ಸಮಸ್ತ ಮನುಕುಲಕ್ಕೆ ಮಾದರಿಯಾಗಬೇಕು. ಮುಟ್ಟಿನ ಅಂಟಿನ ಕಳಂಕದ ತರತಮ ಸತ್ಯವ್ರತನಿಂದ ಸರಿಯಾಗಬೇಕೆಂಬ ಆಶಯವು ಆಧುನಿಕ ಧೋರಣೆಯನ್ನು ಪ್ರತಿಪಾದಿಸುತ್ತದೆ.

ಅಸ್ಪೃಶ್ಯತೆಯ ಶಾಪಕ್ಕೆ ಕೆಳಜಾತಿ ಬಲಿಯಾಗಿರುವುದು 'ಆಸಾದಿ' ಕಾವ್ಯದಲ್ಲಿದೆ. ಅಸ್ಪೃಶ್ಯತೆಯ ಕಾರಣಕ್ಕೆ ಕದುರನ ಕುಲವು ಕೊಲ್ಲಲ್ಪಡುತ್ತದೆ. ಜಾತಿಭೇದಿಂದಾದ ಅನಾಹುತವನ್ನು ವರ್ತಮಾನದ ನೆಲೆಯಲ್ಲಿಟ್ಟು ಅನುಸಂಧಾನ ನಡೆಸುತ್ತಾರೆ.

"ನಲ್ಲಕದುರನ ಜೀವಕೆ
ಕಂಟಕವಾದಳು ಮಾರಿ
ಉರಿಹಚ್ಚಿ ಜಾತಿಯ
ಭೇದದಲಿ ಮರುಸೃಷ್ಟಿ
ಒಳಗೊಳಗೆ ರಕ್ತ ಕುದಿತ
ರಕ್ತ ಬಿಂದುವಿನಲ್ಲಿ ಜಾತಿ ಸೆಳೆತ"[12]

ಮುಟ್ಟುವಿಕೆಯಿಂದಾಗಿ ತನ್ನಕುಲದ ಎಲ್ಲರನ್ನು ಪುರೋಹಿತಶಾಹಿ ಹತ್ಯೆಗೈದಾಗ ಕಿರಿಯಮಗ ಆಸಾದಿ ಮಾರಮ್ಮನ ಆಸೆಯಂತೆ ಬದುಕುಳಿಯುವನು. ತಂದೆ ಮತ್ತು ಸೋದರರನ್ನು ಕಳೆದುಕೊಂಡ ನೋವಿನ ಹಿನ್ನೆಲೆಯಲ್ಲಿ ತಾಯಿ ಮಾರಮ್ಮನ್ನು ಕಟುವಾದ ಶಬ್ದಗಳಿಂದ ನಿಂದಿಸುತ್ತಾ, ಬೈಯುತ್ತಾ ಮಾರಮ್ಮನ ಆಸೆಯನ್ನು ನೆರವೇರಿಸುವನು. ವರ್ಣಸಂಕರದಿಂದಾಗಿ ಆಸಾದಿ ಸೃಷ್ಟಿಗೊಂಡಿದ್ದಾನೆ. ಪರಂಪರಾಗತವಾಗಿ ಅವನನ್ನು ಅತಿಯಾಗಿ ಕಾಡಿರುವುದು ಮುಟ್ಟು ಅಥವಾ ಅಸ್ಪೃಶ್ಯತೆ ಎಂಬುದನ್ನು ಕಾವ್ಯ ಅನಾವರಣ ಮಾಡುತ್ತದೆ.

ಲಕ್ಷ್ಮೀನಾರಾಯಣಸ್ವಾಮಿಯವರ 'ಜಾಲಿಮರದ ಜೋಳಿಗೆಯಲ್ಲಿ' ಮುಟ್ಟಿನ ಕಳಂಕವನ್ನು ಅಳಿಸಲು ಪುರಾಣ ಪಾತ್ರಗಳನ್ನು ಆಹ್ವಾನಿಸುತ್ತದೆ.

"ಈ ದೇಹವು ಮುಟ್ಟು ಈ ಆತ್ಮವು ಮುಟ್ಟು
ಮುಟ್ಟು ಪರಮಾತ್ಮನೆ ಮುಟ್ಟು.....
ಮುಟ್ಟಿ ದ್ರೋಣರೆ ಎನ್ನ ಮುಟ್ಟನ್ನು ಒಮ್ಮೆ
ಮುಟ್ಟಿ ಕಣ್ವರೆ ಎನ್ನ ಚಟ್ಟನ್ನು ಒಮ್ಮೆ
ಮುಟ್ಟಿ ವಸಿಷ್ಠರೆ ಎನ್ನ ಆತ್ಮವನು ಒಮ್ಮೆ
ಮುಟ್ಟಿ ಗೌತಮರೆ ಎನ್ನ ದೇಹವನು ಒಮ್ಮೆ
ಮುಟ್ಟಿ ವಿಶ್ವಾಮಿತ್ರರೆ ಎನ್ನ ನೆರಳನು ಒಮ್ಮೆ"[13]

ಪ್ರತಿ ಜೀವಿಯೂ ಒಂದನ್ನು ಮುಟ್ಟಿ ಮತ್ತೊಂದರ ಸಾರ್ಥಕ್ಯ ಪಡೆಯುವಾಗ ಮುಟ್ಟಿನಲ್ಲಿ ಏನಿದೆ? ಎಂದು ಪ್ರಶ್ನಿಸುವರು. ಮೇಲ್ವರ್ಗದವರ ಮುಟ್ಟಿನಿಂದಲೇ ಏಕಲವ್ಯ, ಅಹಲ್ಯೆ, ಶಾಕುಂತಲೆ, ತಾಟಕಿ, ಹರಿಶ್ಚಂದ್ರರು ನೋವಿನಿಂದ ತತ್ತರಿಸಿದರು. ನೀವು ಮುಟ್ಟಿ ಮುಟ್ಟಾಗಿಸಬೇಡಿರೆಂದು, ಮೇಲ್ವರ್ಗದವರ ಮುಟ್ಟು ಅಪವಿತ್ರ ಎಂಬುದನ್ನು ದಾಖಲಿಸುತ್ತಾರೆ. ಮುಟ್ಟಿನ ಸೂತಕ ಮತ್ತು ಅಸ್ಪೃಶ್ಯತೆಯ ನಾನಾಮುಖಗಳನ್ನು ಅನಾವರಣಗೊಳಿಸುತ್ತದೆ. ಪೌರಾಣಿಕ ಪಾತ್ರಗಳನ್ನು ಸಂಬೋಧಿಸುತ್ತಾ, ದೇಶದಲ್ಲಿ ದಮನಕ್ಕೊಳಗಾಗಿ ನೋವು ಸಂಕಟಗಳಲ್ಲಿ ನರಳಿದವರ ಸುದೀರ್ಘ ಚರಿತ್ರೆಯನ್ನ ವಿಮರ್ಶಿಸಿ ಮುಂದೆ ತಂದಿದ್ದಾರೆ. ಅಸ್ಪೃಶ್ಯತೆ, ತಾರತಮ್ಯಗಳು ಅವಕಾಶ ವಂಚನೆಗಳನ್ನು ಕಾವ್ಯ ಎತ್ತಿ ತೋರಿಸುತ್ತದೆ.

ಕೆ.ಬಿ.ಸಿದ್ದಯ್ಯ, ವಡ್ಡಗೆರೆ ನಾಗರಾಜಯ್ಯ, ರವಿಕುಮಾರ್‌ನೀಹ, ಹೆಚ್. ಲಕ್ಷ್ಮೀನಾರಾಯಣರ ಕಾವ್ಯಗಳು ಮೇಲ್ನೋಟಕ್ಕೆ ಒಂದು ನಿರ್ದಿಷ್ಠ ಜಾತಿಕೇಂದ್ರಿತವಾಗಿ ಕಂಡರೂ ಅದನ್ನು ದಾಟಿ ಮಾನವೀಯಲೋಕ ಕಾಣೆಯಾಗಿರುವ ಆತಂಕವನ್ನು ದೂರಮಾಡುವ ತುಡಿತದ ಆಶಯವನ್ನು ವ್ಯಕ್ತಪಡಿಸುತ್ತವೆ. ಖಂಡಕಾವ್ಯಗಳು ಕೇವಲ ಸಮುದಾಯದ ನೆಲೆಗಳನ್ನು ಹೊರ ಹಾಕುವುದಿಲ್ಲ. ಅದರೊಳಗಿನ ನೊಂದವರ ದನಿಯಾಗಿ, ಸಂಕಟ ಅನುಭವಿಸಿದವರ ಪ್ರತಿಬಿಂಬವಾಗಿವೆ. ಒಂದು ಹಂತದ ನೆಲೆಯಲ್ಲಿ ಮಿತಿಯನ್ನು ದಾಟುವ ಉಮೇದನ್ನು ಖಂಡಕಾವ್ಯಗಳು ಹೊಂದಿವೆ.

ಕೊನೆ ಟಿಪ್ಪಣಿ :

1. ರವಿಕುಮಾರ್ ನೀಹ ದಲಿತ ಸಾಹಿತ್ಯ ಮೀಮಾಂಸೆ. ಪುಟ–66
2. ಹೆಚ್.ಎಸ್. ಅನುಪಮ. ಮುಟ್ಟು, ಲಡಾಯಿ ಪ್ರಕಾಶನ ಗದಗ.2020. ಪುಟ–91
3. ಕೆ.ಬಿ.ಸಿದ್ದಯ್ಯ. ಸಮಗ್ರ ಖಂಡಕಾವ್ಯಗಳು ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಪುಟ.29
4. ಅದೇ.ಪುಟ–69
5. ಅದೇ. ಪುಟ–75
6. ಅದೇ ಪುಟ–30
7. ಅದೇ ಪುಟ–77
8. ಅದೇ ಪುಟ–75
9. ಅದೇ ಪುಟ–101
10. ಅದೇ. ಪುಟ–113
11. ಅರವಿಂದ ಮಾಲಗತ್ತಿ. ಶ್ರೀ ಚಂಡಾಲ ಸ್ವರ್ಗಾರೋಹಣಂ ಪುಟ–10
12. ಆಸಾದಿ–ಪುಟ–16
13. ಹೆಚ್.ಲಕ್ಷ್ಮಿನಾರಾಯಣಸ್ವಾಮಿ ಜಾಲಿಮರದ ಜೋಳಿಗೆಯಲ್ಲಿ–19

ಪರಾಮರ್ಶನ ಗ್ರಂಥಗಳು :

1. ಅರವಿಂದ ಮಾಲಗತ್ತಿ: ಶ್ರೀ ಚಂಡಾಲ ಸ್ವರ್ಗಾರೋಹಣಂ. ಅಭಿರುಚಿ ಪ್ರಕಾಶನ ಮೈಸೂರು–2003
2. ನಾಗರಾಜಯ್ಯ ವಡ್ಡಗೆರೆ: ಆಸಾದಿ ಪಂಚಮ ಪ್ರಕಾಶನ ತುಮಕೂರು–2000
3. ಲಕ್ಷ್ಮಿನಾರಾಯಣಸ್ವಾಮಿ.ಹೆಚ್: ಜಾಲಿಮರದ ಜೋಳಿಗೆಯಲ್ಲಿ, ಸಿವಿಜಿ ಬುಕ್ಸ್. ಬೆಂಗಳೂರು–2014
4. ಸಿದ್ದಯ್ಯ ಕೆ.ಬಿ: ಸಮಗ್ರ ಖಂಡಕಾವ್ಯಗಳು, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು–2018
5. ರವಿಕುಮಾರ್ ನೀಹ: ಕಣ್ಣು ಧರಿಸಿ ಕಾಣಿರೊ. ಗೋಮಿನಿ ಪ್ರಕಾಶನ. ತುಮಕೂರು–2020.

***

ಕನಕದಾಸರ 'ರಾಮಧಾನ್ಯ ಚರಿತ್ರೆ'ಯಲ್ಲಿ ವರ್ಗ ಸಂಘರ್ಷ

***

ಡಾ. ಶರಣಪ್ಪ ಆಡಕಾರ
ಸಾ. ಚಿಂಚಲಿ ತಾ. ಜಿ. ಗದಗ–582117
sadakar415@gmail.com

"ಆತ್ಮ ಯಾವ ಕುಲ ಜೀವ ಯಾವ ಕುಲ ತತ್ತ್ವೇಂದ್ರಿಗಳ ಕುಲ ಪೇಳಿರಯ್ಯಾ ಆತ್ಮಾಂತರಾತ್ಮ ನೆಲೆಯಾದಿಕೇಶವ ಆತನೊಲಿದ ಮೇಲೆ ಯಾತರ ಕುಲವಯ್ಯಾ?"

ಕುಲದ ಬಗ್ಗೆ ಮೇಲು ಕೀಳು ಎಂಬುವ ಜಾತ್ಯಾಂಧರಿಗೆ ಬಹಿರಂಗವಾಗಿ ಪ್ರಶ್ನೆ ಹಾಕುತ್ತಾ ಆಗಿನ ಜಾತಿಯ ಪ್ರವರ್ತಕರನ್ನು ಖಂಡಿಸಿರುವುದಲ್ಲದೆ, ಮನುಷ್ಯರು ಉತ್ತಮವಾಗಿ ಬದುಕಲು ಬಿಡಿ, ಅವರವರ ಸದ್‌ವರ್ತನೆಯ ಬದುಕಿನ ದಾರಿಯಲ್ಲಿ ಜಾತಿಯೆಂಬ ವಿಷ ಬೀಜವನ್ನು ಬಿತ್ತಿ ವ್ಯಕ್ತಿತ್ವದ ಮೇಲೆ ಕಪ್ಪುಮಸಿ ಎರಚಬೇಡಿ ಎಂದು ಕನಕದಾಸರು ಎಚ್ಚರಿಸಿದ್ದಾರೆ. ಈ ಪ್ರಶ್ನೆಯು ಸಾರ್ವಕಾಲಿಕ ಸತ್ಯವಾಗಿ ಸರ್ವಸಮಾಜದಲ್ಲಿರುವ ಜಾತಿಮತಾಂದರಿಗೆ ಪಾಠವಾಗಿ ಪರಿಣಮಿಸುವಂತಾಗಲಿ.

ನಮ್ಮ ಭಾರತೀಯ ಪರಂಪರೆಯಲ್ಲಿ ಕೆಲವೊಂದು ಮೌಲ್ಯಗಳು ಸಾಮಾಜಿಕವಾಗಿ ಮಾನ್ಯತೆ ಪಡೆದುಕೊಂಡು ಬಂದಿವೆ. ಅದರಲ್ಲಿ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯು ಪ್ರಮುಖವಾಗಿದೆ. ವೃತ್ತಿಯ ಮೂಲಕ ಪ್ರಾರಂಭವಾದ ಈ ವಿಂಗಡಣೆಯು ಮುಂದೆ ಆ ವ್ಯಕ್ತಿಯ ಜಾತಿಯನ್ನು ನಿರ್ಧರಿಸುವ ಮಟ್ಟಿಗೆ ಸಮಾಜದ ಮೇಲೆ ಮತ್ತು ವ್ಯಕ್ತಿಯ ವ್ಯಕ್ತಿತ್ವದ ಮೇಲೆ ತನ್ನ ಹಿಡಿತವನ್ನು ಸಾಧಿಸುತ್ತಾ ಬಂದಿದೆ. ಇಂದಿನ ಆಧುನಿಕ ಸಮಾಜದವರೆಗೂ ಮುಂದುವರೆದುಕೊಂಡು ನಮ್ಮ ಅಂತರಾಳದಲ್ಲಿ ಜಾತಿ ಎಂಬ ವಿಷ ಬೀಜವನ್ನು ಮತ್ತು ಅದರ ಬೇರುಗಳನ್ನು ಪಸರಿಸುತ್ತಾ ವ್ಯಕ್ತಿತ್ವವನ್ನು, ಪ್ರತಿಭೆಯನ್ನು ಕುಂಠಿತಗೊಳಿಸುತ್ತಾ ನಮ್ಮೊಂದಿಗೆ ಸಾಗುತ್ತಿದೆ.

ಕನ್ನಡ ಸಾಹಿತ್ಯದಲ್ಲಿ ಆದಿಕವಿಯಾದ ಪಂಪನಲ್ಲೂ ಸಂಘರ್ಷದ

ಅಂಶವನ್ನು ಕಂಡರು ಅತೀ ಹೆಚ್ಚು ಪ್ರತಿಭಟನೆಯ ರೂಪಗಳು ಕಂಡುಬರುವುದು, 12ನೇ ಶತಮಾನದಿಂದ 16ನೇ ಶತಮಾನದವರೆಗೆ. ಏಕೆಂದರೆ ಶತಮಾನಗಳಿಂದ ರೂಢಿಯಲ್ಲಿದ ವ್ಯವಸ್ಥೆಯನ್ನು, ಆಚಾರ–ವಿಚಾರಗಳನ್ನು ಧಾರ್ಮಿಕ ಮತ್ತು ಸಾಹಿತಿಕ ಬೇರುಗಳನ್ನು ಅಲುಗಾಡಿಸಿ ಅದರಲ್ಲಿಯ ಕೆಲವೊಂದು ಪ್ರಸ್ತುತ ಸಂದರ್ಭಕ್ಕೆ ಉಚಿತವಲ್ಲದವನ್ನು ಮುರಿದು ಹೊಸ ಮೌಲ್ಯಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸಿದವರು, 'ಕಾಯಕ' ಪರಂಪರೆಯನ್ನು ನಂಬಿದ ಶರಣಸಂಸ್ಕೃತಿ, ಭಕ್ತಿ ಪರಂಪರೆಯನ್ನು ನಂಬಿದ ದಾಸಸಂಸ್ಕೃತಿ. ತಮ್ಮ ಭಕ್ತಿಮಾರ್ಗದಿಂದ ಸಮಾಜವನ್ನು ಹೊಸ ದಿಕ್ಕಿನೆಡೆಗೆ ನಡೆಯುವಂತೆ ಮಾಡಿದವು.

ಪ್ರಾಚೀನ ಕಾಲದಿಂದಲೂ ಮೇಲವರ್ಗದವರು ಮಾಡುವ ದೌರ್ಜನ್ಯವನ್ನು ಸಹಿಸಿಕೊಂಡು ತಮ್ಮತನವನ್ನು ಬಿಟ್ಟುಕೊಟ್ಟು ಬದುಕುತ್ತಾ ತಮ್ಮ ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡುತ್ತಾ ಬಂದವರು ನಮ್ಮ ಪೂರ್ವಕರು. ಅಂದರೆ ಅವರು ಅದನ್ನು ಮನಸ್ಸಾರೇ ಒಪ್ಪಿಕೊಂಡಿದರು ಎಂದಲ್ಲ ಆಗಿನ ಸಂದರ್ಭಗಳು, ವ್ಯವಸ್ಥೆ ಅವರನ್ನು ಹಾಗೇ ಮಾಡಿತ್ತು. ಈ ಸಮಾಜದಲ್ಲಿ ಕಂಡುಬರುವ ವ್ಯತ್ಯಾಸವನ್ನು ಪ್ರಶ್ನಿಸುವ ರೀತಿಯಲ್ಲಿ ಮಧ್ಯಕಾಲೀನ ಸಂದರ್ಭದಲ್ಲಿ ವಚನಕಾರರ ತರುವಾಯ ಸಮಾಜದಲ್ಲಿ ಸಮತಾವಾದದ ತತ್ವವನ್ನು ತಂದವರು ಹರಿದಾಸ ಪರಂಪರೆಯ ದಾಸರು. ನರಹರಿತೀರ್ಥರಿಂದ ಪ್ರಾರಂಭಗೊಂಡ ಈ ಪರಂಪರೆಯು ಮುಂದೆ ವ್ಯಾಸರಾಯ ಶಿಷ್ಯತ್ವವನ್ನು ಪಡೆದುಕೊಂಡ ಪುರಂದರದಾಸ, ಕನಕದಾಸರಂತ ಆಶ್ವಿನಿ ದೇವತೆಗಳನ್ನು ಕನ್ನಡ ನೆಲಕ್ಕೆ ನೀಡಿದ ಶ್ರೇಯಸ್ಸು ಈ ಪರಂಪರೆಗೆ ಸಲ್ಲುತ್ತದೆ.

ಇವರಲ್ಲಿ ಪ್ರಮುಖವಾಗಿ **"ಕೆಳಸ್ತರದ ಸಮಾಜದಲ್ಲಿ ಹುಟ್ಟಿ, ಆ ಸಮಾಜಗಳಿಗೆ ಸಹಜವಾದ ಅಪಮಾನ ನೋವು ತಿರಸ್ಕಾರಗಳ ಕೆಂಡದ ದಾರಿಯಲ್ಲಿ ಧೃತಿಗೆಡದೆ, ಸ್ವಂತ ಶ್ರಮ ಪರಿಶ್ರಮ ಛಲ ಬಲಗಳಿಂದ ನಡೆದು ಆತ್ಮಸ್ಥೈರ್ಯವನ್ನು, ಆದಮ್ಯ ಜೀವನ ಪ್ರೀತಿಯನ್ನು, ಅದ್ಭುತ ಜೀವಾನುಭವವನ್ನು ಅಸಾಧಾರಣ ಪಾಂಡಿತ್ಯ ಮತ್ತು ಪ್ರತಿಭೆ ಸಂಪಾದಿಸಿ ಭಕ್ತಿ ಹಾಗೂ ಸಾಹಿತ್ಯ ಕ್ಷೇತ್ರಗಳೆರಡರಲ್ಲೂ ವಿಶೇಷ ಸಿದ್ಧಿಯನ್ನು ಪಡೆದವರು ಕನಕದಾಸರು"** ಎಂಬ ಡಾ.ಎಚ್.ಜೆ.ಲಕ್ಕಪ್ಪಗೌಡರ ಮಾತು ಕನಕದಾಸರ ಪೂರ್ವಾಪರ ಜೀವನ ಪರಿಸ್ಥಿತಿಯನ್ನು ಮತ್ತು ಅವರು ಪರಿಶ್ರಮದಿಂದ ಸಾಹಿತ್ಯದ ಮುಖೇನ ಶ್ರೇಷ್ಠ ಕೃತಿ ರಚನೆ ಮಾಡಿ ಸಮಾಜದಲ್ಲಿ ಕಂಡುಬರುವ ಕೀಳರಿಮೆ ಭಾವನೆಯನ್ನು ತೊಡೆದು ಹಾಕುವಲ್ಲಿ ಶ್ರಮಿಸಿದ್ದಾರೆ. ವ್ಯಾಸರಾಯರ ಶಿಷ್ಯರಾದ ದಾಸವರೇಣ್ಯರಾದ ಕನಕದಾಸರು ತಮ್ಮ ಸಾಹಿತ್ಯದಲ್ಲಿ ಕೀರ್ತನೆಗಳು, ಉಗಾಭೋಗ, ಸುಳಾದಿಗಳಷ್ಟೇ ಅಲ್ಲದೆ 'ರಾಮಧಾನ್ಯ ಚರಿತ್ರೆ', 'ಹರಿಭಕ್ತಸಾರ', 'ನಳಚರಿತ್ರೆ' ಎಂಬವು ಷಟ್ಪದಿ ಸಾಹಿತ್ಯದ ಕೃತಿಗಳಾದರೆ, ಸಾಂಗತ್ಯ ಸಾಹಿತ್ಯದಲ್ಲಿ 'ಮೋಹನ ತರಂಗಿಣಿ', ಎಂಬುವುಗಳಿಂದ ತಮ್ಮ ಸಮಕಾ ಲೀನ ಸಂದರ್ಭದ ಸಾಮಾಜಿಕ ಸಮಸ್ಯೆಗಳಿಗೆ ಉತ್ತರವಾಗಿ ಈ ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ವರ್ಗ ಸಂಘರ್ಷವನ್ನು ಒಳಗೊಂಡಿರುವಂತಹದು 'ರಾಮಧಾನ್ಯ ಚರಿತ್ರೆ'. ಈ ಕಾವ್ಯವು ಒಟ್ಟು ಒಂದುನೂರ ಐವತ್ತೆಂಟು ಭಾಮಿನಿ ಷಟ್ಪದಿಯನ್ನು ಒಳಗೊಂಡ ಒಂದು ಖಂಡಕಾವ್ಯವಾಗಿದೆ. ಕಾವ್ಯದ ವಿಷಯ ವಸ್ತು ಎರಡು ಕವಲುಗಳಲ್ಲಿ ಹರಡಿಕೊಂಡಿದೆ. ಒಂದು ರಾಮಕಥೆಯೊಂದಿಗೆ ಧಾರ್ಮಿಕ ಅಂಶ ಒಳಗೊಂಡಿದ್ದರೆ, ಇನ್ನೊಂದು ವ್ರೀಹಿ(ಭತ್ತ)ಗಿಂತ ಉತ್ತಮವಾದುದು ನೆರಗಲಗ(ರಾಗಿ)ದ ಮೂಲಕ ಸಾಮಾಜಿಕ ಸಮಸ್ಯೆಗೆ ಉತ್ತರವನ್ನು ಕಂಡುಕೊಳ್ಳುತ್ತದೆ.

ಇಲ್ಲಿ ಕನಕದಾಸರು ಸಾಮಾಜಿಕ ಕಳಕಳಿಯಿಂದ ಸಂಘರ್ಷವನ್ನು, ಕುಲಗಳ ನಡುವೆ ನಡೆಯುವ ತಾರತಮ್ಯವನ್ನು ನೇರವಾಗಿ ಪ್ರತಿಭಟಿಸಿ ಸಮಾಜವು ಸುಮಾರ್ಗದಲ್ಲಿ ನಡೆಯುವಂತೆ ಮಾರ್ಗದರ್ಶನ ಮಾಡಿದ್ದಾರೆ. ಇವರು ಸಾಹಿತ್ಯವನ್ನು ಹೊಟ್ಟೆಪಾಡಿಗಾಗಿ, ಐಶ್ವರ್ಯಕ್ಕಾಗಿ ಬಳಸಿಕೊಳ್ಳದೇ ಆತ್ಮವನ್ನು ಉದ್ಧಾರ ಮಾಡಿಕೊಳ್ಳುವುದಕ್ಕೆ ಸಾಧನವಾಗಿಸಿಕೊಂಡು ಜನ್ಮವನ್ನು ಸಾಫಲ್ಯ ಮಾಡಿಕೊಂಡಿದ್ದಾರೆ.

'ರಾಮಧಾನ್ಯಚರಿತ್ರೆ'ಯ ಕಥಾವಸ್ತು ವನವಾಸದಿಂದಾದ ಮಾನಸಿಕ ಒತ್ತಡವನ್ನು ಕಡಿಮೆಗೊಳಿಸಲು ಶ್ಯಾಂಡಿಲ್ಯಮುನಿಯು ಧರ್ಮರಾಜನಿಗೆ ನೆರದಲಗ(ರಾಗಿ) ಮತ್ತು ವ್ರೀಹಿ(ಭತ್ತ)ದ ಕಥೆಯನ್ನು ಪ್ರಸ್ತಾಪಿಸುತ್ತಾನೆ. ಕವಿಗಳು ರಾಮಾಯಣದಲ್ಲಿ ನಡೆದಿರುವ ವಿಷಯವನ್ನು ಮಹಾಭಾರತದಲ್ಲಿ ನಡೆದ ವನವಾಸದ ಕಹಿನೆನಪುಗಳನ್ನು ಮರೆಯಲು ಪಾಂಡು ಕುಮಾರರಿಗೆ ಶ್ಯಾಂಡಿಲ್ಯಮುನಿಯಿಂದ ಹೇಳಿಸಿದ್ದಾರೆ. ಇದರೊಂದಿಗೆ ಎರಡು ಮಹಾಕಾವ್ಯಗಳ ವಿಷಯದ ಮಧ್ಯ ಸಮಕಾಲೀನ ಸಂದರ್ಭದಲ್ಲಿರುವ ಸಾಮಾಜಿಕ ಸಮಸ್ಯೆಯನ್ನು ಬಗೆ ಹರಿಸುವ ಯೋಚನೆ ಮಾಡಿದ್ದಾರೆ. ಸಮಾಜದಲ್ಲಿನ ಏರುಪೇರುಗಳನ್ನು, ಅಂಕು ಡೋಂಕುಗಳನ್ನು ತಿದ್ದಲು ನಿಸರ್ಗದಲ್ಲಿ ಬೆಳೆಯುವ ಮಾನವನ ನಿತ್ಯ ಬದುಕಿಗೆ ಚೈತನ್ಯ ನೀಡುವ ಆಹಾರ ಧಾನ್ಯಗಳಾದ ರಾಗಿ ಮತ್ತು ಭತ್ತವನ್ನು ಸಾಂಕೇತಿಕ ರೂಪಕಗಳಾಗಿ ಬಳಸಿಕೊಂಡಿದ್ದು. ರಾಗಿಯು ಶ್ರಮಿಕವರ್ಗದ ರೂಪಕವಾದರೇ, ಭತ್ತವನ್ನು ಶ್ರೀಮಂತರ ದರ್ಪ, ಅಹಂ, ಮತ್ತು ಪೋಳ್ಳು ವ್ಯಕ್ತಿತ್ವದ ಸಂಕೇತವಾಗಿ ಬಿಂಬಿಸಿದ್ದಾರೆ. ಪ್ರತಿಯೊಂದು ಸಮಾಜದಲ್ಲಿ ಜಾತಿ ಸಮಸ್ಯೆಗಳು ಇದ್ದೇ ಇವೆ. ಆದರೆ ಭಾರತದಲ್ಲಿ ಇದು ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ.

ರಾವಣನಿಂದ ಅಪಹರಣಕ್ಕೆ ಒಳಗಾದ ಸೀತಾದೇವಿ (ಜಾನಕಿ)ಯನ್ನು ಬಿಡುಗಡೆ ಮಾಡಿಕೊಂಡು ಬರುವ ಸಂದರ್ಭದಲ್ಲಿ

ರಾವಣನನ್ನು ಸೋಲಿಸಿ ವಿಭೀಷಣನನ್ನು ಪಟ್ಟಕ್ಕೆ ಏರಿಸಿ ಶ್ರೀರಾಮನ್ನು ಅಯೋಧ್ಯೆಗೆ ಮರಳುವ ಸಂದರ್ಭದಲ್ಲಿ ದಾರಿಯುದ್ದಕ್ಕೂ ಅನೇಕ ಋಷಿಮುನಿಗಳನ್ನು ಭೇಟಿ ಮಾಡಿ ಆಶೀರ್ವಾದವನ್ನು ಪಡೆಯುತ್ತಾ ಮುಚುಕುಂದ ಆಶ್ರಮಕ್ಕೆ ಭೇಟಿ ನೀಡಿದಾಗ. ಈ ವಾರ್ತೆಯನ್ನು ಕೇಳಿದ ಜಾಬಾಲಿ ಗೌತಮಾದಿ ಋಷಿಗಳು ಅವನ ದರ್ಶನಾರ್ಥವಾಗಿ ಅರಣ್ಯದ ಪರ್ಣಕುಟಿಯಲ್ಲಿ ನೆರೆಯುತ್ತಾರೆ. ಇಲ್ಲಿ ಶ್ರೀರಾಮ ಮತ್ತು ಅವನ ಸಹಚರರಿಗೆ ಭಕ್ಷಭೋಜಾನಗಳನ್ನು ಸಿದ್ಧಮಾಡಲಾಗುತ್ತದೆ. ಇವುಗಳನ್ನು ಸವಿದ ಆಂಜನೇಯನ್ನು ಧಾನ್ಯಗಳನ್ನು ನೋಡುವ ಆಸೆ ವ್ಯಕ್ತಪಡಿಸಿದರಿಂದ ಜಾಬಾಲಿ ಗೌತಮ ಮುನಿಗಳು ಒಟ್ಟು ನವಧಾನ್ಯಗಳನ್ನು ತೋರಿಸುತ್ತಾರೆ. ನೆರದಲಗ (ರಾಗಿ), ಹರಕು, ಬರಗು, ಜೋಳ, ಕಂಬು, ನವಣೆ, ಗೋಧಿ ಮತ್ತು ಭತ್ತ ಈ ರೀತಿ ಧಾನ್ಯಗಳನ್ನು ತೋರಿಸುತ್ತಾ ಮುನಿಗಳು ನೆರದಲಗ (ರಾಗಿ)ದ ಬಗ್ಗೆ ವಿಶೇಷ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

ಇದರಿಂದ ಕೋಪಗೊಂಡ ಭತ್ತವೂ ತಾನೇ ಶ್ರೇಷ್ಠ ಎಂಬ ಅಹಂಭಾವ ತೋರಿಸಿ ಬ್ರಾಹ್ಮಣರ ಪ್ರತಿಯೊಂದು ಕಾರ್ಯಕ್ಕೂ ನನ್ನನ್ನೇ ಉಪಯೋಗಿಸುತ್ತಾರೆ. ಅದಕ್ಕಾಗಿ ನಾನೇ ಶ್ರೇಷ್ಠ ಎಂದು ವಾದವನ್ನು ಮಂಡಿಸುತ್ತದೆ. ರಾಗಿಯು ತಾನು ಯಾವುದೇ ಬೇಧಭಾವ ಮಾಡದೇ ಎಲ್ಲರಿಗೂ ಸರಿಸಮಾನವಾಗಿ ಮಹತ್ವವನ್ನು ನೀಡುತ್ತೇನೆ ಎಂಬ ವಾದವನ್ನು ತಿಳಿಸುತ್ತದೆ. ಶ್ರೀರಾಮನು ಅಯೋಧ್ಯೆಗೆ ಪ್ರಯಾಣ ಬೆಳೆಸಬೇ ಕಾಗಿದ್ದರಿಂದ ಎರಡೂ ಧಾನ್ಯಗಳನ್ನು ಸೆರೆಯಲ್ಲಿ ಇರಿಸಿ ಪ್ರಯಾಣ ಮುಂದುವರೆಸಿ ಅಯೋಧ್ಯೆಯಲ್ಲಿ ಪಟ್ಟಾಭಿ ಷಿಕ್ತನಾದ ಮೇಲೆ ಗೌತಮಮುನಿಯ ಆಶ್ರಮದ ಸೆರೆಯಲ್ಲಿರುವ ಈ ಎರಡು ಧಾನ್ಯಗಳನ್ನು ತರಲು ತಿಳಿಸಿದ ಸಮಯದಲ್ಲಿ ಭತ್ತವು ತನ್ನತನವನ್ನು ಕಳೆದುಕೊಂಡಿರುತ್ತದೆ. ಆದರೆ ನೆರದಲಗವು ತನ್ನ ನಿಜಸ್ವರೂಪವನ್ನು ಕಳೆದುಕೊಂಡಿರುವುದಿಲ್ಲ. ಇದರಿಂದ ಸಭೆಗೆ ಆಗಮಿಸಿದ ದೇವತೆಗಳೆಲ್ಲಾ ನೆರದಲಗವನ್ನು ಹೊಗಳಿ ತಮ್ಮೆಲ್ಲಾ ಶಕ್ತಿಯನ್ನು ಅದಕ್ಕೆ ಧಾರೆ ಎರೆಯುತ್ತಾರೆ. ಅದೇ ರೀತಿ ಶ್ರೀರಾಮನು ನೆರದಲಗಕ್ಕೆ 'ರಾಮಧಾನ್ಯ' ಅಥವಾ 'ರಾಘವಧಾನ್ಯ' ಎಂದು ಮರುನಾಮಕರಣ ಮಾಡುತ್ತಾನೆ. ಇದರಿಂದ ಅವಮಾನಕ್ಕೆ ಒಳಗಾದ ಭತ್ತಕ್ಕೆ ಶ್ರೀರಾಮನು ಅನುಕಂಪದಿಂದ ಸಮಾಧಾನಪಡಿಸುವುದು ಕಥಾವಸ್ತುವಾಗಿದೆ.

ಇಲ್ಲಿ ಶಾಂಡಿಲ್ಯಮುನಿಯು ಧರ್ಮರಾಜನ ಮನಸ್ಸು ಹಗುರಗೊಳಿಸಲು ಈ ಕಥೆ ಹೇಳಿದರು, ಶತಶತಮಾನಗಳಿಂದ ನಮ್ಮ ದೇಶದಲ್ಲಿ ಕಂಡುಬರುವ ಶ್ರೇಣಿಕೃತ ವ್ಯವಸ್ಥೆಯಲ್ಲಿನ ತಾರತಮ್ಯದ ಭಾವನೆಯನ್ನು ಸರಿಪಡಿಸುವದರಿಂದ ಸಮಾಜವು ಸಮಾತಾವಾದದಲ್ಲಿ ನಡೆದು ಅಭಿವೃದ್ಧಿಯ ಪಥದ ಕಡೆಗೆ ಸಾಗುವಂತಾಗಲಿ ಎಂಬ ಭಾವನೆಯನ್ನು ಕಥೆಯು ವ್ಯಕ್ತಪಡಿಸುತ್ತದೆ. ಈ ಕಾವ್ಯದಲ್ಲಿ ರಾಗಿಯು ನುಡಿಯುವ ನುಡಿಯು ಸಮಾಜದಲ್ಲಿ ಸಮಾಜವಾದ ಸಿದ್ಧಾಂತ ಜಾರಿಗೆ ಬರುವಂತಾಗಬೇಕು ಎಂಬುದಕ್ಕೆ ಸಾಕ್ಷಿಯಾಗಿ 'ಬಲ್ಲಿದನು ಬಡವರುಗಳೆನ್ನದೆ ಎಲ್ಲರನು ರಕ್ಷಿಸುವೆ' ಎಂಬ ವಾಕ್ಯವನ್ನು ನೋಡಬಹುದು.

ಏಕೆಂದರೆ ನಮ್ಮ ನಾಡಿನಲ್ಲಿ ಅನೇಕ ಮಹನೀಯರು ವಚನಕಾರರಾದಿಯಾಗಿ ಸಮತಾವಾದವನ್ನು ತರಲು ಶ್ರಮಿಸಿ ನೋವುಗಳನ್ನು ಅನುಭವಿಸಿದ್ದಾರೆ. ಅದೇ ರೀತಿ ತಮ್ಮ ಸಮಕಾಲೀನ ಸಂದರ್ಭದಲ್ಲಿ ಅದನ್ನು ಸಾಧಿಸಿ ತೋರಿಸಿದ್ದಾರೆ. ಆದರೆ ನಾವು ಇಂದು ಮಾಡುತ್ತಿರುವ ಕಾರ್ಯವೇನೆಂದರೆ ಅವರ ಹೆಸರನ್ನು ಬಾ ಯಿ ತುಂಬಾ ಕರೆಯುತ್ತೇವೆ. ಜಯಂತಿಗಳನ್ನು ಆಚರಿಸುತ್ತೇವೆ. ಜಯಂತಿಗಳು ಕೇವಲ ಆಡಂಬರದ ಪ್ರತೀ ಕವಾಗಿ ಮಾತ್ರ ಆಚರಣೆಯಲ್ಲಿವೆ. ಅವರ ತತ್ವಗಳಿಗೂ ನಮಗೂ ಸಂಬಂಧಗಳಿಲ್ಲ ಎನ್ನುವ ರೀತಿಯಲ್ಲಿದ್ದೇವೆ.

ವಿಪರ್ಯಾಸವೆಂದರೆ ಒಂದು ಸಮುದಾಯಕ್ಕೆ, ಒಂದು ವರ್ಗಕ್ಕೆ ಅವರನ್ನು ಸಿಮೀತಗೊಳಿಸಿ ಸಮಾಜಕ್ಕೆ ಅವರು ನೀಡಿದ ಸಂದೇಶವನ್ನು ಅರ್ಥಯಿಸಿಕೊಳ್ಳದೇ ಸಂದೇಶದ ವಿರುದ್ಧ ಕಾರ್ಯವನ್ನು ಮಾಡುತ್ತಿದ್ದೇವೆ. ಪ್ರಾಚೀನ ಕಾಲದಲ್ಲಿ ವೃತ್ತಿಯನ್ನು ನೀಡುವ ಸಮಯದಲ್ಲಿ ಸಮಾಜವು ಸುಗಮವಾಗಿ ಸಾಗಲಿ ಅವರವರು ತಮ್ಮ ಕಾರ್ಯದಲ್ಲಿ ಪ್ರವೃತ್ತರಾಗಲಿ ಎಂಬ ಭಾವನೆಯಿಂದ ವೃತ್ತಿಯನ್ನು ವಿಂಗಡಿಸಿದರೆ ಇಂದು ನಾವು ಆ ವೃತ್ತಿಯಿಂದಲೇ ಅವರ ಜಾತಿಯನ್ನು ಉಲ್ಲೇಖಿಸುವುದು. ಅದರಿಂದಲೇ ಅವರ ಸ್ಥಾನಮಾನಗಳನ್ನು ಗುರುತಿಸುವುದು ಸಮಾಜಕ್ಕೆ ಒಳಿತಲ್ಲ. ಕಾರ್ಲ್‌ಮಾರ್ಕ್ಸ್‌ರವರು 19ನೇ ಶತಮಾನದಲ್ಲಿ ಈ ಭಿನ್ನತೆಯನ್ನು ಹೋಗಲಾಡಿಸಲು 'ಕಾರ್ಮಿಕ ಸಂಘಟನೆ' ಮಾಡಿದು ಸಮಾಜದಲ್ಲಿರುವ ಮೇಲು ಮತ್ತು ಕೆಳವರ್ಗಗಳನ್ನು ಹೋಗಲಾಡಿಸಲಿಕ್ಕೆ ಆಗಿದ್ದರೇ ಅದಕ್ಕಿಂತ ಏಳು ಶತಮಾನಗಳ ಮುಂಚೆ ಕನ್ನಡನಾಡಿನಲ್ಲಿ ವಚನಕಾರರು ಮತ್ತು ಕೀರ್ತನಾಕಾರರು ಜಾತಿ ಜಾತಿಗಳ ನಡುವೆ ಇರುವ ವೈಮನಸ್ಸನ್ನು ಹೋಗಲಾಡಿಸಲು ತಮ್ಮ ಭಕ್ತಿಮಾರ್ಗದಿಂದ ಸಾಹಿತ್ಯ ಮಾರ್ಗದಿಂದ ಶ್ರಮಿಸಿದ್ದಾರೆ.

ಇವರುಗಳಲ್ಲಿ ಕನಕದಾಸರು ಸಹ ತಮ್ಮ ಕೃತಿಗಳ ಮೂಲಕ ಜಾತಿಗಳನ್ನು ಹೊಗಲಾಡಿಸುವ ಕಾರ್ಯವನ್ನು ಮಾಡಿದ್ದಾರೆ. "ಜಾತಿಗರ್ವಾಂಧರ ಮೇಲಿಲ್ಲದೆ, ಬಡವರ ರಕ್ತ ಹೀರುತ್ತಿರುವ ಧನಿಕ ಜಿಗಣಿಗಳ ಮೇಲೆಯೂ ಕವಿಕುಂಠಾರವನ್ನೆತ್ತಿದ್ದಾನೆ. ಈ ದೃಷ್ಟಿಯಿಂದ ಇದು 'ಭೂಮಿಗಚ್ಚರಿ'ಯಾದ ಅಪೂರ್ವ ಕಾವ್ಯವೆಂದು ಧಾರಾಳವಾಗಿ ಒಪ್ಪಿಕೊಳ್ಳಬಹುದೆಂದು" ದೇ.ಜವರೇಗೌಡರು ರಾಮಧಾನ್ಯ

ಚರಿತ್ರೆಯ ಕುರಿತು ಹೇಳಿರುವ ಮಾತು ಸರಿಯಾಗಿದೆ. ಆಹಾರ ದಾನ್ಯಗಳಾದ ರಾಗಿ ಮತ್ತು ಭತ್ತಗಳ ನಡುವೆ ಇರುವ ಕದನವನ್ನು ತೆಗೆದುಕೊಂಡು ಕನಕದಾಸರು ಸರ್ವದರಲ್ಲೂ ಈ ಭೇಧವನ್ನು ಹೋಗಲಾಡಿಸಿ ಒಂದೇ ಎಂಬ ಭಾವನೆ ಮೂಡಬೇಕು ಎಂಬ ಆಶಯದಿಂದ ಈ ಕೃತಿಯ ವಿಷಯವಸ್ತುವನ್ನು ಹೆಣೆದಿದ್ದಾರೆ.

ಪ್ರತಿ ಸಮಾಜದಲ್ಲಿ ಎರಡು ಗುಂಪುಗಳಾಗಿ ಕಂಡುಬರುತ್ತವೆ. ಆದರೆ ಕನಕದಾಸರು ಕೆಳವರ್ಗದ ರೂಪಕವಾಗಿ ರಾಗಿಯನ್ನು ಬಳಸಿಕೊಂಡು ಸಮಾನತೆ ತರುವಲ್ಲಿ ಸಮಾಜಕ್ಕೆ ಮಾರ್ಗದರ್ಶಕರಾಗಿ ಎಲ್ಲಾ ಕಾಲದಲ್ಲಿ ಕಂಡುಬರುತ್ತಾರೆ. "ತನ್ನ ಸುತ್ತಣ ಎಲ್ಲ ದಾಸವರೇಣ್ಯರಂತೆ, ತನ್ನೊಳಗೆ ಭಕ್ತಿರಸವನ್ನು ತುಂಬಿ ಕೊಂಡು ಗುರುಕೃಪೆಗೆ ಪಾತ್ರರಾಗಿದ್ದರೂ ಅದರಾಚೆಗಿನ ಬದುಕಿನಲ್ಲಿ ಅವರು ಅನುಭವಿಸುದ ಪಡಿಪಾಟಲು ಸಹ ಅವರ ಅಭಿವ್ಯಕ್ತಿಯಲ್ಲಿ ಸ್ಥಾನಪಡೆದಿರುವ ಹಿನ್ನಲೆಯಲ್ಲಿ, ಅವರನ್ನು ಉಳಿದ ದಾಸರಿಗಿಂತ ಬೇರೆಯಾಗಿ ಯೋ ಪರಿಭಾವಿಸಬೇಕಾಗಿತ್ತದೆ. ಅವರ ದೈವದ ಮುಂದಿನ ಅವರ ದಾಸ್ಯಭಾವವನ್ನು, ತಮ್ಮ ಮುಂದೆಯೂ ಪ್ರದರ್ಶಿಸಬೇಕು ಎನ್ನುವ ಮೇಲ್ವರ್ಗದ 'ಅಹಂ' ಅವರ ಎದೆಯಲ್ಲಿ ರಾಮಧಾನ್ಯವನ್ನು ಬಿತ್ತಿ ಬೆಳೆಯಲು ಕಾರಣವಾಗಿರುವುದು ಸಹಜ ಸಂಗತಿ" (ಪ್ರೊ. ಮಲೆಯೂರು ಗುರುಸ್ವಾಮಿ, ಕನಕ ಮಹಾಸಂಪುಟ, ಬೆನ್ನುಡಿ) ಇದು ಅಂದಿನ ಸಮಾಜದಲ್ಲಿ ಮೇಲ್ವರ್ಗದ ದೌರ್ಜನ್ಯ ಗುಣಕ್ಕೆ ಕನಕದಾಸರು ಎದುರುತ್ತರವಾಗಿ ರಚಿಸಿದ ಕೃತಿಯಾಗಿದ್ದು, ಅದರಲ್ಲಿ ಕೆಳವರ್ಗವೂ ಶ್ರೇಷ್ಠ ಎಂಬ ನುಡಿಯನ್ನು ಶ್ರೀರಾಮನಿಂದ ಹೇಳಿಸಿದ್ದಾರೆ. ವಚನಕಾರರ ದೃಷ್ಟಿಕೋನವು ಸಮತಾವಾದದ ಪರವಾಗಿದ್ದು ಅದರ ಮುಂದುವರೆದ ಕ್ರಾಂತಿಯನ್ನು ಈ ಕೃತಿಯಲ್ಲಿ ಕಾಣಬಹುದು.

ಕನಕದಾಸರು ಬಡವರ ನೋವನ್ನು ಕಷ್ಟವನ್ನು ಬಲ್ಲವರಾಗಿದ್ದು ಬಡವರ ಪರವಾಗಿ ರಾಗಿಯನ್ನು ಭತ್ತಕ್ಕಿಂತ ಉತ್ತಮವೆಂದು ನಿರೂಪಿಸಿದ್ದಾರೆ. ರಾಗಿಯನ್ನು ಬರಗಾಲದ ಸಂದರ್ಭದಲ್ಲಿ ಎಲ್ಲರಿಗೂ ಆಹಾರವಾಗುವುದು ಎಂಬ ಮಾತಿನ ಮೂಲಕ ಕವಿಗಳು ಬಡವರು ನೋವಿನಲ್ಲಿರುವವರಿಗೆ, ಕಷ್ಟದಿಂದ ಬಳ ಲುತ್ತಿದ್ದವರಿಗೆ ತಮ್ಮಿಂದಾಗುವ ಸಹಾಯವನ್ನು ಮಾಡುವುದು, ಹಂಚಿ ತಿನ್ನುವ ಪ್ರವೃತ್ತಿಯನ್ನು ಹೊಂದಿದವರೇ ಶ್ರೇಷ್ಠರು ಎಂದು ಸಾರಿದ್ದಾರೆ. ಇದು ಕೇವಲ ಧಾನ್ಯಗಳ ಕದನವಾಗಿರದೇ ಎರಡು ವರ್ಗಗಳ ಮಧ್ಯವಿರುವ ಕಂದಕವನ್ನು ದೂರ ಮಾಡುವ ಮಹತ್ವದ ಉದ್ದೇಶವನ್ನು ಹೊಂದಿದೆ.

ವರ್ಗಗಳ ಪ್ರಸ್ತಾಪವೂ ಅಂದಿನ ಸಾಮಾಜಿಕ ಜೀವನದ ಚಿತ್ರಣವಾಗಿ ಕಂಡುಬಂದರೂ ಅದಕ್ಕೆ ಯಾವ ರೀತಿ ಪರಿಹಾರ ಒದಗಿಸಿಬೇಕು ಎಂದು ಕವಿಗಳು ತಮ್ಮ ಕೃತಿಯ ಮುಖಾಂತರ ಉತ್ತರಿಸಿದ್ದಾರೆ. ಆದರೆ ಈ ಕಂದಕವೂ ಇಂದಿಗೂ ಮುಂದುವರೆದುಕೊಂಡು ಬಂದಿದ್ದು ಪ್ರತಿಕ್ಷಣವೂ ಇದರಿಂದ ಸಮಾಜದಲ್ಲಿ ಅನೇಕ ಸಂಕಟವನ್ನು ಅನುಭವಿಸುವವರು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತಿರುವುದು ಖೇದಕರವಾದ ಸಂಗತಿಯಾಗಿದೆ. ಪ್ರಸ್ತುತ ದಿನಮಾನಕ್ಕೂ ಆದರ್ಶವಾಗಿರುವ ಈ ಕೃತಿಯು ಸತ್‌ಸಮಾಜಕ್ಕೆ ಬೇಕಾಗುವ ರೂಪರೇಷೆಯನ್ನು ತೆರೆದುತೋರಿಸುತ್ತದೆ.

ದಾಸರು ಸಮಾಜವನ್ನು ವರ್ಗರಹಿತ, ಜಾತಿರಹಿತ, ವರ್ಣರಹಿತವಾಗಿ ನಿರ್ಮಿಸಲು ಶ್ರಮಿಸಿದರು. ಕೇಲವೊಂದು ಪ್ರಶ್ನೆಗಳು ಮೂಡುತ್ತವೆ. "ಪವಿತ್ರ ಭೂಮಿಯೆಂದು ಹೆಸರಾಗಿರುವ ಈ ನಾಡಿನಲ್ಲಿ ಜನಿಸಿದ 'ಕನಿಷ್ಠ' ವರ್ಗದ ಜನರಿಗೆ ಮೋಕ್ಷವಿಲ್ಲವೆ? ಕೂಡದೆ? ಈ ಸಂಕಟವನ್ನೆಲ್ಲ ದಾಸರು ರಾಮಾಯಣಾಂ ತರರ್ಗತವಾದ ರಾಮಧಾನ್ಯ ಚರಿತ್ರೆಯಲ್ಲಿ ತೋಡಿಕೊಂಡಿದ್ದಾರೆ; ಅವರ ಧರ್ಮಕ್ರೋಧ ವ್ರೀಹಿ ನೆರೆದಲೆಗರ ವಾಗ್ಯುದ್ಧದಲ್ಲಿ ಹೆಪ್ಪುಗಟ್ಟಿದೆ" (ದೇ. ಜವರೇಗೌಡರು ರಾಮಧಾನ್ಯಚರಿತ್ರೆ, ಕನಕದಾಸರ : ಒಂದು ಅಧ್ಯಯನ ಪು– 176) ಇಲ್ಲಿ ಧರ್ಮದ ಹೆಸರಿನಲ್ಲಿ ಜಾತಿಯ ರೂಪದಲ್ಲಿ ಶತಶತಮಾನಗಳಿಂದ ಮೇಲ್ವರ್ಗದಿಂದ ಕಾಲಕಸದಂತೆ ಕಾಣಿಸಿಕೊಂಡು ಬಾಳುತ್ತಿರುವ ಕೆಳವರ್ಗದ ಜನರು ಎಂದಿಗೆ ಮೋಕ್ಷ ಪಡೆದುಕೊಳ್ಳುವುದು ಎಂಬ ಪ್ರಶ್ನೆಯನ್ನು ಹಾಕುತ್ತದೆ.

'ರಾಮಧಾನ್ಯ ಚರಿತೆ'ಯು ಸಮಾಜದಲ್ಲಿರುವ ಸಾಮಾಜಿಕ ಅಸಮಾನತೆಯನ್ನು ಕಟ್ಟುವಾಗಿ ಖಂಡಿಸುವಂತಹದು ಇದರೊಂದಿಗೆ ಈ ಖಂಡನೆಗೆ ದೇವಾನುದೇವತೆಗಳು ಸಾಕ್ಷಿ ಎಂಬ ಸಂದೇಶ ಸಾರಲು ಕವಿಯು ಶ್ರೀರಾಮನೊಂದಿಗೆ ಇಂದ್ರ, ರವಿ, ಚಂದ್ರ ಮುಂತಾದ ದೇವತೆಗಳನ್ನು ಈ ಕೃತಿಯಲ್ಲಿ ಹೊಣೆಗಾರರನ್ನಾಗಿ ಮಾಡಿದ್ದಾನೆ. ಇಲ್ಲಿಯ ಶ್ಯಾಂಡಿಲ್ಯಮುನಿಯ ಮೂಲಕ ಕವಿಯು ತನ್ನ ಆತ್ಮಕಥೆಯನ್ನು ಬಡಲಾಳದ ಅಭಿಲಾಷೆಯನ, ಸಮಾಜದ ಒಳಿತನ್ನು, ದೀನದಲಿತರ ರಕ್ಷಕನ್ನಾಗಿ ದೇವರು ಎಂದಿಗೂ ಅವರೊಂದಿಗೆ ಇರುತ್ತಾನೆ ಎಂಬ ಸಂದೇಶ ಸಾರಿದ್ದಾನೆ.

ಕಾರ್ಲಮಾರ್ಕ್ಸ್ ತಿಳಿಸುವ ಹಾಗೆ ಸಮಾಜವೆಂಬುವುದು ಕಾರ್ಮಿಕರ ಆಳ್ವಿಕೆಯಲ್ಲಿ ಮುನ್ನಡೆಯಬೇಕು ಅಂದಾಗಲೇ ಸಮಾನತೆಯು ಮೂಡುತ್ತದೆ. ಅದೇ ತೆರನಾಗಿ ಕನಕದಾಸರು ಶತಶತಮಾನಗಳಿಂದ ಮೇಲ ವರ್ಗದವರಿಂದ ತುಳಿತಕ್ಕೆ ಒಳಗಾಗಿದ ಕೆಳವರ್ಗದ ಜನರ ಪ್ರತಿಭಟನೆಯ ಮಾತುಗಳನ್ನು ವಿರೋಧಿಸುವ ಮನೋಭಾವನೆಯನ್ನು ರಾಗಿಯ ಮುಖೇನ ಮಾಡಿರುವುದು ಕೆಳವರ್ಗದ ನೋವಿಗೆ

ಧ್ವನಿಯಾಗಿ ಕಂಡುಬರುತ್ತದೆ. ಹಿಂದಿನಿಂದಲೂ ಈ ಜಗದಲ್ಲಿ ವಿರೋಧಿಸದೇ, ಹೋರಾಡದೇ ಯಾವುದೇ ಸವಲತ್ತುಗಳನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಕನಕದಾಸರು ಈ ಕೃತಿಯಲ್ಲಿ ಸಾಭಿತುಪಡಿಸಿದ್ದಾರೆ.

ಜಗತ್ತಿನ ಯಾವ ಸಾಹಿತ್ಯದಲ್ಲಿಯೂ ಆಹಾರ ಧಾನ್ಯಗಳನ್ನು ರೂಪಕಗಳಾಗಿ ಇಟ್ಟುಕೊಂಡು ಸಮಾಜದ ಅಸಮಾನತೆಯನ್ನು ಸರಿಪಡಿಸಲು ಕೃತಿರಚಿಸಿರುವುದು ಕಂಡು ಬರುವುದಿಲ್ಲ. ಕನಕದಾಸರು ಈ ಕಾರ್ಯ ವನ್ನು ಮಾಡಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪುರವರು ಕೆಳವರ್ಗದ ಪರವಾಗಿ ಶೋಷಿತ ಜನರ ಧ್ವನಿಯಾಗಿ ತಮ್ಮ ಸಾಹಿತ್ಯವನ್ನು ರಚಿಸಿದ್ದಾರೆ. ಎಲ್ಲರಿಂದಲೂ ಅಲಕ್ಷ್ಯಕ್ಕೆ ಗುರಿಯಾಗಿದ 'ಹಿರೇಹೂ'ವನ್ನು ಕುರಿತು ಪದ್ಯ ರಚಿಸುವುದು ಯಾವುದೇ ವಸ್ತುವಾಗಿರಲಿ, ವ್ಯಕ್ತಿಯಾಗಿರಲಿ ಕೀಳು ಎಂಬ ಭಾವನೆಯನ್ನು ತಾಳದೇ ಪ್ರತಿಯೊಬ್ಬರನ್ನು ಗೌರವದಿಂದ, ಸಮಾನವಾಗಿ ಕಾಣುವಂತಾಗಬೇಕು ಎಂಬುದಾಗಿದೆ. ಇದೇ ಮಾದರಿಯ ಧೋರಣೆಯಿಂದ ಕನಕದಾಸರು 'ರಾಮಧಾನ್ಯಚರಿತೆ'ಯನ್ನು ರಚಿಸಿದ್ದಾರೆ.

"ಈ ಕೃತಿಯನ್ನವರು ಬೇಲೂರಿನಲ್ಲಿ ರಚಿಸದರೋ, ಬಾಡದಲ್ಲಿ ರಚಿಸದರೋ, ವಿಜಯನಗರದಲ್ಲಿ ರಚಿಸಿದರೋ, ಎಲ್ಲಿಯೋ ರಚಿಸಿರಲಿ ಅವರು ವೈರಾಗ್ಯ ಪರವಾಗಿ ಆಧ್ಯಾತ್ಮ ಸಾಧನೆಗೆ ತೊಡಗಿದ ತರುಣದಲ್ಲಿ ಸಿದ್ಧವಾದ ಕೃತಿಯದು; ಅರ್ಥಾತ್ ಇದು ಇವರ ಮೊದಲ ಕೃತಿಯಾಗಿರಬಹುದು. ಅವರು ಸಾಧನೆಯಲ್ಲಿ ಸಿದ್ಧಿಪಡೆದು, ಗುರುಕರುಣೆಗೆ ಪಾತ್ರರಾದ ನಂತರ ಈ ಸ್ವರೂಪದ ಕೃತಿಯ ರಚನೆಗೆ ಅವಕಾಶವಿದ್ದಿರಲಾರದು" ಎಂಬ ದೇಜಗೌರವರ ಮಾತು ಒಪ್ಪಿಕೊಳ್ಳುವಂತಹದು. ಏಕೆಂದರೆ ಸಮಾಜದಲ್ಲಿನ ಸಮಸ್ಯೆಯನ್ನು ಕಟ್ಟುವಾಗಿ ಖಂಡಿಸಿರುವ ಈ ಕೃತಿಯು ಯಾವುದೇ ರೀತಿಯ ಆಧ್ಯಾತ್ಮದ ಪ್ರಭಾವದಿಂದ ದೂರವಿದೆ. ಅದಕ್ಕಾಗಿ ದೇಜಗೌರವರು ಇದನ್ನು ಅವರ ಮೊದಲ ಕೃತಿಯಾಗಿರಬಹುದು ಎಂದು ಅಭಿಪ್ರಾಯಪಡುತ್ತಾರೆ. ಅಂದೂ (ಇಂದೂ) ಸಮಾಜದಲ್ಲಿ ತಾಂಡವಾಡುತ್ತಿದ್ದ ಮೇಲು ಕೀಳೆಂಬ ಭಾವನೆಯಿಂದ ಹದೆಗೆಟ್ಟ ಸಮಾಜವನ್ನು ಕಂಡು ನೊಂದ ಕನಕದಾಸರ ಅಂತರಂಗ ಮಿಡಿದ ನಾದವೇ ಈ ಕೃತಿ.

ಕವಿಯು ಈ ಕಾವ್ಯವನ್ನು 'ಮಹಾಕಾವ್ಯ' ಎಂದು ಕರೆದಿದ್ದರು ಇದೊಂದು ಅಣಕು ಮಹಾಕಾವ್ಯವಾಗಿ ವಿನೋದ ವಿಡಂಬನೆಗಳ ಮೂಲಕ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ದೊಡ್ಡ ಪಿಡುಗೊಂದನ್ನು ಬುಡಮೇಲು ಮಾಡುವ ಮಹತ್ವದ ಕಾರ್ಯದ ರೂಪವಾಗಿದೆ. ಈ ಸಮಸ್ಯೆಯು ಇಂದೂ ಸಮಾಜವನ್ನು ತಿಂದು ನಿಜವ್ಯಕ್ತಿತ್ವವನ್ನು ಹಾಳುಗೆಡುವುದು ದುಷ್ಟಕಾರ್ಯಕ್ಕೆ ಹೆದ್ದಾರಿಯಾಗಿ ಕಂಡುಬರುತ್ತದೆ. ಅದನ್ನು ಸರಿಪಡಿಸುವುದು ಕೇವಲ ಸಮಾನತೆ, ಎಲ್ಲರಿಗೂ ಶಿಕ್ಷಣ ನೀಡುವುದರಿಂದ ಮಾತ್ರ ಸಾಧ್ಯ ಎಂದು ಹೇಳಬಹುದು.

ಪರಾಮರ್ಶನ ಗ್ರಂಥಗಳು :

1. ಶ್ರೀ ಬಿ.ವಾಯ್.ಕೌಜಲಗಿ, ಕನಕದಾಸರ ಜೀವನ, ಸಾಧನೆ, ಗಂಗಾಧರ ಪ್ರಕಾಶನ ತುರುಮರಿ,1972
2. ಬಸವರಾಜ ನಾಯ್ಕರ, ಶ್ರೀ ಕನಕದಾಸರು, ನ್ಯಾಷನಲ್ ಬುಕ್ ಟ್ರಸ್ಟ, ಇಂಡಿಯಾ, 2006
3. ಸಂ:ಡಾ.ಎಸ್.ಎಸ್.ಭಗವತಿ.ಡಾ.ಎಚ್.ಎಸ್.ಮೇಲಿನಮನಿ,ಕನಕದಾಸರ:ಒಂದು ಅಧ್ಯಯನ,ವಿದ್ಯಾನಿಧಿ ಪ್ರಕಾಶನ ಗದಗ,2007
4. ಚಂದ್ರಕಾಂತ ಬಿಜ್ಜರಗಿ, ದಾರ್ಶನಿಕ ಕವಿ ಕನಕದಾಸರು, ಶೈಲಚಂದ್ರ ಪ್ರಕಾಶನ ವಿಜಾಪುರ,2010
5. ಸಂ.ಮಾನಸ, ಕನಕ ಮಹಾ ಸಂಪುಟ, ತನು ಮನು ಪ್ರಕಾಶನ ಮೈಸೂರು, 2016

***

ಬೆಣ್ಣೆಕಲ್ಲು ಶಾಸನ – ಒಂದು ವಿಶ್ಲೇಷಣೆ

***

ರಘುಪ್ರಸಾದ ಟಿ.
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.

ನೂತನ ಜಿಲ್ಲೆ ವಿಜಯನಗರವು ಹಲವು ಕಾರಣಗಳಿಗೆ ಮಹತ್ವವನ್ನು ಪಡೆದಿದೆ. ಪ್ರಾಗಿತಿಹಾಸ, ಐತಿಹಾಸಿಕ ಸಂಗತಿಗಳಿಗೆ ಜೀವಂತ ನಿದರ್ಶನಗಳನ್ನು ತನ್ನೊಡಲೊಳಗೆ ಹುದುಗಿಸಿಕೊಂಡಿದೆ. ಭವ್ಯ ಗತಕಾಲವನ್ನು ಮತ್ತೆ ಮತ್ತೆ ನೆನಪಿಸುವ ಹಲವು ಐತಿಹಾಸಿಕ ಕುರುಹುಗಳು ಇಲ್ಲಿವೆ. ಪ್ರಾಚೀನ ದೇವಾಲಯಗಳು, ಕೆರೆಗಳು, ಶಿಲಾಸ್ಮಾರಕಗಳು, ಶಾಸನಗಳು ಈ ಜಿಲ್ಲೆಯ ಪ್ರಮುಖ ಅಸ್ಮಿತೆಯಾಗಿವೆ. ಇಲ್ಲಿ ದೊರೆತಿರುವ ಶಾಸನಗಳು ಈ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಆ ಮೂಲಕ ಗತಕಾಲದ ರಾಜಕೀಯ, ಧಾರ್ಮಿಕ, ಸಾಹಿತ್ಯಿಕ, ಸಾಮಾಜಿಕ ಜೀವನವನ್ನು ತಿಳಿಯಲು ಮುಖ್ಯ ಆಕರಗಳಾಗಿವೆ. ಇಂಥ ಅನೇಕ ಶಾಸನಗಳಲ್ಲಿ ಪ್ರಮುಖವಾಗಿ ಬೆಣ್ಣೆಕಲ್ಲಿನ ಒಂದು ಶಾಸನವನ್ನು ಅಧ್ಯಯನಕ್ಕೆ ಒಳಪಡಿಸಿ ಅದರ ಮಹತ್ವವನ್ನು ತಿಳಿಯುವುದು ಇಲ್ಲಿಯ ಮುಖ್ಯ ಉದ್ದೇಶವಾಗಿದೆ.

ವಿಜಯನಗರ ಜಿಲ್ಲೆಯ ಆರು ತಾಲೂಕುಗಳಲ್ಲಿ ಹಗರಿಬೊಮ್ಮನಹಳ್ಳಿಯೂ ಒಂದು ಪ್ರಮುಖ ತಾಲೂಕು ಪ್ರದೇಶ. ಇದೇ ತಾಲೂಕಿಗೆ ಸೇರಿದ ಗ್ರಾಮ ಬೆಣ್ಣೆಕಲ್ಲು. ಇಲ್ಲಿಯ ಪ್ರಾಚೀನ ಸ್ಮಾರಕವಾದ ಕಲ್ಲೇಶ್ವರ ದೇವಾಲಯದಲ್ಲಿ ದೊರೆತ ಒಂದು ಶಾಸನವು ಹಲವು ಕಾರಣಗಳಿಗೆ ವಿಶೇಷತೆಯನ್ನು ಪಡೆದಿದೆ. ಒಟ್ಟು 77 ಸಾಲುಗಳನ್ನು ಒಳಗೊಂಡ ದೀರ್ಘಶಾಸನವಾಗಿದ್ದು ಹೊಯ್ಸಳ ಅರಸ ವೀರನರಸಿಂಹನ ಮಹಾಪ್ರಧಾನ ಅಮಿತಯ್ಯ ದಂಡನಾಯಕನು ಕಟ್ಟಿಸಿದ ದೇವಾಲಯಗಳ ವಿವರ ಹಾಗೂ

ದೇವಾಲಯಗಳ ನಿತ್ಯ ಕಾರ್ಯಗಳು ನಿರಂತರವಾಗಿ ನಡೆಯಲು ದಾನಬಿಟ್ಟ ವಿಚಾರವನ್ನು ತಿಳಿಸುತ್ತದೆ. ಕೇವಲ ದಾನದ ವಿಷಯವನ್ನು ತಿಳಿಸುತ್ತಿದ್ದರೆ ಈ ಶಾಸನವು ಅಷ್ಟೊಂದು ಮಹತ್ವ ಪಡೆಯುತ್ತಿರಲಿಲ್ಲವೇನೋ. ಆದರೆ ದಾನದ ವಿವರದ ಜೊತೆಗೆ ಹೊಯ್ಸಳರ ವಂಶ ಸ್ಥಾಪನೆಯ ವಿವರ, ಆಕಾಲದ ಅರಸರ ಬಿರುದಾವಳಿಗಳು, ಧಾರ್ಮಿಕ ಆಚರಣೆಗಳು, ಬೆಳೆಗಳು, ಉದ್ಯಾನವನಗಳು ಮತ್ತು ಈ ಗ್ರಾಮವು ಪ್ರಾಚೀನವಾಗಿ ಹೇಗೆ ಪ್ರಮುಖ ಪ್ರದೇಶವಾಗಿತ್ತು ಎಂಬ ವಿವರಗಳು ದೊರೆಯುತ್ತವೆ. ಸಾಹಿತ್ಯಿಕವಾಗಿ ಬೆಣ್ಣೆಕಲ್ಲು ಶಾಸನವು ಗುರುತಿಸಬಹುದಾದ ಪ್ರಮುಖ ಶಾಸನಗಳಲ್ಲಿ ಒಂದು. ಕಂದಪದ್ಯ ಹಾಗೂ ವಿವಿಧ ವೃತ್ತಗಳಲ್ಲಿ ವ್ಯಕ್ತವಾದ ವರ್ಣನೆಗಳು ಅತ್ಯಂತ ಕಾವ್ಯಾತ್ಮಕವಾಗಿವೆ.

ಯಾವುದೇ ಒಂದು ಶಾಸನವನ್ನು ಕೇವಲ ರಾಜಕೀಯ ಅಧ್ಯಯನಕ್ಕೆ ಸೀಮಿತಗೊಳಿಸದೆ ಸಾಂಸ್ಕೃತಿಕವಾಗಿ ವಿಶ್ಲೇಷಣೆಗೆ ಒಳಪಡಿಸಿದರೆ ಹಲವು ವಿಶಿಷ್ಟ ಸಂಗತಿಗಳನ್ನು ಅದು ಬಿಟ್ಟುಕೊಡುತ್ತದೆ. ಬೆಣ್ಣೆಕಲ್ಲು ಶಾಸನವು ಸಾಂಸ್ಕೃತಿಕವಾಗಿ ಅಂತಹ ವಿಶೇಷತೆಗಳಿಂದ ಕೂಡಿದ ಶಾಸನವಾಗಿದೆ. ಈ ಶಾಸನದ ಕಾಲವನ್ನು ಕ್ರಿ.ಶ. 1226 ಎಂದು ವಿದ್ವಾಂಸರು ಗುರುತಿಸಿದ್ದಾರೆ. ಕನ್ನಡದ ಅನೇಕ ಶಾಸನಗಳಂತೆಯೇ "ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ" ಎಂಬ ಶಿವಸ್ತುತಿಯಿಂದಲೇ ಆರಂಭಗೊಳ್ಳುತ್ತದೆ.

ಹೊಯ್ಸಳರ ವಂಶಮೂಲ :

ಹೊಯ್ಸಳರ ದೊರೆ ವೀರನರಸಿಂಹನ ಕಾಲದಲ್ಲಿ ರಚನೆಗೊಂಡ ಈ ಶಾಸನವು ಹೊಯ್ಸಳ ವಂಶದ ಹುಟ್ಟಿನ ಕುರಿತು ಪ್ರಸಿದ್ಧ ಕತೆಯೊಂದನ್ನು ಚಿತ್ರಿಸಿದೆ. ಶಶಕಪುರದ ವಾಸಂತಿಕೆಯಲ್ಲಿ ಸಳನೆಂಬುವನು ಗುರುವಿನ ಆಜ್ಞೆಮೇರೆಗೆ ಹುಲಿಯನ್ನು ಹೊಡೆದುರುಳಿಸಿ ಹೊಯ್ಸಳನಾದ ಸಂಗತಿಯನ್ನು ರೋಚಕವಾಗಿ ಕಟ್ಟಿಕೊಟ್ಟಿದೆ. ಹೊಯ್ಸಳರ ಮೂಲ ಪುರುಷ ಸಳ ಎಂಬುದನ್ನು ಶಾಸನವು ದಾಖಲಿಸಿದೆ. ಇಂತಹ ವೀರೋಚಿತ ಘಟನೆಯೊಂದಿಗೆ ಜನಿಸಿದ ವಂಶ ತಮ್ಮದೆನ್ನುವ ಹಿರಿಮೆಯನ್ನು ಶಾಶ್ವತಗೊಳಿಸುವ ಉದ್ದೇಶ ಕಂಡುಬರುತ್ತದೆ. ಶಾಸನಗೊಳಿಸುವ ಉದ್ದೇಶವೇ ಶಾಶ್ವತಗೊಳ್ಳುವ ಪ್ರಕ್ರಿಯೆಯ ಭಾಗ. ಇಂತಹ ಹಿರಿಮೆಯ ವಂಶದಲ್ಲಿ ಪ್ರಖ್ಯಾತರಾದ ವಿನಯಾದಿತ್ಯ, ಎರೆಯಂಗ, ವಿಷ್ಣು, ನರಸಿಂಹ, ಬಲ್ಲಾಳ ಇವರ ಸಾಲಿಗೆ ಸೇರಿದವನು ವೀರನರಸಿಂಹ. ಇವನನ್ನು ಯದುಕುಳತಿಳಕ, ಸೋಮವಂಶ ಪ್ರದೀಪವೆಂದೆಲ್ಲಾ ವರ್ಣಿಸಲಾಗಿದೆ.

ಅಮಿತ ದಂಡನಾಯಕನ ವ್ಯಕ್ತಿಚಿತ್ರ :

ನರಸಿಂಹನ ದಂಡನಾಯಕನಾದ ಅಮಿತಯ್ಯನೇ ಈ ಶಾಸನದ ಕೇಂದ್ರಬಿಂದು. ಕಾವ್ಯಾತ್ಮಕವಾದ ಈ ಶಾಸನವನ್ನೇ ಒಂದು ಪುಟ್ಟಕಾವ್ಯವೆಂದು ಪರಿಭಾವಿಸಿದರೆ ಅಮಿತ ದಂಡನಾಯಕನೇ ಇಲ್ಲಿಯ ನಾಯಕ ಪಾತ್ರವಾಗಿ ಕಂಡುಬರುತ್ತಾನೆ. ಅಮಿತಯ್ಯನ ಶೌರ್ಯ, ತ್ಯಾಗಗುಣಕ್ಕೆ ಅವನ ವಂಶವೂ ಹೇಗೆ ಕಾರಣವಾಗಿದೆ ಎನ್ನುವುದನ್ನು ಇಲ್ಲಿ ಚಿತ್ರಿಸಲಾಗಿದೆ. ಅವನ ತಂದೆ ವಾಮರಸನೂ 'ವೀರ ಗುಣೋದ್ಧಾಮ'ನಾಗಿದ್ದನೆಂದೂ ತಂದೆಗೆ ತಕ್ಕ ಮಗನೆಂದೂ ತಿಳಿಸಲಾಗಿದೆ. "ವೀರದೊಳು ಚಾಗದೊಳ್ ಹಿಮಸೇತು ಪ್ರತಿಬದ್ಧಮಪ್ಪ ಜಸಮಂ ಕಯ್ಕೊಂಡನಾ ತಂದೆಯಿಂದೆ ಮಗಂ ವೀರನುದಾರನೆಂಬ ಗುಣದಿಂದೋಪಿದ್ದಪಂ ತಂದೆಗೊಂದು ಮುಖಕಗ್ಗಳಮಾದ ಷಣ್ಮುಖನವೋಲು ಬಲ್ಲಾಳದಂಡಾಧಿಪಂ" ಶಾಸನದಲ್ಲಿ ವ್ಯಕ್ತಗೊಂಡ ಅಮಿತಯ್ಯನ ವ್ಯಕ್ತಿಚಿತ್ರವನ್ನು ಗಮನಿಸಿದರೆ ಇವನು ಹೊಯ್ಸಳರ ಕಾಲದ ಪ್ರಸಿದ್ಧ ದಂಡನಾಗಿದ್ದಂತೆ ತೋರುತ್ತದೆ. ಅಷ್ಟೇ ಅಲ್ಲದೆ ಜನಮುಖಿ ಆಡಳಿತಗಾರನಾಗಿದ್ದಂತೆ ತಿಳಿಯುತ್ತದೆ. ಅಮಿತ ಚಮೂಪನ ನಾಮಾವಳಿಗಳನ್ನು ಗಮನಿಸಿದರೆ ಆ ಕಾಲದಲ್ಲಿ ಅವನಿಗಿದ್ದ ಮಾನ್ಯತೆಯ ಕುರಿತು ಗೊತ್ತಾಗುವುದು. 'ವಾಮರಾಜಪ್ರಿಯತನೂಜಾತ'ನೆಂದು ಅಮಿತನನ್ನು ಕರೆದ ಶಾಸನಕವಿ ಅವನ ವಂಶಕ್ಕಿದ್ದ ಶ್ರೇಷ್ಠತೆಯ ಹಿನ್ನೆಲೆಯನ್ನು ಚಿತ್ರಿಸಿದ್ದಾನೆ.

ಶಾಸನಕವಿ ಅಮಿತನ ತಂದೆ ಹಾಗೂ ಇಬ್ಬರು ಸಹೋದರರ ಹುಟ್ಟಿನ ಕುರಿತು ತಿಳಿಸುವಾಗ "ಪುರುಷತ್ರಯಮೋ ಮೇಣಿದು ಪುರುಷಾರ್ಥತ್ರಯಮೋ ಪೇಳಿಮೆನೆ ಮೂವರ್ಸೋದರರುಂ ಪೆಸರ್ವಡೆದರ್" ಎಂದು ವರ್ಣಿಸಿದ್ದಾನೆ. ಅಂತಹ ವೀರನಾದವನ ಮಗ ಅಮಿತಯ್ಯನೆಂದು ವ್ಯಕ್ತಿಚಿತ್ರಕ್ಕೊಂದು ವೇದಿಕೆಯನ್ನು ಸಜ್ಜುಗೊಳಿಸಿಕೊಂಡು ಕವಿ ಮುಕ್ತಕಂಠದಿಂದ ಹೊಗಳಿದ್ದಾನೆ. ಅಮಿತಯ್ಯನು ಕುದುರೆ ಸವಾರಿಯಲ್ಲಿ ನಿಷ್ಣಾತನೂ, ಈಟಿ, ಭರ್ಚಿಯ ಬಳಕೆಯಲ್ಲಿ ಪ್ರವೀಣನಾಗಿದ್ದನು. ಹಾಗೂ ಅಶ್ವದಳವನ್ನು ಮುನ್ನೆಡೆಸುತ್ತಿದ್ದ ಧುರೀಣ ದಂಡನಾಯಕನು ಇವನಾಗಿದ್ದನು.

"ಸಬಳದ ಸಲ್ಲಹದ ಕುಂತದ ಹಥಳದ ಕುದುರೆಗಾಳಗದ ಬಿನ್ನಣದೊಳುನ್ನತಿಕೆವಡೆದ ಸುಭಟಸವಾರಿ ಚೂಡಾರತ್ನ"ನೆಂದು

"ತುರಗದಳಮಂ ತಂದ ಪಗೆಮೆಚ್ಚೆಗಂಡ" ಎಂತಲೂ ಶಾಸನದಲ್ಲಿ ಇವನನ್ನು ವರ್ಣಿಸಲಾಗಿದೆ. ಇವನಿಗಿದ್ದ ಬಿರುದಾವಳಿಗಳಲ್ಲಿ ಕೆಲವು ಅವನೊಬ್ಬ ಜನಪರ ನಾಯಕನಾಗಿ ಬದುಕಿದ್ದನೆಂಬುದನ್ನು ವಿಶದಗೊಳಿಸುತ್ತವೆ. "ದೀನಾನಾಥ ಕಥಕ ಪುಣ್ಯಪಾಠಕಾದಿ ನಾನಾ ಯಾಚಕಜನಜಂಗಮಪಾರಿಜಾತ" ಎಂದೆಲ್ಲಾ ಹೇಳಲಾಗಿದೆ. ಚಂಪಕಮಾಲಾವೃತ್ತವನ್ನು ಮೊದಲ್ಗೊಂಡು ಹಲವು ವೃತ್ತಗಳಲ್ಲಿ ಶಾಸನಕವಿ ಅಮಿತದಂಡನಾಯಕನ ವ್ಯಕ್ತಿಚಿತ್ರವನ್ನು ಸೊಗಸಾಗಿ ಸೆರೆಹಿಡಿದಿದ್ದಾನೆ. ಯಾವುದೋ ಒಂದು ಮಹಾಕಾವ್ಯದ ನಾಯಕನನ್ನು ಕುರಿತಾದ ವರ್ಣನೆಯೆಂಬಂತೆ ಕಾವ್ಯಾತ್ಮಕವಾಗಿ ಇಲ್ಲಿ ರಚಿಸಲಾಗಿದೆ. ಅಮಿತ ದಂಡನಾಯಕನ ಸುಂದರವಾದ ವ್ಯಕ್ತಿಚಿತ್ರವನ್ನು ಈ ಕೆಳಗಿನ ಒಂದು ವೃತ್ತದಲ್ಲಿ ಗಮನಿಸಬಹುದು.

"ವಿದಿತ ಕಳಂಕನಲ್ಲದ ಕಳಾಧರನುದ್ಧತ ಗೋತ್ರವೈರಿಯ
ಲ್ಲದ ವಿಬುಧಾದಿಪಂ ಕುವಳೆಯದ್ವಿಷನಲ್ಲದಿನಂ ದ್ವಿಜಿಹ್ವನ
ಲ್ಲದ ನುತಭೋಗಿ ಭಂಗಯುತನಲ್ಲದ ಚಾರುಗುಣಾಂಬುರಾಸಿಯೆಂ
ಬುದು ಜಗವರ್ಧಿಯಿಂದಮಿತನಂ ಧುರದೊಳ ಪಗೆಮೆಚ್ಚೆಗಂಡನಂ"

ಚಂಪಕಮಾಲಾ ವೃತ್ತ ಛಂದಸ್ಸಿನಲ್ಲಿ ರಚನೆಗೊಂಡ ಈ ಶಾಸನದ ಸಾಲುಗಳು ಯಾವ ಮಹಾಕಾವ್ಯದ ಸಾಲುಗಳಿಗೂ ಕಡಿಮೆಯಿಲ್ಲದಂತೆ ಕಾವ್ಯಾತ್ಮಕವಾಗಿವೆ. ಹೀಗೆ ಅನೇಕ ವೃತ್ತಗಳಲ್ಲಿ ಅಮಿತ ದಂಡನಾಯಕನನ್ನು ವರ್ಣಿಸಲಾದ ಪದ್ಯಸಾಲುಗಳಿವೆ. ಉಪಮೆ, ರೂಪಕಗಳನ್ನು ಸೊಗಸಾಗಿ ಬಳಸಿದ ಇಲ್ಲಿಯ ಶಾಸನಕವಿ ಬಹುಶಃ ಆ ಕಾಲದ ಪ್ರಸಿದ್ಧ ಕವಿಯೇ ಇರಬೇಕೆನಿಸುತ್ತದೆ. ಆದರೆ ಅವನ ಹೆಸರು ಮತ್ತು ಕೃತಿಗಳು ತಿಳಿದುಬಂದಿಲ್ಲ. ಇದು ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ನಷ್ಟವೆಂದೆ ಹೇಳಬೇಕಾಗುತ್ತದೆ.

ಈ ಶಾಸನದ ಮೂಲಕ ಮತ್ತೊಂದು ಸಂಗತಿಯನ್ನು ತಿಳಿಯಬೇಕಾದದ್ದು ದೇವಾಲಯಗಳ ಪ್ರತಿಷ್ಠಾಪನೆ ಮತ್ತು ಹೆಸರುಗಳ ವಿಶಿಷ್ಟತೆ. ಹೊಯ್ಸಳ ವೀರನರಸಿಂಹದೇವನು ದ್ವಾರಸಮುದ್ರದಿಂದ ಆಳ್ವಿಕೆ ನಡೆಸುತ್ತಿದ್ದ ಸಂದರ್ಭದಲ್ಲಿ ಅವನ ಮಹಾಪ್ರಧಾನನಾದ ಅಮಿತಯ್ಯ ದಂಡನಾಯಕನು ತಾನು ಕಟ್ಟಿಸಿದ ದೇವಾಲಯಗಳಿಗೆ ಅಂಗಭೋಗ, ರಂಗಭೋಗಕ್ಕೆ, ನಿತ್ಯನೇಮ, ನೈವೇದ್ಯಕ್ಕೆ, ಜಾತ್ರೆ, ಉತ್ಸವಗಳಿಗಾಗಿ, ಜೀರ್ಣೋದ್ಧಾರಕ್ಕಾಗಿ ಭೂಮಿದಾನ ನೀಡುತ್ತಾನೆ. ಇಲ್ಲಿ ಅವನು ಕಟ್ಟಿಸಿದ ದೇವಾಲಯಗಳ ಹೆಸರುಗಳು ಶ್ರೀಪದ್ಮಲೇಶ್ವರ, ಶ್ರೀಮದಮಿತೇಶ್ವರ, ಶ್ರೀಲಕ್ಷ್ಮೀನಾರಾಯಣ ದೇವರು, ಶ್ರೀವಾಮೇಶ್ವರದೇವರು, ಶ್ರೀಬಲ್ಲಾಳೇಶ್ವರ, ಶ್ರೀನರಸಿಂಹದೇವರು ಈ ಹೆಸರುಗಳಲ್ಲಿ ತನ್ನ ಅರಸನ ಹಾಗೂ ಅರಸನ ವಂಶದವರ ಹೆಸರಿನಲ್ಲಿ ಶ್ರೀಬಲ್ಲಾಳೇಶ್ವರ, ಶ್ರೀನರಸಿಂಹದೇವರು, ತನ್ನ ತಂದೆಯ ಹಾಗೂ ತನ್ನ ಹೆಸರಿನಲ್ಲಿ ಶ್ರೀವಾಮೇಶ್ವರ ಹಾಗೂ ಶ್ರೀಅಮಿತೇಶ್ವರ ಎಂಬ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಲಾಗಿರುವುದು ತಿಳಿದುಬರುತ್ತದೆ. ಆ ಮೂಲಕ ದೈವಿಕ ಶಕ್ತಿಗಳೊಂದಿಗೆ ತಮ್ಮ ಹೆಸರುಗಳು ಶಾಶ್ವತವಾಗಿರಬೇಕೆಂಬ ಮಹದಾಸೆಯು ಹಲವು ಅರಸರು ಹಾಗೂ ಅಧಿಕಾರಿಗಳಲ್ಲಿದ್ದುದು ಇಂತಹ ಅನೇಕ ಶಾಸನಗಳ ಹಿನ್ನೆಲೆಯಲ್ಲಿ ಗುರುತಿಸಬಹುದಾಗಿದೆ.

ಬೆಣ್ಣೆಕಲ್ಲಿನ ವರ್ಣನೆ :

ಹಗರಿ ಬೊಮ್ಮನಹಳ್ಳಿಯ ಒಂದು ಸಾಮಾನ್ಯ ಗ್ರಾಮವಾದ ಇಂದಿನ ಬೆಣಕಲ್ಲು. ಐತಿಹಾಸಿಕವಾಗಿ ಅದು ಶ್ರೀಮಂತ ನಗರವಾಗಿತ್ತೆಂಬುದು ಪ್ರಸ್ತುತ ಶಾಸನದಲ್ಲಿ ತಿಳಿದುಬರುತ್ತದೆ. ವೈವಿದ್ಯಮಯವಾದ ಬೆಳೆಗಳಿಂದ ಕಂಗೊಳಿಸುತ್ತಿದ್ದ ಅಲ್ಲಿನ ನೈಸರ್ಗಿಕ ಸೊಬಗನ್ನು, ಸಮೃದ್ಧತೆಯನ್ನು ಶಾಸನಕವಿಯ ಸಾಲುಗಳಲ್ಲಿಯೇ ಸವಿಯಬೇಕು.

"ಅಂತಾಭರತಾವನಿಯೊಳು
ಕುಂತಳದೇಶಂ ನಿಸರ್ಗಕಾಮದಘಂತಾ
ನೆಂತೆನೆ ನೊಣಂಬವಾಡಿಯ
ನೆಂತಬ್ಜಜ ಕೀರ್ತಿಸಲು ಸಮರ್ಥನೆ ಜಗದೊಳು"

ಕಂದ ಪದ್ಯ ಛಂದಸ್ಸಿನಲ್ಲಿ ಬೆಣ್ಣೆಕಲ್ಲಿನ ವರ್ಣನೆಯನ್ನು ಅದರ ಹೆಸರಿನಷ್ಟೇ ನುಣುಪು, ವೈಯ್ಯಾರದಲ್ಲಿ ನಯವಾಗಿ ಕವಿ ಚಿತ್ರಿಸಿದ್ದಾನೆ. ಸಾಕ್ಷಾತ್ ಮನ್ಮಥನಿಂದಲೂ ವರ್ಣಿಸಲು ಸಾಧ್ಯವಾಗದ ಸುಂದರ ನಾಡಾದ ನೊಳಂಬವಾಡಿಯಲ್ಲಿನ ಬೆಣ್ಣೆಕಲ್ಲು ವಿಶಿಷ್ಟ ಸೌಂದರ್ಯದಿಂದ ಕಂಗೊಳಿಸುತ್ತುರುವುದನ್ನು ವರ್ಣಿಸಲಾಗಿದೆ. ಉತ್ಪಲಮಾಲಾ ವತ್ತದಲ್ಲಿ ಬೆಣ್ಣೆಕಲ್ಲಿನ ಸೌಂದರ್ಯಕ್ಕೆ ಕಾರಣವನ್ನು ಕೆಳಗಿನ ವೃತ್ತಪದ್ಯದಲ್ಲಿ ಸೊಗಸಾಗಿ ತಿಳಿಸಲಾಗಿದೆ.

"ಸಾಗರದಂತಜಸ್ರ ಜಳಪೂರ್ಣತಟಾಕ ಚಯಂಗಳಿಂ ವನಂ
ಪೂಗಮಹೀರುಹ ಕದಳಿತೆಂಗುಲವಂಗತಮಾಳಜಾಳದಿಂದೆ
ಬಾಗಿ ಫಲಗಳಿಂದೆಸೆವ ಕಯ್ವೊಲನೊಪ್ಪುವ ಗಂಧಶಾಳಿಯಿಂ
ದಾಗಳು ಬೆಂಣ್ಕೆಕಲ್ಲೆಸೆದು ತೋರ್ಪುದು ಕೋಗಳಿನಾಡೊಳರ್ತ್ಥಿಯಿಂ॥"

ಸಾಗರದಂತೆ ಸದಾ ನೀರಿನಿಂದ ತುಂಬಿದ ಕೆರೆಗಳನ್ನು ಹೊಂದಿದ, ಸಮೃದ್ಧವಾದ ವಿವಿಧ ಮರಗಳಿಂದ ಕೂಡಿದ, ಕದಳಿ, ತೆಂಗು, ಲವಂಗ ಮುಂತಾದ ಫಲಗಳಿಂದ ಕಂಗೊಳಿಸುವ, ಸುವಾಸನೆಯ ಭತ್ತದಿಂದ ಆಕರ್ಷಕವಾಗಿದ್ದ ಬೆಣ್ಣೆಕಲ್ಲು ಕೋಗಳಿ ನಾಡಿನಲ್ಲಿಯೇ ಅತಿಶ್ರೇಷ್ಟವಾಗಿತ್ತೆಂದು ವರ್ಣಿಸಲಾಗಿದೆ. ವಿವಿಧ ಬಗೆಯ ಹೂವು, ಹಣ್ಣುಗಳಿಂದ ಕೂಡಿ ರಂಜಿಸುತ್ತಿದ್ದ ಉದ್ಯಾನಗಳು ಬೆಣ್ಣೆಕಲ್ಲಿನ ಸೌಂದರ್ಯವನ್ನು ಹೆಚ್ಚಿಸಿದ್ದವು. ಇದರಿಂದಾಗಿ ಹಲವು ಬಗೆಯ ಪಕ್ಷಿಗಳು ಇಲ್ಲಿ ನೆಲೆಕಂಡುಕೊಂಡು ಮನ್ಮಥನ ಆವಾಸಸ್ಥಾನದಂತೆಯೇ ಬೆಣ್ಣೆಕಲ್ಲು ಸೊಗಯಿಸುತ್ತಿತ್ತು ಎಂದು ವರ್ಣಿಸಲ್ಪಟ್ಟಿದೆ. ಗತಕಾಲದಲ್ಲಿದ್ದ ಬೆಣ್ಣೆಕಲ್ಲಿನ ಈ ಸೊಬಗನ್ನು ಹಿಡಿದಿಟ್ಟ ಪ್ರಸ್ತುತ ಶಾಸನವು ಇಂದಿನ ಜನರಿಗೆ ಪ್ರೇರಣೆ ನೀಡುವಂತಾಗಬೇಕು. ಕೆರೆಗಳು ಒಂದು ಊರಿನ ಜೀವನಾಡಿಗಳಾಗಿದ್ದ ಸಂಗತಿಯನ್ನು ಪ್ರಸ್ತುತ ಸಮಾಜ ಅರಿತು ನಡೆಯಬೇಕಾಗಿರುವುದನ್ನು ಇಂತಹ ಶಾಸನಗಳು ನೆನಪು ಮಾಡುತ್ತವೆ.

ರಾಜಗುರು ಕಳೇಶ್ವರ :

ಪ್ರಸ್ತುತ ಶಾಸನವು ಹೊಯ್ಸಳ ದೊರೆ ವೀರನರಸಿಂಹದೇವ ಹಾಗೂ ಅವನ ದಂಡನಾಯಕ ಅಮಿತಯ್ಯನ ವ್ಯಕ್ತಿತ್ವವಲ್ಲದೆ ಅಂದಿನ ಕೋಗಳಿ 500ರ ತಪಚಕ್ರವರ್ತಿಯೆಂದೇ ಕೀರ್ತಿಶಾಲಿಗಳಾಗಿದ್ದ ರಾಜಗುರು ಕಳೇಶ್ವರದೇವರನ್ನು ಕುರಿತು ಇಲ್ಲಿ ಚಿತ್ರಿಸಲಾಗಿದೆ. ಕಾಳಾಮುಖ ಪಾಶುಪತಕ್ಕೆ ಸೇರಿದ ಕಳೇಶ್ವರ ದೇವರ ಗುರು ಪರಂಪರೆಯನ್ನು ಇಲ್ಲಿ ಗುರುತಿಸಬಹುದು. ಕಾಳೇಶ್ವರನನ್ನು ಭೃಗು, ವಿಶ್ವಾಮಿತ್ರ, ಆಂಗಿರಸ, ಕಪಿಲಾದಿ ಮುನಿಶ್ರೇಷ್ಠರಿಗೆ ಸಮಾನಾದ ಮಹಿಮೆಯನ್ನು ತಾಳಿದವನೆಂದು ಬಣ್ಣಿಸಲಾಗಿದೆ. ಇಂತಹ ಕಾಳೇಶ್ವರ ದೇವರ ಸಮ್ಮುಖದಲ್ಲಿ ಭೂದಾನವನ್ನು ನೀಡಲಾದ ವಿವರವನ್ನು ಸೊಗಸಾಗಿ ಶಾಸನ ಚಿತ್ರಿಸಿದೆ. ಕೋಗಳಿ 500ರ ಪ್ರಾಂತದಲ್ಲಿಯೇ ಪ್ರಸಿದ್ಧ ಶೈವಮುನಿಯಾಗಿದ್ದಂತೆ ತೋರುತ್ತದೆ. ಹಾಗಾಗಿ ಅವರ ಸಮ್ಮುಖದಲ್ಲಿ ದಾನ ನೀಡುವುದು ಪವಿತ್ರಕಾರ್ಯವೆಂಬಂತೆ ಭಾವಿಸಿದ್ದಿರಬೇಕು.

ದಾನ ನೀಡುವುದಕ್ಕು ಒಂದು ಕ್ರಮಬದ್ಧತೆಯನ್ನು ರೂಪಿಸಿಕೊಂಡಿದ್ದುದು ತಿಳಿದು ಬರುತ್ತದೆ. ಮೊದಲು ರಾಜ ಹಾಗೂ ದಂಡನಾಯಕ ರಾಜಗುರುವಿನ ಸಮ್ಮುಖದಲ್ಲಿ ದಾನವನ್ನು ಧಾರೆಯೆರೆದು ಕೊಟ್ಟರೆ ನಂತರ ಪ್ರಾಂತದ ಉಪ ಆಡಳಿತ ಘಟಕಗಳ ಅಧಿಕಾರಿಗಳು, ಊರಿನ ಗೌಡರ ಸಮ್ಮುಖದಲ್ಲಿ ಧಾರೆಯೆರೆದು ದಾನಕೊಡುವ ಪದ್ಧತಿ ಇತ್ತು. ಇಲ್ಲಿ ಉಲ್ಲೇಖಿಸಿದಂತೆ ರಾಜಗುರು ಕಳೇಶ್ವರ ದೇವರ ಸಮ್ಮುಖದಲ್ಲಿ ಅಮಿತಯ್ಯ ದಂಡನಾಯಕನು ದಾನ ನೀಡಿರುವುದು ತಿಳಿದುಬರುತ್ತದೆ.

ಶಾಪಾಶಯ :

ಶಾಸನವು ಶಾಶ್ವತವಾಗಿರಲಿ ಎಂಬ ಉದ್ದೇಶ ಶಾಸನವನ್ನು ಹಾಕಿಸುವವರಲ್ಲಿ ಇರುತ್ತಿತ್ತು. ಈ ಕಾರಣಕ್ಕಾಗಿ ಶಾಸನವನ್ನು ರಕ್ಷಣೆ ಮಾಡಲು ಶಾಪಾಶಯಗಳನ್ನು ಶಾಸನದ ಕೊನೆಗೆ ಬರೆಸಲಾಗುತ್ತಿತ್ತು. ಕನ್ನಡದ ಹೆಚ್ಚಿನ ಶಾಸನಗಳಲ್ಲಿ ಶಾಪಾಶಯಗಳು ಬಂದಿರುವುದನ್ನು ಗುರುತಿಲಾಗಿದೆ. ಪ್ರಸ್ತುತ ಶಾಸನದಲ್ಲಿ ಉಲ್ಲೇಖಗೊಂಡ ಶಾಪಾಶಯವು ವಿಶಿಷ್ಟವಾಗಿದೆ. ಶಾಸನದಲ್ಲಿರುವಂತೆ ನಡೆದುಕೊಂಡವರಿಗೆ ಮತ್ತು ಶಾಸನವನ್ನು ರಕ್ಷಿಸಿದವರಿಗೆ, ಧರ್ಮವನ್ನು ಪಾಲಿಸುವವರಿಗೆ ಗಂಗೆ ವಾರಣಾಶಿ ಕುರುಕ್ಷೇತ್ರದಲ್ಲಿ ಸಾವಿರ ಹಸುಗಳ ಕೋಡು ಮತ್ತು ಖುರಗಳಿಗೆ(ಪಾದದ ಗಟ್ಟಿಯಾದ ಹೊದಿಕೆ) ಸುವರ್ಣ ಹಾಗೂ ಪಂಚರತ್ನಗಳಿಂದ ಅಲಂಕರಿಸಿದ ಮತ್ತು ನಾಲ್ಕು ವೇದಗಳಲ್ಲಿ ಪರಿಣಿತರಾದ ಸಾವಿರ ಬ್ರಾಹ್ಮಣರಿಗೆ ಗೋದಾನ ನೀಡಿದ ಪುಣ್ಯ ಒದಗುವುದೆಂದು ಹೇಳಲಾಗಿದೆ. ಅಂದಿನ ಜನರಲ್ಲಿದ್ದ ಪಾಪ–ಪುಣ್ಯಗಳ ಬಗ್ಗೆ ಇದ್ದ ನಂಬಿಕೆಗಳನ್ನು ಆಧರಿಸಿ ಈ ರೀತಿ ಬರೆಸಲಾಗುತ್ತಿದ್ದು ಒಂದುವೇಳೆ ಶಾಸನಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಅಥವಾ ಶಾಸನವನ್ನು ನಾಶಗೊಳಿಸಿದರೆ ಗಂಗೆವಾರಣಾಶಿಕುರುಕ್ಷೇತ್ರದಲ್ಲಿ ಗೋವುಗಳನ್ನು ಮತ್ತು ಬ್ರಾಹ್ಮಣರನ್ನು ಕೊಂದಪಾಪ ಹೊಂದಿ ಪಂಚಮಹಾಪಾತಕಕ್ಕೆ ಗುರಿಯಾಗಬೇಕಾಗುತ್ತದೆಂದು ಭಯಹುಟ್ಟಿಸಲಾಗಿದೆ. ಆ ಮೂಲಕ ಶಾಸನದ ರಕ್ಷಣೆಗೆ ಪ್ರಯತ್ನಿಸಲಾಗುತ್ತಿದ್ದ ವಿಷಯ ಇದರಿಂದ ತಿಳಿದುಬರುತ್ತದೆ. ಈ ಶಾಸನದ ಕೊನೆಯ ಭಾಗದಲ್ಲಿ ಉಕ್ತಗೊಂಡ ಸಂಸ್ಕೃತ ಶ್ಲೋಕಗಳು ಇದನ್ನೇ ಪ್ರತಿಪಾದಿಸುತ್ತವೆ

"ಸ್ವದತ್ತಂ ಪರದತ್ತಂ ವಾ ಯೋ ಹರೇತಿ ವಸುಂಧರಾಂ
ಷಷ್ಠಿವ್ಷರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ ॥"

ತಾನು ನೀಡಿದ್ದ ಭೂಮಿಯನ್ನಾಗಲೀ, ಪರರು ನೀಡಿದ ಭೂಮಿಯನ್ನಾಗಲೀ ಅಪಹರಿಸಿದರೆ ಅರವತ್ತು ಸಾವಿರ ವರ್ಷ ಸಗಣಿಯ ಹುಳುವಾಗಿ ಹುಟ್ಟುತ್ತಾರೆ.

"ಸಾಮಾನ್ಯೋಯಂ ಧರ್ಮಸೇತುಂ ನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ
ಸರ್ವಾನೇತಾನ್ಭಾವಿನಃ ಪಾರ್ಥಿವೇಂದ್ರಾನ್ಭೂಯೋಭೂಯೋಯಾಚತೇ ರಾಮಚಂದ್ರಃ ॥"

ಧರ್ಮವೆಂಬ ಸೇತು ಸಾಮಾನ್ಯರಿಗೂ ರಾಜರಿಗೂ ಒಂದೇ. ಇದನ್ನು ನೀವು ಕಾಲದಿಂದ ಕಾಲಕ್ಕೆ ಕಾಪಾಡಬೇಕು. ಹೀಗೆಂದು ಮುಂಬರುವ ರಾಜರಿಗೆ ರಾಮಚಂದ್ರನು ವಿನಂತಿಸಿ ಮತ್ತೆ ಮತ್ತೆ ನೆನಪಿಸುತ್ತಾನೆ. ಎಂದು ಹೇಳಲಾಗಿದೆ. ಶಾಸನಗಳ ರಕ್ಷಣೆಯೂ ಒಂದು ಶ್ರೇಷ್ಠ ಧರ್ಮಕಾರ್ಯವಾಗಿದ್ದು ಅದನ್ನು ರಕ್ಷಿಸುವಂತೆ ರಾಮನೇ ಹೇಳಿದ್ದಾನೆ ಎಂದು ಹಾಗೂ ಪರರ ಭೂಮಿಯನ್ನು ಅಪಹರಿಸುವುದು ಅತ್ಯಂತ ಹೇಯ ಕೃತ್ಯವೆಂದೂ, ಆ ರೀತಿ ಮಾಡಿದವರು ಅರವತ್ತು ಸಾವಿರ ವರ್ಷ ಸೆಗಣಿಯ ಹುಳುವಾಗಿ ಹುಟ್ಟುತ್ತಾರೆಂದು ಇಲ್ಲಿ ಹೇಳಲಾಗಿದೆ. ಶಾಸನಗಳ ರಕ್ಷಣೆಗಾಗಿ ಮಾಡಿಕೊಂಡಿದ್ದ ವ್ಯವಸ್ಥೆ ಅಂದಿನ ಅನಿವಾರ್ಯವಾಗಿತ್ತು. ಪಾಪ–ಪುಣ್ಯ, ಸ್ವರ್ಗ–ನರಕ, ಪುನರ್ಜನ್ಮದ ಬಗೆಗಿನ ಜನರ ನಂಬಿಕೆಗಳನ್ನೆ ಹಿನ್ನೆಲೆಯಾಗಿಸಿಕೊಂಡ ರಾಜರು, ಅಧಿಕಾರಿಗಳು, ದಾನಿಗಳು ಶಾಸನಗಳನ್ನು ನಾಶ ಮಾಡುವುದು ಪಾಪಕೃತ್ಯವೆಂದೂ, ಪುನರ್ಜನ್ಮದಲ್ಲಿ ಹೇಸಿಗೆಯ ಹುಳುವಾಗಿ ನಿರಂತರ ಜನಿಸುವಂತಾಗುತ್ತದೆ ಎಂದು ಜನರಲ್ಲಿ ಭಯವನ್ನು ಉಂಟು ಮಾಡುತ್ತಿದ್ದರು. ಬಹುಶಃ ಇಂತಹ ಶಾಪಾಶಯಗಳ ಕಾರಣದಿಂದಲೇ ಅನೇಕ ಶಾಸನಗಳು ಇಂದಿಗೂ ನಮಗೆ ಕಾಣಲು ಸಿಗುತ್ತಿವೆ.

ಮೇಲಿನ ಅನೇಕ ಸಂಗತಿಗಳು ಬೆಣ್ಣೆಕಲ್ಲು ಶಾಸನದ ಮಹತ್ವಕ್ಕೆ ಹಿಡಿದ ಕನ್ನಡಿಯಾಗಿವೆ. ಪ್ರಸ್ತುತ ಶಾಸನ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ವಿಷಯಗಳ ಮೇಲೆ ಬೆಳಕು ಚೆಲ್ಲುವ ಕಾರಣಕ್ಕೆ ಪ್ರಮುಖವಾದ ಸಾಂಸ್ಕೃತಿಕ ಆಕರವಾಗಿ ನೋಡಲಾಗಿದೆ. ಬೆಣ್ಣೆಕಲ್ಲು ಶಾಸನವೊಂದರಿಂದಲೇ ಇಷ್ಟೆಲ್ಲಾ ನಮ್ಮ ಪ್ರಾಚೀನ ಕಾಲದ ಬದುಕಿನ ಸಾಂಸ್ಕೃತಿಕ ವಿವಿಧ ಆಯಾಮಗಳನ್ನು ತಿಳಿಯಲು ಸಾಧ್ಯವಾಗುವುದಾದರೆ ಇಂತಹ ಅನೇಕ ಶಾಸನಗಳು ವಿಜಯನಗರ ಜಿಲ್ಲೆಯಾದ್ಯಂತ ಅಧ್ಯಯನಕ್ಕಾಗಿ ಕೈಬೀಸಿ ಕರೆಯುತ್ತಿವೆ. ಆ ಮೂಲಕ ಹೊಸ ಜಿಲ್ಲೆಯ ಪ್ರಾಚೀನ ಸಾಂಸ್ಕೃತಿಕ ಚರಿತ್ರೆಯನ್ನು ಗಟ್ಟಿಗೊಳಿಸಬೇಕಿದೆ.

ಆಕರ ಗ್ರಂಥಗಳು :

1. ಡಾ.ದೇವರಕೊಂಡಾರೆಡ್ಡಿ (ಸಂ)ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 1 (ಬಳ್ಳಾರಿ ಜಿಲ್ಲೆ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ 1998
2. ಶ್ರೀನಿವಾಸ ರಿತ್ತಿ, ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2000
3. ಡಾ.ದೇವರಕೊಂಡಾರೆಡ್ಡಿ, ಕರ್ನಾಟಕ ಶಾಸನಗಳಲ್ಲಿ ಶಾಪಾಶಯ,– ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ. 2008

ಮಾರ್ಗದರ್ಶಕರು :
ಡಾ. ಜಯರಾಮಯ್ಯ ವಿ.
ಸಹ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
ದಾವಣಗೆರೆ ವಿಶ್ವವಿದ್ಯಾನಲಯ
ಶಿವಗಂಗೋತ್ರಿ, ದಾವಣಗೆರೆ

***

ಅನುಭವ ಮಂಟಪ – ತಾತ್ವಿಕ ವಿಚಾರಗಳು

***

ಡಾ. ಸಂತೋಷ್ ಕುಮಾರ್ ಆರ್. ಎಂ.
ಮುಖ್ಯಸ್ಥರು, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸಂತ ಫ್ರಾನ್ಸಿಸ್ ಕಾಲೇಜು ಬೆಂಗಳೂರು –560034

ಕರ್ನಾಟಕದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಒಂದು ವಿಶಿಷ್ಟವಾದ ಕಾಲಘಟ್ಟ. ಜಡ್ಡು ಹಿಡಿದಿದ್ದ ಸಮಾಜಕ್ಕೆ ವೈಚಾರಿಕತೆಯ ಸ್ಪರ್ಶ ನೀಡುವ ಮೂಲಕ ಒಂದು ಹೊಸ ಸಮಾಜದ ಸೃಷ್ಟಿಯ ಕನಸನ್ನು ಕಂಡಂತಹ ಶರಣರು, ಬಸವಣ್ಣನವರ ನೇತೃತ್ವದಲ್ಲಿ ನಡೆಸಿದಂತಹ ಕ್ರಾಂತಿ ಅಪೂರ್ವವಾದುದು.

ಬಸವಣ್ಣನವರ ಸಾರಥ್ಯದಲ್ಲಿ ನಡೆದ ಸುಧಾರಣೆಯ ಪ್ರಯತ್ನ ಒಂದು ಸಾಮಾಜಿಕ ಚಳವಳಿಯಾಗಿ ರೂಪುಗೊಂಡು ಸಾಮಾನ್ಯ ಬದುಕಿನ ಎಲ್ಲಾ ಸ್ತರಗಳು ಆ ಚಳವಳಿಯ ಒಂದು ಭಾಗವಾದದ್ದು ಶರಣರ ಪೂರ್ಣದೃಷ್ಟಿಯ ಸಂಕೇತ. "ಜಾತಿ, ಮತ ಲಿಂಗಭೇದವನ್ನು ತಿರಸ್ಕರಿಸಿ ಸಾಮಾಜಿಕ ಕ್ರಾಂತಿಗೆ ಕಾರಣರಾದುದುರಿಂದ ಜಗಜ್ಯೋತಿ ಬಸವೇಶ್ವರ, ಕ್ರಾಂತಿಯೋಗಿ ಬಸವಣ್ಣ, ಭಕ್ತಿ ಭಂಡಾರಿ ಬಸವಣ್ಣ, ಮಹಾಮಾನವತಾವಾದಿ ಎಂದಲ್ಲದೆ ಅರ್ಥರ್ ಮೈಲರ್‌ವರು ಇವರನ್ನು 'ಕರ್ನಾಟಕದ ಮಾರ್ಟಿನ್ ಲೂಥರ್' ಎಂದು ಕರೆದಿದ್ದಾರೆ.

12ನೇ ಶತಮಾನದ ಕ್ರಾಂತಿಕಾರಿ ಚಿಂತಕ ಬಸವಣ್ಣನವರು ಮಾನವೀಯತೆ, ಕಾಯಕ ನಿಷ್ಠೆ ಧರ್ಮದ ಬುನಾದಿಯಾಗಬೇಕು ಎಂದು ಪ್ರಬಲವಾಗಿ ನಂಬಿದ್ದರಿಂದ "ಕಾತಿ ಸಂಕರವಾದ ಬಳಿಕ ಕುಲವನರಸುವರೆ?" ಎಂದು ಪ್ರಶ್ನಿಸಿ ಕಾಯಕ ಜೀವಿಗಳ ಸಂಕುಲವನ್ನು ಸೃಷ್ಟಿಸಿದರು. ವೈವಿಧ್ಯತೆಯಲ್ಲಿ ತೊಡಗಿರುವ ಕಾಯಕಗಳ ಶೂದ್ರರಿಗೆ, ಮಹಿಳೆಯರಿಗೆ ಮತ್ತು ಪಂಚಮರಿಗೆ ಮೊದಲ ಬಾರಿಗೆ ಶಿಕ್ಷಣ ನೀಡಲು ನಿರ್ಧರಿಸಿದರು. ಇದಕ್ಕಾಗಿ ಸಾಮಾಜಿಕ ಸಮಾನತೆ, ಧಾರ್ಮಿಕ ಸಾಮರಸ್ಯ, ಮತ್ತು ಮಾನವೀಯ ಮೌಲ್ಯಗಳ ವೇದಿಕೆಯಾಗಿ ನಿರ್ಮಿಸಲ್ಪಟ್ಟ ಮನುಷ್ಯನ

ಅನುಭವದ ಪರಿಕಲ್ಪನೆಯನ್ನು ಕೇಂದ್ರಸ್ಥಾನದಲ್ಲಿರಿಸಿಕೊಂಡಿರುವ ಒಂದು ಧಾರ್ಮಿಕ ಮತ್ತು ತಾತ್ವಿಕ ವೇದಿಕೆಯಾಗಿ ಅನುಭವ ಮಂಟಪವನ್ನು ಸ್ಥಾಪಿಸಿದರು.

ಈ ಮೂಲಕ ಅನುಭವ ಮಂಟಪದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುವಂತೆ ಮಾಡಿದರು. ಕಾಲಕ್ರಮೇಣ ಅನುಭವ ಮಂಟಪದಲ್ಲಿ ಭಿನ್ನ ಜಾತಿಗಳ ಕಾಯಕಜೀವಿಗಳು ಭಾರತದಲ್ಲಿ ಮೊದಲ ಬಾರಿಗೆ ತಮ್ಮ ಜಾತಿಗಳನ್ನು ಮೀರಿ ಪ್ರಬಲ ವರ್ಗವಾಯಿತು. ಇದರಿಂದ ಶರಣ ಸಾಹಿತ್ಯವು ಪ್ರಬಲವಾಗಿ ಬೆಳೆಯಲು ಹಾಗೂ ಭಿನ್ನ ವಿಚಾರಗಳ ಹುಟ್ಟಿಗೆ ಕಾರಣವಾಯಿತು. ಅಲ್ಲದೆ ಇದುವರೆಗೂ ಜಾತಿ ಸಂಕುರಗಳಿಂದ ಹಿಂದುಳಿಯುತ್ತಿದ್ದ ಜಾತಿಗಳು ಕಾಯಕಗಳ ಹೆಸರುಗಳನ್ನು ಅಭಿಮಾನದಿಂದ ಉಳಿಸಿಕೊಂಡು, ತಮ್ಮ ಜಾತಿ ವಿಷವನ್ನು ಹೊರ ಹಾಕಿದ್ದರಿಂದ ಶರಣರಲ್ಲಿ ಡೋಹರ, ಅಂಬಿಗ, ಮಾದಾರ, ಸಮಗಾರ, ಮೇದಾರ ಮುಂತಾದ ಜಾತಿ ಸೂತಕವನ್ನು ಕಳೆದುಕೊಂಡು ಕಾಯಕ ಸೂಚಗಳಾಗಿ ಸಮಾಜದಲ್ಲಿ ಶಾಶ್ವತವಾಗಿ ಉಳಿದವು.

12ನೇ ಶತಮಾನದ ಶರಣ ಚಳವಳಿಯು ತತ್ವಜ್ಞಾನ ಮತ್ತು ಸಮಾಜ ಸುಧಾರಣೆಯ ಮೂಲಭೂತ ಅಡಿಗಲ್ಲುಗಳಾಗಿವೆ. ಇದು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಸಮತೆಯ ತತ್ವವನ್ನು ಅಭಿವ್ಯಕ್ತಿಸುವ ದಾರ್ಶನಿಕ ವೇದಿಕೆಯಾಗಿತ್ತು. ಹೀಗೆ ವೇದಿಕೆಯಾದ ಈ ಮಂಟಪವು ತನ್ನದೇ ಆದ ಹಲವು ತಾತ್ವಿಕ ವಿಚಾರಗಳನ್ನು ಸಮಾಜದಲ್ಲಿ ಪ್ರಚುರಪಡಿಸಿದವು. ಅನೇಕ ಶರಣರು ತಮ್ಮ ಅನುಭವಗಳನ್ನು "ವಚನ"ಗಳ ರೂಪದಲ್ಲಿ ಮೆರೆಯುತ್ತಾ, ಈ ತಾತ್ವಿಕ ಚಿಂತನೆಗಳಿಗೆ ಆಧಾರ ನೀಡಿದರು.

ಸಮತಾವಾದ :

ಜಾತ್ಯತೀತ ಸಮಾಜ ಕಲ್ಪನೆ ಬಸವಣ್ಣನವರ ಕಣ್ಣಿಗೆ ಮೊದಲು ಬಿದ್ದದ್ದು ಅಂದಿನ ಸಮಾಜದಲ್ಲಿನ ಜಾತೀಯ ವಿಷಮತೆ. ಜಾತಿಯ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆ, ದಲಿತರ ಮೇಲೆ ನಡೆಯುತ್ತಿದ್ದ ಕ್ರೌರ್ಯ ಬಸವಣ್ಣನವರ ಮನಸ್ಸನ್ನು ತುಂಬಾ ಘಾಸಿಗೊಳಿಸಿತು. ಇವರ ಅನುಭವ ಮಂಟಪವು ಜಾತಿ ವಿಮೋಚನೆ, ಲಿಂಗ, ಹಾಗೂ ಧಾರ್ಮಿಕ ಅಸಮಾನತೆಯನ್ನು ತಳ್ಳಿಹಾಕಿ, ಸಮಾನತೆ ಮತ್ತು ಸಾಮರಸ್ಯವನ್ನು ಪ್ರಚಾರ ಮಾಡಿತು. ಮತ್ತು ಶರಣ ಚಿಂತನೆಗಳು "ಜಾತಿಯ ಮೂಲಕ ಶ್ರೇಣೀಕರಣ" ಪ್ರಕ್ರಿಯೆಯನ್ನು ತೀವ್ರವಾಗಿ ಪ್ರಶ್ನಿಸಿತು. ಎಲ್ಲ ಜನರೂ ಒಂದೇ ದೇವರ (ಶಿವನ) ಆನಂದದಲ್ಲಿ ಸಮಾನರು ಎಂಬ ತತ್ವವು ಅವರ ಚಿಂತನೆಯಲ್ಲಿ ಕೇಂದ್ರಸ್ಥಾನದಲ್ಲಿತ್ತು. ಇದರಿಂದಾಗಿ ಬಸವಾದಿಶರಣರು ಇಡೀ ಜಾತಿ ವ್ಯವಸ್ಥೆಯ ವಿರುದ್ಧ ಸೆಟೆದು ನಿಂತರು.

"ಕೊಲುವವನೆ ಮಾದಿಗ
ಹೊಲಸ ತಿಂಬುವವನೆ ಹೊಲೆಯ
ಕುಲಯಾವುದೋ ಆವಂದಿರ ಕುಲ ಯಾವುದೋ?"

ಎಂದು ಪ್ರಶ್ನಿಸುವ ಮೂಲಕ 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವವನು ಕುಲಜನು' ಎಂಬ ವ್ಯಾಖ್ಯಾನ ನೀಡಿದ ಹಿರಿಮೆ ಬಸವಣ್ಣನವರಿಗೆ ಸಲ್ಲುತ್ತದೆ. ಜಾತ್ಯತೀತ ಸಮಾಜದ ಪರಿಕಲ್ಪನೆ ಶರಣರ ಬಹುದೊಡ್ಡ ಕಾಣಿಕೆ.

ಸ್ತ್ರೀ ಸಮಾನತೆ :

ಶತಶತಮಾನಗಳಿಂದ ಶೋಷಣೆಗೆ ಒಳಪಟ್ಟಿದ್ದ ಸ್ತ್ರೀಸಮುದಾಯದ ಧ್ವನಿಯಾದವರು ಬಸವಾದಿ ಶರಣರು. ಹೆಣ್ಣು ಮಾಯೆಯಲ್ಲ ಎಂದು ಪ್ರತಿಪಾದಿಸುತ್ತಾ ಲಿಂಗಬೇಧದ ವಿರುದ್ಧ ಸಿಡಿದೇಳುವ ಮೂಲಕ ಸ್ತ್ರೀ ಸ್ವಾತಂತ್ರ್ಯ ಪ್ರತಿಪಾದನೆ ಮಾಡಿದವರು ಬಸವಣ್ಣನವರು. ಹೆಣ್ಣು ಗಂಡು ಎನ್ನುವ ಕಲ್ಪನೆ ಕೇವಲ ದೇಹಕ್ಕೆ ಮಾತ್ರವೇ ವಿನಃ ಆತ್ಮಕ್ಕೆ ಅಲ್ಲ ಎಂಬ ವಿಶಿಷ್ಟ ಕಲ್ಪನೆ ನೀಡಿದ ಹಿರಿಮೆ ಬಸವಾದಿ ಶರಣರಿಗೆ ಸಲ್ಲುತ್ತದೆ.

ಮೊಲೆ ಮೂಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೋ ಗಂಡೋ ನಾಸ್ತಿನಾಥಾ? –ಗೊಗ್ಗವ್ವೆ

ಹನ್ನೆರಡನೆಯ ಶತಮಾನದ ಕ್ರಾಂತಿಕಾರಿ ಮಹಿಳೆಯರಲ್ಲಿ ಒಬ್ಬಳಾದ ಗೊಗ್ಗವ್ವೆಯು ಲಿಂಗಭೇದ ನೀತಿಯನ್ನು ಅನುಸರಿಸಿಕೊಂಡು

ಬರುತ್ತಿರುವ ಸಮಾಜಕ್ಕೆ ಹಾಕಿದ ಸವಾಲು ಇದಾಗಿದೆ. ಪ್ರಸ್ತುತ ವಚನದ ಮೂಲಕ ಅವಳು ಸ್ತ್ರೀ ಪುರುಷರಿಗೆ ಇರುವ ನೈಸರ್ಗಿಕ ವಿನ್ಯಾಸಗಳನ್ನು ಸ್ಪಷ್ಟಪಡಿಸುತ್ತಲೇ ಇವುಗಳಿಂದ ಆಚೆ ಇರುವ ಪ್ರಾಣಶಕ್ತಿ ಅಥವ ಆಲೋಚನಾ ಸಾಮರ್ಥ್ಯವು ಸ್ತ್ರೀ–ಪುರುಷರಿಬ್ಬರಲ್ಲಿಯೂ ಸಮಾನವಾಗಿದೆ ಎಂದು ಪ್ರತಿಪಾದಿಸುತ್ತಾಳೆ. ಹಾಗೆಯೇ

ಮೊಲೆ ಮುಡಿ ಬಂದಡೆ
ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ
ಗಂಡೆಂಬರು
ನಡುವೆ ಸುಳಿವ ಆತ್ಮನು
ಹೆಣ್ಣೂ ಅಲ್ಲ
ಗಂಡೂ ಅಲ್ಲ
ಕಾಣಾ ರಾಮನಾಥ –ಜೇಡರ ದಾಸಿಮಯ್ಯ.

ಕನ್ನಡದ ಪ್ರಥಮ ವಚನಕಾರನೆಂದು ಗುರುತಿಸಲಾಗಿರುವ ಜೇಡರ ದಾಸಿಮಯ್ಯನು ಸಹ ಇದೇ ಧಾಟಿಯಲ್ಲಿಯೇ ಅನೇಕ ವಚನಗಳನ್ನು ಬರೆದಿರುವನು. ಗಡ್ಡ ಮೀಸೆಗಳು ಗಂಡಸರಿಗೆ ನಿಸರ್ಗದತ್ತವಾಗಿರುವ ಜೈವಿಕ ಲಕ್ಷಣಗಳಾದರೆ ಮೊಲೆ ಮತ್ತು ಗರ್ಭಾಶಯಗಳು ಹೆಂಗಸರಿಗೆ ಇರುವ ವಿಶೇಷ ನೈಸರ್ಗಿಕ ಲಕ್ಷಣವಾಗಿವೆ. ಶಾರೀರಿಕ ರಚನೆಗಳಾಚೆ ಇರುವ ಪ್ರಾಣ, ಮನಸು, ನೈಸರ್ಗಿಕ ಕಾಮನೆಗಳಲ್ಲಿ ಹೆಣ್ಣು–ಗಂಡೆಂಬ ಭೇದವಿಲ್ಲ. ನಿಸರ್ಗವು ವೈವಿಧ್ಯತೆಯನ್ನು ಸ್ಫುರಿಸಿದೆ. ವೈವಿಧ್ಯತೆಯನ್ನೇ ಮೇಲು–ಕೀಳಿನ ಚೌಕಟ್ಟಿಗೆ ಸೇರಿಸಿಕೊಂಡು ಮಹಿಳೆಯೆಂದರೆ ಕನಿಷ್ಠ, ಪುರುಷನೆಂದರೆ ಶ್ರೇಷ್ಠ ಎಂಬ ಅತಾರ್ಕಿಕ ಮತ್ತು ಅವೈಜ್ಞಾನಿಕ ವಾದವನ್ನು ಹರಿಯಬಿಡಲಾಗಿದೆ.

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷಬೆರದಂತೆ ಕಾಣಾ ರಾಮನಾಥ

ಈ ವಚನದಲ್ಲಿ ಜೇಡರ ದಾಸಿಮಯ್ಯನು ಹೆಣ್ಣು ಗಂಡಿನ ನಡುವಿನ ಕೌಟುಂಬಿಕ ಸಂಬಂಧದ ಹಿರಿಮೆಯ ಮಹತ್ವವನ್ನು ಸಾರಿದ್ದಾರೆ.

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ,
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ,
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ,
ಇದಾವಾವ ಪರಿಯಲ್ಲಿ ಕಾಡಿತ್ತು ಮಾಯೆ,
ಈ ಮಾಯೆಯ ಕಳೆವಡೆ ಎನ್ನಳವಲ್ಲ
ನೀವೆ ಬಲ್ಲಿರಿ ಕೂಡಲಸಂಗಮದೇವ

ಬಸವಣ್ಣನವರು ಈ ವಚನದಲ್ಲಿ ಜನಸಮುದಾಯದ ಅರ್ಧದಷ್ಟಿರುವ ಸ್ತ್ರೀಯರನ್ನು ಮಾಯಾ ಬಂಧನದಿಂದ ಬಿಡಿಸುವ ದಾರಿಯನ್ನು ತೋರಿಸಬೇಕೆಂದು ಪ್ರಾರ್ಥಿಸುತ್ತಾರೆ. ಹೆತ್ತ ತಾಯಿಯಾಗಿ, ಕೈಹಿಡಿದ ಮಡದಿಯಾಗಿ, ಮೋಹದ ಮಗಳಾಗಿ ಬಾಳಿನಲ್ಲಿ ಪ್ರೀತಿಯ ಬಳ್ಳಿಯಾಗಿರುವ ಮಹಿಳೆಯನ್ನು 'ಮಾಯೆ' ಎಂದು ತಿರಸ್ಕರಿಸುವುದು ತಪ್ಪೆಂದು ಅಭಿಪ್ರಾಯಪಡುತ್ತಾರೆ.

ಅಕ್ಕಮಹಾದೇವಿ ನೈಜ ಸ್ವಾತಂತ್ರ್ಯಕ್ಕೆ ಪ್ರಾಮುಖ್ಯತೆಯನ್ನು ನೀಡುತ್ತಾಳೆ. ಪುರುಷರ ಸಮಾನವಾಗಿ ಸ್ತ್ರೀಯರಿಗೂ ನೈಜ ಸ್ವಾತಂತ್ರ್ಯಕ್ಕೆ ಅರ್ಹಳು ಎಂಬುದನ್ನು ಒತ್ತಿ ಹೇಳಿದರು. ಅಕ್ಕ ಮಹಾದೇವಿ ಈ ತತ್ವದ ಪ್ರಮುಖ ಪ್ರತಿಪಾದಕಳಾಗಿ ಗುರುತಿಸಿಕೊಂಡರು.

ಕಾಯಕ ತತ್ವ :

ದೇಹವನ್ನೇ ದೇವಾಲಯವನ್ನಾಗಿ ಮಾಡಿಕೊಂಡಿದ್ದು ಚಚನಕಾರರ ಧಾರ್ಮಿಕ ಸಿದ್ಧಾಂತವಾದರೆ, ಕಾಯದಿಂದಲೇ ಕಾಯಕವನ್ನು ಕಟ್ಟಿದ್ದು ಅವರ ಸಾಮಾಜಿಕ ಸಿದ್ಧಾಂತವಾಗಿದೆ. ಕರ್ಮ ವಿಭಜನೆಯ ಮೂಲಕ ಜಾತಿ ವ್ಯವಸ್ಥೆಯನ್ನು ಹುಟ್ಟುಹಾಕಿದ್ದ ವರ್ಣವ್ಯವಸ್ಥೆಯನ್ನು ವಿರೋಧಿಸಿದ ಅವರು ಕಾಯಕ ಸಿದ್ಧಾಂತದ ಮೂಲಕ ಜಾತಿಯ ತಾರತಮ್ಯವನ್ನು ಹೋಗಲಾಡಿಸಲು ಕರ್ಮ ವಿಭಜನೆಯ ಮೂಲಕ

ಜಾತಿ ವ್ಯವಸ್ಥೆಯನ್ನು ಹುಟ್ಟುಹಾಕಿದ್ದ ವರ್ಣವ್ಯವಸ್ಥೆಯನ್ನು ವಿರೋಧಿಸಿದರು. ಹೀಗಾಗಿ ಕಾಯಕ ಸಿದ್ಧಾಂತವು ಕೇವಲ ದುಡಿಮೆಗೆ ಮಾತ್ರ ಸಂಬಂಧಿಸಿರದೆ, ಅದು ಜಾತಿ ವಿನಾಶದ ಪ್ರಬಲ ಅಸ್ತ್ರವೂ ಆಯಿತೆಂಬುದನ್ನು ಮರೆಯುವಂತಿಲ್ಲ. "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ" ಎಂಬ ಬಸವಣ್ಣನವರ ಈ ವಚನದಲ್ಲಿ ಸೈದ್ಧಾಂತಿಕ ಸ್ಪಷ್ಟತೆಯಿದೆ ಹಾಗೂ ಶರಣರಲ್ಲಿ ಜಾತಿನಿರಸನವಿದ್ದುದರಿಂದ ಕಾಯಕವೆಂದರೆ ಕೇವಲ ದುಡಿಯುವ, ಕೆಲಸ ಮಾಡುವ ವಿಷಯಕ್ಕೆ ಮಾತ್ರ ಸಂಬಂಧಿಸಿರದೆ, ಅದು ಜ್ಯಾತ್ಯಾತೀತ ಸಮಾಜ ನಿರ್ಮಾಣಕ್ಕಾಗಿ ಕಾರಣವಾಯಿತೆಂಬುದನ್ನು ಮರೆಯುವಹಾಗಿಲ್ಲ. ಜಾತಿ ನಿರ್ಮೂಲನೆ ಮಾಡುವಲ್ಲಿ ಕಾಯಕವು ಪ್ರಬಲ ಅಸ್ತ್ರವಾದಂತೆ ತೋರುವುದು.

ವಚನಕಾರರಲ್ಲಿ ಕಾಯಕವು ಚೈತನ್ಯದ ಪ್ರತೀಕವಾಗಿದೆ. ಜನಸಂಸ್ಕೃತಿಯ ಪರವಾಗಿದೆ. ಅಲ್ಲದೆ ದೇಹ ಮತ್ತು ಮನಸ್ಸಿನ ಸಮತೋಲನ ಕಾಪಾಡುವ ಶಕ್ತಿ ಇದೆ. ವ್ಯಕ್ತಿಯು ಕಾಯಕದ ಮೂಲಕ ಸ್ವತಂತ್ರನಾಗವನು ಹಾಗೂ ಸ್ವತಂತ್ರನಾಗಲು ಹವಣಿಸುವನು. ಇವೆಲ್ಲವುಗಳ ಮಹತ್ವದಿಂದದೇ "ಕಾಯಕವೇ ಕೈಲಾಸ" ಎಂದು ಸಾರಿ ಹೇಳುತ್ತ ಸಮಾಜದಲ್ಲಿ ವ್ಯಕ್ತಿಯ ಆತ್ಮಗೌರವನ್ನು ಹೆಚ್ಚಿಸುತ್ತದೆ. ವಚನಕಾರರ ಪರಂಪರೆಯು ಜಗತ್ತಿನಲ್ಲಿ ಮೊಟ್ಟ ಮೊದಲ ಬಾರಿಗೆ ಶ್ರಮ ಸಂಸ್ಕೃತಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಮತ್ತು ಮಹತ್ವವನ್ನು ನೀಡಿದ್ದಾರೆ.

ಕಾಯಕದಲ್ಲಿ ನಿರತನಾದಡೆ,
ಗುರುದರ್ಶನವಾದರೂ ಮರೆಯಬೇಕು,
ಲಿಂಗಪೂಜೆಯಾದರೂ ಮರೆಯಬೇಕು,
ಜಂಗಮ ಮುಂದೆ ನಿಂದಿದ್ದರೂ ಹಂಗ
ಹರಿಯಬೇಕು. ಕಾಯಕವೆ ಕೈಲಾಸವಾದ
ಕಾರಣ.
ಅಮರೇಶ್ವರಲಿಂಗವಾಯಿತ್ತಾದಡೂ
ಕಾಯಕದೊಳಗು– ಆಯ್ದಕ್ಕಿ ಮಾರಯ್ಯ

ಕಾಯಕಕ್ಕೆ ಮಹತ್ವ ಕೊಡುವ ಈ ವಚನದಲ್ಲಿ ಆಯ್ದಕ್ಕಿ ಮಾರಯ್ಯ, ಗುರು, ಲಿಂಗ, ಜಂಗಮ ಎಂಬ ತ್ರಿವಿಧಕ್ಕಿಂತ ಕಾಯಕವೇ ಶ್ರೇಷ್ಠ ಎಂದು ಬಿಂಬಿಸುತ್ತಾನೆ. ಕಾಯಕದಲ್ಲಿ ನಿರತನಾಗಿರುವವನಿಗೆ ಬೇರೆ ಇನ್ನೇನು ಕಾಣಬಾರದು ಎಂದು ಎನ್ನುವನು. ತನ್ನ ಗುರು ಬಂದರೂ ಕೂಡ ,ತನ್ನ ಕಾಯಕಕ್ಕೆ ತೊಡಕಾಗಬಾರದು. ಶರಣರಿಗೆ ಗುರುವಿನ ದರ್ಶನ ಮಂಗಳಕರವಾದದ್ದು, ಆದರೂ ಇಲ್ಲಿ ಗುರುವಿಗಿಂತ ಕಾಯಕಕ್ಕೆ ಪ್ರಾಮುಖ್ಯತೆ ಕೊಡುತ್ತಾನೆ ಮಾರಯ್ಯ

ಈ ವಚನದಲ್ಲಿ ಮಾರಯ್ಯ ಕಾಯಕ ಯೋಗಿಯ ಶ್ರಮಕ್ಕೆ ಮೆಚ್ಚುಗೆ ವ್ಯಕ್ತ ಪಡಿಸುತ್ತಾನೆ. ಅಲ್ಲದೆ ,ಹೊಲದಲ್ಲಿ ಅಕ್ಕಿ ಆಯುವ ತನ್ನ ವೃತ್ತಿಯಲ್ಲಿ ತಾನು ಕೈಲಾಸವನ್ನು ಕಾಣುತ್ತೇನೆ ಎಂದು ಹೇಳುತ್ತಾನೆ.ಇಲ್ಲಿ ತನ್ನ ಕಾಯಕದಿಂದ ವ್ಯಕ್ತಿಯೊಬ್ಬ ದೇವರನ್ನು ಮತ್ತು ದೇವರ ಅಸ್ತಿತ್ವವನ್ನು ಅನುಭವಿಸಬಹುದು ಮತ್ತು ತನ್ನ ವೃತ್ತಿಯಿಂದ ದೇವರನ್ನು ಕಂಡುಕೊಳ್ಳಬಹುದು ಎನ್ನುತ್ತಾನೆ . ಈ ವಚನ ಶರಣರು ಕಾಯಕಕ್ಕೆ ನೀಡಿದ ಮಹತ್ವವನ್ನು ಸಾರುತ್ತದೆ.

ಸಂಸಾರವೆಂಬ । ಸಾಗರದ ಮಧ್ಯದೊಳಗೆ ॥
ಬೆಳೆದ ಹೊಡಕೆಯ । ಹುಲ್ಲ ಕೊಯ್ದು ॥
ಮತ್ತಮಾ ಕಣ್ಣ ತೆಗೆದು । ಕಣ್ಣಿಯ ಮಾಡಿ ॥
ಇಹಪರವೆಂಬ । ಉಭಯದ ಗಂಟನಿಕ್ಕಿ ॥
ತುದಿಯಲ್ಲಿ ಮಾಟಕೂಟವೆಂಬ । ಮನದ ಕುಣಿಕೆಯಲ್ಲಿ ॥
ಕಾಯಕವಾಯಿತ್ತು । ಇದು ಕಾರಣ ॥
ಚಂದೇಶ್ವರಲಿಂಗವೆಂಬ । ಭಾವವೆನಗಿಲ್ಲ ॥

ಕಾಯಕ ಮತ್ತು ದಾಸೋಹದ ಹರಿಕಾರರಾದ ಶರಣರು ಕಾಯಕ ತತ್ವವನ್ನು ಬಲವಾಗಿ ಪ್ರತಿಪಾದಿಸಿದ್ದರು. ಚೈನಾ ದೇಶದ ಒಂದು ಗಾದೆ ನೆನಪಿಗೆ ಬರುತ್ತದೆ. ದುಡಿಯದೆ ಊಟ ಮಾಡುವ ಹಕ್ಕು ಯಾರಿಗೂ ಇಲ್ಲ. ಇದನ್ನು ಚಾಚೂ ತಪ್ಪದೆ ಅನುಷ್ಠಾನಕ್ಕೆ ತಂದವರು ಬಸವಾದಿ ಶರಣರು. ನುಲಿಯ ಚಂದಯ್ಯನವರ ಒಂದು ವಚನ ಈ ಕಾಯಕ ತತ್ವವನ್ನು ನಿರೂಪಿಸುತ್ತದೆ.

ಕಾಯಕವೇ ಶಿವ ಭಕ್ತಿ । ಕಾಯಕವೇ ಶಿವ ಭಜನೆ ॥

ಕಾಯಕವೇ ಲಿಂಗಪೂಜೆ । ಶಿವಪೂಜೆ ಶಿವಯೋಗ ॥

ಕಾಯಕವೇ ಆಯಿತ್ತು । ಕೈಲಾಸ ॥

ಕಾಯಕ ತತ್ವದಲ್ಲಿ ನಿಷ್ಠೆಯುಳ್ಳ ಶರಣ ದಂಪತಿಗಳಲ್ಲಿ ಹೂಗಾರ ಮಾದಯ್ಯ ಮತ್ತು ಮಾದೇವಿ ದಂಪತಿಗಳು ಸೇರಿದ್ದಾರೆ. ಇವರ ಜನ್ಮ ಸ್ಥಳದ ಬಗ್ಗೆ ಮಾಹಿತಿ ನನಗೆ ಲಭ್ಯವಾಗಿಲ್ಲ. ಉತ್ತರ ಕರ್ನಾಟಕದ ಎಲ್ಲ ಪ್ರದೇಶಗಳಲ್ಲಿ ಹೂಗಾರ ಮನೆತನದವರು ಸಿಗುತ್ತಾರೆ. ಹೂವಿನ, ಮಾಲೆಗಾರ, ಸರವಂದಿಗ, ಪೂವಾಡಿಗ, ಫೂಲಮಾಲಿ, ಸಮಾಳದ, ವೀಣೇಕಾರ, ಗವಾಯಿ ಎಂಬ ಹೆಸರು ಚಾಲ್ತಿಯಲ್ಲಿದ್ದವು. ಗೌರವ ವಾಚಕಗಳಾದ ಜೀರ, ಗೊರವ ಎನ್ನುವ ಹೆಸರುಗಳೂ ಬಳಕೆಯಲ್ಲಿವೆ. ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಹೂಗಾರ (ಮಾಲೇಗಾರ) ರ ಆರಾಧ್ಯ ದೈವ ಮತ್ತು ಇಷ್ಟದೇವನಾದ ಬಾವಿಯ ಬೊಮ್ಮನನ್ನು ಉಲ್ಲೇಖ ಮಾಡಿದ್ದಾರೆ.

ಆರ್ಥಿಕ ಚಿಂತನೆ :

ವಚನಗಳಲ್ಲಿ ಆರ್ಥಿಕ ಸಮಾನತೆ ಕೇವಲ ತತ್ವಶಾಸ್ತ್ರವಾಗಿಯೇ ಅಲ್ಲ, ಅದು ತಾತ್ಕಾಲಿಕ ಸಮಾಜವನ್ನು ಬದಲಾಯಿಸಲು ಅನುಕೂಲಕರವಾದ ಕ್ರಾಂತಿಕಾರಿ ಆಲೋಚನೆಯಾಗಿತ್ತು. 'ಕಾಯಕವೇ ಕೈಲಾಸ' ಎಂಬ ತತ್ವ ಶ್ರಮದ ಗೌರವವನ್ನು ಶ್ರೇಷ್ಟತೆಯ ಮಟ್ಟಕ್ಕೆ ಎತ್ತಿ, ಆರ್ಥಿಕ ನ್ಯಾಯತೆಯನ್ನು ಗಂಭೀರವಾಗಿ ಪ್ರತಿಪಾದಿಸಿದೆ." ಶರಣರು ವೀರಶೈವ ಧರ್ಮವನ್ನು ಹರಡುವುದಕ್ಕೆ ಸೀಮಿತವಾಗಿರದೇ ಧರ್ಮ ಪ್ರಚಾರದಲ್ಲಿ ಅನೇಕ ಜೀವನ ಮೌಲ್ಯಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ವಚನಗಳ ಮೂಲಕ ಪ್ರಚಾರಮಾಡಿದರು. ಮಾನವನ ಜೀವನ ನಿರ್ವಹಣೆಗೆ ಹಣಕಾಸು ಕೂಡ ಪ್ರಮುಖವಾದದ್ದು ಅದು ಸಮಾಜದ ಉತ್ಪಾದನೆ, ವಿನಿಮಯ ಹಂಚಿಕೆಗೆ ಸಂಬಂಧಪಟ್ಟಿದೆಯಲ್ಲದೆ, ಉದ್ಯೋಗ ಮತ್ತು ವರಮಾನಕ್ಕೂ ಆಧಾರವಾಗಿದೆ. ರಾಷ್ಟ್ರದ ಇತಿಹಾಸದಲ್ಲೇ ಪ್ರಪ್ರಥಮವಾಗಿ ಆರ್ಥಿಕ ವ್ಯವಸ್ಥೆಯನ್ನು ಜಾರಿಗೆ ತರುವಂತಹ ಜವಾಬ್ದಾರಿಯನ್ನು ಕೈಗೊಂಡವರು ಶಿವಶರಣರಾಗಿದ್ದಾರೆ. ಅರ್ಥಕ್ಕೆ ನಿರ್ಣಾಯಕ ಪಾತ್ರವಿದೆ ಎಂದು ಗುರುತಿಸಿ ಅದನ್ನು ಜಾರಿಗೆ ತರಲು ಭಕ್ತಿಮಾರ್ಗವನ್ನು ಅನುಕರಿಸಿದರು. 20ನೇ ಶತಮಾನದಲ್ಲಿ ಕಾರ್ಲ್ ಮಾರ್ಕ್ಸ್, ಮಾರ್ಷಲ್, ಹೇಗೆ, ಕೇನ್ಸ್, ಗಾಂಧೀಜಿ ಇತ್ತೀಚಿನ ಅಮರ್ತ್ಯ ಸೇನ್ ಪ್ರಚಾರಕ್ಕೆತಂದ ವಿಚಾರಗಳನ್ನು 800 ವರ್ಷಗಳ ಹಿಂದೆಯೇ ನಮ್ಮ ಶಿವಶರಣರು ಅಳವಡಿಸಿಕೊಳ್ಳಲು ಪ್ರೇರೇಪಿಸಿದವರು.

ಹೆಚ್ಚಿನ ಆದಾಯವು ದಾನಕ್ಕೆ ಸಲ್ಲಬೇಕೇ ಹೊರತು ವೈಯಕ್ತಿಕ ಬಳಕೆಗಾಗಿ ಸಂಗ್ರಹಗೊಳ್ಳಬಾರದು. ವ್ಯಕ್ತಿಗತ ಸಂಗ್ರಹವನ್ನು ವಚನಕಾರರು ಯಾವತ್ತೂ ಒಪ್ಪುವುದಿಲ್ಲ. ಧನದ ವ್ಯವಹಾರ ಎಂದಾಗ ಅಲ್ಲಿ ದುರಾಸೆಯಿಂದ ವ್ಯವಹಾರದದೃಷ್ಟಿಯಿಂದ ಬಡ್ಡಿಯನ್ನು ಪಡೆಯುವುದು ಸಹ ನಡೆಯುತ್ತಿತ್ತು. ಈ ಬಡ್ಡಿ ಎಂಬುದು ಅಕ್ರಮವಾದ ಧನ ಸಂಗ್ರಹವೆಂದೇ ಪರಿಗಣಿಗಣಿಸಲ್ಪಡುತ್ತಿತ್ತು. ಅದು ದಾನಕ್ಕಾಗಲಿ ದಾಸೋಹಕ್ಕಾಗಲಿ ಬಳಸುವಂತಿರಲಿಲ್ಲ ಇದನ್ನು ಬಸವಣ್ಣ ಹೀಗೆ ಹೇಳುತ್ತಾನೆ" ಒಡವೆ ಭಂಡಾರವ ಕಡವರ ದ್ರವ್ಯವಬಡ್ಡಿ ವ್ಯವಹಾರ ಮಾಡಿಮನೆಯಲ್ಲಿ ಹುಯ್ದುಕೊಂಡಿದ್ದೆನಾದಡ ಅದು ನನ್ನ ಅರ್ಥವಲ್ಲ ಅನರ್ಥವೆಂ ಬೆ" "ಹಡೆದೊಡವೆ ವಸ್ತುವನ್ನು ಮೃಡ ಭಕ್ತರಿಗಲ್ಲದೆಕಡ ಬಡ್ಡಿಯೂ ಕೊಡಕಾಗದು" ಸಂಪನ್ಮೂಲಗಳಿಲ್ಲದೆ ಸಂಪತ್ತು ಇಲ್ಲ. ಸಂಪಾದನೆಯೂ ಇಲ್ಲ ಪ್ರಾಕೃತಿಕ ಸಂಪನ್ಮೂಲಗಳನ್ನು ಸಂಪಾದನೆಯಾಗಿ ಪರಿವರ್ತಿಸಿಕೊಳ್ಳಬೇಕಾದ ಅನಿವಾರ್ಯತೆ ವಚನಕಾರರಿಗಿತ್ತು ಬದುಕು ನಡೆಸಲು ಕಾಯಕದ ಅನಿವಾರ್ಯತೆಯನ್ನು ಮನಗಂಡಿದ್ದರು. ಆದರೆ ಅನಗತ್ಯವಾದ ಸಂಪಾದನೆಯನ್ನು ಮಾಡುತ್ತಿರಲಿಲ್ಲ. ಅದು ವಚನಕಾರದ ನಿಲುವು ಆಗಿತ್ತು. ಎಲ್ಲವನ್ನು ಕೊಡುವವನು ದೇವನೇ ಆಗಿರುವಾಗ ನನ್ನದು ಎನ್ನುವುದು ಯಾವುದೂ ಇಲ್ಲ ಎಂಬ ಭಾವನೆ ವಚನಕಾರರದಾಗಿತ್ತು.

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ
ಸುಳಿದು ಬೀಸುವ ವಾಯು ನಿಮ್ಮ ದಾನ
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ, ರಾಮನಾಥ

ಎಲ್ಲವೂ ದೇವನ ದಾನವೇ ಆಗಿರುವಾಗ ನಮ್ಮದು ಎಂಬುದು ಯಾವುದೂ ಇಲ್ಲ. ಆದ್ದರಿಂದ ಕಾಯಕದಿಂದ ಬಂದದೆಲ್ಲವೂ ಶಿವಾರ್ಪಿತ. "ಅಂದಂಧಿಗೆ ಬಂದ ಧನವನಂಗೆ ವೆಚ್ಚವ ಮಾಡಿ" ಎಂದು "ಅಲ್ಲಮಪ್ರಭು" ಹೇಳುತ್ತಾನೆ ಅಂದರೆ ಧನ ಸಂಗ್ರಹ ಎಂಬುದೇ ವಚನಕಾರರ ಧ್ಯೇಯ. ಅಂತೆಯೇ

ತನು ಮನ ಬಳಲದೆ ಉದ್ದಂಡವೃತ್ತಿಯಲ್ಲಿ ಧನವಗಳಿಸಿ
ತಂದು ಗುರುಲಿಂಗಜಂಗಮಕ್ಕೆ ವೆಚ್ಚಿಸಿ ದಾಸೋಹವ ಮಾಡಿ,
ಭಕ್ತರಾದೆವೆಂಬವರನೆನಗೆ ತೋರದಿರಯ್ಯಾ. –ಚನ್ನಬಸಣ್ಣ.

ತನು ಮನವನ್ನು ತೊಡಗಿಸಿಕೊಂಡು ತನು ಬಗ್ಗಿಸಿ ದುಡಿದು ತಂದ ಧನವಾಗಬೇಕು. ಅಂತಹ ಧನ ದಾನಕ್ಕೂ ದಾಸೋಹಕ್ಕೂ ಸಲ್ಲುತ್ತದೆ. ಆದರೆ ಅನ್ಯಾಯದಿಂದ ಸಂಪಾದಿಸಿದ ಹಣದಿಂದ ದಾಸೋಹ ಮಾಡಿ ಭಕ್ತನಾದದನೆಂದು ಭಾವಿಸುವುದು ತಪ್ಪು. ಎಂಬುದು ಚೆನ್ನಬಸವಣ್ಣನ ಅಭಿಪ್ರಾಯವಾಗಿದೆ.

ಈ ವಚನಗಳನ್ನು ಗಮನಿಸಿದಾಗ ಬಡ್ಡಿಯೂ ನಿರರ್ಥಕಥೆ ಹಾಗೂ ಅದನ್ನು ವರ್ಜಿಸುವ ಕ್ರಮವನ್ನು ವಚನಕಾರರು ನಿರೂಪಿಸಿದ್ದಾರೆ ಕಾಯಕ ಆದಾಯ ಈ ಎರಡು ಒಂದಕ್ಕೊಂದು ಬೆಸೆದು ಕೊಂಡವುಗಳೆ ಆಗಿದೆ. ಆದರೆ ಸತ್ಯ ಶುದ್ಧಕಾಯಕವಾಗಿರಬೇಕು. ಮತ್ತು ಆ ಕಾಯಕದಿಂದ ಬಂದ ಧನ ಸತ್ಕಾರ್ಯಗಳಿಗೆ ಬಳಕೆಯಾಗಬೇಕೆಂಬುದನ್ನು ವಚನಕಾರರು ಪ್ರತಿಪಾದಿಸಿದ್ದಾರೆ. ವಚನಕಾರರ ದೃಷ್ಟಿಯಲ್ಲಿ ಆರ್ಥಿಕತೆ ಹಣ ಸಂಪಾದನೆ ವ್ಯವಹಾರ ಮುಂತಾದ ಅಂಶಗಳಿಗೆ ಮಹತ್ವವಿಲ್ಲ. ಅವುಗಳು ಸಮಾಜದ ಪ್ರಗತಿಗಾಗಿ ಬಳಕೆಯಾಗಬೇಕೇ ಹೊರತು ಆಸ್ತಿಗಳಾಗಿ ರೂಪುಗೊಳ್ಳಬಾರದು. ಎಂಬ ಅಭಿಪ್ರಾಯವು ಸಾರ್ವಕಾಲಿಕ ಸತ್ಯಂವಾಗಿ ಕಾಣುವುದು.

ಹೀಗೆ ಅನುಭವ ಮಂಟಪದಲ್ಲಿ ಕೇವಲ ಚರ್ಚೆಗೆ ವೇದಿಕೆಯಾಗಿ ಕಾರ್ಯನಿರ್ವಹಿಸದೆ ಸಮಾನತೆಯ ತತ್ವಗಳನ್ನು ಪ್ರತಿಪಾದಿಸುವ ಮಹತ್ವದ ಕ್ರಾಂತಿಕಾರಿ ಚಳುವಳಿಯಾಗಿ ಹೊರಹೊಮ್ಮಿದೆ. ಸಂತರ ತಾತ್ವಿಕ ಪ್ರತಿಬಿಂಬಗಳಲ್ಲಿ, ವೈಯಕ್ತಿಕ ಸ್ವ–ಸುಧಾರಣೆ ಮತ್ತು ಸಮುದಾಯ ಒಗ್ಗಟ್ಟಿನ ಪರಿಕಲ್ಪನೆಗಳು ಸಂಕೀರ್ಣವಾಗಿ ಹೆಣೆದುಕೊಂಡಿವೆ. ಸಮಕಾಲೀನ ಸಮಾಜದಲ್ಲಿ ಸಮಾನತೆ, ನ್ಯಾಯ ಮತ್ತು ಧಾರ್ಮಿಕ ಸಹಿಷ್ಣುತೆಯನ್ನು ಉತ್ತೇಜಿಸಲು ಈ ತತ್ವಗಳು ಕಾಲಾತೀತ ಆದರ್ಶಗಳಾಗಿ ಉಳಿದುಕೊಂಡಿವೆ.

ಪರಾಮರ್ಶನ ಗ್ರಂಥಗಳು: :

1. ಶ್ರೀ. ವಿಜಯ ಕುಮಾರ ಕಮ್ಮಾರ– ಬಸವ ಯುಗದ ವಚನಗಳಲ್ಲಿ ಸ್ತ್ರೀ ಸ್ವಾತಂತ್ರ್ಯ ಮತ್ತು ಸಂವೇದನಾ ಶೀಲತೆ, ಒಂದು ಚಿಂತನೆ– ವಚನ ಮಂದಾರ–ಶರಣ ಸಿದ್ಧಾಂತ ಮತ್ತು ಸಾಹಿತ್ಯ ಚಿಂತನ ವೇದಿಕೆ –08–03–2024.
2. ಕೆ. ನೀಲಾ, ಜನಶಕ್ತಿ – ಕನ್ನಡ ವಾರ ಪತ್ರಿಕೆ ಸಂಪುಟ 9, ಸಂಚಿಕೆ 29, 19 ಜುಲೈ 2015.
3. ಡಾ. ಎಂ. ಎಂ. ಕಲಬುರ್ಗಿ ಬಸವಣ್ಣನವರ ವಚನ ಸಂಪುಟ–1993
4. ತಿಮ್ಮೇಗೌಡ ಬಿ.ಪಿ ಮತ್ತು ಸುಮಾ ಆರ್.–ವಚನಕಾರರ ವಚನಗಲಲ್ಲಿ ಆರ್ಥಿಕ ಚಿಂತನೆಗಳು– AKSHARASURYA: Pee Reviewed, Multi Lingual E-Journal.
5. ಚಿದಾನಂದ ಮೂರ್ತಿ ಎಂ., ವಚನ ಸಾಹಿತ್ಯ – 2009, ಸ್ವಪ್ನ ಬುಕ್ ಹೌಸ್ ಬೆಂಗಳೂರು
6. ಡಾ. ವೀರಣ್ಣ ರಾಜೂರ–ಸಮಗ್ರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಭವನ, 1ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು – 560 002

***

ಎಚ್. ಟಿ. ಪೋತೆ ಅವರ ಕಥೆಗಳಲ್ಲಿ ಪ್ರತಿರೋಧದ ನೆಲೆಗಳು

***

ಕಿರಣ ವಲ್ಲೇಪುರೆ
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಕನ್ನಡದ ಪ್ರಸಿದ್ಧ ಕಥೆಗಾರರಾದ ಎಚ್. ಟಿ. ಪೋತೆಯವರು 'ಚಮ್ಮಾವುಗೆ', 'ಬೆತ್ತಲಾದ ಚಂದ್ರ', 'ಕರುಳರಿಯುವ ಹೊತ್ತು...', 'ಮಾದನ ಕರೆಂಟ್ ಕತಂತ್ರ' 'ಅನೇಕಲವ್ಯ' ಮತ್ತು 'ದೇವರ ಧರ್ಮ' ಎಂಬ ಒಟ್ಟು ಆರು ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಈ ಎಲ್ಲಾ ಆರು ಕಥಾ ಸಂಕಲನಗಳನ್ನು ಸೇರಿ 'ಕಪ್ಪುನೆಲದ ಪಾಡು' ಎಂಬ ಪುಸ್ತಕ ಪ್ರಕಟಗೊಂಡಿದೆ. ಇಲ್ಲಿನ ಎಲ್ಲಾ ಕಥೆಗಳಲ್ಲಿ ದಲಿತ ಜನಸಮುದಾಯದ ಸಾಮಾಜಿಕ ಬದುಕಿನ ಚಿತ್ರಣವಿದೆ. ಸಾಮಾಜಿಕ ಅಸಮಾನತೆಯಿಂದ ಅವರು ಅನುಭವಿಸಿದ ನೋವು, ಯಾತನೆ ಮತ್ತು ಅದರಿಂದ ಹೊರಬರಲು ಹುಡುಕಿಕೊಂಡ ಕೆಲವು ಸೂಕ್ಷ್ಮ ಒಳನೋಟಗಳ ಚಿತ್ರಣವಿದೆ. ಅಲ್ಲದೆ ಶಾಂತಿ, ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಬುದ್ಧ, ಬಸವ, ಅಂಬೇಡ್ಕರ್ ಅವರ ಸ್ಮರಣೆ ಮತ್ತು ಕೃತಜ್ಞತಾ ಭಾವನೆ ಇಲ್ಲಿನ ಕಥೆಗಳಲ್ಲಿದೆ. ಉನ್ನತ ಶಿಕ್ಷಣ ಪಡೆದು ಉತ್ತಮ ಬದುಕನ್ನು ಕಟ್ಟಿಕೊಂಡ, ಕುಟುಂಬದ ಮೊದಲ ತಲೆಮಾರಿನ ವ್ಯಕ್ತಿ ಸಾಮಾಜಿಕ ಬದುಕಿನಲ್ಲಿ ತಾನು ಅನುಭವಿಸಿದ ಮತ್ತು ತನ್ನ ಅನುಭವಕ್ಕೆ ದಕ್ಕಿದ ಘಟನೆಗಳನ್ನು, ಸಂಗತಿಗಳನ್ನು ಇಲ್ಲಿ ಕಥೆಗಳಾಗಿ ಹೆಣೆದಿದ್ದಾರೆ. ಇಲ್ಲಿ ಬರುವ ಮುಖ್ಯ ಪಾತ್ರಗಳು ತಮ್ಮ ಶೋಷಣೆಗೆ ಕಾರಣವಾದ ವ್ಯಕ್ತಿ, ಸಮಾಜ ಮತ್ತು ಪದ್ಧತಿಗಳ ವಿರುದ್ಧ ಹೇಗೆ ಪ್ರತಿರೋಧ ಒಡ್ಡುತ್ತವೆ ಮತ್ತು ಪರ್ಯಾಯವಾಗಿ ಹೇಗೆ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತವೆ ಎಂಬುದನ್ನು ಈ ಲೇಖನದಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

1

2010 ರಲ್ಲಿ ಪ್ರಕಟವಾದ 'ಚೆಮ್ಮಾವುಗೆ' ಎಚ್. ಟಿ. ಪೋತೆ ಅವರ ಮೊದಲ ಕಥಾ ಸಂಕಲನವಾಗಿದೆ. ಇದರಲ್ಲಿ 'ಅಪ್ಪ', 'ಅವ್ವ', 'ಬರ', 'ಭಂಗ', 'ಚಮ್ಮಾವುಗೆ', 'ವತನ', 'ಚಲುವ', ಮತ್ತು 'ದಳಿ' ಎಂಬ ಒಟ್ಟು ಎಂಟು ಕಥೆಗಳಿವೆ. 'ಅಪ್ಪ' ಕಥೆಯು ಸ್ತ್ರೀ ಸ್ವಾತಂತ್ರ, ಸ್ವಾವಲಂಬಿಯ ಬದುಕು, ಅವಿಭಕ್ತ ಕುಟುಂಬದ ಮೇಲೆ ಬೆಳಕು ಚೆಲ್ಲುತ್ತದೆ. ಮನೆಯಲ್ಲಿ ಕಿತ್ತು ತಿನ್ನುವ ಬಡತನ, ಕೂಡುಕುಟುಂಬದ ಹೊರೆ, ಸಾಲಗಾರರ ಕಾಟ, ಊರ ಸಾಹುಕಾರನ ದುರುದ್ದೇಶದ ಉಪದೇಶ, ಜಾತಿ ಅಸಮಾನತೆಯ ಅಪಮಾನ ಇವುಗಳೆಲ್ಲಕ್ಕೂ ಶಿಕ್ಷಣವೇ ಮದ್ದು ಎಂದು ಹೇಳಿ ಅಪ್ಪ ತನ್ನ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಾರೆ. ನನಗೆ ಕಷ್ಟವಾದರೂ ನನ್ನ ಮಕ್ಕಳಿಗೆ ಸುಖವಾಗಬೇಕು ಎಂಬುದು ಅಪ್ಪನ ಆಶಯ. 'ಅವ್ವ' ಕಥೆಯು ತಾಯಿ ಪ್ರೀತಿಯ ಮಹತ್ವವನ್ನು ಸಾರುತ್ತದೆ. ಕೂಡುಕುಟುಂಬದಲ್ಲಿ ಅವ್ವನ ದಿನನಿತ್ಯದ ಕೆಲಸಗಳು, ಕುಟುಂಬದ ಕಾಳಜಿ, ಮಕ್ಕಳ ಬಗೆಗಿನ ಪ್ರೀತಿ–ಮಮತೆಯ ಚಿತ್ರಣ ಇಲ್ಲಿದೆ. ಬಡತನದ ಸಂಕಟ ಬದುಕಿನಲ್ಲಿ ಮಗನ ಶಿಕ್ಷಣಕ್ಕೆ ಹಣ ಹೊಂದಿಸಲು ಸಾಧ್ಯವಾಗದಿದ್ದಾಗ ಅವ್ವ–ಅಪ್ಪ ಮನೆಯಲ್ಲಿನ ತಾಮ್ರದ ಕೊಡ ಮಾರಿ ಮಗನಿಗೆ ಶಿಕ್ಷಣ ಕೊಡಿಸುವುದು ಗಮನಾರ್ಹ.

'ಬರ' ಕಥೆಯಲ್ಲಿ ಎಪ್ಪತ್ತರ ದಶಕದ ಬರಗಾಲ ಸಂದರ್ಭದ ಕೌಟುಂಬಿಕ ತಲ್ಲಣಗಳ ಚಿತ್ರಣ ಇದೆ. ಬರಗಾಲ ಬಂದಾಗ ಜಾತಿ ಅಸಮಾನತೆಯನ್ನು ಮೀರಿ ಎಲ್ಲರೂ ದುಡಿಯುವುದಕ್ಕೆ ಹೋಗುವುದು ಇಲ್ಲಿ ಕಂಡುಬರುತ್ತದೆ. ನೀರಿಗೆ, ಅನ್ನಕ್ಕೆ ಬರ ಬಂದರೂ; ಪ್ರೀತಿ, ಸ್ನೇಹಕ್ಕೆ ಬರ ಬರಬಾರದು ಎಂಬ ಜೀವನ ಮೌಲ್ಯವನ್ನು ಈ ಕಥೆ ಕಟ್ಟಿಕೊಡುತ್ತದೆ. ಇಲ್ಲಿ ಬರುವ 'ಬಾಬಾ ಸಾಹೇಬರ್ಹಂಗ ಓದಬೇಕು', 'ಶಿಕ್ಷಣದಿಂದ ಬದುಕು ಹಸನಾಗ್ತದ' ಎಂಬ ಮಾತುಗಳು ಬದುಕಿನ ಸಂಕಟಗಳಿಂದ ಹೊರಬರಲು ಶಿಕ್ಷಣ ಮುಖ್ಯ ಎಂಬುದನ್ನು ಸಾರುತ್ತವೆ. 'ಭಂಗ' ಕಥೆಯಲ್ಲಿ ಅಣ್ಣ–ತಮ್ಮಂದಿರ ನಡುವೆ ಜಗಳದ ಬೀಜಗಳನ್ನು ಬಿತ್ತಿ ತನ್ನ ಬೆಳೆ ಬೆಯಿಸಿಕೊಳ್ಳುವ ಸಾವುಕಾರನ ವಿರುದ್ಧ ಧ್ವನಿ ಎತ್ತುವ ಮತ್ತು ಸಾವುಕಾರನ ಈ ಅನ್ಯಾಯದ ನಡೆಯನ್ನು ಖಂಡಿಸಿ ಅವನಿಗೆ ತಿಳಿಹೇಳುವ ಕಥೆ ಇದೆ. ಅಲ್ಲದೇ ಸತ್ತ ದನಗಳ ಮಾಂಸವನ್ನು ತಿನ್ನುವುದನ್ನು ಬಿಟ್ಟು ಸ್ವಾಭಿಮಾನದ ಬದುಕನ್ನು ನಡೆಸುವ ಬಗ್ಗೆ ಇಲ್ಲಿ ತಿಳಿಹೇಳಲಾಗಿದೆ.

'ಚಮ್ಮಾವುಗೆ'ಯಲ್ಲಿ ಚೆಲುವಜ್ಜ, ಮಾದಜ್ಜನ ಕಥೆ ಇದೆ. ಇಲ್ಲಿ ಆ ಜಾತಿ, ಈ ಜಾತಿ ಎಂದು ದೂರಾಗಿ ಬದುಕದೆ ಎಲ್ಲರೂ ಒಂದಾಗಿ ಬದುಕಬೇಕು ಎಂಬ ನೀತಿ ಇದೆ. ಶಿಕ್ಷಣದ ಮೂಲಕ ದೊಡ್ಡ ಸಾಹೇಬ ಆಗುವ ಕನಸು ಇದೆ. ಅಲ್ಲದೆ ಕಾಮದ ಹಿಂದೆ ಬಿದ್ದು ಸಂಪತ್ತನ್ನು ಕಳೆದುಕೊಂಡ ಯುವರಾಜನ ಉಪಕಥೆಯೂ ಇದೆ. 'ವತನ' ಕಥೆಯಲ್ಲಿ ಭೀಮಶ್ಯಾ ಹೊಲದ ವಿಚಾರದಲ್ಲಿ ಗೌಡನಿಂದ ಮೋಸ ಹೋದಾಗ ಕಾನೂನು, ಪೋಲಿಸ್ ಮೋರೆ ಹೋಗಿ ತನ್ನ ಹೊಲವನ್ನು ಹಿಂಪಡೆಯುತ್ತಾನೆ. 'ಚಲುವ' ಕಥೆಯಲ್ಲಿ ಮೆಲ್ಜಾತಿಯ ಕುಟುಂಬವೊಂದರಲ್ಲಿ ಹುಟ್ಟಿ ಉಸಿರಾಟದ ತೊಂದರೆಯನ್ನು ಅನುಭವಿಸುತ್ತಿರುವ ಮಗುವೊಂದನ್ನು ಕೆಳಜಾತಿಯ ಚಲುವ ತನ್ನ ಅನುಭವದ ಸೊಪ್ಪಿನ ಔಷಧಿ ಮೂಲಕ ಬದುಕುಳಿಸಿದ ಕಥೆ ಇದೆ. 'ದಳಿ' ಕಥೆಯಲ್ಲಿ ಗೌಡನ ಹೊಲದಲ್ಲಿನ ಬಾವಿಯಲ್ಲಿ ದಲಿತ ವ್ಯಕ್ತಿ ನೀರು ಸೇದಲು ಹೋಗಿ, ಹಗ್ಗ ಬಿಚ್ಚಿಕೊಂಡು ತಾಮ್ರ ಕೊಡ ಬಾವಿಯಲ್ಲಿ ಬಿದ್ದಾಗ, ಬಾವಿಗೆ ಜಿಗಿದು ಕೊಡ ತೆಗೆಯುತ್ತಾನೆ. ಇಲ್ಲಿ ಜಾತಿಯ ಕಾರಣ ಗೌಡನು ಆತನನ್ನು ಶಿಕ್ಷಿಸಲು ಮುಂದಾಗುತ್ತಾನೆ. ಅವರು ಮಾಡುವ ಬೆಲ್ಲದ ಗಾಣವನ್ನು ನಿಲ್ಲಿಸುತ್ತಾನೆ ಮತ್ತು ಅವರ ಮನೆಯಲ್ಲಿನ ಹೈನದ ಆಕಳು ಮತ್ತು ಕರುವನ್ನು ತೆಗೆದುಕೊಂಡು ಹೋಗಿ ದೌರ್ಜನ್ಯ ಎಸಗುತ್ತಾನೆ. ಅತೀವ ಸಂಕಟಕ್ಕೀಡಾದ ಕುಟುಂಬ ಪೋಲಿಸರ ಮೊರೆಹೋಗಿ ನ್ಯಾಯವನ್ನು ಪಡೆದುಕೊಳ್ಳುತ್ತಾರೆ.

ಗೌಡನ ದುರುದ್ಧೇಶದ ಉಪದೇಶಗಳನ್ನು ಖಂಡಿಸುವುದು, ಗೌಡರು ಎಸಗುವ ದೌರ್ಜನ್ಯ, ಅನ್ಯಾಯಕ್ಕೆ ಪೋಲಿಸ್, ಕಾನೂನಿನ ಮೊರೆಹೋಗಿ ನ್ಯಾಯ ಪಡೆಯುವುದು, ಜೀವಕ್ಕೆ ಕಂಟಕವಾಗುವ ಮೌಢ್ಯ ಆಚರಣೆಗಳನ್ನು ಒಡೆದುಹಾಕುವುದು, ಜಾತಿ ನಿಂದನೆ ಹಾಗೂ ಜಾತಿ ಅಸಮಾನತೆಯಿಂದ ಮತ್ತು ಬಡತನದಿಂದ ಹೊರಬರಲು ಶಿಕ್ಷಣವೇ ಮುಖ್ಯ ಎಂಬುದು ಇಲ್ಲಿನ ಕಥೆಗಳಲ್ಲಿ ಕಾಣಸಿಗುವ ಪ್ರಮುಖ ಪ್ರತೀರೋಧದ ನೆಲೆಗಳಾಗಿವೆ. ಈ ಕಥೆಗಳು ದುಡಿಯುವ ವರ್ಗಕ್ಕೆ ಸ್ವಾಭಿಮಾನದಿಂದ, ಆತ್ಮಗೌರವದಿಂದ ಬಾಳುವಂತೆ ಪ್ರೇರೆಪಿಸುತ್ತವೆ.

2

2013 ರಲ್ಲಿ ಪ್ರಕಟವಾದ 'ಬೆತ್ತಲಾದ ಚಂದ್ರ' ಕಥಾ ಸಂಕಲನದಲ್ಲಿ 'ಪರಿ', 'ಕಾಗಿಶಕುನ', 'ಬೆಂಕಿ ಬೆಳಕು', 'ಬೆತ್ತಲಾದ ಚಂದ್ರ', 'ಅಲ್ಲಾಪುರದ ಗುಮ್ಮಟ', ಮತ್ತು 'ಸೂರ್ಯ ಚಂದ್ರರಿಲ್ಲದ ನಾಡಿನಲ್ಲಿ' ಎಂಬ ಆರು ಕಥೆಗಳಿವೆ. 'ಪರಿ' ಕಥೆಯಲ್ಲಿ ಸಂವಿಧಾನದ ಮೂಲಕ ಹಿಂದುಳಿದ ಜನಸಮುದಾಯಕ್ಕೆ ಅವರ ಏಳಿಗೆಗಾಗಿ ನೀಡಲಾದ ಮೀಸಲಾತಿ ಸೌಲಭ್ಯವನ್ನು ಇನ್ನೊಂದು ಜನಸಮುದಾಯದವರು ಸುಳ್ಳು ಜಾತಿ ಪ್ರಮಾಣಪತ್ರ ಸೃಷ್ಟಿಸಿ ಸೌಲಭ್ಯವನ್ನು ದೋಚುವ ಹುನ್ನಾರ ಮಾಡಿದಾಗ, ಅದಕ್ಕೆ ಪ್ರತಿರೋಧವಾಗಿ ಅಲ್ಲಿನ ವಿದ್ಯಾರ್ಥಿಗಳು

ಪ್ರತಿಭಟಿಸಿ ಕುಲಪತಿಗೆ ದೂರು ನೀಡುತ್ತಾರೆ. ಕುಲಪತಿ ವಾಲೀಕರ್ ಅವರು ಸಂಬಂಧಿಸಿದವರನ್ನು ಕರೆಸಿ ಮಾತನಾಡಿ ಅವರನ್ನು ಬೈದು, ತಿಳಿ ಹೇಳಿ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಿಕೊಡುತ್ತಾರೆ. 'ಕಾಗಿಶಕುನ' ಕಥೆಯಲ್ಲಿ ಸಮಾಜದಲ್ಲಿ ಬೇರೂರಿದ ಜಾತಿ ಅಸಮಾನತೆ, ಮೂಢನಂಬಿಕೆಯ ಚಿತ್ರಣವಿದೆ. ಮನುಷ್ಯರಿಗಿಂತ ಪಕ್ಷಿಗಳೇ ಮೇಲು ಎಂಬುದನ್ನು ಇಲ್ಲಿ ಹೇಳಲಾಗಿದೆ.

'ಬೆಂಕಿ ಬೆಳಕು' ಕಥೆಯು ಜೋತಿಬಾ ಫುಲೆ ಅವರು ಹೇಳುವ 'ಶೋಷಣೆಯ ವಿರುದ್ಧ ಸಿಡಿದೇಳಬೇಕು, ಹಳ್ಳಿ ಬಿಟ್ಟು ನಗರ ಸೇರಬೇಕು, ಆ ಮೂಲಕ ಜಾತಿ ಅಸಮಾನತೆಯಿಂದ ಮುಕ್ತರಾಗಬೇಕು' ಎಂಬ ಮಾತನ್ನು ಪ್ರತಿನಿಧಿಸುತ್ತದೆ. 'ಬೆತ್ತಲಾದ ಚಂದ್ರ' ಕಥೆಯು 'ನಮಗೆ ಬೇಕಾಗಿರುವದು ಗ್ರಂಥಾಲಯವೇ ಹೊರತು, ದೇವಾಲಯವಲ್ಲ' ಎನ್ನುವ ಅಂಬೇಡ್ಕರ್ ಅವರ ಮಾತನ್ನು ಪ್ರತಿನಿಧಿಸುತ್ತದೆ. 'ಅಲ್ಲಾಪುರದ ಗುಮ್ಮಟ' ಕಥೆ ಅಂತರ್ಜಾತಿ ವಿವಾಹದ ಮೇಲೆ ಬೆಳಕು ಚೆಲ್ಲುತ್ತದೆ. 'ಸೂರ್ಯ ಚಂದ್ರರಿಲ್ಲದ ನಾಡಿನಲ್ಲಿ' ಕಥೆಯಲ್ಲಿ ಚಂದೂರಿನ ಬಡ ಹೆಣ್ಣುಮಗಳು ಚಂದವ್ವ ಬಡತನವನ್ನು ಮೆಟ್ಟಿನಿಂತು ತನ್ನ ಒಬ್ಬನೇ ಮಗ ತ್ಯಾಗಿಯನ್ನು ಶಿಕ್ಷಣ ಕಲಿಸುವ ಕಥೆ ಇದೆ. ಈ ಕಥೆ ಹಿಂದುಳಿದವರ ಏಳಿಗೆಗೆ ಶಿಕ್ಷಣ ಅವಶ್ಯಕವಾಗಿರುವುದನ್ನು ಸಾರುತ್ತದೆ.

ಅನ್ಯಾಯವನ್ನು ಪ್ರತಿಭಟಿಸುವ ಮೂಲಕ ನ್ಯಾಯ ಪಡೆಯುವುದು, ನಮ್ಮನ್ನು ಕೀಳಾಗಿಸುವ ಮನೋಭಾವವನ್ನು ನಿರಾಕರಿಸುವುದು, ನಗರ ಜೀವನದ ಮೂಲಕ ಹಳ್ಳಿಯಲ್ಲಿನ ಜಾತಿಯತೆಯಿಂದ ಹೊರಬರುವುದು, ಗ್ರಂಥಾಲಯದ ಮೂಲಕ ಗುಡಿಯಲ್ಲಿನ ಅಸಮಾನತೆಯಿಂದ ಹೊರಬರುವುದು, ಅಂತರ್ಜಾತಿ ವಿವಾಹದ ಮೂಲಕ ಶ್ರೇಣಿಕೃತ ಜಾತಿವ್ಯವಸ್ಥೆಯಿಂದ ಹೊರಬರುವುದು, ಶಿಕ್ಷಣದ ಮೂಲಕ ಬಡತನದಿಂದ ಹೊರಬರುವುದು ಇಲ್ಲಿನ ಪ್ರಮುಖ ಪ್ರತಿರೋಧದ ನೆಲೆಗಳು ಮತ್ತು ಸಾಂಪ್ರದಾಯಿಕ ವ್ಯವಸ್ಥೆಗೆ ಪರ್ಯಾಯವಾಗಿ ಬದುಕನ್ನು ಕಟ್ಟಿಕೊಳ್ಳುವ ಬಗೆಗಳಾಗಿವೆ.

3

2016 ರಲ್ಲಿ ಪ್ರಕಟವಾದ 'ಕರುಳರಿಯುವ ಹೊತ್ತು...' ಕಥಾ ಸಂಕಲನದಲ್ಲಿ 'ಸಂಭ್ರಮ', 'ಕರುಳರಿಯುವ ಹೊತ್ತು...', 'ಮಾದ–ಮಾದಾಚಾರ್ಯ', 'ಮಾಮ್ಲೇದಾರ ಬಸವರಾಜನೂ ಪಂಢರಿಯೂ', 'ಮನೆ ಮನದ ಮೈಲಿಗೆ', 'ನಾನೇರಿದೆತ್ತರಕ್ಕೆ ನೀವೇರಬಲ್ಲಿರಾ.....?', 'ಹೋಳಿಕಾ', ಮತ್ತು 'ಸರೋಜಮ್ಮನ ಮಗ ವರದರಾಜ' ಎಂಬ ಎಂಟು ಕಥೆಗಳಿವೆ. 'ಸಂಭ್ರಮ' ಕಥೆಯು ಜಾತಿ ಅಸಮಾನತೆಯ ಕರಾಳಮುಖವನ್ನು ಬಿಚ್ಚಿಡುತ್ತದೆ. 'ಕರುಳರಿಯುವ ಹೊತ್ತು...' ಕಥೆಯಲ್ಲಿ ಶಿಕ್ಷಣದ ಮೂಲಕ ಉತ್ತಮ ಬದುಕನ್ನು ಕಟ್ಟಿಕೊಂಡ ವ್ಯಕ್ತಿಯ ಕಥನ ಇದೆ. 'ಮಾದ–ಮಾದಾಚಾರ್ಯ' ಕಥೆಯಲ್ಲಿ ದಲಿತ ವ್ಯಕ್ತಿ ಮಾದನು ಅರ್ಚಕನಾಗುವ ಆಸೆಗೆ ಊರಬಿಟ್ಟು ಪರ ಊರಿಗೆ ಹೋಗಿ ತನ್ನನ್ನು ಮಾದಾಚಾರ್ಯ ಎಂದು ಹಾಗೂ ತಾನೊಬ್ಬ ಅನಾಥ ಎಂದು ಪರಿಚಯಿಸಿಕೊಂಡು ಅರ್ಚಕನೊಬ್ಬನ ಆಶ್ರಯ ಪಡೆಯುತ್ತಾನೆ. ಮುಂದೆ ಆ ಅರ್ಚಕನ ಮಗಳನ್ನು ಮದುವೆಯಾಗಿ ಎರಡು ಮಕ್ಕಳ ತಂದೆಯೂ ಆಗುತ್ತಾನೆ. ಕಥೆಯ ಕೊನೆಗೆ ಮಾದಾಚಾರ್ಯ ಅರ್ಚಕನಲ್ಲ, ಅವನು ಮಾದ ಎಂಬ ಹೆಸರಿನ ದಲಿತ ಎಂದು ಗೊತ್ತಾಗಿ ಸಂಹಾರಕ್ಕೊಳಗಾಗುತ್ತಾನೆ.

'ಮಾಮ್ಲೇದಾರ ಬಸವರಾಜನೂ ಪಂಢರಿಯೂ' ಕಥೆಯಲ್ಲಿ ಕೆರಿಯ ಸೋಮನ ಮೊಮ್ಮಗ ಬಸು ಜಾತಿಯ ಕಾರಣ ಕಟ್ಟೆಯ ಕೆಳಗೆ ಕುಳಿತು ಓದಿ ಮುಂದೆ ದೊಡ್ಡ ಸ್ಥಾನಕ್ಕೆ ಹೋಗಿ ಊರವರಿಂದ ಕಾರ್ಯಕ್ರಮಕ್ಕೆ ಅತಿಥಿಯಾಗಿ ಕರೆಸಿಕೊಂಡು ಗೌರವಕ್ಕೆ ಒಳಗಾದ ಕಥೆ ಇದೆ. ಆತನ ಗೆಳೆಯ ಓದು ಮುಂದುವರಿಸದೇ ಇದ್ದ ಕಾರಣ ಆತ ಸಾಂಪ್ರದಾಯಿಕ ಕೆಲಸದಲ್ಲಿ ಮುಂದುವರೆದಿದ್ದು ಕಾಣಸಿಗುತ್ತದೆ. ಬದುಕಿನ ಬದಲಾವಣೆಗೆ ಶಿಕ್ಷಣ ಮುಖ್ಯ ಎಂಬುದು ಈ ಕಥೆ ಸಾರುತ್ತದೆ. 'ಮನೆ ಮನದ ಮೈಲಿಗೆ' ಕಥೆಯಲ್ಲಿ ಜಾತಿಯ ಕಾರಣ ಬಾಡಿಗೆ ಮನೆ ಪಡೆಯಲು ಪಟ್ಟ ಹರಸಾಹಸದ ಕಥೆ ಇದೆ. ಕೆಳಜಾತಿಯ ಕಾರಣ ಕೆಲವರು ಬಾಡಿಗೆ ಮನೆ ಕೊಡಲು ನಿರಾಕರಿಸುವುದು, ಮಾಂಸಾಹಾರ ಸೇವನೆಯ ಕಾರಣ ಇನ್ನೂ ಕೆಲವರು ಬಾಡಿಗೆ ಮನೆ ಕೊಡಲು ಹಿಂಜರಿಯುವುದು ಕೊನೆಗೆ ಯಾರೊ ಒಬ್ಬರು ಮನೆ ಬಾಡಿಗೆ ನೀಡುವುದು ಮತ್ತು ಅಲ್ಲಿ ಕೇಳುವುದಕ್ಕೆ ಸಿಗುವ ಮಡಿ–ಮೈಲಿಗೆಯ ಮಾತುಗಳು ಸಮಾಜದಲ್ಲಿನ ಜಾತಿ ಅಸಮಾನತೆಯ ಕ್ರೂರ ಮುಖವನ್ನು ಅನಾವರಣ ಮಾಡುತ್ತದೆ.

'ನಾನೇರಿದೆತ್ತರಕ್ಕೆ ನೀವೇರಬಲ್ಲಿರಾ.....?' ಕಥೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರ ಚರಿತ್ರೆಯನ್ನು ಈಶ್ವರ ಪಾತ್ರದ ಮೂಲಕ ನಿರೂಪಿಸಲಾಗಿದೆ. ಕಾರ್ಮಿಕನ ಮಗನಾಗಿದ್ದ ಖರ್ಗೆ ಅವರು ರಾಷ್ಟ್ರೀಯ ನಾಯಕನಾಗಿ ಬೆಳೆಯುವುದು ದೊಡ್ಡ ಸಾಧನೆಯಾಗಿದೆ. ಖರ್ಗೆ ಅವರು ಶಿಕ್ಷಣ, ಹೋರಾಟ, ರಾಜಕೀಯ ಅಧಿಕಾರದ ಮೂಲಕ ಉತ್ತಮ ಬದುಕನ್ನು ಕಟ್ಟಿಕೊಂಡು ಇತರರ ಬದುಕಿಗೆ ದಾರಿದೀಪವಾಗುತ್ತಾರೆ. 'ಹೋಳಿಕಾ' ಕಥೆಯಲ್ಲಿ ಅಕ್ಕನಕೇರಿಯ ಚಂದವ್ವ ಸಂಘಟನೆಯ ಮೂಲಕ ಲೀಡರ್ ಆಗಿ ಕೇರಿ ಜನರಿಗೆ ಸರಕಾರಿ ಕಛೇರಿಯಿಂದ

ಆಗಬೇಕಾದಂತಹ ಕೆಲಸ–ಕಾರ್ಯಗಳನ್ನು ಮಾಡಿಸಿಕೊಡುವ ಮತ್ತು ಸಂದರ್ಭ ಬಂದಾಗ ಧರಣಿ ಮಾಡಿ ಜನರಿಗೆ ಅನುಕೂಲವಾದ ಕಾರ್ಯ ಮಾಡುವ ಕಥೆ ಇದೆ. ಇಲ್ಲಿನ ಮುಖ್ಯ ಪಾತ್ರ ಅನ್ಯಾಯದ ವಿರುದ್ಧ ಸಂಘಟನೆ ಮತ್ತು ಹೋರಾಟದ ಮೂಲಕ ಪ್ರತಿರೋಧ ಒಡ್ಡುವುದು ಕಂಡುಬರುತ್ತದೆ. 'ಸರೋಜಮ್ಮನ ಮಗ ವರದರಾಜ' ಕಥೆಯಲ್ಲಿ ಕೇರಿಯ ವರದರಾಜ ಓದಿ ನ್ಯಾಯದೀಶನಾದ ಕಥೆ ಇದೆ. ಅವನು ಶಾರದಳೊಂದಿಗೆ ಅಂತರ್ಜಾತಿ ವಿವಾಹ ಆಗುತ್ತಾನೆ. ಅಲ್ಲದೇ ಅವನು ತನ್ನ ತಂದೆ ಪರಸಪ್ಪನನ್ನು ಜೀತದಿಂದ ಬಿಡಿಸುತ್ತಾನೆ. ಈ ಕಥೆ ಶಿಕ್ಷಣದ ಮೂಲಕ ಬದುಕು ಸುಧಾರಣೆ, ಜೀತದಿಂದ ಮುಕ್ತಿ, ಯಶಸ್ವಿ ಅಂತರ್ಜಾತಿ ವಿವಾಹ –ಇಂತಹ ಅನೇಕ ಧನಾತ್ಮಕ ವಿಚಾರಗಳಿಂದ ಕೊನೆಗೊಳ್ಳುವದು ಗಮನಾರ್ಹ.

ಇಲ್ಲಿನ ಕಥೆಗಳಲ್ಲಿ ಅಂಬೇಡ್ಕರ ಅವರು ಹೇಳಿದಂತೆ ಶಿಕ್ಷಣ, ಸಂಘಟನೆ, ಹೋರಾಟ ಎಂಬ ಮೂರು ಅಸ್ತ್ರಗಳು ಬಡತನ, ಶೋಷಣೆ, ಅನ್ಯಾಯಕ್ಕೆ ಪ್ರಮುಖ ಪ್ರತಿರೋಧಗಳಾಗಿ ಕಂಡುಬರುತ್ತವೆ. ಅಲ್ಲದೆ ಜಾತಿ ಅಸಮಾನತೆಯ ಸಮಾಜಿಕ ವ್ಯವಸ್ಥೆಯಲ್ಲಿ ಅಂತರ್ಜಾತಿ ವಿವಾಹ ಒಂದು ಪ್ರತಿರೋಧವಾಗಿ ಕಾಣಿಸಿಕೊಂಡಿದೆ. ವ್ಯಕ್ತಿ, ಕುಟುಂಬ, ಸಮುದಾಯದ ಏಳಿಗೆಗೆ ಶಿಕ್ಷಣದ ಜೊತೆಗೆ ರಾಜಕೀಯ ಅಧಿಕಾರವು ಮುಖ್ಯ ಎಂಬುದು ಇಲ್ಲಿ ಅಭಿವ್ಯಕ್ತಗೊಂಡಿದೆ.

4

2019 ರಲ್ಲಿ ಪ್ರಕಟವಾದ 'ಮಾದನ ಕರೆಂಟ್ ಕತಂತ್ರ' ಕಥಾ ಸಂಕಲನದಲ್ಲಿ 'ನಾಯಿ ನೆರಳು', 'ಧರೆಗೆ ದೊಡ್ಡವರು', 'ಗಾಂಧಿ ಕ್ಲಾಸ್', 'ಇದು ಬರಿ ಬಹಿಷ್ಕೃತ ಅಲ್ಲೋ ಅಣ್ಣಾ', 'ಮಾದನ ಕರೆಂಟ್ ಕತಂತ್ರ', 'ಮೆಲುಕು', 'ಪ್ರಾತಃಸ್ಮರಾಮಿ', ಮತ್ತು 'ನಾನಾರೆಂಬುದು ನಾನಲ್ಲ' ಎಂಬ ಎಂಟು ಕಥೆಗಳಿವೆ. 'ನಾಯಿ ನೆರಳು' ಕಥೆಯು ಲೇಖಕರ ವಿದೇಶಿ ಪ್ರವಾಸದ ಅನುಭವ ಕಥನವಾಗಿದೆ. ವಿದೇಶದಲ್ಲಿ ಲೇಖಕರಿಗೆ ಸಿಕ್ಕ ಕಾರು ಚಾಲಕನ ಕುಟುಂಬದ ದುರಂತದ ಕಥೆ ಇಲ್ಲಿದೆ. 'ಧರೆಗೆ ದೊಡ್ಡವರು' ಕಥೆಯಲ್ಲಿ ಕಥೆಗಾರರ ಸಂಚಾರ, ಭಾಷಣದ ಮುಖ್ಯ ಕಥೆಗಿಂತಲೂ ಗಂಡನನ್ನು ಕರೆದುಕೊಂಡು ಹೋಗಿ ಕಂಬಕ್ಕೆ ಕಟ್ಟಿ ಹೊಡೆದ ನಿಜಾಮ ಪೋಲಿಸನ ಕೊಲೆ ಮಾಡಿದ ರಾಮಕ್ಕ ಮತ್ತು ತನ್ನ ಹೆಂಡತಿಯ ಮೇಲೆ ಕಣ್ಣಾಕಿದ ಗುರಪ್ಪನ ಕೊಲೆ ಮಾಡಿದ ಮೊಗಲಪ್ಪನ ಉಪಕಥೆಗಳು ಸಹೃದಯರಿಗೆ ಹೆಚ್ಚು ಕಾಡುತ್ತವೆ. ಇಲ್ಲಿ ತಮಗಾದ ಅನ್ಯಾಯಕ್ಕೆ ಕೊಲೆಯ ಮೂಲಕ ಪ್ರತಿರೋಧ ಒಡ್ಡಿದ್ದು ಕಾಣಸಿಗುತ್ತದೆ. 'ಗಾಂಧಿ ಕ್ಲಾಸ್' ಕಥೆಯಲ್ಲಿ ಹನುಮ ಮತ್ತು ಚಂದ್ರು ಗೆಳೆಯರಿಬ್ಬರು ಬಹಳ ದಿನಗಳ ನಂತರ ಪರಸ್ಪರ ಭೇಟಿಯಾಗಿ ತಾವು ಓದಿದ ಹೈಸ್ಕೂಲು, ಕಾಲೇಜು ದಿನಗಳ ಬಗ್ಗೆ ನೆನಪು ಮಾಡುತ ಅನುಭವಗಳನ್ನು ಹಂಚಿಕೊಳ್ಳುವ ಕಥೆ ಇದೆ. ಕಷ್ಟದ ದಿನಗಳಲ್ಲಿ ಹಾಸ್ಟಲ್‌ನಲ್ಲಿ ಇದ್ದುಕೊಂಡು ಚೆನ್ನಾಗಿ ಓದಿ ಮುಂದೆ ಸರಕಾರಿ ನೌಕರಿ ಪಡೆದು ಜೀವನ ರೂಪಿಸಿಕೊಂಡ ಗೆಳೆಯರಿಬ್ಬರ ಕಥನ ಇದಾಗಿದೆ. 'ಇದು ಬರಿ ಬಹಿಷ್ಕೃತ ಅಲ್ಲೋ ಅಣ್ಣಾ' ಕಥೆಯಲ್ಲಿ ರಾಬರ್ಟ್ ದಂಪತಿಗಳು ತಮ್ಮ ಮಗಳು ಖಿನ್ನತೆಯಿಂದ ಹೊರಬರಲು ಅವಳೊಂದಿಗೆ ಆಟ ಆಡಲು, ಶಾಲೆಗೆ ಹೋಗಲು ಸಹಪಾಠಿಯಾಗಿ ಕೇರಿಯ ಶ್ಯಾಮನನ್ನು ಮನೆಗೆ ತಂದು ಅವನಿಗೆ ಬಟ್ಟೆ ನೀಡಿ, ಶಾಲೆಗೆ ಸೇರಿಸಿ ಶಿಕ್ಷಣ ನೀಡಿದ ಕಥೆ ಇದೆ. ಜೊತೆಗೆ ಶ್ರೀಶೈಲ ಅವರ ಹಿಂದಿನ ಕಷ್ಟಕರ ಬದುಕಿನ ಪಯಣದ ಮೆಲುಕು ಇದೆ.

'ಮಾದನ ಕರೆಂಟ್ ಕತಂತ್ರ' ಕಥೆಯಲ್ಲಿ ಊರಗೌಡನ ಹತ್ತಿರ ಆಳಾಗಿ ದುಡಿಯುತ್ತಿದ್ದ ಮಾದನು ತನ್ನ ಮನೆಗೆ ಕರೆಂಟ್ ತೆಗೆದುಕೊಳ್ಳಲು ಪಟ್ಟ ಹರಸಾಹಸದ ಕಥೆ ಇದೆ. ದಿನಾಲೂ ಗೌಡರ ಮನೆ ಮತ್ತು ಹೊಲದಲ್ಲಿ ಆಳಾಗಿ ದುಡಿಯುವ ಮಾದನು ತನ್ನ ನೆರೆಹೊರೆಯ ಮನೆಯವರಂತೆ ತನ್ನ ಮನೆಯಲ್ಲೂ ಕರೆಂಟ್ ಹಾಕಿಸಿಕೊಳ್ಳಬೇಕು, ಮಗನು ಆ ಕರೆಂಟ್ ಬೆಳಕಿನಲ್ಲಿ ಓದಬೇಕು ಎಂದು ಬಯಸುತ್ತಾನೆ. ಅದಕ್ಕೆ ಗೌಡನಲ್ಲಿ ತನ್ನ ಮನೆಗೆ ಕರೆಂಟ್ ಕೊಡಿಸುವಂತೆ ವಿನಂತಿಸಿಕೊಳ್ಳುತ್ತಾನೆ. ಆದರೆ ಗೌಡನು 'ನಿನಗೆದಕ ಬೇಕಲೇ ಲೈಟ್!' ಎಂದು ಹೇಳಿ ಕರೆಂಟ್ ಕೊಡಿಸಲು ನಿರಾಕರಿಸುತ್ತಾನೆ. ಛಲ ಬಿಡದ ಮಾದನು ಅಲ್ಲಿ ಇಲ್ಲಿ ಅಳಿದುಳಿದು ಬಿದ್ದ ವಾಯರ್ ತಂದು ಜೊಡಿಸಿ ಕರೆಂಟ್ ತೆಗೆದುಕೊಳ್ಳುತ್ತಾನೆ. ಇದು ಅಡ್ಡದಾರಿಯ ನಡೆ. ಆದರೂ ಬೆಳಕಿನಿಂದಾಗಿ ಮನೆಯಲ್ಲೆಲ್ಲಾ ಸಂಭ್ರಮ. ಗೌಡ ಮಾದನ ಕಳ್ಳತನವನ್ನು ಅಧಿಕಾರಿಗಳಿಗೆ ತಿಳಿಸುತ್ತಾನೆ. ಆದರೆ ಅಲ್ಲಿದ್ದ ಮುಖ್ಯ ಅಧಿಕಾರಿಯೊಬ್ಬ ಕಳಕಳಿಯ ವ್ಯಕ್ತಿಯಾಗಿದ್ದು ಸಾಮಾಜಿಕ ಅಸಮಾನತೆಯ ವ್ಯವಸ್ಥೆಯಲ್ಲಿ ತನ್ನ ಕುಟುಂಬ ಕರೆಂಟ್ ಪಡೆದ ಕತಂತ್ರದ ಬಗೆಗೆ ತಿಳಿಸಿ ಮಾದನ ಮನೆಗೂ ಕರೆಂಟ್ ಕೊಡಿಸುತ್ತಾನೆ. ಈ ಕಥೆಯ ಮಾದನ ಪಾತ್ರ ಶಿವರಾಮ ಕಾರಂತರ 'ಚೋಮನ ದುಡಿ'ಯ ಚೋಮ ಪಾತ್ರವನ್ನು ನೆನಪಿಸುತ್ತದೆ. ಚೋಮನದು ಸ್ವಾತಂತ್ರ್ಯ ಪೂರ್ವದ ಕಥನವಾದರೆ; ಮಾದನದು ಸ್ವಾತಂತ್ರ್ಯೋತ್ತರದ ಕಥೆ. ಚೋಮನಿಗೆ ಸ್ವಂತ ಭೂಮಿಯಲ್ಲಿ ಬೇಸಾಯ ಮಾಡುವ ಬಯಕೆ; ಮಾದನಿಗೆ ತನ್ನ ಮನೆಗೆ ಕರೆಂಟ್ ಪಡೆಯುವ ಬಯಕೆ. ಇಲ್ಲಿ ಇಬ್ಬರೂ ಪಟ್ಟ ಪಾಡು ಒಂದೇ. ಆದರೆ ಕಥೆಯ ಕೊನೆಗೆ ಮಾದನ ಕನಸು

ನನಸಾಗುತ್ತದೆ; ಚೋಮನ ಕನಸು ಕನಸಾಗಿಯೇ ಉಳಿಯುತ್ತದೆ.

'ಮೆಲುಕು' ಕಥೆಯಲ್ಲಿ ಕಥೆಯ ನಿರೂಪಕರ ಅವ್ವ ಮತ್ತು ಮಾವ ಬಸು ತಮ್ಮ ಸಂಘರ್ಷ ಬದುಕಿನ ಪಯಣದ ಬಗೆಗೆ ಮೆಲುಕು ಹಾಕುತ್ತಾರೆ. 'ಪ್ರಾತಃಸ್ಮರಾಮಿ' ಕಥೆಯಲ್ಲಿ ಕಥೆಗಾರರ ರೈಲು ಪ್ರಯಾಣದ ಅನುಭವ ಕಥನ ಇದೆ. ಸಹಪ್ರಯಾಣಿಕ ಚನ್ನಜ್ಜನ ಜೊತೆಗಿನ ಮಾತುಕತೆಯೇ ಈ ಕಥೆ. 'ನಾನಾರೆಂಬುದು ನಾನಲ್ಲ' ಕಥೆಯಲ್ಲಿ ಮಾಜೀದ ಕೇಂದ್ರ ಪಾತ್ರ. ಈತ ವೈದ್ಯನಾಗಿ ಕೆಲಸ ಮಾಡುತ್ತಾನೆ. ಧಾರ್ಮಿಕ ಗಲಭೆಗಳು ನಡೆಯುತ್ತಿದ್ದರೂ ಸಹ ಆಸ್ಪತ್ರೆಗೆ ಹೋಗಿ ರೋಗಿಗಳಿಗೆ ಚಿಕಿತ್ಸೆ ನೀಡಿ ಕರ್ತವ್ಯ ಪ್ರಜ್ಞೆ ಮೆರೆಯುತ್ತಾನೆ. ತನ್ನ ಬಳಿ ಬಂದ ಬಾಲ್ಯದ ಗೆಳೆಯ ಕಣ್ಮೇಶನಿಗೆ ಆರ್ಥಿಕ ಸಹಾಯ ಮಾಡುತ್ತಾನೆ.

ಇಲ್ಲಿನ ಕಥೆಗಳಲ್ಲಿ ವಿದೇಶದಲ್ಲಿ ಬದುಕು ಕಟ್ಟಿಕೊಳ್ಳುವುದು, ಅನ್ಯಾಯ ಮಾಡಿದವರನ್ನು ಸಂಹಾರ ಮಾಡುವುದು, ಸಂಕಷ್ಟದ ಸ್ಥಿತಿಯಲ್ಲೂ ಚೆನ್ನಾಗಿ ಓದಿ ಉದ್ಯೋಗ ಪಡೆದು ಬದುಕನ್ನು ಕಟ್ಟಿಕೊಳ್ಳುವುದು, ತನಗೆ ಮೋಸ ಮಾಡಿದವರನ್ನು ಅದೇ ಮಾರ್ಗದಲ್ಲಿ ಪಾಠ ಕಲಿಸುವುದು ಪ್ರಮುಖ ಪ್ರತಿರೋಧದ ನೆಲೆಗಳಾಗಿ ಕಾಣಸಿಗುತ್ತವೆ. ಎಲ್ಲ ಸಂಕಟಗಳಿಂದ ಪಾರಾಗಲು ಶಿಕ್ಷಣವೇ ಮುಖ್ಯ ಅಸ್ತ್ರ ಎಂಬುದನ್ನು ಇಲ್ಲಿನ ಕಥೆಗಳು ನಿರೂಪಿಸುತ್ತವೆ. ಕಥೆಗಳಲ್ಲಿ ಅಂಬೇಡ್ಕರ್ ಅವರ ವೈಚಾರಿಕತೆ ಮತ್ತು ಗಾಂಧಿಜೀ ಅವರ ಹೋರಾಟದ ಪ್ರಸ್ತಾಪವೂ ಇದೆ.

5

2021 ರಲ್ಲಿ ಪ್ರಕಟವಾದ 'ಅನೇಕಲವ್ಯ' ಕಥಾ ಸಂಕಲನದಲ್ಲಿ 'ದಿಕ್ಕ', 'ಅನುಕ್ತ', 'ಅಸ್ತಿತ್ವ', 'ಹೊನ್ನೂರು', 'ಗಿರಿರಾಜ', 'ತನುಭಾರ', 'ನಾಗರಬೆಟ್ಟ', 'ಮಹಾನಾಯಕ', 'ಅನೇಕಲವ್ಯ', ಮತ್ತು 'ತುಪ್ಪದ ತಾಯವ್ವ' ಎಂಬ ಹತ್ತು ಕಥೆಗಳಿವೆ. 'ದಿಕ್ಕ' ಎಂಬ ಕಥೆಯು ಶಿಕ್ಷಣದ ಮಹತ್ವವನ್ನು ಸಾರುತ್ತದೆ. ಇಡೀ ಕಥೆಯು ಶಾಲಾ ಆವರಣದಲ್ಲಿಯೇ ಹೆಣೆಯಲ್ಪಟ್ಟಿದೆ. ಶಾಲೆಯ ಮೇಷ್ಟ್ರು ರಾಧಾಕೃಷ್ಣರು ಶಾಲೆಯಲ್ಲಿ ಕಾರ್ಯಕ್ರಮ ಸಿದ್ಧಗೊಳಿಸುವುದು, ವಿದ್ಯಾರ್ಥಿ ಚಿಕ್ಕ ಕರಿಯನ ಬಟ್ಟೆ ಹರಿದಿದ್ದನ್ನು ನೋಡಿ ತನ್ನ ಮಗನ ಬಟ್ಟೆ ಆತನಿಗೆ ನೀಡುವುದು, ಕಾರ್ಯಕ್ರಮದಲ್ಲಿ ಚಿಕ್ಕ ಕರಿಯನನ್ನು ಮಾತನಾಡಲು ಅವಕಾಶ ನೀಡುವುದು, ಅದನ್ನು ಕಂಡ ಅಪ್ಪ ದೊಡ್ಡ ಕರಿಯ ಸಂಭ್ರಮ ಪಡುವುದು, ಅತಿಥಿ ಸಿದ್ಧಾರ್ಥ ಶಿಕ್ಷಣದ ಮಹತ್ವ ಹೇಳುವುದು ಈ ಕಥೆಯಲ್ಲಿ ಮುಖ್ಯವಾಗಿ ಕಂಡುಬರುತ್ತದೆ. 'ಅನುಕ್ತ' ಕಥೆಯಲ್ಲಿ ಲಕ್ಷ್ಮೀ ಟೀಚರ್ ತನ್ನ ತಮ್ಮ ವೆಂಕಟೇಶನ ಮದುವೆ ಸಂದರ್ಭದಲ್ಲಿ ತನ್ನ ಸಹೋದ್ಯೋಗಿಗಳಿಗೆ ತಮ್ಮನ ಸಾಧನೆ ಬಗ್ಗೆ ಹೇಳುವ ಕಥೆ ಇದೆ. ವೆಂಕಟೇಶನು ಬದುಕಿನ ಎಲ್ಲ ಕಷ್ಟಗಳನ್ನು ಎದುರಿಸಿ ಶಿಕ್ಷಣ ಪಡೆದು ಕನ್ನಡ, ಸಂಸ್ಕೃತ ಪಂಡಿತನಾಗಿ ಉತ್ತಮ ಜೀವನ ರೂಪಿಸಿಕೊಂಡ ಕಥನ ಇಲ್ಲಿದೆ.

'ಅಸ್ತಿತ್ವ' ಕಥೆಯಲ್ಲಿ ಕೇರಿಯ ಸೋಮನು ಬಡತನ, ಅಪಮಾನ ಎಲ್ಲವನ್ನೂ ಮೀರಿ ಶಿಕ್ಷಣ ಪಡೆದು ತಹಶೀಲ್ದಾರ್ ಆಗಿ ಊರವರಿಂದ ಸನ್ಮಾನಕ್ಕೆ ಒಳಗಾದ ಕಥೆ ಇದೆ. 'ಹೊನ್ನೂರು' ಕಥೆಯಲ್ಲಿ ಮೌಲಣ್ಣ, ಮಲ್ಲಣ್ಣ ಗೆಳೆಯರಿಬ್ಬರ ಸ್ನೇಹ ಸಂಬಂಧ, ಹೊನ್ನೂರಿನ ಚುನಾವಣೆ, ಸಹಬಾಳ್ವೆಯ ಜೀವನ, ಗಾಂಧೀಜಿ ಮತ್ತು ಅಂಬೇಡ್ಕರ ಆದರ್ಶಗಳ ಸ್ಮರಣೆ ಮತ್ತು ಸ್ವಾತಂತ್ರ್ಯ ಹೋರಾಟಗಾರ ಸ್ವಾತಂತ್ರ್ಯದಜ್ಜನ ಕುರಿತ ಕಥೆ ಇದೆ. 'ಗಿರಿರಾಜ' ಕಥೆಯಲ್ಲಿ ದೇವರಾಯ ಎಂಬುಬರು ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ ಅವರಿಗೆ ಸಿಕ್ಕ ಡೈರಿಯಲ್ಲಿನ ಗಿರಿರಾಜನ ಕಥೆ ಇದೆ. ಗಿರಿರಾಜನು ಅಂತರ್‌ಧರ್ಮೀಯ ವಿವಾಹನಾಗಿ ಸಮಾಜದಿಂದ ಅನೇಕ ತೊಂದರೆ ಅನುಭವಿಸುತ್ತಾನೆ. ಆತನ ಸಂಕಟ ಕಂಡು ಪಾರಿವಾಳಗಳು ನೋವನ್ನು ವ್ಯಕ್ತಪಡಿಸುತ್ತವೆ. ಸಮಾಜದಲ್ಲಿ ಜನ ಜಾತಿ, ಧರ್ಮ ಅಂತ ಹೊಡೆದಾಡುತ್ತಾರೆ, ಮಾನವೀಯತೆಯನ್ನು ಮರೆತಿದ್ದಾರೆ ಎಂದು ಬೇಸರ ವ್ಯಕ್ತಪಡಿಸುತ್ತವೆ. ನಮ್ಮ ಹಾಗೆ ಅವರು ಸ್ವತಂತ್ರವಾಗಿ, ಸಮಾನರಾಗಿ ಬದುಕಬೇಕು ಎಂದು ಆಶಿಸುತ್ತವೆ. ಕೊನೆಗೆ ಗಿರಿರಾಜ ಭಿಕ್ಕುಗಳ ಮೂಲಕ ಬೌದ್ಧ ಧರ್ಮಕ್ಕೆ ಹೋಗುವುದರೊಂದಿಗೆ ಕಥೆ ಕೊನೆಗೊಳ್ಳುತ್ತದೆ. ಧರ್ಮಾಂತರ ಇಲ್ಲಿ ಕಾಣಸಿಗುವ ಪ್ರತಿರೋಧವಾಗಿದೆ. 'ತನುಭಾರ' ಕಥೆಯು ದಲಿತರು ಸಮಾಜದಲ್ಲಿ ತೊಂದರೆಗಳನ್ನು ಎದುರಿಸುತ್ತಿರುವಂತೆಯೇ ಅನಾಥರು, ಲೈಂಗಿಕ ಅಲ್ಪಸಂಖ್ಯಾತರು ಕೂಡ ಅನೇಕ ತೊಂದರೆಗಳನ್ನು ಎದುರಿಸುತ್ತಿರುವುದರ ಬಗ್ಗೆ ಬೆಳಕು ಚೆಲ್ಲುತ್ತದೆ.

'ನಾಗರಬೆಟ್ಟ'ದಲ್ಲಿ ಪ್ರೊಫೆಸರ್ ಅವರು ಬಿ. ಬಸವಲಿಂಗಪ್ಪ ಅವರ ಮರಿಮೊಮ್ಮಗ ಆಕಾಶನಿಗೆ ಬಿ. ಬಸವಲಿಂಗಪ್ಪ ಅವರ ಹೋರಾಟ ಬದುಕಿನ ಕುರಿತು ಹೇಳಿದ ಕಥೆ ಇದೆ. 'ಮಹಾನಾಯಕ' ಕಥೆಯಲ್ಲಿ ಪ್ರೊಫೆಸರ್ ಅವರು ವಿದ್ಯಾರ್ಥಿಗಳಿಗೆ ಪ್ರಶ್ನೋತ್ತರ ಹಾಗೂ ಚರ್ಚೆಯ ರೂಪದಲ್ಲಿ ಅಂಬೇಡ್ಕರ್ ಅವರ ಬದುಕಿನ ಕಥನ ಹೇಳಿ ಅವರು ಜನಸಾಮಾನ್ಯರ ಮಹಾನಾಯಕ ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತಾರೆ. 'ಅನೇಕಲವ್ಯ' ಕಥೆಯಲ್ಲಿ ಚೆಲುವ ಮತ್ತು ಲವಕುಮಾರ ಗೆಳೆಯರಿಬ್ಬರೂ ಸಮಕಾಲೀನ ಸಾಮಜಿಕ,

ರಾಜಕೀಯ ವಿದ್ಯಾಮಾನಗಳ ಬಗ್ಗೆ ಚರ್ಚೆ, ಚಿಂತನೆ ಮಾಡುತ್ತಾರೆ. ಅಲ್ಲದೇ ಮಹಾಭಾರತದಲ್ಲಿ ದ್ರೋಣಾಚಾರ್ಯರ ಮೂರ್ತಿ ಮಾಡಿ ಧ್ಯಾನ, ಏಕಾಗ್ರ ಚಿತ್ತದಿಂದ, ಶ್ರದ್ಧೆಯಿಂದ ಏಕಲವ್ಯ ಶಬ್ಧವೇದಿ ವಿದ್ಯೆ ಕಲಿತದ್ದು, ನಂತರ ದ್ರೋಣಾಚಾರ್ಯರು ಗುರು ಕಾಣಿಕೆಯ ರೂಪದಲ್ಲಿ ಏಕಲವ್ಯನ ಹೆಬ್ಬೆರಳನ್ನು ಪಡೆದು ಏಕಲವ್ಯನಿಗೆ ಮೋಸ ಮಾಡಿದುದರ ಬಗ್ಗೆಯೂ ಕಥೆ ನಿರೂಪಿಸುತ್ತದೆ. 'ತುಪ್ಪದ ತಾಯವ್ವ' ಕಥೆಯಲ್ಲಿ ವಾರಕ್ಕೊಮ್ಮೆ ಮನೆಮನೆಗೆ ತುಪ್ಪ ಮಾರಲು ಬರುವ ತಾಯವ್ವಳ ಕಥನ ಇದೆ. ತಂಗಿ ಮಗನನ್ನೆ ತನ್ನ ಮಗನೆಂದು ಬೆಳೆಸಿ, ತುಪ್ಪ ಮಾರಿ ಬದುಕುತ್ತಾಳೆ. ಅವಳು ನಂಬುವ ದೇವರುಗಳು ಅವಳ ಸಂಕಷ್ಟದ ಬದುಕಿಗೆ ನೆರವಾಗದಿದ್ದಲ್ಲಿ ದೇವರ ಅಸ್ತಿತ್ವವನ್ನೇ ನಿರಾಕರಿಸುತ್ತಾಳೆ.

ಇಲ್ಲಿನ ಕಥೆಗಳಲ್ಲಿ ಶಿಕ್ಷಣ, ಉದ್ಯೋಗ, ರಾಜಕೀಯ ಅಧಿಕಾರ, ಧರ್ಮಾಂತರ, ಸಮಾನ ಮನಸ್ಕರ ಒಗ್ಗೂಡುವಿಕೆ, ಎಲ್ಲವನ್ನೂ ಧೈರ್ಯದಿಂದ ಎದುರಿಸುವುದು, ಕಷ್ಟಕ್ಕೆ ನೆರವಾಗದ ದೇವರ ಅಸ್ತಿತ್ವವನ್ನು ನಿರಾಕರಿಸುವುದು –ಮುಂತಾದವು ಪ್ರಮುಖ ಪ್ರತಿರೋಧಗಳಾಗಿ ಕಾಣಿಸಿಗುತ್ತವೆ. ಇಲ್ಲಿನ ಕೆಲವು ಪಾತ್ರಗಳು ಅಂಬೇಡ್ಕರ್ ಅವರ ಜೀವನ ಸಾಧನೆಯನ್ನು ಸ್ಫೂರ್ತಿಯಾಗಿಸಿಕೊಂಡು ಅವರು ತೋರಿದ ದಾರಿಯಲ್ಲಿ ಸಾಗಿ ಶಿಕ್ಷಣದ ಮೂಲಕ ಪರ್ಯಾಯವಾಗಿ ಜೀವನ ರೂಪಿಸಿಕೊಂಡಿರುವುದು ಕಾಣಿಸಿಗುತ್ತದೆ.

6

2023 ರಲ್ಲಿ ಪ್ರಕಟವಾದ 'ದೇವರ ಧರ್ಮ' ಕಥಾ ಸಂಕಲನದಲ್ಲಿ 'ದೇವರ ಧರ್ಮ', 'ಹತ್ಯಾಕಾಂಡ', 'ಕ... ಲಿ... ಗಾ... ಲ... !', 'ಗುಡಿಪ್ರವೇಶ', 'ಭೂಮಿಕಾ', 'ಬಲಿ', 'ತಮೋಲೋಕ', 'ಬದಲಾದ ಬದುಕು', 'ಚನ್ನನ ಚಪ್ಲಿನ್ಯಾಯ', 'ಮಠದ ಮಹಿಮೆ' ಎಂಬ ಹತ್ತು ಕಥೆಗಳಿವೆ. ಕಾಕೂ ಕೇಂದ್ರಪಾತ್ರದ 'ದೇವರ ಧರ್ಮ' ಕಥೆಯು ಶೈಕ್ಷಣಿಕ ಪರಿಸರದಲ್ಲಿ ಬೆಳೆದು, ಸಮಾಜದಲ್ಲಿನ ಮೌಢ್ಯ ಆಚರಣೆಯನ್ನು ತೊಲಗಿಸುವುದರೊಂದಿಗೆ ಕೊನೆಗೊಳ್ಳುತ್ತದೆ. ಲಕ್ಷ್ಮಣರಾವ್ ಕೇಂದ್ರಪಾತ್ರದ 'ಹತ್ಯಾಕಾಂಡ' ಕಥೆಯಲ್ಲಿ ಶೈಕ್ಷಣಿಕ ಸಂಸ್ಥೆಯ ಮುಖ್ಯಸ್ಥರು ಮುಚ್ಚಿಹೋದ ಹತ್ಯಾಕಾಂಡ ಫೈಲ್‌ಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚೆ ಮಾಡುತ್ತಾರೆ. ಅನ್ಯಾಯಕ್ಕೆ ಮರಗುತ್ತಾ ವಿದ್ಯಾರ್ಥಿಗಳಿಗೆ ಪ್ರಜ್ಞಾವಂತರಾಗಲು ಕರೆ ಕೊಡುತ್ತಾರೆ. ಸಕ್ಪಾಲ್ ಕೇಂದ್ರಪಾತ್ರದ 'ಕ...ಲಿ...ಗಾ...ಲ...!' ಕಥೆಯಲ್ಲಿ ಹೊರಗಿನವರಂತೆ ತಮ್ಮವರನ್ನು ಎದುರಿಸಬೇಕಾದ ಸಂದರ್ಭ ಮತ್ತು ಅಗತ್ಯವಿದ್ದಾಗ ಹತ್ತಿರಬಂದು ನಂತರ ಪರಸ್ಪರ ಅಂತರ ಕಾಯ್ದುಕೊಳ್ಳುವವರ ಸಂಗತಿಯನ್ನೊಳಗೊಂಡ ಕಥನದ ನಿರೂಪಣೆ ಇದೆ.

'ಗುಡಿಪ್ರವೇಶ' ಕಥೆಯಲ್ಲಿ ಮೇಷ್ಟ್ರು ತರಗತಿಯಲ್ಲಿ ಚನ್ನಪ್ಪನ ದೇವಾಲಯ ಪ್ರವೇಶ ಸಂಗತಿ ಹಾಗೂ ಬೇಂದ್ರೆ ಕವಿಯ ವಿಶೇಷತೆ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚೆ ಮಾಡುವುದು ಮತ್ತು ತನಗೆ ಭೇಟಿಗೆ ಬಂದ ಹಳೆಯ ಪರಿಚಿತರೊಬ್ಬರೊಡನೆ ಇಂದಿನ ದಿನಮಾಗಳ ಕುರಿತ ಮಾತುಕತೆ ನಡೆಸುವ ಕಥೆ ಇದೆ. 'ಭೂಮಿಕಾ' ಕಥೆಯಲ್ಲಿ ಗಾಂಧೀಜಿ, ಅಂಬೇಡ್ಕರ್ ಆದರ್ಶಗಳೊಂದಿಗೆ ಶಿಕ್ಷಣ ಪಡೆಯಲು ನಗರಕ್ಕೆ ಬಂದು ಕಾಲೇಜು ಮೆಟ್ಟಿಲು ಹತ್ತಿದ ಭೂಮಿಕಾಳು ಓದುವುದನ್ನು ಬಿಟ್ಟು ಧಾರ್ಮಿಕ ಮತ್ತು ರಾಜಕೀಯ ಸಭೆ, ಸಮಾರಂಭಗಳಿಗೆ ಹೋಗಿ ದಾರಿ ತಪ್ಪಿದಾಗ, ತಾಯಿ ನಿರ್ಮಲಾ ತನ್ನ ಮಗಳಿಗೆ ನಿಜವಾದ ಚರಿತ್ರೆ ತಿಳಿಸಿ ಟೊಳ್ಳು ಅಭಿಮಾನದಿಂದ ಹೊರಬಂದು ಸ್ವಾಭಿಮಾನದಿಂದ ಬದುಕಲು ತಿಳಿ ಹೇಳುವ ಕಥೆ ಇದೆ. 'ಬಲಿ' ಎಂಬ ಕಥೆಯಲ್ಲಿ ಕೇಸರಿಕಲಿ, ನೀಲಿಕಲಿ ಎಂಬುವರು ವಿದ್ಯೆ ಪಡೆದು ಅರಿವು ಪಡೆಯದವರು. ಅವರಿಗೆ ಆಗಂತುಕನೆಂಬುವನು ಸಾಮಾಜಿಕ ಬದುಕಿನ ಬಗ್ಗೆ ಅರಿವು ನೀಡುವ ಪ್ರಯತ್ನ ಮಾಡುತ್ತಾನೆ. ಆದರೂ ಅವರು ಬದಲಾಗುವುದಿಲ್ಲ. ಮುಂದೊಂದಿನ ಕಾಲವೇ ಅವರಿಗೆ ಅರಿವು ನೀಡುತ್ತದೆ. ಆದರೆ ಅಷ್ಟೊತ್ತಿಗೆ ಬದುಕನ್ನು ಸಾಕಷ್ಟು ದಾಟಿರುತ್ತಾರೆ.

ವೆಂಕಟೇಶ್ ಕೇಂದ್ರಪ್ರಜ್ಞೆಯ 'ತಮೋಲೋಕ'ದಲ್ಲಿ ಆತನ ತಂದೆ ಊರು ಬಿಟ್ಟು ನಗರಕ್ಕೆ ಹೋಗಿ ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಿ, ಆ ಶಿಕ್ಷಣದ ಮೂಲಕ ಬದುಕನ್ನು ಬದಲಾಯಿಸಿಕೊಳ್ಳುವ ಆಶಯ ಹೊಂದಿದ ಕಥನ ಇದೆ. ದೇವಪ್ಪ ಕೇಂದ್ರಪಾತ್ರದ 'ಬದಲಾದ ಬದುಕು' ಕಥೆಯು ಮನೆಗೆ ಬರುವ ಸೊಸೆಯು ಅತ್ತೆಯನ್ನು ಸ್ವಂತ ತಾಯಿಯಂದು ತಿಳಿದು ಅವರಿಗೆ ಆಶ್ರಯ ನೀಡಿ ಅವರನ್ನು ನೋಡಿಕೊಳ್ಳಬೇಕು ಎಂಬ ನೀತಿಯನ್ನು ಹೇಳುತ್ತದೆ. 'ಚನ್ನನ ಚಪ್ಲಿನ್ಯಾಯ' ಕಥೆಯು ಕಾಲ ಬದಲಾದ ಸಂದರ್ಭದಲ್ಲಿ ಹಳೆಯ ಅಸಮಾನತೆಯ ಪದ್ಧತಿಗಳು ಹೋಗಿ ಎಲ್ಲರೂ ಸ್ವಾಭಿಮಾನದಿಂದ ಬದುಕಬೇಕು ಎಂಬ ಆಶಯ ಹೊಂದಿದೆ. 'ಮಠದ ಮಹಿಮೆ' ಎಂಬ ಕಥೆಯಲ್ಲಿ ತೆರೆಮರೆಯಲ್ಲಿ ನಡೆಯುವ ಸ್ವಾಮಿಯ ದುರ್ನಡತೆಯ ಚಿತ್ರಣ ಇದೆ. ಸಮಾಜದಲ್ಲಿ ಎಲ್ಲಿಯವರೆಗೆ ಮೋಸ ಹೋಗುವವರು ಇರುತ್ತಾರೊ, ಅಲ್ಲಿಯವರೆಗೆ ಮೋಸ ಮಾಡುವವರು ಇರುತ್ತಾರೆ. ಅದಕ್ಕೆ ನಾವು ಎಚ್ಚರಿಕೆಯಿಂದ ಬದುಕನ್ನು ನಡೆಸಬೇಕು ಎಂಬ ಆಶಯ ಇಲ್ಲಿ ವ್ಯಕ್ತಗೊಂಡಿದೆ.

'ಕೆಟ್ಟು ಪಟ್ಟಣ ಸೇರು' ಎಂಬ ಮಾತು ಇಲ್ಲಿನ ಕಥೆಗಳಲ್ಲಿ ಹೆಚ್ಚು ಕಾಣಿಸಿಗುತ್ತದೆ. ನಗರಗಳ ಅಭಿವೃದ್ಧಿಗೆ ಅಂಬೇಡ್ಕರ್ ಅವರಿಗಿದ್ದ ಒಲವಿನ ಬಗೆಗಿನ ತಾತ್ವಿಕ ಅರಿವು ಈ ಮಾತಿನಲ್ಲಿದೆ. ಶಿಕ್ಷಣದ ಮೂಲಕ ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಬೇಕು, ಚರ್ಚೆ–ಚಿಂತನೆ ಮಾಡಿ ಸತ್ಯವನ್ನು ಅರಿಯುವುದು ಮತ್ತು ಮೋಸದ ಬಲೆಗೆ ಸಿಲುಕದೆ ಜಾಗೃತೆಯಿಂದ ಇರುವುದು ಇಲ್ಲಿನ ಕಥೆಗಳಲ್ಲಿ ಬರುವ ಪ್ರಮುಖ ಪ್ರತಿರೋಧದ ನೆಲೆಗಳು ಮತ್ತು ಪರ್ಯಾಯ ಬದುಕನ್ನು ಕಟ್ಟಿಕೊಳ್ಳುವ ಬಗೆಗಳಾಗಿವೆ.

ಎಚ್. ಟಿ. ಪೋತೆ ಅವರ ಎಲ್ಲಾ ಆರು ಕಥಾ ಸಂಕಲನದ ಒಟ್ಟು ಐವತ್ತು ಕಥೆಗಳನ್ನು ಗಮನಿಸಿದಾಗ ಇಲ್ಲಿನ ಹೆಚ್ಚು ಕಥೆಗಳಲ್ಲಿ ಜಾತಿ ಅಸಮಾನತೆಯ ಸಾಮಾಜಿಕ ವ್ಯವಸ್ಥೆಯಲ್ಲಿ ದಲಿತರು ಅನುಭವಿಸಿದ ಹಾಗೂ ಅನುಭವಿಸುತ್ತಿರುವ ಸಂಕಷ್ಟ ಮತ್ತು ಎದುರಿಸಿದ ಹಾಗೂ ಎದುರಿಸುತ್ತಿರುವ ತೊಂದರೆ ಮತ್ತು ಹೊಸ ತಲೆಮಾರು ಶಿಕ್ಷಣ ಹಾಗೂ ನಗರ ಬದುಕಿನ ಮೂಲಕ ಕಟ್ಟಿಕೊಳ್ಳುತ್ತಿರುವ ಪರ್ಯಾಯ ಬದುಕಿನ ಚಿತ್ರಣ ಹೆಚ್ಚಾಗಿ ಕಾಣಿಸಿಗುತ್ತದೆ. ಕನ್ನಡ ಕಥನ ರೂಪದಲ್ಲಿ ದೇವನೂರು ಮಹಾದೇವ ನಂತರ ಎಚ್.ಟಿ. ಪೋತೆ ಅವರು ದಲಿತಲೋಕವನ್ನು, ಅಲ್ಲಿನ ತಲ್ಲಣಗಳನ್ನು, ಹಸಿಹಸಿ ಅನುಭವಗಳನ್ನು ದಟ್ಟವಾಗಿ ಕಟ್ಟಿಕೊಟ್ಟಿದ್ದಾರೆ. ಬಸವಣ್ಣ, ಗಾಂಧೀಜಿ, ಅಂಬೇಡ್ಕರ್, ಜೋತಿಭಾ ಫುಲೆ, ಸಾವಿತ್ರಿಬಾಯಿ ಫುಲೆ, ಕುವೆಂಪು ಇಲ್ಲಿನ ಬಹುತೇಕ ಕಥೆಗಳಲ್ಲಿ ಪ್ರಸ್ತಾಪಗೊಳ್ಳುತ್ತಾರೆ. ಇಲ್ಲಿನ ಕಥೆಗಳಲ್ಲಿ ದಲಿತ ಸಮುದಾಯದ ಕೊನೆಯ ಅನಕ್ಷರಸ್ಥ ಪಾತ್ರಗಳು ಮತ್ತು ಅದೇ ಸುಮದಾಯದ ಮೊದಲ ಅಕ್ಷರಸ್ಥ ಪಾತ್ರಗಳು ಹೆಚ್ಚಾಗಿ ಕಾಣಿಸಿಗುತ್ತಾರೆ. ಇಲ್ಲಿನ ಅನೇಕ ಕಥೆಗಳಲ್ಲಿ ಲೇಖಕರ ಆತ್ಮಕಥಾನಕದ ಎಳೆಗಳು ಕಂಡುಬರುತ್ತವೆ. ಬಿಜಾಪುರ, ಕಲಬುರಗಿ ಗ್ರಾಮ್ಯ ಭಾಷೆಯಲ್ಲಿ ಇಲ್ಲಿನ ಕಥೆಗಳು ನಿರೂಪಿತಗೊಂಡಿವೆ.

ಶೈಕ್ಷಣಿಕ ಪರಿಸರ, ಗ್ರಾಮೀಣ ಪರಿಸರ, ಸಮಾಜಿಕ ಅಸಮಾನತೆಗಳು, ದಲಿತರು ಎದುರಿಸುತ್ತಿರುವ ಸಂಕಟಗಳು, ಸ್ವಾಭಿಮಾನದ ಬದುಕಿಗೆ ಶಿಕ್ಷಣವೇ ಮದ್ದು, ವರ್ತಮಾನ ವಿದ್ಯಮಾನಗಳು ಇಲ್ಲಿನ ಬಹುತೇಕ ಕಥೆಗಳ ಕಥಾವಸ್ತುವಾಗಿದೆ. ಶಿಕ್ಷಣ, ಸಂಘಟನೆ, ಹೋರಾಟ, ಪೋಲಿಸ್ ಹಾಗೂ ಕಾನೂನಿನ ನೆರವು, ಧರ್ಮಾಂತರ, ನಗರ ಬದುಕು, ಅಂತರ್ಜಾತಿ ವಿವಾಹ, ದೇವರ ನಿರಾಕರಣೆ, ಮೌಢ್ಯ ಆಚರಣೆಗಳನ್ನು ಬಿಡುವುದು –ಮುಂತಾದವು ಇಲ್ಲಿನ ಕಥೆಗಳಲ್ಲಿ ಕಾಣಿಸಿಗುವ ಪ್ರಮುಖ ಪ್ರತಿರೋಧದ ನೆಲೆಗಳಾಗಿವೆ. ಇವುಗಳಲ್ಲಿ ಶಿಕ್ಷಣ ಮತ್ತು ನಗರ ಜೀವನ ಹೆಚ್ಚು ಪರಿಣಾಮಕಾರಿಯಾಗಿ ನಿರೂಪಿತಗೊಂಡಿದೆ. ಸಾಮಾಜಿಕ ಅಸಮಾನ ವ್ಯವಸ್ಥೆಯ ಮೌಢ್ಯ ಮತ್ತು ಪ್ರತಿಷ್ಠೆಯನ್ನು ಶಿಕ್ಷಣ ಮತ್ತು ಹೋರಾಟದ ಮೂಲಕ ಕಡಿವಾಣ ಹಾಕಲು ಸಾಧ್ಯ ಎಂಬುದನ್ನು ಇಲ್ಲಿನ ಕಥೆಗಳು ನಿರೂಪಿಸುತ್ತವೆ. ಕನ್ನಡ ಕಥಾಲೋಕದಲ್ಲಿ ಎಚ್. ಟಿ. ಪೋತೆ ಅವರು ತಮ್ಮ ವಿಶಿಷ್ಟ ಸಂವೇದನಾಶೀಲ ಕಥೆಗಳ ಮೂಲಕ ತಮ್ಮದೆಯಾದ ಛಾಪನ್ನು ಮೂಡಿಸಿದ್ದಾರೆ.

ಆಕರ ಗ್ರಂಥಗಳು :

1. ಚಮ್ಮಾವುಗೆ : ಎಚ್.ಟಿ. ಪೋತೆ, ಸಪ್ನ ಬುಕ್ ಹೌಸ್, ಬೆಂಗಳೂರು, 2016
2. ಬೆತ್ತಲಾದ ಚಂದ್ರ : ಎಚ್.ಟಿ. ಪೋತೆ, ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ, ಕಲಬುರಗಿ, 2017
3. ಕರುಳರಿಯುವ ಹೊತ್ತು... : ಎಚ್.ಟಿ. ಪೋತೆ, ಸಪ್ನ ಬುಕ್ ಹೌಸ್, ಬೆಂಗಳೂರು, 2018
4. ಮಾದನ ಕರೆಂಟ್ ಕತಂತ್ರ : ಎಚ್.ಟಿ. ಪೋತೆ, ಕುಟುಂಬ ಪ್ರಕಾಶನ, ಕಲಬುರಗಿ, 2019
5. ಅನೇಕಲವ್ಯ : ಎಚ್.ಟಿ. ಪೋತೆ, ಸಪ್ನ ಬುಕ್ ಹೌಸ್, ಬೆಂಗಳೂರು, 2021
6. ದೇವರ ಧರ್ಮ : ಎಚ್.ಟಿ. ಪೋತೆ, ಸಪ್ನ ಬುಕ್ ಹೌಸ್, ಬೆಂಗಳೂರು, 2023
7. ಕಪ್ಪು ನೆಲದ ಪಾಡು : ಎಚ್.ಟಿ. ಪೋತೆ, ಸಪ್ನ ಬುಕ್ ಹೌಸ್, ಬೆಂಗಳೂರು, 2023

ಎಂ. ಎಸ್. ವೇದಾ ಅವರ ಕಾದಂಬರಿಗಳಲ್ಲಿ ಸ್ತ್ರೀ

***

ಡಾ. ಮೈತ್ರಿ ಭಟ್
ಸಹಾಯಕ ಪ್ರಾಧ್ಯಾಪಕಿ,
ಕನ್ನಡ ವಿಭಾಗ,
ಸಂತ ಫಿಲೋಮಿನಾ ಕಾಲೇಜು(ಸ್ವಾಯತ್ತ), ಪುತ್ತೂರು.
bhatmaithri@gmail.com

ಪುರಾಣವನ್ನು ಸ್ತ್ರೀವಾದಿ ನೆಲೆಯಿಂದ ಮರುನಿರ್ಮಿಸುವ ಸ್ತ್ರೀ ಸ್ವ–ವಿಮರ್ಶೆ ಮತ್ತು ಸ್ತ್ರೀವಾದಿ ನೆಲೆಯಿಂದ ವಿಶ್ಲೇಷಿಸಬಹುದಾದ ಎಂ ಎಸ್ ವೇದಾ ಅವರ 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಮತ್ತು 'ಜಯ' ಕಾದಂಬರಿಗಳು ಕಥಾವಸ್ತು, ನಿರೂಪಣಾ ಶೈಲಿ, ಪಾತ್ರಗಳ ಸೃಷ್ಟಿ, ಸನ್ನಿವೇಶಗಳ ಜೋಡಣೆ, ಪರಿಣಾಮಕಾರಿ ಸಂಭಾಷಣೆ ಇತ್ಯಾದಿ ಸಾಹಿತ್ಯಕ ಅಂಶಗಳಿಂದ ಓದುಗರ ಗಮನವನ್ನು ಸೆಳೆಯುತ್ತವೆ. ಸ್ತ್ರೀ ಬದುಕಿನ ಇಕ್ಕಟ್ಟು ಹಾಗೂ ಇಬ್ಬಂದಿತನದ ವಿವರಗಳು, ಪಾತ್ರಗಳ ನಡುವಿನ ಸಂಘರ್ಷದ ಎಳೆಯ ಪರಿಶೀಲನೆ, ಸ್ತ್ರೀಯರು ಶೋಷಣೆಯಿಂದ ಹೊರಬರಲಾಗದೆ ಒದ್ದಾಡುವ ವಿವರಗಳು, ಸ್ತ್ರೀಯರ ಬದುಕನ್ನು ಬದುಕಿನ ಸೂಕ್ಷ್ಮ ವಿವರಗಳ ಮೂಲಕ ದಾಖಲಿಸುವ ಯತ್ನ, ಪುರುಷ ಪಾತ್ರಗಳನ್ನು ಪ್ರಮುಖವಾಗಿಸದೆ ಪರಿಧಿಗೆ ಸರಿಸಿ, ದಮನಿತ ಹಾಗೂ ಮೂಲದಲ್ಲಿ ತೆರೆಮರೆಯಲ್ಲೇ ಉಳಿದ ಪಾತ್ರಗಳಿಗೆ ಪ್ರಾಮುಖ್ಯತೆಯನ್ನು ನೀಡಿರುವುದನ್ನು ಕಾಣಬಹುದಾಗಿದೆ.

ವೇದಾ ಅವರ 'ಜಯ' ಕಾದಂಬರಿಯಲ್ಲಿ ಮಹಾಭಾರತದ ದ್ರೌಪದಿಯನ್ನು ಮಾನವೀಯ ದೃಷ್ಟಿಯಿಂದ ವಿಶ್ಲೇಷಿಸಲಾಗಿದೆ. ಮಹಾಭಾರತವನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಗಮನಿಸಿ, ಆ ಮೂಲಕ ಸ್ಥಾಪಿತ ಮೌಲ್ಯಗಳ ಪ್ರಶ್ನಿಸುವಿಕೆ ಮತ್ತು ಸ್ತ್ರೀವಾದಿ ನೆಲೆಯಿಂದ ಪುನರ್ ಮೌಲ್ಯಕ್ಕೆ ಒಳಪಡಿಸಲಾಗಿದೆ. ಮಹಾಭಾರತದ ಕಥಾವಸ್ತುವನ್ನು ಸಮಕಾಲೀನವಾಗಿಸುವ ಪ್ರಯತ್ನ ಇಲ್ಲಿದೆ. ವರ್ತಮಾನದ ಮೂಲಕ ಪುರಾಣವನ್ನು ಪ್ರವೇಶಿಸಿ ಆ ಮೂಲಕ

ಮೂಲ ಚಿಂತನೆಗಳಿಗೆ ಧಕ್ಕೆಯಾಗದಂತೆ ಮರು ನಿರೂಪಿಸುವ ಪ್ರಯತ್ನವನ್ನು ಲೇಖಕಿ ಇಲ್ಲಿ ಮಾಡಿದ್ದಾರೆ. ಮಹಾಭಾರತ ಯುದ್ಧಕ್ಕೆ ದ್ರೌಪದಿ ಕಾರಣ ಎಂಬುದನ್ನು ಪುರುಷಪ್ರಧಾನ ದೃಷ್ಟಿಕೋನವೆಂದು ಹೇಳಲಾಗಿದೆ. ಯುದ್ಧಕ್ಕೆ ದೂರದ ದೇಶಗಳಿಂದ ಬಂದ ರಾಜರು ತಾವು ನೋಡಿಯೇ ಇರದ ದ್ರೌಪದಿಯ ರಕ್ಷಣೆಗಾಗಿ ಬಂದವರೆಂದು ಬೀಗುತ್ತಾರೆ. ಹೆಣ್ಣಿನ ಗೌರವ, ಮಾನ ರಕ್ಷಣೆಗಾಗಿ ಯುದ್ಧ ಮಾಡುವುದು ವೀರತ್ವ ಎಂಬ ಅವರ ಪುರುಷಕೇಂದ್ರಿತ ದೃಷ್ಟಿಕೋನವನ್ನು ಇಲ್ಲಿ ವಿಡಂಬಿಸಲಾಗಿದೆ. ಅಭಿಮನ್ಯುವಿಗೆ ಪ್ರಾಮುಖ್ಯತೆಯನ್ನು ನೀಡಲಾಗಿದ್ದು, ಮೊದಲ ದಿನದ ಯುದ್ಧದಲ್ಲಿ ಸಂಭವಿಸುವ ಅಭಿಮನ್ಯುವಿನ ಸಾವು ಸ್ತ್ರೀ ಪಾತ್ರಗಳಾದ ದ್ರೌಪದಿ, ಸುಭದ್ರೆ, ಭಾನುಮತಿ, ಕುಂತಿ, ರೋಹಿಣಿ, ಅಭಿಲಾಷ ನಡುವಿನ ಸಂವಹನ ಹೀಗೆ ಪುರಾಣದ ಪಠ್ಯ ಮತ್ತು ಪಾತ್ರಗಳನ್ನು ಸ್ತ್ರೀವಾದಿ ದೃಷ್ಟಿಕೋನ ಮತ್ತು ಮಹಿಳಾ ಲೋಕ ದೃಷ್ಟಿಯಿಂದ ಮರು ಸೃಷ್ಟಿಸುವ ಮೂಲಕ ಪುರಾಣದ ಮರು ನಿರ್ಮಾಣ ಹಾಗೂ ಪರ್ಯಾಯವನ್ನು ಹುಡುಕುವುದನ್ನು ಗಮನಿಸಬಹುದಾಗಿದೆ.

ಸಮಾಜದಲ್ಲಿ ಗಂಡನ್ನು ಪೌರುಷದ ಮೂರ್ತಿಯನ್ನಾಗಿಸಿ ಶೌರ್ಯ, ನಿಷ್ಕಾರಣ ಹೋರಾಟಗಳನ್ನು ಒಲ್ಲದ ಅವನು ಮೊದಲ ದಿನವೇ ಕೊಲ್ಲಲ್ಪಡುವುದನ್ನು ಪುರುಷರಲ್ಲಿನ ಸ್ತ್ರೀತ್ವವನ್ನು ಪುರುಷಕೇಂದ್ರಿತ ಸಮಾಜ ಕೊಲ್ಲುತ್ತದೆ ಎಂಬ ದೃಷ್ಟಿಕೋನವನ್ನು ಕಾಣಬಹುದಾಗಿದೆ. ಪ್ರತಿ ಸ್ತ್ರೀಯರಲ್ಲೂ ಇರುವಂತಹ ಪುರುಷ ಮಾದರಿ ಅಥವಾ ಪ್ರತಿ ಪುರುಷನಲ್ಲೂ ಇರುವ ಸ್ತ್ರೀತ್ವದ ಮಾದರಿಗೆ ಉದಾಹರಣೆಯಾಗಿ ಭೀಷ್ಮನ ಪಾತ್ರವಿದೆ. ಭೀಷ್ಮನ ಒಳಗಿರುವ ಸ್ತ್ರೀಪ್ರಜ್ಞೆ ಬಾಣದ ಶರಶಯ್ಯೆ ಹೂಡಿದಾಗ, ಭಾನುಮತಿಗೆ ವಿವೇಕ ಹೇಳುವ ಸಂದರ್ಭಗಳಲ್ಲಿ ಕಾಣಿಸುತ್ತದೆ. ಇಲ್ಲಿ ಭೀಷ್ಮರ ಪಾತ್ರಗಳು ವಿಭಿನ್ನ ದೃಷ್ಟಿಕೋನದಿಂದ ಒಡಮೂಡಿರುವುದನ್ನು ಗಮನಿಸಬಹುದು.

ಇಲ್ಲಿ ಪುರುಷರ ಅಂತರಂಗದ ಕೋಮಲ ಭಾವನೆಗಳು ಸಶಕ್ತ ಪುರುಷ ರಾಜಕಾರಣದೊಳಗೆ ಹೊಸಕಿಹಾಕಲ್ಪಡುವುದು. ದ್ರೌಪದಿ ಸುಭದ್ರೆಯರ ನಡುವೆ ಒಂದು ಸತ್ಯವಿದ್ದರೆ, ನಿರಾಕರಣೆಯ ಮೂಲಕವೇ ಹೊಸ ಮಾದರಿಗಳನ್ನು ನಿರ್ಮಿಸುವ ಯತ್ನ ಇಲ್ಲಿರುವುದನ್ನು ವೀರಸ್ವರ್ಗವನ್ನು ನಿರಾಕರಿಸುವ ಉತ್ತರಕುಮಾರ, ರೋಹಿಣಿಯ ಪ್ರಭುತ್ವದ ಪರಿಹಾರದ ನಿರಾಕರಣೆ, ದ್ರೌಪದಿಯ ಪಟ್ಟಾಭಿಷೇಕ, ಸಿಂಹಾಸನ ಅವರೋಹಣವನ್ನು ನಿರಾಕರಿಸುವುದು, ಕುಂತಿ ಸೊಸೆಯ ವಿಚಾರದಲ್ಲಿ ಹಸ್ತಕ್ಷೇಪ ಮಾಡಿ ಮಧ್ಯಪ್ರವೇಶಿಸಲು ನಿರಾಕರಿಸುವುದು, ದುಶ್ಯಲೆ ಜಯಂತ ಬದುಕಿರುವಾಗಲೇ ಸುಮಂಗಲಿಯ ಎಲ್ಲ ಚಿಹ್ನೆಗಳನ್ನು ನಿರಾಕರಿಸಿ ಅದನ್ನು ತೆಗೆದು ಹಾಕುವುದರಲ್ಲಿ ಕಾಣಬಹುದಾಗಿದೆ.

ಪುರುಷ ಪಾತ್ರಗಳ ಮೂಲಕವೇ ಯುದ್ಧ ವಿರೋಧಿ ಮಾತುಗಳನ್ನು ಹೇಳಿಸಲಾಗಿದ್ದು, ಪಾತ್ರಗಳು ಆತ್ಮವಲೋಕನದ ಮೂಲಕ ಆತ್ಮಾನುಸಂಧಾನವನ್ನು ನಡೆಸುತ್ತವೆ. ಸ್ತ್ರೀ ಸಂವೇದನೆಯೊಂದಿಗೆ, ಪುರುಷಪ್ರಧಾನ ವ್ಯವಸ್ಥೆಯ ಸಮಸ್ಯೆಗಳನ್ನು ವಿರೋಧಿಸುವುದರೊಂದಿಗೆ ಅದನ್ನು ದಾಟಿದ ಚಿಂತನೆ, ಆಲೋಚನ ಕ್ರಮಗಳ ಜೊತೆಗೆ ಶೀರ್ಷಿಕೆಯಲ್ಲಿಯೇ ಒಂದು ವ್ಯಂಗ್ಯವಿರುವುದನ್ನು ನಾವು ಗಮನಿಸಬಹುದಾಗಿದೆ. 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಕಾದಂಬರಿಯಲ್ಲಿ ಮಾಧವಿಯ ಬದುಕು, ಮಾಧವಿಯ ತಾಯಿಯ ಸಂವೇದನಾ ಪೂರ್ಣ ಚಿತ್ರಣ, ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿ ಜೀವನವಿಡೀ ಒಂಟಿತನದಲ್ಲಿ ನೊಂದ ಮಾಧವಿಯನ್ನು ಹೊತ್ತು ಹೆತ್ತ ಮತ್ತು ಸಲಹಿದ ತಾಯಿ ಲಕ್ಷ್ಮಿ ಮಗಳ ಭವಿಷ್ಯ ನಿರ್ಧರಿಸುವ ಅಧಿಕಾರವಿಲ್ಲದೆ ಹುಟ್ಟಿಗೆ ನಿಮಿತ್ತನಾದ ಯಯಾತಿಗೆ ತಲೆಬಾಗುವಲ್ಲಿ ಪುರುಷಪ್ರಧಾನ ಚಿಂತನೆಗಳ ವಿಶ್ಲೇಷಣೆಯನ್ನು ಗಮನಿಸಬಹುದಾಗಿದೆ.

ಮಾಧವಿ, ಪುರುವಿನ ತಾಯಂದಿರ ದಾಸೀತನ, ಮಾಧವಿ, ಪುರುವಿನ ಬದುಕಿನ ದುರ್ಭರತೆಗಳು, ಆಘಾತಗಳು, ಪುರುಷಪ್ರಧಾನ ಸತ್ಯಗಳನ್ನು ಅರಿತು ಶರ್ಮಿಷ್ಠೆ ಮತ್ತು ದೇವಯಾನಿ ಮಾಧವಿ ಪುರುವಿಗೆ ತಾಯಿ ಆಗುವುದರಲ್ಲಿ ಹಿತವನ್ನು ಬಯಸುತ್ತಾಳೆ.

ಹೆಣ್ಣಿಗೆ ಇರಬೇಕಾದದ್ದು ಕೇವಲ ಫಲವಂತಿಕೆ ಮಾತ್ರವಲ್ಲ ಎಂಬುದನ್ನು ದಿವೋದಾಸ ಮಹಾರಾಜನ ಮಹಾರಾಣಿಯೊಂದಿಗೆ ಮಾಧವಿ ಹೇಳುವ ಮಾತುಗಳು ಧ್ವನಿಸುತ್ತವೆ. 'ಇದು ಎಲ್ಲಾ ಹೆಣ್ಣು ಮಕ್ಕಳು ಮಾಡಬಹುದಾದ ಕಾರ್ಯವೇ' ಎನ್ನುತ್ತಾ ಅಜ್ಞಾನದ ಬಗೆಗಿನ ಮೀಮಾಂಸೆಯನ್ನು ಮಾಧವಿ ನಡೆಸುವುದನ್ನು ಈ ಕಾದಂಬರಿಯಲ್ಲಿ ಗಮನಿಸಬಹುದಾಗಿದೆ. ಗುರುವಿನ ಸತ್ಯವಾಕ್ಯ ಪರಿಪಾಲನೆಗಾಗಿ ತನ್ನ ಬದುಕೇ ದುರಂತವಾದುದನ್ನು ಅವಳು ವಿಮರ್ಶಿಸುತ್ತಾಳೆ. ಹೆಣ್ಣಿನ ಶೋಷಣೆಯ ಮೂಲ ದೇಹವೇ ಆದರೂ ದೇಹಕ್ಕಾಗಿ ದಾನ ಕೊಡಲ್ಪಡುವ ಮಾಧವಿ ಕೊನೆಯಲ್ಲಿ ತನ್ನನ್ನು ತಾನು ಸಂತೈಸಿಕೊಳ್ಳಲು ದೇಹಮೂಲ ಹುಡುಕಲು ಹೊರಟಾಗ ಅವಳ ಮನಸ್ಸು ಅವಳದಾಗಿ ಉಳಿಯದಿರುವುದನ್ನು ದೇಹಮೂಲ ಪ್ರಜ್ಞೆಯನ್ನು ಕಳೆದುಕೊಂಡಾಗ ಕಾಣದಿದ್ದ ನೋವು ಮನೋಮೂಲಪ್ರಜ್ಞೆ ಎಚ್ಚೆತ್ತಾಗ ಯಾತನೆಯನ್ನು ಉಂಟು ಮಾಡಿದುದನ್ನು ಗುರುತಿಸುತ್ತಾಳೆ. ಬಾಡಿಗೆ ತಾಯಿಯಾದಾಗ ಕಾಡದ ನೋವು ಪ್ರೀತಿಯ ಆದಿಮನನ್ನು ಕಾಣುವ ಬಯಕೆಯಾದಾಗ ಮೂಡುತ್ತದೆ. ಅಲ್ಲಿ ಅವಳಿಗೆ ದೇಹ–ಮನಸುಗಳ ತಿಕ್ಕಾಟ ಆರಂಭವಾಗುತ್ತದೆ. ಪ್ರಭುತ್ವ ಮತ್ತು ಧರ್ಮವ್ಯವಸ್ಥೆಯೊಳಗೆ

ಬಂಧಿಯಾದ ಹೆಣ್ಣು ಅನುಭವಿಸುವ ಯಾತನೆಯನ್ನು ಕಾದಂಬರಿಯೂ ವಿಶ್ಲೇಷಿಸುತ್ತದೆ.

ಅಧಿಕಾರ ಮತ್ತು ಸ್ವಾರ್ಥದಿಂದಾಗಿ ಹೆಣ್ಣನ್ನು ಶೋಷಿಸುವುದನ್ನು ಇಲ್ಲಿ ಗುರುತಿಸಬಹುದಾಗಿದೆ. ಎಲ್ಲಾ ಶೋಷಣೆಗಳನ್ನು ಎದುರಿಸಿಯೂ ಅವುಗಳಿಂದ ಹೊರಬರುವ ಮಾಧವಿ ಸಶಕ್ತ ಪಾತ್ರವಾಗಿ ಕಾಣಿಸುತ್ತಾಳೆ. ಅವಳ ಮನಸ್ಸನ್ನು ಅರಿಯುವ ಸ್ವಾಭಿಮಾನಿ ಮಾಧವಿಗೆ ಪ್ರೀತಿಯ ಸಂಬಂಧದೊಂದಿಗೆ ನಿರ್ಭೀತಿಯ ಸ್ವಾತಂತ್ರ್ಯವೂ ಬೇಕು, ಅವಳಿಗೆ ಆಸೆ ಕನಸುಗಳಿವೆ ಎಂಬುದನ್ನು ಆತ ಅರ್ಥ ಮಾಡಿಕೊಳ್ಳುತ್ತಾನೆ. ಅವಳ ಕನಸುಗಳನ್ನು ಭಗ್ನಗೊಳಿಸಿದ ಅಧಿಕಾರದ ಎಲ್ಲಾ ನೆಲೆಗಳನ್ನು ಅವಳು ದ್ವೇಷಿಸುತ್ತಾಳೆ ಮತ್ತು ಧಿಕ್ಕರಿಸುತ್ತಾಳೆ. ಸಂಗಾತಿ ಆದಿಮನನ್ನು ಯಾವ ದೈಹಿಕ ಬಂಧನದಲ್ಲೂ ಸಿಲುಕಿಸಲು ಆಕೆ ಇಚ್ಛೆ ಪಡದಿದ್ದರೂ, ಅವನು ಅವಳ ಬದುಕಿನ ಬೆಳಕಾಗಿ ಮುಂದುವರೆಯುವುದನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಜಮೀನು ಮತ್ತು ಗ್ರಾಮೀಣ ಬದುಕಿನ ವಿಶಿಷ್ಟ ಚಿತ್ರಣಗಳನ್ನು ಒಳಗೊಂಡಿರುವ ಕಾದಂಬರಿಯು ಪೌರಾಣಿಕ ವಸ್ತುವನ್ನು ಆಯ್ದುಕೊಂಡರೂ ವರ್ತಮಾನದ ಬದುಕಿನ ವಿವರಗಳನ್ನು ಒಳಗೊಂಡಿದೆ.

'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಅಶ್ವಮೇಧ ಯಾಗದಲ್ಲಿ ವಿಶೇಷವಾಗಿ ಬಳಸಲ್ಪಡುವವು. ಇವು ರಾಜ ಮಹಾರಾಜರ ಶೌರ್ಯ, ಪರಾಕ್ರಮ, ಸಾಮ್ರಾಜ್ಯ ವಿಸ್ತರಣೆ, ಆಕಾಂಕ್ಷೆ, ಅಧಿಕಾರ, ಭೂಮಿಯ ಮೇಲಿರುವ ವಸ್ತುಗಳೆಲ್ಲ ತಮ್ಮ ಸುಖ ಭೋಗಕ್ಕಾಗಿ ಇರುವುದು ಎನ್ನುವ ಅಹಂಗಳ ಪುರುಷಕೇಂದ್ರಿತ ದೃಷ್ಟಿಕೋನವನ್ನು ಪ್ರತಿನಿಧಿಸುತ್ತವೆ ಎಂಬುದನ್ನು ತಿಳಿಯಬಹುದಾಗಿದೆ. ರಾಜ ಮಹಾರಾಜರ ಹೆಣ್ಣಿನ ಬಗೆಗಿನ ಮೋಹಾಸಕ್ತಿ, ಆಸೆ ಆಕಾಂಕ್ಷೆಗಳ ದಳ್ಳುರಿಗೆ ಸಿಲುಕಿ ಬೂದಿಯಾಗುವ ಸ್ತ್ರೀಯರ ಪ್ರತಿನಿಧಿಯಾದ ಮಾಧವಿ ಆಧುನಿಕ ಚಿಂತನೆಗಳನ್ನು ಹೊಂದಿದವಳಾಗಿದ್ದಾಳೆ. ಆಕೆಯು ರಾಜ ಪ್ರಭುತ್ವದ ಅಮಾನವೀಯತೆ, ನಿರಂಕುಶತ್ವ, ಹೊಣೆಗೇಡಿತನಗಳನ್ನು ಪ್ರಶ್ನಿಸಿ ಎದುರಿಸುವ ದಿಟ್ಟ ಮನಃಸ್ಥಿತಿಯನ್ನು ಹೊಂದಿದವಳು. ಪುರುಷ ಪ್ರಭುತ್ವದಿಂದಾಗಿ ನೋವನ್ನು ಉಣ್ಣುವ, ಶೋಷಣೆಗೆ ಒಳಗಾಗುವ ಮಾಧವಿ ಪುರುಷ ರಾಜಕಾರಣದ ಮೂಲವನ್ನು, ಅದರ ಹರಹನ್ನು ಶೋಧಿಸುತ್ತಾಳೆ. ಹೆಣ್ಣನ್ನು ಸುತ್ತುವರಿದಿರುವ ಪುರುಷಕೇಂದ್ರಿತ ಚಿಂತನೆಗಳ ಅನಾವರಣವು ಇಲ್ಲಿ ಮಾಧವಿಯ ಮೂಲಕ ನಡೆದಿರುವುದನ್ನು ನಾವು ಕಾಣಬಹುದಾಗಿದೆ.

ಆರಂಭದಲ್ಲಿ ಕಚ್ಚಾಡುವ ಸವತಿಯರಾದ ಶರ್ಮಿಷ್ಠೆ, ದೇವಯಾನಿಯರು ಸಮಸ್ಯೆಯ ಮೂಲವನ್ನು ಅರಿತಂತಹ ಸಂದರ್ಭದಲ್ಲಿ ಒಂದಾಗುವುದನ್ನು ಗಮನಿಸಬಹುದು. ಉಶೀನರ ಮಹಾರಾಜನ ಪತ್ನಿಯರು ಕೂಡಾ ಒಂದಾಗುತ್ತಾರೆ. ಅಂದರೆ ಸ್ತ್ರೀಯರು ತಾವು ಅನುಭವಿಸುತ್ತಿರುವ ನೋವು ಹಾಗೂ ತುಳಿತಕ್ಕೆ ಒಳಗಾದವರು ಎಂಬ ಭಾವನೆ ಮೂಡಿದಾಗ ಎಲ್ಲಾ ಸಂಕಟಗಳನ್ನು, ದ್ವೇಷಗಳನ್ನು, ಸಿಟ್ಟುಗಳನ್ನು ಮರೆತು ಒಂದಾಗುವುದನ್ನು ಗಮನಿಸಬಹುದಾಗಿದೆ. ಇದು ಆಧುನಿಕ ಸ್ತ್ರೀವಾದದಲ್ಲಿ ಕಂಡುಬರುವ ಪ್ರಮುಖ ಅಂಶಗಳಲ್ಲಿ ಒಂದಾಗಿದೆ.

ತಾಯ್ತನ ಅಥವಾ ಬಾಡಿಗೆ ತಾಯಂದಿರು ಎಂಬ ಭಾವವನ್ನು ಪೌರಾಣಿಕ ವಸ್ತುವಿನ ಹಿನ್ನೆಲೆಯಲ್ಲಿ ಚರ್ಚಿಸಲಾಗಿರುವುದನ್ನು ಈ ಕಾದಂಬರಿಯಲ್ಲಿ ನಾವು ಗುರುತಿಸಬಹುದಾಗಿದೆ. ಅದು ಹೆಣ್ಣಿನ ವೈಯಕ್ತಿಕ ಆಯ್ಕೆಯಾಗಿ ಅಲ್ಲಿ ಉಳಿದಿಲ್ಲ, ಅವಳ ಮನಸ್ಸನ್ನು ಯಾರು ಅರಿಯುವುದಿಲ್ಲ ಎಂಬ ಪ್ರಭುತ್ವದ ಪುರುಷಕೇಂದ್ರಿತ ಯೋಚನೆಗಳ ಹಿನ್ನೆಲೆಯಲ್ಲಿ ಈ ಕಾದಂಬರಿಯನ್ನು ಚರ್ಚೆಗೆ ಒಳಪಡಿಸಬಹುದಾಗಿದೆ. ಮದುವೆಯಾಗದೆ ತಾಯಿಯಾಗುವ ಮಾಧವಿಯನ್ನು ಧರ್ಮ, ಪ್ರಭುತ್ವ ಅಂಗೀಕರಿಸುವುದನ್ನು, ಆ ಮೂಲಕ ಮಾತೃತ್ವದ ಬಗೆಗಿನ ಭಾವನೆಗಳನ್ನು ವಿಶ್ಲೇಷಿಸುವುದನ್ನು ಗಮನಿಸಬಹುದಾಗಿದೆ.

ಯಯಾತಿ ಮಹಾರಾಜರು ಮಾಧವಿಯನ್ನು ಗಾಲವರಿಗೆ ದಾನ ಕೊಡುವಾಗ ಹೇಳುವ 'ಫಲವತ್ತಾದ ಭೂಮಿ' ಎಂಬ ಮಾತು ಇವರೇನಾದರೂ ಹಸು, ಎಮ್ಮೆ ಅಥವಾ ಮತ್ತೇನಾದರೂ ವಸ್ತುವನ್ನು ದಾನ ಮಾಡುತ್ತಿದ್ದಾರೆ ಎಂಬ ಭಾವವನ್ನು ನಮ್ಮ ಮನಸ್ಸಿನಲ್ಲಿ ಮೂಡಿಸುತ್ತದೆ. ಕೊನೆಯಲ್ಲಿ ಬದುಕಿನ ದುರ್ಭರತೆಗಳಿಗೆ ಬಳಲಿ ಬೆಂಡಾದ ಮಾಧವಿ ಆದಿಮನ ಸ್ನೇಹದ ಆಸರೆಯಲ್ಲಿ ಮೌನವಾಗುವುದನ್ನು ಗಮನಿಸಬಹುದಾಗಿದೆ.

ಇದುವರೆಗಿನ ಪುರಾಣಗಳು ಹೆಣ್ಣನ್ನು ಪುರುಷರ ಕಣ್ಣಿನಿಂದ ಚಿತ್ರಿಸಿದ್ದರೆ, ಇಲ್ಲಿ ಸ್ತ್ರೀಯ ಭಾವನಾತ್ಮಕ ಹಿನ್ನೆಲೆಯ ಪುನರ್ ರಚನೆಯನ್ನು ಕಾಣಬಹುದು. ಪುರಾಣದಲ್ಲಿ ಮಾಧವಿ ದಮನಿತ ಹೆಣ್ಣಿನ ಪ್ರತಿನಿಧಿಯಾಗಿದ್ದರೆ, ಇಲ್ಲಿ ಮಾಧವಿಯ ಮನದಾಳದ ದನಿಯನ್ನು ಗುರುತಿಸಬಹುದಾಗಿದೆ. ಪುರಾಣಕ್ಕೆ ಹೊಸ ದೃಷ್ಟಿಕೋನವನ್ನು ಸ್ತ್ರೀವಾದಿ ನೆಲೆಯಲ್ಲಿ ಚಿತ್ರಿಸುವ ಯತ್ನವನ್ನು ಇಲ್ಲಿ ಮಾಡಲಾಗಿದ್ದು, ಅಧಿಕಾರ, ವರ್ತನೆಗಳ ಬಗ್ಗೆ ತನ್ನ ಅಸಹನೆಯನ್ನು ವ್ಯಕ್ತಪಡಿಸುವ ಪಾರ್ವತಿಯು ಬದುಕು ದೊಡ್ಡದೆಂಬ ಭಾವನೆ ಹಾಗೂ ಯುದ್ಧ ವಿರೋಧಿ ನಿಲ್ಲುವನ್ನು ವ್ಯಕ್ತಪಡಿಸುತ್ತಾಳೆ. ಮಹಾರಾಜರ ಒಂದು ಕ್ಷಣದ ಕಾಮದ ಬಯಕೆಗೆ ಬಲಿಯಾದ ಲಕ್ಷ್ಮಿ ಜೀವಮಾನವಿಡೀ ಆ ಸಂಬಂಧದಲ್ಲಿ ಬಂಧಿ ಆಗಬೇಕಾಗುತ್ತದೆ. ಆ ಮೂಲಕ ಅತ್ಯಾಚಾರವನ್ನು ವಿವಾಹದ ಹೆಸರಿನಲ್ಲಿ ನ್ಯಾಯಭದ್ರಗೊಳಿಸುವ ಯತ್ನವನ್ನು

ಗಮನಿಸಬಹುದಾಗಿದೆ. ಇಲ್ಲಿ ಯಾವುದೇ ಭಾವ ಬಾಂಧವ್ಯವಿಲ್ಲ ಬದಲಾಗಿ ಅವರು ನೀಡುವ ಒಂದಿಷ್ಟು ಎಂಜಲಿಗಾಗಿ ಜೀವಮಾನವಿಡೀ ಗುಲಾಮರಾಗಿ ಬದುಕಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಲಾಗಿದೆ. ಲಕ್ಷ್ಮಿಯ ದೈಹಿಕ, ಮಾನಸಿಕ ಯಾತನೆಯ ಅರಿವು ಅಲ್ಲಿರುವ ಯಾರಿಗೂ ಆಗುವುದಿಲ್ಲ.

ಒಂದೆಡೆ ಮಗನ ಬದುಕನ್ನು, ಇನ್ನೊಂದೆಡೆ ಮಗಳ ಬದುಕನ್ನು ಬಳಸಿಕೊಳ್ಳುವ ಯಯಾತಿಯು ಕೇವಲ ಗಂಡಸುತನವನ್ನಷ್ಟೇ ಮೆರೆಯುತ್ತಾನೆ. ಮಾಧವಿ ಗಾಲವರಿಗೆ ದಾನವಾಗಿ ಹೋಗಲು ಸಿದ್ಧಳಾದಾಗ ಮಾಡುವ ವಿಶ್ಲೇಷಣೆಯು ಮಾರ್ಮಿಕವಾಗಿದೆ. ಅವಳನ್ನೊಂದು ಸರಕನ್ನಾಗಿಸಿದ ಬಗ್ಗೆ ಹೇಳುವ ಆತ ಮರಳಿ ಬಂದ ಮಾಧವಿಯಲ್ಲಿ ಏನು ತಾನೆ ಉಳಿದಿತ್ತು ಎಂಬುದನ್ನು ಯೋಚಿಸುತ್ತಾನೆ. ಹೆಣ್ಣಿನ ಮನಃಸ್ಥಿತಿ ಸೂಕ್ಷ್ಮತೆಗಳ ಬಗ್ಗೆ ಚಿಂತಿಸುವ ಆತ ಮಾಧವಿಗಾಗಿ ಮರುಗುತ್ತಾನೆ. ಬಂದುದನ್ನು ಎದುರಿಸಲು ಸಿದ್ಧಳಾಗುವ ಮಾಧವಿಯ ಗಟ್ಟಿತನ ಮೆಚ್ಚಬೇಕಾದುದೇ ಆಗಿದೆ. ಆದರೆ ಸಂಬಂಧ ಹುಡುಕಿ ಬಂದ ಮಹಾರಾಜರು ಅವಳ ಬದುಕನ್ನು ಕತ್ತಲಾಗಿಸುತ್ತಾರೆ.

ದೇಹ ಮೂಲಪ್ರಜ್ಞೆಯನ್ನು ತೊರೆದು ನಡೆಯುವ ಮಾಧವಿಯ ನಡೆ ಪ್ರತಿಭಟನಾತ್ಮಕವಾದುದೇ ಆಗಿದೆ. ಎಲ್ಲರೂ ತನ್ನ ದೇಹದ ಮೇಲಷ್ಟೇ ಅಧಿಕಾರವನ್ನು ಸ್ಥಾಪಿಸಬಹುದೇ ಹೊರತು ಮನಸ್ಸಿನ ಮೇಲಲ್ಲ ಎಂಬುದನ್ನು ಮಾಧವಿ ಹೇಳುತ್ತಾಳೆ. ದಿವೋದಾಸರು ಗಂಡು ಹೆಣ್ಣಿನ ಸಂಬಂಧ ಪರಸ್ಪರ ಸಹ್ಯವಾಗಿರಬೇಕು. ಪರಸ್ಪರ ಸಾಂಗತ್ಯ ಬೆಳೆದಾಗ ಮಾತ್ರ ಸಹ್ಯವಾದ ಸಾಹಚರ್ಯ ಸಂಬಂಧಗಳು ಮೂಡಲು ಸಾಧ್ಯವೆಂದು ಭಾವಿಸುತ್ತಾರೆ.

ಸ್ವಾರ್ಥ ಪರವಾದ ಮುಖವನ್ನು ಮುಚ್ಚಿಕೊಳ್ಳಲು ಇಲ್ಲಿ ಎಲ್ಲರೂ ಧರ್ಮ, ನ್ಯಾಯ, ನೀತಿಗಳ ಮುಸುಕನ್ನು ಹಾಕುತ್ತಾರೆ. ಆದರೆ ಹೆಣ್ಣು ಎಲ್ಲಾ ವಿಧದಲ್ಲೂ ಯಾವ ಕಾರಣವೂ ಇಲ್ಲದೆ ಅಮಾನವೀಯ ಕ್ರೌರ್ಯಕ್ಕೆ ಒಳಗಾಗುತ್ತಾಳೆ. ಅರಮನೆಯಲ್ಲಿದ್ದವರಿಗೂ ಸುಖ–ದುಃಖವಿದೆ, ಅವರೂ ಮನುಷ್ಯರೇ. ಗಂಡು–ಹೆಣ್ಣಿನ ಸಂಬಂಧದ ಬಗ್ಗೆ ಮಧುರ ಅನುಭೂತಿ ಹೊಂದಿದ ಮಾಧವಿ ಸ್ಪಷ್ಟ ಕಲ್ಪನೆ ಹೊಂದುವ ಮೊದಲೇ ಕರಾಳ ಜಗತ್ತನ್ನು ಪ್ರವೇಶಿಸುತ್ತಾಳೆ. ಮಧ್ಯ ವಯಸ್ಸಿನ ಹರ್ಯಶ್ವ ಮಹಾರಾಜರು, ದಿವೋದಾಸರು, ಉಶೀನರರು ಮತ್ತು ತಂದೆಯ ವಯಸ್ಸಿನ ವಿಶ್ವಾಮಿತ್ರರು ಎರಗುವ ಆಕ್ರಮಣಗಳಿಂದ ಕನಸೆಲ್ಲ ನುಚ್ಚುನೂರಾಗುತ್ತದೆ. ಹೆಣ್ಣನ್ನು ಪರಿಭಾವಿಸುವ ದೃಷ್ಟಿಕೋನ ಬದಲಾಗಬೇಕಾದ ಅನಿವಾರ್ಯತೆಯನ್ನು ಕಾದಂಬರಿಯು ಧ್ವನಿಸುತ್ತದೆ. ಪುರುಷ ಅಧಿಕಾರ ಹೆಣ್ಣಿನ ಬದುಕನ್ನು ನುಂಗುವ ಕ್ರೌರ್ಯವನ್ನು ಕಾದಂಬರಿಯಲ್ಲಿ ಚಿತ್ರಿಸಲಾಗಿದೆ.

ಹೆಣ್ಣನ್ನು ದೇಹ ಮೂಲದಿಂದ ನೋಡುವ ದೃಷ್ಟಿ ಬದಲಾಗಬೇಕೆನ್ನುವುದರ ಸೂಚನೆ ಮತ್ತು ಯಜಮಾನ ಸಂಸ್ಕೃತಿಯನ್ನು ಪೋಷಿಸುವ ಸಾಮಾಜಿಕ ವ್ಯವಸ್ಥೆಯ ಚಿತ್ರಣವೂ ಇಲ್ಲಿದೆ. ಪುರುಷರ ಭಾವಕೋಶದೊಳಗೆ ಹೆಣ್ಣಿನ ಭಾವ ಕಾಣೆಯಾಗಿರುವುದನ್ನು ಕಾಣಬಹುದಾಗಿದ್ದು, ಶೀಲ, ಪಾವಿತ್ರ್ಯತೆ, ಧರ್ಮ, ನ್ಯಾಯಗಳ ಜರಡಿಯಲ್ಲಿ ಹೆಣ್ಣು ನಿರಂತರ ಶೋಷಣೆಗೆ ಒಳಗಾಗುತ್ತಾಳೆ. ಆ ಶೋಷಣೆಯನ್ನು ಮರೆಮಾಚಲು ಪುರುಷ ಧರ್ಮ, ನ್ಯಾಯ, ನೀತಿಗಳ ಮುಸುಕನ್ನು ಧರಿಸುತ್ತಾನೆ. ಪುರುಷರ ಬೇರೆ ಬೇರೆ ಮಾದರಿಗಳನ್ನು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದ್ದು, ಹೆಣ್ಣನ್ನು ದೇಹಕ್ಕಾಗಿ ಬಯಸುವ ಯಯಾತಿಯಂಥವರು, ಅಂದಿನ ಪುರುವಿನಂತಹ ಸೂಕ್ಷ್ಮ ಮನಸ್ಸಿನ ಪುರುಷರು ಇಲ್ಲಿದ್ದಾರೆ.

ಭಿನ್ನ ದಾಂಪತ್ಯದ ಮಾದರಿಗಳೊಂದಿಗೆ ತನ್ನೆಲ್ಲ ನೋವು ತಲ್ಲಣಗಳನ್ನು ಹೆಣ್ಣು ತನ್ನೊಳಗೆ ಮುಚ್ಚಿಡಬೇಕಾದ ಅನಿವಾರ್ಯತೆಯನ್ನು ಈ ಕಾದಂಬರಿಯು ತೆರೆದಿಡುತ್ತದೆ. ಅವಕಾಶ ಇಲ್ಲದಿರುವುದನ್ನು ಶತಮಾನಗಳಿಂದ ಶೋಷಿಸಿದ, ಬಳಸಿದ ಪುರುಷ ಅಧಿಕಾರದ ವಿರುದ್ಧ ಮಾಧವಿ ಉತ್ತರ ನೀಡಲು ಪ್ರಯತ್ನಿಸುವುದನ್ನು ಕಾಣಬಹುದಾಗಿದೆ.

ಮನಸು ದೇಹವನ್ನು ಪ್ರತ್ಯೇಕಿಸುವುದು ಸಾಧ್ಯವಿಲ್ಲ. ಹೆಣ್ಣಿಗೆ ಗಂಡು ಹೆಣ್ಣಿನ ಸಂಬಂಧ ಮನೋಮಯ ಕೋಶದಲ್ಲಿ ರೂಪು ತಳೆದಿರುವಂಥದ್ದು. ದೇಹಮೂಲ ಪ್ರಜ್ಞೆ ಬೇರೆ ಮನೋಮೂಲ ಪ್ರಜ್ಞೆ ಬೇರೆ ಎಂದು ಭಾವಿಸಲು ಹೆಣ್ಣಿಗೆ ಎಂದಿಗೂ ಸಾಧ್ಯವಾಗದು ಎಂಬ ಗಂಡು ಹೆಣ್ಣಿನ ಹೊಸ ವಿನ್ಯಾಸ ಇಲ್ಲಿ ಕಾಣಿಸಿಗುತ್ತದೆ. ಬದುಕು ಕಷ್ಟವಾಗಿದ್ದರೂ ತನ್ನತನವನ್ನು, ತನ್ನ ಸ್ವಂತಿಕೆಯನ್ನು ಉಳಿಸಿಕೊಳ್ಳುವ ಮಾಧವಿ ಅವಳ ಸ್ವಾಭಿಮಾನದಿಂದ ಶೀಲವನ್ನು ಮಾನಸಿಕ ಸ್ಥಳದಲ್ಲಿ ಗುರುತಿಸುವ ಯತ್ನಗಳು, ಪರಂಪರೆಯ ಬಗ್ಗೆ ಪ್ರತಿರೋಧದೊಡನೆ ಸಿದ್ಧ ಸಮಾಜದ ಚೌಕಟ್ಟನ್ನು ಮುರಿಯುವ ಪುರಾಣವನ್ನು ಪುನರ್ ವ್ಯಾಖ್ಯಾನಿಸುವ ಚಿಂತನೆಗಳು ಇಲ್ಲಿವೆ.

ಗುರು ಎಂದರೆ ಯಾರು ಎಂಬುದನ್ನು ಜಿಜ್ಞಾಸೆಗೆ ಒಳಪಡಿಸುವ ಮಾಧವಿ ವಿಶ್ವಾಮಿತ್ರರಿಗೆ ಕೇಳುವಂಥ ಮಾತುಗಳು ತನ್ನ ಎಲ್ಲ ದುಃಖಗಳನ್ನು ಎದುರಿಸಿ ನಡೆಯುವ ಚಿತ್ರಣ ದಾನದ ವಸ್ತುವಾಗಿ, ಭೋಗದ ಸಾಧನವಾಗಿ, ಹೆರಿಗೆಯ ಯಂತ್ರವಾಗಿ ಗಂಡು ಹೇಳಿದಂತೆ ಬಾಳಬೇಕಾಗಿ ಬರುವ ಮಾಧವಿಯ ದುರಂತ ಮನಸ್ಸಿಗೆ ತಟ್ಟುತ್ತದೆ. ಶೀರ್ಷಿಕೆಯಲ್ಲಿ ರೂಪಕವಾಗಿ ಬಳಕೆಯಾಗಿರುವ ಅಶ್ವಮೇಧ

ಯಾಗದಲ್ಲಿ ವಿಶೇಷವಾಗಿ ಬಳಸಲ್ಪಡುವ ಕುದುರೆ ರಾಜತ್ವದ ಶೌರ್ಯ, ಪರಾಕ್ರಮ, ಸಾಮ್ರಾಜ್ಯ ದಾಹ, ಅಧಿಕಾರದ ವ್ಯಾಮೋಹ, ಅಹಂಗಳ ಸೂಚಕವಾಗಿದೆ. ರಾಜರ ಆಸೆ, ಆಕಾಂಕ್ಷೆಗಳಿಗೆ ಧೂಳೀಪಟವಾಗುವ ಮಾಧವಿಯ ಅಂತರಂಗದ ಕನಸು, ಆಧುನಿಕ ಚಿಂತನೆಯನ್ನು ಹೊಂದಿ ಅದನ್ನು ವ್ಯಕ್ತಪಡಿಸಲು ಬಯಸುವ ಮಾಧವಿಯ ಮನಸ್ಸು, ಪ್ರಭುತ್ವದ ಅಮಾನವೀಯತೆಯನ್ನು ಪ್ರಶ್ನಿಸುವ, ಎದುರಿಸುವ ಅವಳ ಧ್ವನಿ, ಪುರುಷ ರಾಜಕಾರಣದ ಶೋಷಿತರ ಪ್ರತಿನಿಧಿಯಾಗಿ ಆಕೆ ಹೇಳುವಂಥ ಮಾತುಗಳು ಎಲ್ಲವೂ ಗಮನಾರ್ಹವಾದುದೇ ಆಗಿವೆ.

ಧರ್ಮದ ಎಡೆಯಲ್ಲಿ ನಲುಗುವ ಹೆಣ್ಣಿನ ಮನಸ್ಸು, ಹೆಣ್ಣನ್ನು ಸುತ್ತುವರಿದಿರುವ ಪುರಾಣದ ಕಥೆಗಳು, ಮಾಧವಿಯ ನೋವು ಎಲ್ಲವೂ ವ್ಯಕ್ತವಾಗುವುದು ಅವಳ ಸ್ವಗತದ ಮೂಲಕವೇ ಆಗಿದೆ. ಮಾಧವಿ ಸ್ತ್ರೀಧರ್ಮ ಎಂದು ಹೇಳಲ್ಪಟ್ಟಿರುವ ವಿಚಾರಗಳನ್ನು ಜಿಜ್ಞಾಸೆಗೆ ಒಳಪಡಿಸುತ್ತ ಮೌನವಾಗಿರುವುದು, ಚಕಾರವೆತ್ತದೇ ಮಕ್ಕಳನ್ನು ಹೆತ್ತು ಬೆಳೆಸುವುದು, ಅನ್ಯಾಯಗಳಿಗೆ ಪ್ರತಿಭಟಿಸದೆ ಸುಮ್ಮನಿರುವುದೇ ಸ್ತ್ರೀತ್ವದ ಮಾದರಿಯಾಗಿದೆಯೇ ಎಂದು ಪ್ರಶ್ನಿಸುವುದರಲ್ಲಿ ಮತ್ತು ಉತ್ತರವನ್ನು ಕಾಣದೆ ಮಾತನಾಡದೆ ಇರುವುದೇ ಧರ್ಮ ಎಂದುಕೊಂಡು ಮೌನವಾಗುವುದರಲ್ಲಿ ಗಮನಿಸಬಹುದಾಗಿದೆ.

ಸ್ತ್ರೀ ಪುರುಷ ಸಂಬಂಧದ ವಿಶ್ಲೇಷಣೆಯನ್ನು ಮಾಡುವ ಕಾದಂಬರಿಯು ಸ್ತ್ರೀಶೋಷಣೆಯ ವಿವರಗಳನ್ನು, ಅದಕ್ಕೆ ಸಹಜ ಪ್ರತಿರೋಧಗಳನ್ನು ಮೌನ ಪ್ರತಿಭಟನೆಯಲ್ಲಿ ಹೊಂದಿದೆ. ಸ್ತ್ರೀ ಎದುರಿಸುವಂತಹ ಸವಾಲುಗಳು, ಅವಳ ಭಾವನೆಗಳನ್ನು ನಿಯಂತ್ರಿಸಲು ಬಯಸುವ ಸಮಾಜ, ಅವರ ಕಟ್ಟುಪಾಡುಗಳ ಪರಿಣಾಮ ವ್ಯಕ್ತಿತ್ವಕ್ಕೆ ಧಕ್ಕೆಯಾಗುವಂತಹ ಸಂದರ್ಭ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯವಾಗದೆ ಹೆಣ್ಣು ತನಗಾಗಿ ತಾನು ಬಾಳಬೇಕೆ ಎಂಬ ಭಾವಗಳು ಮಾಧವಿಯ ಮನಸ್ಸಿನಲ್ಲಿ ಮೊಳಕೆ ಒಡೆಯುವ ವಿಚಾರಧಾರೆಗಳು ಇಲ್ಲಿ ವಿಶೇಷವಾಗಿರುವಂತೆ, ಹೆಣ್ಣಿನ ನಿಷ್ಠುರತೆ, ಸ್ವಾಭಿಮಾನ, ಪುರುಷನು ಹೆಣ್ಣಿನ ಭಾವನೆಗಳಿಗೆ ಮಹತ್ವವನ್ನು ನೀಡಬೇಕಾದಂತಹ ಅನಿವಾರ್ಯತೆ, ಹೆಣ್ಣಿನ ಅಂತರಂಗದ ತಳಮಳಗಳು, ರಾಜಕಾರಣಕ್ಕೆ ಬಲಿಯಾಗುವ ಸ್ತ್ರೀಪಾತ್ರಗಳು, ನಿರಾಕರಣೆಯ ಮೂಲಕವೇ ಹೊಸ ಮೌಲ್ಯವನ್ನು ನಿರೂಪಿಸುವಂತಹ ರೀತಿ ಎಲ್ಲವೂ ವಿಶಿಷ್ಟವಾಗಿದೆ.

ಬದುಕಿನ ಸ್ಥಿತ್ಯಂತರಗಳ ಶೋಧನೆಯೊಂದಿಗೆ ಮಹಿಳಾ ಸಮುದಾಯದ ಬದುಕಿನ ವಿವಿಧ ಆಯಾಮಗಳು, ಸ್ತ್ರೀಶೋಷಣೆ ಮತ್ತು ಅದಕ್ಕೆ ಪ್ರತಿರೋಧ, ಪರಂಪರೆಯನ್ನು ಪ್ರಶ್ನಿಸುತ್ತಲೇ ಪರಂಪರೆಯನ್ನು ಸೃಷ್ಟಿಸುವ ಯತ್ನ, ಹೆಣ್ಣಿನ ಭಾವನೆಗಳನ್ನು ಸಮಾಜ ನಿಯಂತ್ರಿಸುವ ರೀತಿಯ ಚಿತ್ರಣ, ಇನ್ನೂ ಪರರ ಆಶ್ರಯದಲ್ಲೇ ಬಾಳಬೇಕೆಂಬ ಭಾವನೆಯನ್ನು ತೊರೆದು ತನಗಾಗಿ ಬಾಳಬೇಕು ಎಂಬ ಅವಶ್ಯಕತೆಯನ್ನು ವಿವೇಚಿಸುವಂತಹ ಸೂಕ್ಷ್ಮ ಒಳನೋಟಗಳು, ಸಾಮಾಜಿಕ ಸಂಬಂಧಗಳ ಸಂಕೀರ್ಣತೆಯ ವಿಚಾರಗಳು, ಪುರುಷ ತನ್ನನ್ನು ತಾನು ಅರಿತುಕೊಳ್ಳಬೇಕಾದ ಅನಿವಾರ್ಯತೆ ಮತ್ತು ಪುರುಷಪ್ರಧಾನ ಸಮಾಜದ ವೈರುಧ್ಯಗಳ ಚಿತ್ರಣ, ಮನೋಭಾವವನ್ನು ಬದಲಾಯಿಸಲು ಯತ್ನಿಸುವ ಪ್ರೀತಿಯ ಮನೋ ಚಿಂತನೆಗಳೊಳಗೆ ಮೂಡುವ ಸ್ತ್ರೀಪಾತ್ರಗಳು, ಸಾಮಾಜಿಕ ವ್ಯವಸ್ಥೆಯ ಪುನರ್ ಅವಲೋಕನದ ಅನಿವಾರ್ಯತೆ, ಇಂದಿನ ಸಹನೆಯ ಪರಾಕಾಷ್ಠೆ, ಪೌರಾಣಿಕ ಉದಾಹರಣೆಗಳ ಮೂಲಕ ಶತಮಾನಗಳಿಂದ ಹೆಣ್ಣಿನ ನಿರ್ಲಕ್ಷ್ಯ, ಅವಮಾನ ಮತ್ತು ಯಾತನಾಮಯ ಬದುಕಿನ ವಿವೇಚನೆಯ ಶೋಧನೆಯೂ ಇಲ್ಲಿದೆ.

ವೈಯಕ್ತಿಕವಾಗಿ, ಸಾಮಾಜಿಕವಾಗಿ, ಬೌದ್ಧಿಕವಾಗಿ ಎದುರಿಸುವ ಸಮಸ್ಯೆಗಳ ಒಳನೋಟ, ಬದುಕಿನ ಸಂಕೀರ್ಣತೆಯ ಅರಿವು, ಗ್ರಾಮೀಣ ಬದುಕಿನ ಒಳಸುಳಿ ಎಲ್ಲವೂ ಒಂದೊಂದಾಗಿ ರೂಪು ತಡೆದಿರುವುದನ್ನು ಕಾಣಬಹುದು. ಸಂಪ್ರದಾಯದ ಸಂಬಂಧಗಳ ನಡುವಿನ ಸಮಸ್ಯೆಯ ಶೋಧನೆ, ಬದುಕನ್ನು ಆವರಿಸುವ ಕ್ರೌರ್ಯ, ದೌರ್ಜನ್ಯ, ದಬ್ಬಾಳಿಕೆಯ ಬಗೆಗಿನ ವಿಷಾದ, ವರ್ಗ, ಜಾತಿ ವ್ಯವಸ್ಥೆಯ ಸಂಕೀರ್ಣ ಸ್ವರೂಪದ ಚಿತ್ರಣ, ವರ್ತನೆಗಳ ಅನಾವರಣ, ಹೆಣ್ಣಿನ ಮನಸ್ಸಿನ ಸೂಕ್ಷ್ಮತೆ, ಸಂವೇದನೆ, ಆತಂಕ, ಅನುಮಾನ, ಸಂದೇಹ, ಕಳವಳ, ಸಮಾಜ ರೂಪಿಸಿದ ಜೀವನದಲ್ಲಿ ಬಾಳುವ ಸ್ತ್ರೀಯರ ಬದುಕಿನ ವಿಶ್ಲೇಷಣೆಯೊಂದಿಗೆ ಮಣ್ಣಿನ ದರ್ಪದ ಎದುರು ನಗುವ ಹೆಣ್ಣಿನ ಬದುಕು ಇವೆಲ್ಲವನ್ನು ಇವರ ಕಾದಂಬರಿಗಳು ಚಿತ್ರಿಸುತ್ತವೆ.

ಕಾದಂಬರಿಗಳಲ್ಲಿ ಹೆಣ್ಣಿನ ವ್ಯಕ್ತಿತ್ವ ರೂಪಗೊಳ್ಳದೆ ಒಡೆದು ಹೋಗುವುದು, ಹೆಣ್ಣಿನ ಬದುಕಿನ ನೋವು ನಲಿವು, ಪ್ರಶ್ನಿಸುವಿಕೆ, ಪ್ರತಿಭಟಿಸುವಿಕೆ, ಪರ್ಯಾಯದ ಹುಡುಕುವಿಕೆ, ಪ್ರತಿರೋಧ ಹೂಡುವ ಯತ್ನ, ಯಾವುದೂ ಇಲ್ಲದೆ ಮೌನದಲ್ಲೇ ಎಲ್ಲವನ್ನು ಮಾಡುವ ಪಾತ್ರಗಳು, ಹೆಣ್ಣು ತನ್ನ ಅಧೀನದಲ್ಲಿ ಇರಬೇಕೆಂದು ಬಯಸುವ ಪುರುಷ ಪ್ರಧಾನತೆ, ಕಷ್ಟ ಬಂದಾಗ ನೆರವಿಗೆ ಧಾವಿಸುವ ಸ್ತ್ರೀಸಹಜ ಅಂತಃಸತ್ವ ಹೊಂದಿದ ಪಾತ್ರಗಳು ಇವೆಲ್ಲವೂ ಎಂ ಎಸ್ ವೇದಾವರ 'ಜಯ' ಮತ್ತು 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಕಾದಂಬರಿಯನ್ನು ವಿಶಿಷ್ಟವಾಗಿಸಿವೆ; ವಿಭಿನ್ನವಾಗಿಸಿವೆ. ಮಾತ್ರವಲ್ಲ; ಹೊಸ ಸ್ತ್ರೀವಾದಿ ಧೋರಣೆಯನ್ನು ಹುಟ್ಟು ಹಾಕುವ ಪ್ರಯತ್ನವನ್ನು ಮಾಡಿವೆ.

ಆಕರ ಕೃತಿಗಳು: :

1. ಕಪ್ಪು ಕಿವಿಯ ಬಿಳಿಯ ಕುದುರೆಗಳು – ಎಂ. ಎಸ್. ವೇದಾ
2. ಜಯ – ಎಂ. ಎಸ್. ವೇದಾ

ವಚನ ಮತ್ತು ದಾಸ ಸಾಹಿತ್ಯ : ಅನುಸಂಧಾನ

***

ಡಾ. ಹೆಚ್.ಎಂ. ಮಲ್ಲಿಕಾರ್ಜುನ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಕ್ರೈಸ್ಟ್ ಅಕಾಡೆಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್
ಹುಲ್ಲಹಳ್ಳಿ, ಬೇಗೂರು–ಕೊಪ್ಪ ರೋಡ್ ಬೆಂಗಳೂರು
560083
mallikarjunahm2012@gmail.com

ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ನೂರಾರು ಕವಿಗಳು ವಿವಿಧ ಕಾಲಘಟ್ಟದಲ್ಲಿ ಉದಯಿಸಿ ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ. ಈ ಸಾಹಿತ್ಯದ ಉದ್ದೇಶ ಸಾಮಾಜಿಕ ಬದಲಾವಣೆ ತರುವುದಾಗಿತ್ತು, ಇದರ ನಡುವೆಯೇ ರಾಜಪ್ರಭುತ್ವದ ನೆಲೆಯಲ್ಲಿಯೂ ಬಂದಿವೆ, ಧರ್ಮ ಪ್ರಚಾರದ ನಿಟ್ಟಿನಲ್ಲಿಯೂ ಮೂಡಿಬಂದಿರುವುದನ್ನು ಗಮನಿಸಬಹುದು.

ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಉದಯವಾದ ಉದ್ದೇಶವನ್ನು ಪರಿಗಣಿಸಿದಾಗ ಅವರೆಡರ ಉದ್ದೇಶ ಸಾಮಾಜಿಕ ಕ್ರಾಂತಿಯನ್ನು ತರುವುದೇ ಆಗಿತ್ತೆಂಬುದು ಸ್ಪಷ್ಟವಾಗುತ್ತದೆ. ಪ್ರಭುತ್ವವನ್ನೇ ಮೂಲಸೆಲೆಯಾಗಿಸಿಕೊಂಡಿದ್ದ, ಪಂಡಿತರಿಗಾಗಿಯೇ ಮೀಸಲಾಗಿದ್ದ ಸಾಹಿತ್ಯವು ಜನಸಾಮಾನ್ಯರೆಡೆಗೆ ಇವೆರಡೂ ಕಾಲಘಟ್ಟದಲ್ಲಿ ಸಾಗಿತ್ತೆಂಬುದು ಉಲ್ಲೇಖನೀಯ ಅಂಶ.

ಅಂದಿನ ಕಾಲಘಟ್ಟದಲ್ಲಿ ನೆಲೆಸಿದ್ದ ಕರ್ಮಠ ಸಿದ್ಧಾಂತಗಳು, ಮೌಢ್ಯಾಚರಣೆಗಳನ್ನು ಹೋಗಲಾಡಿಸುವುದರ ಜೊತೆಗೆ ಸಮಸಮಾಜ ನಿರ್ಮಿಸುವುದು ಅವರ ಪರಮ ಉದ್ದೇಶವಾಗಿದ್ದಿತು. ವಚನಕಾಲಘಟ್ಟದಲ್ಲಿ ಬಸವಣ್ಣ, ಅಲ್ಲಮ, ಅಕ್ಕ, ಚನ್ನಬಸವಣ್ಣ, ಸಿದ್ಧರಾಮ, ಅಂಬಿಗರ ಚೌಡಯ್ಯ ಮುಂತಾದ ನೂರಾರು ಕಾಯಕವನ್ನು ಅನುಸರಿಸುತ್ತಿದ್ದ ವಚನಕಾರರು ಕಾಣಸಿಗುತ್ತಾರೆ ಅಂತೆಯೇ ದಾಸ ಪರಂಪರೆಯಲ್ಲಿ ಶ್ರೀಪಾದರಾಯರು, ನರಹರಿತೀರ್ಥರು, ಪುರಂದರದಾಸ, ಕನಕದಾಸ, ವ್ಯಾಸರಾಯರು, ವಿಜಯದಾಸ ಹೀಗೆ ನೂರಾರು ಕೀರ್ತನಾಕಾರರು ಕಂಡುಬರುತ್ತಾರೆ. ಇವೆರಡೂ ಪರಂಪರೆಯಲ್ಲಿರುವ ಸಾಮ್ಯತೆಯ ವಿಚಾರಗಳನ್ನು ಸಾಹಿತ್ಯಕ

ಹಿನ್ನೆಲೆಯಲ್ಲಿ ಅನುಲಕ್ಷಿಸುವ ಉದ್ದೇಶವನ್ನು ಈ ಲೇಖನದಲ್ಲಿ ಇರಿಸಿಕೊಳ್ಳಲಾಗಿದೆ.

ವಚನ ಸಾಹಿತ್ಯವೆಂಬುದು ಭಾರತೀಯ ಸಾಹಿತ್ಯ ಪರಂಪರೆಯಲ್ಲಿಯೇ ಯಾವುದೇ ಸಾಹಿತ್ಯಕ್ಕೂ ಹೋಲಿಕೆಯಾಗದ ವಿಶಿಷ್ಟವಾದ ಮಾದರಿಯೆಂಬುದನ್ನು ಸಂಶೋಧಕರು ಈಗಾಗಲೇ ಗುರುತಿಸಿದ್ದಾರೆ. ಆದರೆ ಈ ಸಾಹಿತ್ಯದಲ್ಲಿ ಮೂಡಿಬರುವ ಶಿವಶರಣರ ಆ ಭಕ್ತಿಯ ಸೆಲೆಗೆ ಮೂಲ ನೆಲೆ ಯಾವುದು ಎಂಬುದರ ಹುಡುಕಾಟ ನಡೆಸಿ ಹಲವಾರು ಸಂಶೋಧಕರು ತಮ್ಮದೇ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ವಚನ ಎಂದರೆ ಸಂಸ್ಕೃತದಲ್ಲಿ ಮಾತು ಎಂದು ಅರ್ಥ ಬರುತ್ತದೆ. ಶಿ.ಶಿ. ಬಸವನಾಳ ಅವರು **"ಸೂಕ್ಷ್ಮವಾಗಿ ವಿಚಾರಿಸಿದರೆ ವಚನಗಳು ಗದ್ಯ ಪದ್ಯದ ನಡುವಿನ ಒಂದು ಮಾದರಿಯೆಂದೇ ಹೇಳಬೇಕಾಗುವುದು"**[1] ಎಂದು ಅಭಿಪ್ರಾಯಪಡಿಸಿದ್ದಾರೆ. ಇನ್ನು ಕೆಲವು ವಿದ್ವಾಂಸರು ತಮಿಳಿನ ತೇವಾರಂ ಗೀತೆಗಳಿಂದ, ಉಪನಿಷತ್ತುಗಳಿಂದ, ತ್ರಿಪದಿಗಳಿಂದ ವಚನದ ಮೂಲವನ್ನು ತಿಳಿಸಿದ್ದಾರೆ. ಹೀಗೆ ಹಲವು ಚರ್ಚೆಗಳ ಬೆನ್ನು ಹತ್ತಿ ಸಾಗಿದಾಗ ಈ ರೀತಿಯ ಅಭಿಪ್ರಾಯಗಳು ಮೂಡಿಬಂದಿವೆ. ವಚನಕಾರರು ಸಾಹಿತ್ಯ ರಚಿಸುವ ಉದ್ದೇಶವನ್ನು ಇರಿಸಿಕೊಂಡಿದ್ದವರಲ್ಲ ತಮ್ಮ ಜೀವನಾನುಭವದ ಸಂಗತಿಗಳಿಗೆ ಅಕ್ಷರ ರೂಪ ನೀಡಿದರು ಅದೇ ಸಾಹಿತ್ಯವಾಗಿ ಪರಿಣಮಿಸಿತೆಂದು ಭಾವಿಸಬಹುದು.

ದಾಸ ಯುಗದಲ್ಲಿ ರಚನೆಯಾದ ಕೀರ್ತನೆಗಳ ಮೂಲದ ಬಗ್ಗೆಯೂ ಸಾಕಷ್ಟು ಸಂಶೋಧನೆಗಳು ನಡೆದಿವೆ. ಇವುಗಳಿಗೆ ಪ್ರೇರಣೆ ಶರಣರ ಭಕ್ತಿ ಚಳುವಳಿ ಮತ್ತು ವಚನಗಳೇ ಎಂಬುದನ್ನು ವಿದ್ವಾಂಸರು ವಿಶದೀಕರಿಸಿದ್ದಾರೆ. **"**ಕನ್ನಡದಲ್ಲಿ ಕೀರ್ತನೆ ಆ ಪದ ಎಂಬುದೇನೂ ಹೊಸದಲ್ಲ. ವೈದಿಕ ಪರಂಪರೆಯಿಂದ ಅದು ಬಂದದ್ದೆಂಬುದು ದೂರದ ಮಾತು. ಕನ್ನಡದ ಮಟ್ಟಿಗೆ ಪಾಡು, ಮೆಲ್ಪಾಡು, ಬಾಜನೆಗಬ್ಬಗಳಿದ್ದುವು. ಆಮೇಲೆ ಶರಣರಲ್ಲಿ ಕೆಲವರು ಪದಗಳನ್ನು ಹಾಡಿದರು. ಅದೇ ಹರಿದಾಸರ ಬಾಯಲ್ಲಿ 'ಕೀರ್ತನೆ' ಅಂದರೆ ಹರಿಸ್ತುತಿಪರವಾದ ಹಾಡಾಯಿತು. ಸಂಗೀತದಲ್ಲಿ ಪ್ರಮಾಣ ಸ್ವರೂಪ ಪಡೆಯಿತು.**"**[2] ವಚನ ಸಾಹಿತ್ಯದಿಂದ ಪ್ರೇರಣೆ ಪಡೆದುಕೊಂಡಿರುವ ಅಂಶವನ್ನು ರಂ.ಶ್ರೀ. ಮುಗಳಿ ಅವರು ಸೂಚಿಸಿದ್ದರೂ ದಾಸ ಸಾಹಿತ್ಯವು ತನ್ನದೇ ಸತ್ವದ ನೆಲೆಯಲ್ಲಿ ವ್ಯಾಪಕವಾಗಿ ಬೆಳೆದು ಬಂದುದನ್ನು ಕಾಣಬಹುದು.

ಬನ್ನಂಜೆ ಗೋವಿಂದಾಚಾರ್ಯರು ಮೈಸೂರಿನಲ್ಲಿ ಫೆಬ್ರವರಿ 6 2011ರಲ್ಲಿ ನಡೆದ 'ಹರಿದಾಸರ ಹಾಡು–ಪಾಡು' ವಿಚಾರ ಸಂಕಿರಣದಲ್ಲಿ **"** ಸಮಾಜದಲ್ಲಿ ಪ್ರಭಾವ ಬೀರಿದ ಎರಡು ಸಾಹಿತ್ಯಗಳೆಂದರೆ ಅದು ದಾಸ ಸಾಹಿತ್ಯ ಮತ್ತು ವಚನ ಸಾಹಿತ್ಯ ಇವುಗಳಲ್ಲಿ ವಚನ ಸಾಹಿತ್ಯ ಮೊದಲು ಬಂತು, ನಂತರ ಈ ಸಾಹಿತ್ಯವನ್ನೇ ದಾಸರು ಗಾನ ರೂಪಕ್ಕೆ ತಂದರು**"**[3] ಎಂದು ಅಭಿಪ್ರಾಯಿಸಿದ್ದಾರೆ. ಈ ಮಾತುಗಳು ಸಹ ವಚನ ಸಾಹಿತ್ಯದ ಪ್ರೇರಣೆಯ ಮಹತ್ವವನ್ನು ಸಾರುತ್ತದೆ.

ವೈಚಾರಿಕತೆ :

ವೈಚಾರಿಕತೆ ಎಂಬುದು ಯಾವುದೇ ವಿಚಾರವನ್ನು ತರ್ಕಕ್ಕೆ ಒಳಗು ಮಾಡಿ ಪರೀಕ್ಷಿಸಿ ಅದಕ್ಕೊಂದು ತಾರ್ಕಿಕ ರೂಪ ಕೊಡುವುದಾಗಿರುತ್ತದೆ. ಈ ರೀತಿಯ ವೈಚಾರಿಕತೆಯು ಮೌಢ್ಯದಿಂದ ತಾನು ಹೊರಬರುವುದರ ಜೊತೆಗೆ ಸಮುದಾಯದ ಮಂದಿಯನ್ನು ಕರ್ಮಠ ಆಚರಣೆಗಳಿಂದ ಮುಕ್ತಗೊಳಿಸುವ ಪ್ರಗತಿದಾಯಕ ಹೆಜ್ಜೆಯೂ ಆಗಿರುತ್ತದೆ. ಆ ದಿಸೆಯಲ್ಲಿ ವಚನಕಾರರು ಮತ್ತು ಕೀರ್ತನಾಕಾರರು ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ. ಬಸವಣ್ಣನವರು ತಮ್ಮ ವಚನದಲ್ಲಿ

ನೀರ ಕಂಡಲ್ಲಿ ಮುಳುಗುವರಯ್ಯಾ, ಮರನ ಕಂಡಲ್ಲಿ ಸುತ್ತುವರಯ್ಯಾ
ಬತ್ತುವ ಜಲವ, ಒಣಗುವ ಮರನ ಮೆಚ್ಚಿದವರು
ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ[4]

ಜನರು ಪ್ರಾಮಾಣಿಕತೆಯಿಂದ ತಮ್ಮ ಕಾಯಕದಲ್ಲಿ ದೇವರನ್ನು ಕಾಣಬೇಕು ಅದನ್ನು ಹೊರತುಪಡಿಸಿ ಮನಸ್ಸಿನಲ್ಲಿ ಕಲ್ಮಷವಿಟ್ಟುಕೊಂಡು ಎಷ್ಟೇ ನದಿ ಸ್ನಾನ ಮಾಡಿದರೂ ಅದು ವ್ಯರ್ಥವಾಗುತ್ತದೆ, ಅದಲ್ಲದೇ ಮರವನ್ನು ಸುತ್ತುವುದರಿಂದ ತಮ್ಮ ಮನಸ್ಸಿನ ಇಚ್ಛೆ ನೆರವೇರುತ್ತದೆ ಎಂಬ ಭ್ರಮೆಯಲ್ಲಿರುತ್ತಾರೆ. ಅದರ ಬದಲಿಗೆ ಮನಸ್ಸಿನಲ್ಲಿ ನಿಷ್ಠೆ ಇರಿಸಿಕೊಂಡರೆ ಭಗವಂತನ ಸಾಕ್ಷಾತ್ಕಾರವಾಗುತ್ತದೆ ಎಂಬ ಅರಿವನ್ನು ಈ ವಚನದಲ್ಲಿ ಕಾಣಬಹುದಾಗಿದೆ.

ಅಲ್ಲಮಪ್ರಭುಗಳು ತಮ್ಮ ಬೆಡಗಿನ ವಚನಗಳ ಮೂಲಕ ತಾತ್ವಿಕ ಸಂದೇಶವನ್ನು ಸಾರಿದವರು.

ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದಡೇನು?
ಹಸಿವು ಹೋಹುದೆ? ಅಂಗದ ಮೇಲೆ
ಲಿಂಗಸ್ವಾಯತವಾದಡೇನು? ಭಕ್ತನಾಗಬಲ್ಲನೆ

ಇಟ್ಟ ಕಲ್ಲು ಮೆಳೆಯ ಮೇಲೆ ಸಿಲುಕಿದೆಡೆ
ಆ ಕಲ್ಲು ಲಿಂಗವೇ? ಆ ಮೆಳೆ ಭಕ್ತನೆ? ಇಟ್ಟಾತ ಗುರುವೆ?
ಇಂತಪ್ಪವರ ಕಂಡಡೆ ನಾಚುವೆನಯ್ಯಾ ಗುಹೇಶ್ವರಾ.[5]

ಈ ವಚನವು ಮೇಲ್ಮಟ್ಟದಲ್ಲಿ ತೋರ್ಪಡಿಕೆಯಿಂದ ಮಾಡುವ ಭಕ್ತಿಯನ್ನು ಖಂಡಿಸುತ್ತಿದೆ. ಹಸಿವನ್ನು ನೀಗಿಸಿಕೊಳ್ಳಬೇಕಾದರೆ ಆಹಾರವನ್ನು ನೇರವಾಗಿ ಹೊಟ್ಟೆಗೆ ಸೇರಿಸಬೇಕೆ ವಿನಃ ಹೊಟ್ಟೆಯ ಮೇಲೆ ಆಹಾರದ ಬುತ್ತಿಯನ್ನು ಕಟ್ಟಿಕೊಂಡರೆ ಹಸಿವು ನೀಗುವುದಿಲ್ಲ. ಅದೇ ರೀತಿ ವ್ಯಕ್ತಿಗೆ ಲಿಂಗಧಾರಣೆ ಮಾಡಿದಾಕ್ಷಣ ಆತ ಭಕ್ತನಾಗಲು ಸಾಧ್ಯವಿಲ್ಲ, ಕಟ್ಟಿದವನೂ ಸಹಾ ಗುರುವಾಗಲೂ ಸಾಧ್ಯವಿಲ್ಲ. ಅದು ಸಾಧಿತವಾಗುವುದು ಅಂತರಂಗದ ಅರಿವಿನಿಂದ, ಅದನ್ನು ಬದುಕಿಗೆ ಅಳವಡಿಸಿಕೊಳ್ಳುವುದರಿಂದ ಎಂಬ ಅಂಶ ಈ ವಚನದಿಂದ ತಿಳಿದುಬರುತ್ತದೆ.

ದಾಸ ಸಾಹಿತ್ಯದ ಪ್ರಮುಖ ಕೀರ್ತನಾಕಾರರಾದ ಪುರಂದರದಾಸರು ಅಂತರಂಗ ಮತ್ತು ಬಹಿರಂಗ ಶುದ್ಧಿಯ ಬಗ್ಗೆ ತಮ್ಮೊಂದು ಕೀರ್ತನೆಯಲ್ಲಿ ತಿಳಿಸಿದ್ದಾರೆ

"ಮಡಿ ಮಡಿ ಮಡಿಯೆಂದು
ಅಡಿಗಡಿಗೆ ಹಾರುವೆ ಮಡಿ ಮಾಡುವ ಬಗೆ ಬೇರುಂಟು"[6]

ಈ ಕೀರ್ತನೆಯಲ್ಲಿ ಮಡಿ ಮಾಡುವ ಬಗ್ಗೆ ತಿಳಿಸುತ್ತಾ ಅನೇಕರು ತಮ್ಮ ಅಂತರಂಗವನ್ನು ತಮಂಧದಲ್ಲಿರಿಸಿಕೊಂಡು ಮತ್ತು ತೋರ್ಪಡಿಕೆಯ ಆಚರಣೆಯನ್ನು ಬಹಿರಂಗದಲ್ಲಿ ನಡೆಸುತ್ತಾ ಹೊರಗಿನ ಜನರಿಂದ ಹೊಗಳಿಕೆಗೆ ಪಾತ್ರರಾಗುತ್ತಿದ್ದಾರೆ. ನಿಜವಾದ ಶುದ್ಧತೆ ಮತ್ತು ಮಡಿ ಎಂದರೆ ಅಂತರಂಗ–ಬಹಿರಂಗವೆರಡರಲ್ಲೂ ಏಕತಾನತೆಯನ್ನು ಕಾಯ್ದುಕೊಳ್ಳುವುದೇ ಆಗಿದೆ. ಭಗವಂತನ ಸ್ಮರಣೆ ಮಾಡದೆ ಆತನ ಸಾಕ್ಷಾತ್ಕಾರವಿಲ್ಲದೇ ಏನನ್ನೂ ಸಾಧಿಸಲಾಗದು ಎಂಬ ಅರಿವನ್ನು ಮನುಷ್ಯ ಅರಿಯಬೇಕಿದೆ. ಹುಟ್ಟಿನ ಕಾರಣದಿಂದ, ಅಂತಸ್ತಿನ ಕಾರಣದಿಂದ ಮನುಷ್ಯನನ್ನು ಕೇವಲವಾಗಿ ಕಾಣದೇ ಸಮಭಾವದಿಂದ ಎಲ್ಲರನ್ನೂ ಕಾಣುವ ವಿಶಾಲ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು ಮನುಷ್ಯತ್ವದ ಅಗತ್ಯವಾಗಬೇಕೆಂಬ ಸತ್ಯವನ್ನು ಈ ಕೀರ್ತನೆಯಲ್ಲಿ ತಿಳಿಸಿದ್ದಾರೆ. ಇದೇ ಮಾದರಿಯಲ್ಲಿ ವೈಚಾರಿಕತೆಯನ್ನು ಬಿಂಬಿಸುವ ಹಲವಾರು ಕೀರ್ತನೆಗಳು ಸಿಗುತ್ತವೆ.

ಸಾಮರಸ್ಯ :

ಸಾಮರಸ್ಯ ಎಂಬುದು ವಿಶಾಲ ವ್ಯಾಪ್ತಿಯ ಅರ್ಥವನ್ನೊಳಗೊಂಡಿದೆ. ಪ್ರತಿಯೊಬ್ಬರ ಭಾವನೆಗಳನ್ನು ಗೌರವಿಸುತ್ತಾ, ಜಾತಿ, ಧರ್ಮ, ಭಾಷೆ, ಬಣ್ಣ, ಗಡಿ, ಹುಟ್ಟಿನ ಹಿನ್ನೆಲೆ ಇದಾವುದೇ ಅಂಶಗಳನ್ನು ಪರಿಗಣಿಸದೇ ಸಮಾನ ಭಾವದಿಂದ ಕಾಣುವ ಮನೋಭಾವನೆಯನ್ನು ಸಾಮರಸ್ಯ ಎಂದು ಕರೆಯುತ್ತೇವೆ. ಭಿನ್ನತೆ ಎಂಬುದು ಈ ಜಗತ್ತಿನ ವೈಶಿಷ್ಟ್ಯವಾಗಿದೆ ಅದನ್ನು ಪುರಸ್ಕರಿಸುವ ನಡೆಯೇ ಎಲ್ಲರಿಗೂ ಮಾದರಿಯಾಗುವಂಥದ್ದು. ಶರಣರು ಮತ್ತು ದಾಸರು ನಡೆಸಿದ ಚಳುವಳಿ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವ ಉದ್ದೇಶವನ್ನು ಒಳಗೊಂಡಿತ್ತು ಆ ಕಾರಣದಿಂದಲೇ ಕನ್ನಡ ಸಾಹಿತ್ಯದಲ್ಲಿ ಈ ಎರಡು ಪರಂಪರೆಗೆ ವಿಶೇಷ ಆದ್ಯತೆಯನ್ನು ನೀಡಲಾಗಿದೆ. ಆ ಸಾಮರಸ್ಯವನ್ನು ಪ್ರತಿಬಿಂಬಿಸುವ ವಚನ ಮತ್ತು ಕೀರ್ತನೆಯನ್ನು ಗಮನಿಸಬಹುದು.

ಬಸವಣ್ಣನವರೊಂದಿಗೆ ಸಮಸಮಾಜದ ಪರಿಕಲ್ಪನೆಯನ್ನು ಇರಿಸಿಕೊಂಡು ಅದನ್ನು ಸಾಕಾರಗೊಳಿಸಲು ಪ್ರಯತ್ನಿಸಿದ ಅನೇಕ ಶರಣರಲ್ಲಿ ಸಿದ್ಧರಾಮ ಶಿವಯೋಗಿಗಳು ಬಹಳ ಪ್ರಮುಖವೆನ್ನಿಸುತ್ತಾರೆ. ಅವರು ತಮ್ಮ ವಚನದಲ್ಲಿ ಸಾಮರಸ್ಯದೊಂದಿಗೆ ಜಾತಿ ವಿನಾಶ ಮಾಡುವ ಚಿಂತನೆಯನ್ನು ಬಿತ್ತಿದ್ದಾರೆ.

"ಕುಲವೆಂದು ಹೋರಾಡುವ ಅಣ್ಣಗಳಿರಾ, ಕೇಳಿರೋ
ಕುಲವೇ ಡೋಹರನ? ಕುಲವೇ ಮಾದಾರನ? ಕುಲವೇ ದೂರ್ವಾಸನ?
ಕುಲವೇ ವ್ಯಾಸನ? ಕುಲವೇ ವಾಲ್ಮೀಕನ? ಕುಲವೇ ಕೌಂಡಿಲ್ಯನ?
ಕುಲವ ನೋಳ್ಪಡೆ ಹುರುಳಿಲ್ಲ
ಅವರ ನಡೆಯನೋಳ್ಪಡೆ ನಡೆಯುವರು ತ್ರಿಲೋಕದಲ್ಲಿಲ್ಲ ನೋಡಾ
ಕಪಿಲಸಿದ್ಧಮಲ್ಲಿಕಾರ್ಜುನಾ"[7]

ಎಲ್ಲರಲ್ಲಿಯೂ ಕುಲದ ಪ್ರಶ್ನೆಯನ್ನೆತ್ತಿ ಕೇಳುವ ಸಿದ್ಧರಾಮರು ತಮ್ಮ ಈ ಮೇಲಿನ ವಚನದಲ್ಲಿ ಡೋಹರ ಕಕ್ಕಯ್ಯ, ಮಾದಾರ ಚನ್ನಯ್ಯ, ದೂರ್ವಾಸ, ವ್ಯಾಸ, ವಾಲ್ಮೀಕಿ, ಕೌಂಡಿಲ್ಯ ಈ ಮಹನೀಯರ ಕುಲದ ನೆಲೆಯನ್ನೇನಾದರೂ ಪ್ರಶ್ನಿಸುವುದುಂಟೆ ಅವರೆಲ್ಲರೂ ತಮ್ಮ ಶ್ರೇಷ್ಠ ಚಿಂತನೆ, ಸಾಮರಸ್ಯದ ಬದುಕಿನ ಮೂಲಕ ಯುಗಮಾನ ಕಳೆದರೂ ಅಳಿಯದ ಸಾಧನೆಯನ್ನು ಮಾಡಿದ್ದಾರೆ. ಕಾಯಕದಲ್ಲಿ ಮಹತ್ತರವಾದುದನ್ನು ಸಾಧಿಸಿದ್ದಾರೆ, ಆದುದುರಿಂದ ಕುಲವನರಸುವ ಕ್ರಿಯೆಯೇ ಅರ್ಥರಹಿತವೆಂದು ಅರುಹಿದ್ದಾರೆ.

ಪುರುಷ ವಚನಕಾರರಷ್ಟೇ ಮಾನ್ಯತೆಯನ್ನು ಗಳಿಸಿಕೊಂಡು ವಚನ ರಚನೆಯಲ್ಲಿ ತೊಡಗಿಸಿಕೊಂಡು ತಮ್ಮದೇ ಛಾಪನ್ನು ಮೂಡಿಸಿಕೊಂಡಿರುವ ಅನೇಕ ಶರಣೆಯರೂ ಕಂಡುಬರುತ್ತಾರೆ. ಅವರಲ್ಲಿ ಅಮುಗೆ ರಾಯಮ್ಮ ಮುಖ್ಯ ವಚನಕಾರ್ತಿ ಎಂದು ಗುರುತಿಸಿಕೊಂಡಿದ್ದಾರೆ ಇವರು ತಮ್ಮ ಒಂದು ವಚನದಲ್ಲಿ ಕುಲದ ಬಗ್ಗೆ ಪ್ರಸ್ತಾಪಿಸಿದ್ದಾರೆ

"ಕುಲವನತಿಗಳೆದವಂಗೆ ಕುಲದ ಹಂಗೇತಕಯ್ಯ?
ಬಲ್ಲೆನೆಂಬವಂಗೆ ಗೆಲ್ಲುವ ಸೋಲುವ ಹಂಗೇತಕಯ್ಯಾ?
ಅಮುಗೇಶ್ವರನೆಂಬ ಲಿಂಗವನರಿದ ಶರಣಂಗೆ
ಈ ಸಮಯದ ಹಂಗೇತಕಯ್ಯಾ?"[8]

ಕುಲವನ್ನು ಮೀರಿದೆವೆಂದು ಹೇಳಿಕೊಳ್ಳುವವನಿಗೆ ಕುಲದ ಗುರುತು ಇರಬಾರದು ಆತ ಕುಲದಿಂದ ಮುಕ್ತನಾಗಿರಬೇಕು, ಎಲ್ಲವನ್ನರಿತವನು ಸೋಲು–ಗೆಲುವಿನ ಭ್ರಮೆಯಲ್ಲಿರಬಾರದು, ದೇವನ ನಿಲುವನ್ನರಿತವನಿಗೆ ಧರ್ಮದ ಹಂಗು ಇರುವುದಿಲ್ಲವೆಂದು ಅಮುಗೆರಾಯಮ್ಮ ಸರಳವಾಗಿ ಕುಲ ಮೀರಿ ಬದುಕಬೇಕಾದ ಪರಿಯನ್ನು ತಿಳಿಸಿದ್ದಾರೆ.

ಪುರಂದರದಾಸರು ಸೊಲ್ಲಾಪುರದಲ್ಲಿದ್ದ ಸಂದರ್ಭದಲ್ಲಿ ಬ್ರಾಹ್ಮಣರಿಗೂ ಮತ್ತು ಲಿಂಗಾಯತರಿಗೂ ಧಾರ್ಮಿಕ ವಿಚಾರಕ್ಕೆ ಸಂಬಂಧಿಸಿದಂತೆ ಪರಸ್ಪರ ನಡೆಯುತ್ತಿದ್ದ ಚರ್ಚೆಯು ಕಲಹದ ರೂಪವನ್ನು ಪಡೆಯತೊಡಗಿದಾಗ ಅವರನ್ನು ನಿಯಂತ್ರಿಸಲೋಸುಗ ಈ ಮುಂದಿನ ಕೀರ್ತನೆಯನ್ನು ಹಾಡಿ ಇಬ್ಬರಲ್ಲೂ ಸಾಮರಸ್ಯ ಭಾವ ಮೂಡುವಂತೆ ಮಾಡುತ್ತಾರೆ.

"ಜಂಗಮರು ನಾವು ಲಿಂಗಾಂಗಿಗಳು
ಮಂಗಳವಂತರ ಭವಿಗಳೆಂಬಿರಿ ಬರಿದೆ
ಶಿವಗುರುದೈವ ಕೇಶವ ನಮ್ಮ ಮನೆದೈವ
ವರದ ಮೋಹನ ನಮ್ಮ ಗುರುಶಾಂತೇಶ
ಶಿವ ಗುರುದ್ರೋಹಮಾಡಿದ ಪರವಾದಿಗೆ
ರವರವ ನರಕದೊಳುರುಳುವದೇ ಗತಿ

_____
_____
_____
_____

ಕಾರಣಕರ್ತ ಶ್ರೀಪುರಂದರ ವಿಠಲನ
ಕಾರುಣ್ಯಕೆ ಮುಖ್ಯಪಾತ್ರರು ನಾವು"[9]

ಕನಕ ಪುರಂದರರಿಬ್ಬರೂ ದಾಸ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಬಿರಿದಾಂಕಿತರಾದವರು. ಸಮತೂಕದಲ್ಲಿಯೇ ಹರಿದಾಸ ಸಾಹಿತ್ಯವನ್ನು ಎಲ್ಲೆಡೆ ಗಾಯನದ ಮೂಲಕ ಪಸರಿಸಿದವರು. ಅವರು ಜಾತೀಯತೆಯ ಮಂಜಿನಲ್ಲಿ ವಾಸಿಸುವ ಸಂಪ್ರದಾಯವಾದಿಗಳಿಗೆ ಬುದ್ಧಿವಾದದ ಮಾದರಿಯಲ್ಲಿ ತಮ್ಮ ಒಂದು ಕೀರ್ತನೆಯಲ್ಲಿ ತಿಳುಹು ಕೊಟ್ಟಿದ್ದಾರೆ.

ಕುಲಕುಲವೆನ್ನುತಿಹರೋ
ಕುಲವಾವುದು ಸತ್ಯ ಸುಜನರಿಗೆ?

ಕೆಸರೊಳು ತಾವರೆ ಪುಟ್ಟಲು ಅದ ತಂದು
ಕುಸುಮನಾಭನಿಗೆ ಅರ್ಪಿಸಿದರೇನಯ್ಯ?
ಪಶುವಿನ ಮಾಂಸದೊಳುತ್ಪತ್ತಿ ಕ್ಷೀರವ
ವಸುಧೆಯೊಳಗೆ ಭೂಸುರರುಣ್ಣರೇನಯ್ಯ?

ಆ ಶೌಂಡ್ಯ ಪರಾಶರ ಎನಿಪನು
ವೇಶೆಯ ಪುತ್ರ ವಸಿಷ್ಠ ಮುನಿ
ದಾಸಿಯ ನಂದನ ನಾರದ ಎನಿಪನು
ಕಾಶ್ಯಪ ಪೌತ್ರನ ಕುಲ ಹೇಳಿರಯ್ಯ

ಆತ್ಮನಾವ ಕುಲ ಜೀವನಾವ ಕುಲ
ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ್ಮನು ಕಾಗಿನೆಲೆಯಾದಿಕೇಶವನೊಲಿದ
ಭಕ್ತರಿಗೆ ಕುಲವಾವುದು ಹೇಳಿರಯ್ಯ?[10]

ಭಕ್ತಿಯ ಪರಿಕಲ್ಪನೆ :

ವಚನ ಮತ್ತು ದಾಸ ಸಾಹಿತ್ಯವೆರಡನ್ನೂ ಅವಲೋಕಿಸಿದಾಗ ಇದೊಂದು ಭಕ್ತಿ ಚಳುವಳಿಯೆಂದು ಮನದಟ್ಟಾಗುತ್ತದೆ. ಭಕ್ತಿಯನ್ನು ಪ್ರಧಾನ ನೆಲೆಯಾಗಿರಿಸಿಕೊಂಡು ಬದುಕಿನ ಹಲವಾರು ಸಮಸ್ಯೆಗಳಿಗೆ ಭಗವಂತನ ನಾಮಸ್ಮರಣೆ ಮಾಡುತ್ತಾ, ಕಾಯಕದಲ್ಲಿ ತೊಡಗಿಸಿಕೊಳ್ಳುತ್ತಾ ಬದುಕನ್ನು ಹಸನಾಗಿಸಿಕೊಂಡು ಇತರರಿಗೆ ಮಾದರಿಯಾದ ಪರಂಪರೆ ಇವರದಾಗಿದೆ. ವಚನಕಾರರಲ್ಲಿ ಭಕ್ತಿಯೊಂದಿಗೆ ಕಾಯಕ ಮೂಡಿಬಂದರೆ, ಕೀರ್ತನಾಕಾರರಲ್ಲಿ ಭಕ್ತಿ ಪ್ರಾಧಾನ್ಯತೆಯೇ ಎದ್ದುಕಾಣುತ್ತದೆ.

ವೈರಾಗ್ಯದ ತವನಿಧಿ ಎಂದೇ ಪೂಜನೆಗೆ ಭಾಜನರಾದ ಅಕ್ಕಮಹಾದೇವಿಯ ಬದುಕು ಎಲ್ಲರಿಗೂ ಮಾದರಿಯಾದುದು ಅವರು ತಮ್ಮ ಒಂದು ವಚನದಲ್ಲಿ ಬದುಕಿನಲ್ಲಿ ಏನೇ ಟೀಕೆ ಟಿಪ್ಪಣಿ, ಸವಾಲು ಬಂದರೂ ಅದಕ್ಕೆ ಕುಗ್ಗದೇ ಧೈರ್ಯಶಾಲಿಯಾಗಿರಬೇಕೆಂದು ಅರುಹಿದ್ದಾರೆ, ಅಂತೆಯೇ ಈ ಜಗತ್ತಿನಲ್ಲಿ ಸತ್ಯಕ್ಕೆ ಮತ್ತು ಸತ್ವಯುತವಾಗಿರುವುದಕ್ಕೆ ಹೆಚ್ಚು ಪರೀಕ್ಷೆಗಳು ಜರುಗುತ್ತವೆ ಅದಕ್ಕೆ ಕುಗ್ಗುವ ಅವಶ್ಯಕತೆ ಶರಣರ ನುಡಿಯೇ ಅದಕ್ಕೆಲ್ಲಾ ಪರಿಹಾರ ಎಂದು ಭರವಸೆಯ ಮಾತುಗಳನ್ನು ತಿಳಿಸಿದ್ದಾರೆ.

"ಹೆದರದಿರು ಮನವೆ, ಬೆದರದಿರು ತನುವೆ,
ನಿಜವನರಿತು ನಿಶ್ಚಿಂತನಾಗಿರು
ಫಲವಾದ ಮರನ ಕಲ್ಲಲಿ ಇಡುವರೊಂದು ಕೋಟಿ
ಎಲವದ ಮರನ ಇಡುವರೊಬ್ಬರ ಕಾಣೆ
ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ
ನಿಮ್ಮ ಶರಣರ ನುಡಿಯೆ ಎನಗೆ ಗತಿ ಸೋಪಾನ
ಚೆನ್ನಮಲ್ಲಿಕಾರ್ಜುನಾ"[11]

ಅದಲ್ಲದೇ ಭಕ್ತಿಯಲ್ಲಿ ತನ್ಮಯತೆಯನ್ನು ಗಳಿಸಿಕೊಂಡಮೇಲೆ ಲೋಕದ ಟೀಕೆಗಳನ್ನು ಪರಿಗಣಿಸಿಕೊಳ್ಳುವ ಅಗತ್ಯವಿಲ್ಲವೆಂಬುದು

ಈ ವಚನದ ಮೂಲಕ ತಿಳಿದುಬರುತ್ತದೆ.

ಕಲ್ಯಾಣದಲ್ಲಿ ಕಸಗುಡಿಸುವ ಕಾಯಕವನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದ ಶರಣೆ ಸತ್ಯಕ್ಕ, ಪ್ರಾಮಾಣಿಕವಾಗಿ ಗಳಿಸಿದುದಕ್ಕೆ ಮಾತ್ರವೇ ಮಾನ್ಯತೆ ನೀಡಿ ಮತ್ತೊಬ್ಬರದನ್ನು ಬಯಸದೇ ಇರುವ ಪಾರದರ್ಶಕ ಗುಣವನ್ನೊಳಗೊಂಡಿದ್ದರು. ಭಕ್ತಿಯ ಪರಿಲ್ಪನೆಯ ಬಗ್ಗೆ ತಮ್ಮ ವಚನದಲ್ಲಿ ಅಭಿವ್ಯಕ್ತಿಪಡಿಸಿದ್ದಾರೆ.

"ಭವಿಯ ಬೆರೆಸಿದ ಭಕ್ತಿ, ಹವಿಯ ಬೆರೆಸಿದ ಬೀಜ
ಉದಕ ಬೆರೆಸಿದ ಎಣ್ಣೆ ಜ್ಯೋತಿ ಪ್ರಜ್ವಲಿಸುವುದೆ?
ಭವಿಯಲ್ಲ ಭಕ್ತನಲ್ಲ ಹವಿಯಲ್ಲ ಬೀಜವಲ್ಲ
ಉದಕವಲ್ಲ ಎಣ್ಣೆಯಲ್ಲ
ಒಡಲಿಚ್ಛೆಗೆ ಹೋಗಿ ಭವಿಯ ಮನೆಗೆ ತುತ್ತಿಡುವ
ನರಕಿಗಳಿಗೇಕೊಲಿವ ನಮ್ಮ ಶಂಭುಜಕ್ಕೇಶ್ವರ"[12]

ಭಕ್ತಿ ಎಂಬುದು ನಿರ್ಮಲವಾಗಿರಬೇಕೇ ಹೊರತು ಅದು ಲೌಕಿಕದ ಆಸೆ ಆಮಿಷಗಳಿಗೆ ತುತ್ತಾಗಬಾರದು. ಭವಿಯ ಭಾವನೆ ಮನೆ ಮಾಡಿದರೆ ಅಂತಹವರ ಪರಿಸ್ಥಿತಿ ನೀರು ಬೆರೆಸಿದ ಎಣ್ಣೆಯಿಂದ ಜ್ಯೋತಿ ಉರಿಯಲಾರದ ಸ್ಥಿತಿಯಂತಾಗುತ್ತದೆ ಎಂದು ಉದಾಹರಣೆಗಳ ಸಮೇತ ವಿವರಿಸಿದ್ದಾರೆ.

ಕನಕದಾಸರು ಹರಿಯು ಭಕ್ತರಕ್ಷಕ ಎಂಬುದನ್ನು ಪ್ರತಿಪಾದಿಸುವ ಕೀರ್ತನೆಯೊಂದನ್ನು ರಚಿಸಿದ್ದಾರೆ. ನಂಬಿದ ಮನುಷ್ಯರನ್ನಷ್ಟೇ ಅಲ್ಲ ಪಶುಪಕ್ಷಿಗಳೆಲ್ಲವನ್ನೂ ಪೊರೆಯುವುದು ಆತನ ಕರ್ತವ್ಯ ಎಂಬುದನ್ನು ಪ್ರತಿಪಾದಿಸುವ ಅವರ **"**ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ, ಕೂಗಿದರು ಧ್ವನಿ ಕೇಳಲಿಲ್ಲವೇ ನರಹರಿಯೆ**"**[13] ಈ ರಚನೆ ಭಕ್ತಿಪರವಶಭಾವವನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ. ಇದಲ್ಲದೇ ಪುರಂದರರು **"**ಕಲಿಯುಗದೊಳು ಹರಿನಾಮವ ನೆನೆದರೆ ಕುಲಕೋಟಿಗಳುದ್ಧರಿಸುವುವು, ಸುಲಭದ ಮುಕುತಿಗೆ ಸುಲಭನೆಂದೆನಿಸುವ ಜಲರುಹನಾಭನ ನೆನೆಮನವೆ**"**[14] ಎಂಬ ಕೀರ್ತನೆಯು ಭಕ್ತಿಯ ಮಹತ್ವವನ್ನು ಸಾರಿ ಹೇಳುತ್ತದೆ. ಈ ಮನುಷ್ಯ ಜೀವನದ ಜಂಜಡದ ಯಾವುದೇ ಸಮಸ್ಯೆಯು ಭಕ್ತಿಯ ತನ್ಮಯತೆಯಿಮದು ದೂರ ಸರಿಯಲ್ಪಡುತ್ತದೆ, ಬದುಕಿಗೆ ಭರವಸೆಯನ್ನು ತರುತ್ತದೆ ಎಂಬುದನ್ನು ಪ್ರತಿಪಾದಿಸುತ್ತದೆ.

ಒಟ್ಟಾರೆಯಾಗಿ ವಚನಕಾರರು ಮತ್ತು ಕೀರ್ತನಾಕಾರರು ಕನ್ನಡ ನಾಡಿನ ಶ್ರೇಷ್ಠ ಚಿಂತಕರಾಗಿದ್ದು ಅವರ ಸಾಹಿತ್ಯದಲ್ಲಿ ವೈಚಾರಿಕತೆ, ಸಾಮರಸ್ಯ, ಭಕ್ತಿಯ ಪರಿಕಲ್ಪನೆಯನ್ನು ಕುರಿತಂತೆ ತಮ್ಮದೇ ವಿವೇಚನೆಯೊಂದಿಗೆ ತಿಳಿಸಿದ್ದಾರೆ. ಅವುಗಳನ್ನು ಅನುಸಂಧಾನಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಹಲವಾರು ಅಂಶಗಳಲ್ಲಿ ಸಾಮ್ಯತೆಯನ್ನು ವಚನ ಮತ್ತು ಕೀರ್ತನೆಗಳಲ್ಲಿ ಕಾಣಬಹುದಾಗಿದ್ದರೂ ಸಂಕ್ಷಿಪ್ತ ಲೇಖನದ ವ್ಯಾಪ್ತಿಯೊಳಗೆ ಆಯ್ದುಕೊಂಡ ವಿಷಯಾನುಗುಣವಾಗಿ ವಿವಕ್ಷಿಸಲಾಗಿದೆ.

ಕೊನೆ ಟಿಪ್ಪಣಿ :

1. ಶಿ.ಶಿ. ಬಸವನಾಳ : ಶ್ರೀ ಬಸವಣ್ಣನವರ ಷಟ್ ಸ್ಥಲದ ವಚನಗಳು, ಪೀಠಿಕೆ, ಪು. XXI
2. ರಂ.ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ, ಪು.ಸಂ 264, 2012
3. ಬನ್ನಂಜೆ ಗೋವಿಂದಾಚಾರ್ಯರು : ಮೈಸೂರಿನಲ್ಲಿ ಫೆಬ್ರವರಿ 6 2011ರಲ್ಲಿ ನಡೆದ 'ಹರಿದಾಸರ ಹಾಡು–ಪಾಡು' ವಿಚಾರ ಸಂಕಿರಣದ ಭಾಷಣ
4. ಎಂ.ಎಂ. ಕಲಬುರ್ಗಿ ಪ್ರ.ಸಂ. : ಬಸವಯುಗದ ವಚನ ಮಹಾಸಂಪುಟ 1 : ವ.ಸಂ. 580, ಪು.ಸಂ. 54, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು
5. ಅದೇ : ವ.ಸಂ. 179, ಪು.ಸಂ. 152
6. ಹರಿದಾಸ ಸಂಪದ : https://haridasa.sampada.net
7. ಪೂರ್ವೋಕ್ತ 5. ಸಿದ್ಧರಾಮೇಶ್ವರ ವಚನ ಸಂಪುಟ, ಪ್ರ.ಸಂ. ಎಂ.ಎಂ. ಕಲಬುರ್ಗಿ ವ.ಸಂ. 1503, ಪು.ಸಂ. 700
8. ಅದೇ, ಶಿವಶರಣೆಯರ ವಚನಸಂಪುಟ, ವ.ಸಂ. 635, ಪು.ಸಂ. 859

9. ಪೂರ್ವೋಕ್ತ 6, ಛttps://haridasa.sampada.net
10. ಎಚ್.ಎಸ್. ವೆಂಕಟೇಶಮೂರ್ತಿ : ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ 8 : ಕೀರ್ತನಕಾರರು : ಪು.ಸಂ. 76, ಸಪ್ನ ಬುಕ್ ಹೌಸ್, ಬೆಂಗಳೂರು
11. ಪೂರ್ವೋಕ್ತ 5, ಶಿವಶರಣೆಯರ ವಚನಸಂಪುಟ, ವ.ಸಂ. 428, ಪು.ಸಂ. 831
12. ಅದೇ ಶಿವಶರಣೆಯರ ವಚನಸಂಪುಟ, ವ.ಸಂ. 1222, ಪು.ಸಂ. 915
13. ಪೂರ್ವೋಕ್ತ 6, https://haridasa.sampada.net
14. ಅದೇ, https://haridasa.sampada.net

ಪರಾಮರ್ಶನ ಗ್ರಂಥಗಳು :

1. ಕಲಬುರ್ಗಿ ಎಂ.ಎಂ. ಪ್ರ.ಸಂ. : ಬಸವಯುಗದ ವಚನ ಮಹಾಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು
2. ಬಸವನಾಳ ಶಿ.ಶಿ. ಶ್ರೀ ಬಸವಣ್ಣನವರ ಷಟ್ ಸ್ಥಲದ ವಚನಗಳು
3. ಮುಗಳಿ ರಂ.ಶ್ರೀ. ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್ ಮೈಸೂರು 2013
4. ವೆಂಕಟೇಶಮೂರ್ತಿ ಎಚ್.ಎಸ್. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ 8, ಕೀರ್ತನಾಕಾರರು, ಸಪ್ನ ಬುಕ್ ಹೌಸ್ ಬೆಂಗಳೂರು 2018

***

ಭಾಷೆ ಮತ್ತು ಸಂಸ್ಕೃತಿ : ಬಾಂಧವ್ಯ

***

ರಾಜೇಶ್ವರಿ ವೈ. ಎಂ
ಮುಖ್ಯಸ್ಥರು, ಕನ್ನಡ ವಿಭಾಗ
ಸ್ಕೂಲ್ ಆಫ್ ಕಾಮರ್ಸ್ ಸಿಎಸ್ ಎಂಡ್ ಐಟಿ
ಜೈನ್ ವಿಶ್ವವಿದ್ಯಾಲಯ (ಸ್ವಾಯತ್ತ)
ಜೆಜಿಐ ನಾಲೆಡ್ಜ್ ಕ್ಯಾಂಪಸ್
ಜಯನಗರ 9ನೇ ಬ್ಲಾಕ್
ಬೆಂಗಳೂರು 5600069
ym.rajeshwari@jainuniversity.ac.in

ನಾನು ಭಾಷೆ ಮತ್ತು ಸಂಸ್ಕೃತಿಯ ನಂಟು ಈ ಕುರಿತಾಗಿ ಒಂದಷ್ಟು ವಿಚಾರಗಳನ್ನು ಇಂದು ಮಂಡಿಸುತ್ತಿದ್ದೇನೆ. ಭಾಷೆ, ಮನುಷ್ಯನ ವಿಕಾಸದ ಒಂದು ಗುರುತು ಮತ್ತು ನಿತ್ಯದ ಸಂವಹನ ಅತ್ಯಂತ ಮೂಲ ಪರಿಕರವಾಗಿದೆ. ಅಂದರೆ ಭಾಷೆ ಎನ್ನುವುದು ನಮ್ಮ ಬದುಕಿನ ಬೆಳಕಾಗಿದೆ ಎಂದೇ ಹೇಳಬೇಕು. ಭಾಷೆಯ ಬಹಳ ಮುಖ್ಯವಾದ ಕೊಡುಗೆಯೆಂದರೆ ಅದು ಜನರ ಸಂಸ್ಕೃತಿಯನ್ನು ಪ್ರತಿನಿಧಿಸಿರುವುದು. ಇನ್ನೂ ಮುಖ್ಯವಾಗಿ ಹೇಳಬೇಕಾದುದೆಂದರೆ ಭಾಷೆ ಎನ್ನುವುದು ಮಾನವನಿಗೆ ಮಾತ್ರವೇ ಸಾಧಿಸಲ್ಪಟ್ಟ ಒಂದು ಸಂವಹನ ಕ್ರಿಯೆಯಾಗಿದೆ. ಪ್ರಾಣಿಗಳೂ ತಮ್ಮದೇ ಆದ ರೀತಿಯಲ್ಲಿ ಸಂವಹನ ಮಾಡುತ್ತಾ ಬದುಕುವುದನ್ನು ಮಾನವ ನೋಡಿದರೂ ಈ ಭೂಮಿ ಮೇಲೆ ಮಾನವ ಸಾಧಿಸಿದ ಅನೇಕ ವಿಕ್ರಮಗಳಲ್ಲಿ ಭಾಷೆ ಕೂಡ ಬಹಳ ಮುಖ್ಯವಾದುದು. ಜಗತ್ತಿನ ಯಾವ ಮೂಲೆಯಲ್ಲಿದ್ದರೂ ಅಲ್ಲಿಯೂ ಮಾನವ ಭಿನ್ನ ಭಿನ್ನ ಭಾಷೆಗಳನ್ನು ಕರಗತ ಮಾಡಿಕೊಂಡು ಬದುಕುತ್ತಿದ್ದಾನೆ. ಹಾಗಾಗಿ ಇಂದು ವಿಶ್ವದಲ್ಲಿಯೇ ಸುಮಾರು 6000 ರಿಂದ 7000 ಭಾಷೆಗಳಿವೆ ಎನ್ನಲಾಗುತ್ತಿದೆ.

ಕನ್ನಡ ಭಾಷೆ ಕೇವಲ ಒಂದು ಆಡು ಭಾಷೆಯಲ್ಲ; ತನ್ನದೇ ಆದ ಭವ್ಯ ಇತಿಹಾಸ ಪರಂಪರೆಯನ್ನೂ ತನ್ನೊಂದಿಗೆ ಹೊತ್ತುಕೊಂಡಿದೆ. ಭಾರತ ದೇಶದ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಗುರುತಿಸಿದ ಇಪ್ಪತ್ತೆರಡು ಅಧಿಕೃತ ಭಾಷೆಗಳಲ್ಲಿ ಕನ್ನಡವೂ ಒಂದು. ದ್ರಾವಿಡ ಭಾಷೆಗಳಲ್ಲಿ ಪ್ರಾಮುಖ್ಯತೆ ಪಡೆದಿರುವ

ಕನ್ನಡವನ್ನು ಸುಮಾರು ಏಳು ಕೋಟಿ ಜನರಿಗಿಂತಲೂ ಹೆಚ್ಚು ಜನ ವಿವಿಧ ರೂಪಗಳಲ್ಲಿ ಮಾತಾಡುತ್ತಾರೆ. ಬ್ರಾಹ್ಮಿ ಲಿಪಿಯಿಂದ ರೂಪುಗೊಂಡ ಕನ್ನಡ ಲಿಪಿ ಇಂದಿಗೂ ಸುಂದರ ಲಿಪಿಯಾಗಿಯೂ ಸ್ಥಾನ ಪಡೆದಿದೆ. 1500– 1600 ವರ್ಷಗಳಿಗಿಂತಲೂ ಹಿಂದಿನದು ಎಂದು ಹೇಳಲಾಗುವ ಕನ್ನಡ ಭಾಷೆ, ಐದನೇ ಶತಮಾನದ ಹಲ್ಮಿಡಿ ಶಾಸನ ಸಿಕ್ಕ ಹೊತ್ತಿಗಾಗಲೇ ಅತ್ಯಂತ ವಿಕಾಸಗೊಂಡಿದ್ದ ಭಾಷೆಯಾಗಿತ್ತು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಏಕೆಂದರೆ ಅದರ ಅಸ್ತಿತ್ವದೊಂದಿಗೆ ಕನ್ನಡದ ನೆಲದ ಸಂಸ್ಕೃತಿಯೂ ಸೇರಿದ ಕಾರಣ ಕನ್ನಡ ಭಾಷೆ ಒಂದು ಜನಾಂಗದ ಸಂವಹನದ, ಜನಜೀವನದ ಸಂಕೇತವಾಗಿತ್ತು. ಅಮೋಘವರ್ಷನ ಕಾಲದಿಂದಲೂ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡ ಕಾರಣ ಇಂದಿಗೂ ಕನ್ನಡ, ಅಕ್ಷರದ ಮೂಲಕ ಬೆಳೆದ ಫಸಲು ಅತ್ಯಂತ ಉತ್ಕೃಷ್ಟವಾದುದು ಮಾತ್ರವಲ್ಲ ಸಮೃದ್ಧವಾದುದು ಕೂಡಾ. ಪ್ರತೀ ಯುಗದಲ್ಲೂ, ಶತಮಾನದಲ್ಲಿಯೂ ಕನ್ನಡ ಭಾಷೆಯಲ್ಲಿ ಸಮೃದ್ಧ ಸಾಹಿತ್ಯ ಸೃಷ್ಟಿಯಾಗಿದ್ದನ್ನು ಗಮನಿಸಿದಾಗ ನಮ್ಮ ಭಾಷೆ ಎಷ್ಟೊಂದು ರೀತಿಯ ಸಂಕ್ರಮಣಗಳನ್ನು ದಾಟಿ ಮುಂದೆ ಬಂದು ದೃಢವಾಗಿ ನಿಂತಿದೆ ಎನ್ನುವ ಅರಿವು ನಮಗಾಗುತ್ತದೆ.

ಹಿರಿಯ ಭಾಷಾ ವಿಜ್ಞಾನಿ ಕೆ.ವಿ.ತಿರುಮಲೇಶರ ಒಂದು ಮಾತನ್ನು ನಾನಿಲ್ಲಿ ನೆನಪಿಸಿಕೊಳ್ಳಲು ಇಷ್ಟ ಪಡುತ್ತೇನೆ. "ಭಾಷೆಯ ಉಗಮ ಹೇಗಾಯಿತು ಎನ್ನುವುದರ ಬಗ್ಗೆ ಖಚಿತವಾಗಿ ನಮಗೆ ಗೊತ್ತಿಲ್ಲವಾದರೂ ಭಾಷೆ ಭಾವಜನ್ಯವೆಂಬ ಒಂದು ನಂಬಿಕೆಯಿದೆ. ಪುರಾತನ ಸಂಸ್ಕೃತಿಗಳನ್ನು ಅಧ್ಯಯನ ಮಾಡಿರುವಂಥ ಮಲಿನೋವ್‌ಸ್ಕಿ ಮುಂತಾದ ವಿದ್ವಾಂಸರ ಪ್ರಕಾರ ಮನುಷ್ಯನ ಹಸಿವು, ಕಾಮ, ಕ್ರೋಧ, ಭಯವೇ ಮೊದಲಾದ ರಾಗಗಳಿಂದಲೂ, ಮಾಟ ಮಂತ್ರ ನರ್ತನ ಮುಂತಾದ ಪುರಾತನ ಸಮಾಜಗಳ ಅಗತ್ಯಗಳಿಂದಲೂ ಭಾಷೆ ಹುಟ್ಟಿಕೊಂಡಿತು. ಹೀಗೆ ಭಾಷೆಯ ಉಗಮವನ್ನು ಮೂಲಭೂತವಾದ ಭಾವ ವಿಕಾರಗಳಲ್ಲಿ ಕಾಣುವ ಈ ಥಿಯರಿಯು ಕಾವ್ಯವಿಮರ್ಶೆಯ ದೃಷ್ಟಿಯಿಂದ ಆಕರ್ಷಕವಾಗಿದೆ" ಎನ್ನುತ್ತಾರೆ. ಅಂದರೆ ತಿರುಮಲೇಶರ ಮಾತನ್ನು ಗಮನಿಸುವುದಾದರೆ ಭಾಷೆ ಎನ್ನುವುದು ಭಾವವನ್ನು ವ್ಯಕ್ತ ಪಡಿಸಲು, ಭಾವವನ್ನು ಮೂಡಿಸಲು ಪ್ರಯತ್ನಿಸುತ್ತದೆ ಎಂದಾಯಿತು. ಬಹುಷಃ ಇದನ್ನೇ ವರಕವಿ ಬೇಂದ್ರೆಯವರು "ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತ" ಎಂದಿದ್ದು ಕಾಣುತ್ತದೆ.

ಸಂಸ್ಕೃತಿ (ಕಲ್ಚರ್) ಎಂಬ ಶಬ್ದವು ಕೃಷಿ ಎಂಬ ಭೂವಾಚಕ ಶಬ್ದಸಂಬಂಧದಿಂದ ವ್ಯವಸಾಯವನ್ನೂ ನಾಗರಿಕತೆ ಎನ್ನುವ ಸಂಬಂಧದಿಂದ ನಗರಜೀವನವನ್ನೂ ಸೂಚಿಸುತ್ತದೆ ಎಂದಿದ್ದಾರೆ ಹಿರಿಯ ವಿದ್ವಾಂಸರಾದ ಡಾ ಎಸ್. ಶ್ರೀಕಂಠಶಾಸ್ತ್ರಿಗಳು. ನಾಗರಿಕತೆ ಎನ್ನುವುದು ಸಾಮಾಜಿಕ ವ್ಯವಸ್ಥೆಯಾಗಿಯೂ ಸಂಸ್ಕೃತಿಯನ್ನು ಅವರು ಜನರ ಮನದ ಆಧ್ಯಾತ್ಮಿಕ ಪ್ರಗತಿಗೆ ಸಂಬಂಧಿಸಿದ್ದು ಎನ್ನುತ್ತಾರೆ. ಅದರರ್ಥ ಸಂಸ್ಕೃತಿ ಎನ್ನುವುದನ್ನು ಮನುಷ್ಯನ ಮನಸ್ಸಿಗೆ ಸಂಬಂಧಪಟ್ಟಿದ್ದು ಎಂದೆನ್ನಬಹುದು. ಆ ಕಾರಣಕ್ಕಾಗಿಯೇ ಏನೊ ಸಂಸ್ಕೃತಿಯನ್ನು ನಮ್ಮ ನಡೆನುಡಿ, ವರ್ತನೆಗೆ ಸಮೀಕರಣ ಮಾಡಿ ಮಾತಾಡುವುದು ಎಂದು ಕಾಣುತ್ತದೆ.

ಇದನ್ನು ಡಿವಿಜಿಯವರು ಇನ್ನಷ್ಟು ಸೊಗಸಾಗಿ ವಿವರಿಸಿ ಹೇಳಿದ್ದನ್ನು ನೋಡುವುದಾದರೆ "ಸಂಸ್ಕೃತಿಯೆಂದರೆ ಸಂಸ್ಕಾರದಿಂದ ಸಂಸ್ಕೃತಿ. ಸಂಸ್ಕಾರ ಅಥವಾ ಸಂಸ್ಕರಣ ಎಂದರೆ ಸಮ್ಯಕ್ ಕರಣ. ಸಮ್ಯಕ್ ಕೃತಿ–ಸಂಸ್ಕೃತಿ. ಹಾಗೆಂದರೆ ಚೆನ್ನಾಗುವಂತೇ ಮಾಡುವುದು, ಒಳ್ಳೆಯದನ್ನಾಗಿಸುವುದು. ಶುದ್ಧಿ ಮಾಡಿ ಉತ್ತಮಪಡಿಸುವುದು ಎಂದರ್ಥ. ಒಳ್ಳೆಯದು ಎಂದರೆ ಒಂದಾನೊಂದು ಪದಾರ್ಥವು ಅಥವಾ ಸಂಗತಿಯು ಹೇಗಿರಬೇಕೊ ಹಾಗಿರುವುದು. ಒಂದು ವಸ್ತು ಅಥವಾ ವರ್ತನೆ ಹೇಗಿದ್ದರೆ ನಮ್ಮ ಜೀವಿತದ ಪರಮೋದ್ದೇಶ ಸಿದ್ಧಿಯು ನಮಗೆ ಹತ್ತಿರ ಹತ್ತಿರವಾದೀತೊ ಅದೇ ಒಳ್ಳೆಯದು. ನಮ್ಮ ಜೀವನವನ್ನು ಸಾಧುವನ್ನಾಗಿ ಮಾಡಿಕೊಳ್ಳುವ ವಿಧಾನವೇ ಸಂಸ್ಕೃತಿ. ಲೋಕದೊಡನೆ ನಮಗಾಗುವ ನಾನಾ ಸಂಪರ್ಕಗಳಲ್ಲಿ ನಾವು ಉಂಟಾಗಿಸುವ ಔಚಿತ್ಯವೇ ಸಂಸ್ಕೃತಿ" ಎನ್ನುತ್ತಾ ಸಂಸ್ಕೃತಿಯ ಅರ್ಥವನ್ನು ಅತ್ಯಂತ ಸರಳ ರೀತಿಯಲ್ಲಿ ವಿವರಿಸಿದ್ದಾರೆ.

ಈ ಎರಡನ್ನು ಒಂದು ಮಾಡಿ ನೋಡಿದಾಗ ಒಟ್ಟು ಜನಜೀವನದ ಪರಿಚಯ ನಮಗಾಗುತ್ತದೆ. ಭಾಷೆಯೊಂದು ಲೋಕದೊಡನೆ ನಡೆಸುವ ಮತ್ತು ಪಡೆಯುವ ಸಂಪರ್ಕದಿಂದ ಭಾಷೆಯ ಬೆಳವಣಿಗೆಯಲ್ಲಿ ಕಾಣುವ ಬದಲಾವಣೆ ಕಾಲಕಾಲಕ್ಕೆ ವಿಕಾಸವಾಗುತ್ತಲೇ ಇರುತ್ತದೆ. ಈ ವಿಕಾಸದೊಂದಿಗೆ ಅದು ತನ್ನ ಮೂಲದ್ರವ್ಯವನ್ನು ಉಳಿಸಿಕೊಂಡು ಬೆಳೆಯುವುದೇ ನಿಜವಾದ ಸಂಸ್ಕೃತಿ. ಭಾಷೆ ಮತ್ತು ಕನ್ನಡ ಪದಗಳ ಬಳಕೆಯಲ್ಲಿ ಶಿವಶರಣರು ಮಾಡಿರುವ ಪ್ರಯೋಗ ಕನ್ನಡದ ನೆಲದಲ್ಲಿ ಮತ್ತು ಭಾಷೆಯ ವಿಷಯ ಬಂದಾಗ ನಿಜಕ್ಕೂ ಅಚ್ಚರಿಯ ಪ್ರಯೋಗವಾಗಿದೆ. ಭೌಗೋಳಿಕ ಬದಲಾವಣೆಗಳೊಂದಿಗೆ ಭಾಷೆ ಮತ್ತು ಸಂಸ್ಕೃತಿಯೂ ಬದಲಾಗುವುದನ್ನು ನಾವು ನೋಡಿಕೊಂಡೇ ಬಂದಿದ್ದೇವೆ. ಕನ್ನಡ ನಾಡಿನಲ್ಲಿ ಪ್ರತಿ ನಲವತ್ತು ಕಿಲೋಮೀಟರ್ ಅಥವಾ ಕೆಲವು ತಜ್ಞರ ಪ್ರಕಾರ ಪ್ರತಿ ಇಪ್ಪತ್ತು ಕಿಲೊಮೀಟರ್ ಅಂತರದಲ್ಲಿ ಕನ್ನಡ ಭಾಷೆಯು ಬದಲಾಗುತ್ತಾ ತನ್ನದೇ ಆದ ಪ್ರಾದೇಶಿಕ ಲಯ ಮತ್ತು ನುಡಿಗಟ್ಟನ್ನು ಪಡೆಯುವುದನ್ನು ನೋಡಿಕೊಂಡೇ

ಬಂದಿದ್ದೇವೆ. ಪದಗಳ ಉತ್ಪತ್ತಿ ಮತ್ತು ಅವುಗಳ ಬಳಕೆಯಲ್ಲಿ ವ್ಯತ್ಯಾಸ ಇದೆ. ಹೈದರಾಬಾದ್ ಕರ್ನಾಟಕದ ಕನ್ನಡದಲ್ಲಿ ಉರ್ದು ಭಾಷೆ, ಕೋಲಾರ ಮತ್ತು ತುಮಕೂರು ಭಾಗದಲ್ಲಿ ತೆಲುಗಿನ ಲಯ, ಬಾಂಬೆ ಕರ್ನಾಟಕದಲ್ಲಿ ಹಿಂದಿ ಮತ್ತು ಮರಾಠಿಯ ಲೇಪನ ಮತ್ತು ಕರಾವಳಿಯ ಕನ್ನಡ ಹಾಗೂ ದಕ್ಷಿಣ ಕರ್ನಾಟಕದ ಬೆಂಗಳೂರು, ಮಂಡ್ಯ, ಮೈಸೂರಿನ ಅಸ್ಖಲಿತ ಕನ್ನಡ, ಚಾಮರಾಜನಗರದ ತಮಿಳು ಪ್ರಭಾವದ ಕನ್ನಡ ಹೀಗೆ, ಕನ್ನಡದ ನೆಲದಲ್ಲಿ ಕನ್ನಡ ಭಾಷೆಯ ಹಲವು ಮಾದರಿಗಳಿರುವ ಸಂದರ್ಭದಲ್ಲಿ ಭಾಷೆಯ ಸಂಬಂಧ ನೆಲದೊಂದಿಗೆ ಹೇಗಿದೆ, ಎಂಥಹ ವ್ಯತ್ಯಾಸಗಳಿವೆ ಎನ್ನುವ ಪರಿಚಯವಾಗುತ್ತದೆ.

'ಕರಿಯ ಮಣ್ಣಿನ ನಾಡು' ಎಂದೂ 'ಕರುನಾಡು' ಎಂದೂ 'ಕಮ್ಮಿತ್ತು ನಾಡು' ಎಂದರೆ ಶ್ರೀಗಂಧದ ನಾಡು ಎಂದೂ ಕರೆಯುತ್ತಿದ್ದುದೂ ಇದೆ. ಭಾಷೆಯೊಂದು ತನ್ನ ನೆಲದ ಮತ್ತು ತನ್ನ ನೆರೆಯ ನೆಲದ ಪ್ರಭಾವಕ್ಕೂ ಒಳಗಾಗಿಯೇ ತನ್ನ ಹೊರಗಿನ ಆಕೃತಿಯನ್ನು ಪಡೆಯುತ್ತದೆ ಎಂದು ತಿಳಿದಿದ್ದೇವೆ. ಅಂದರೆ ನಮ್ಮ ನೆರೆನಾಡುಗಳ ಭಾಷಾ ಮತ್ತು ಸಾಮಾಜಿಕ ಸಂಸ್ಕೃತಿಗಳ ಸಣ್ಣ ಎಳೆಯೊಂದು ಪ್ರತಿ ಭಾಷೆಯ ಹೆಣಿಗೆಯಲ್ಲೂ ಕಾಣಸಿಗುತ್ತದೆ. ಆದ್ದರಿಂದ ಭಾಷೆ ಮತ್ತು ಸಂಸ್ಕೃತಿಯನ್ನು ಕೇವಲ ಒಂದು ಪ್ರದೇಶದ ಗುರುತಾಗಿ ಅಥವಾ ಲಕ್ಷಣವಾಗಿ ನೋಡಲು ಕಾಣಲು ಸಾಧ್ಯವಿಲ್ಲ. ಇದಕ್ಕೇಅತ್ಯಂತ ಸರಳ ಉದಾಹರಣೆಯಾಗಿ ನಾವು ಆಚರಿಸುವ ಹಬ್ಬಗಳನ್ನು ನೋಡಬಹುದು. ಉದಾಹರಣೆಗೆ ಯುಗಾದಿಯನ್ನು ನೋಡಿದರೆ ಕರ್ನಾಟಕದಲ್ಲಿಯೇ ನಾವು ಸೌರಮಾನ ಮತ್ತು ಚಾಂದ್ರಮಾನ ಎನ್ನುವ ಎರಡು ಯುಗಾದಿಗಳ ಆಚರಣೆಯನ್ನು ನೋಡುತ್ತೇವೆ. ಕರಾವಳಿ ಮತ್ತು ಕೇರಳದ ಭಾಗಗಳಲ್ಲಿ ಸೌರಮಾನ ಯುಗಾದಿಯ ಆಚರಣೆಯಾಗಿರುತ್ತದೆ. ಅದು ಅಲ್ಲಿ ಜನಜೀವನದ ಆಚರಣೆಯಾಗಿರುತ್ತದೆ. ಸಾಮಾನ್ಯವಾಗಿ ಅದು ಮಳೆಗಾಲಕ್ಕೆ ಬೇಕಾಗುವ ತರಕಾರಿ ಮುಂತಾದುವುಗಳನ್ನು ಬೆಳೆದು ಸಂರಕ್ಷಿಸುವ ಸಮಯವಾಗಿರುತ್ತದೆ. ಹಲವಾರು ದಿನಗಳವರೆಗೂ ಅಥವಾ ತಿಂಗಳುಗಳ ಕಾಲ ಇಡುವಂಥ ತರಕಾರಿಗಳಾದ ಸೌತೆಕಾಯಿ, ಕುಂಬಳ ಮುಂತಾದುವುಗಳನ್ನು ಬೆಳೆದು ಉಳಿದೆಲ್ಲ ಬೆಳೆಗಳನ್ನು ಯುಗಾದಿಯ ದಿನದಂದು ವಿಷು ಕಾಣಿಕೆಯಾಗಿ ದೇವರ ಮುಂದಿಟ್ಟು ಬಳಸುವುದನ್ನು ಆರಂಭಿಸುತ್ತಾರೆ. ಹೀಗೆ ಇದು ಒಂದು ಸಾಂಸ್ಕೃತಿಕ ಆಚರಣೆಯಾಗಿದೆ. ಆದರೆ ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಯುಗಾದಿ ಬೇವು ಬೆಲ್ಲಗಳ ಸೇವನೆಯಿಂದ ಆರಂಭವಾಗುತ್ತದೆ. ಎರಡೂ ಭಾಗಗಳಲ್ಲಿ ಜೀವನ ಮಾಡಿರುವ ನನಗೆ ಈ ಎರಡೂ ಆಚರಣೆಗಳು ಆಯಾ ಪ್ರದೇಶದ ಸಂಸ್ಕೃತಿಯಂತೆ ಕಾಣುವುದು. ಇಲ್ಲಿ ಭಾಷೆಗೂ ಆಚರಣೆಗಳಿಗೂ ನೇರವಾದ ಸಂಬಂಧವಿಲ್ಲ. ಆದ್ದರಿಂದ ನಾವು ಭಾಷೆಯನ್ನಷ್ಟೇ ಸಂಸ್ಕೃತಿಯ ಗುರುತಾಗಿ ಅಥವಾ ಲಕ್ಷಣವಾಗಿ ಪರಿಗಣಿಸುವ ಬಗ್ಗೆ ಜಾಗರೂಕರಾಗಿರಬೇಕು.

ಭಾಷೆ ಎನ್ನುವುದು ಯಾವುದೇ ಸಮುದಾಯದ ಅಥವಾ ಆ ನೆಲದ ಗುರುತು ಮತ್ತು ಅಸ್ಮಿತೆಯಾಗಿದೆ. ಏಕೆಂದರೆ ಭಾಷೆ ಕೇವಲ ವ್ಯವಹಾರದ, ಸಂವಹನದ ಮಾಧ್ಯಮವಷ್ಟೇ ಅಲ್ಲ. ಅದು ಆಯಾ ಪ್ರದೇಶದ ಜನಜೀವನ, ಜನರ ಕಸುಬು, ಸಾಂಸ್ಕೃತಿಕ ಶ್ರಮಂತಿಕೆ, ನಂಬಿಕೆಗಳ ಒಟ್ಟು ಮೊತ್ತವಾಗಿರುತ್ತದೆ. ಹಾಗೇ ಅದು ಸಂಸ್ಕೃತಿಯ ಜೀವಂತ ಸಾಕ್ಷಿಯಾಗಿರುತ್ತದೆ.

ಭಾರತದ ಮಟ್ಟಿಗೆ ಹೇಳುವುದಾದರೆ ಇಲ್ಲಿನ ವಿವಿಧ ಭಾಷೆಗಳ ಪ್ರದೇಶಗಳೇ ಒಂದು ಸಂಸ್ಕೃತಿಯಾಗಿದೆ. ಭಾರತೀಯ ಎನಿಸಿದ ಪ್ರತಿಯೊಂದು ಭಾಷೆಯೂ ಸಂಸ್ಕೃತದಿಂದ ಪ್ರಭಾವಿತವಾಗಿರುವುದನ್ನು ನಾವು ಅನಾದಿಕಾಲದಿಂದಲೂ ನೋಡಿದ್ದೇವೆ. ಸಂಸ್ಕೃತ ಸಾಹಿತ್ಯದ ಕಾವ್ಯದ ಪ್ರಭಾವವೂ ಅನೇಕ ಶತಮಾನಗಳಿಂದ ಹರಿದುಕೊಂಡು ಬಂದಿರುವುದನ್ನು ನೋಡಿದ್ದೇವೆ. ಇದರಿಂದಾಗಿ ಕನ್ನಡ ಸಾಹಿತ್ಯವೂ ಚೈತನ್ಯವನ್ನು ಪಡೆದುಕೊಂಡು ಶ್ರೀಮಂತ ವೈವಿಧ್ಯಪೂರ್ಣವಾದ ಸಾಹಿತ್ಯರಚನೆಗೆ ಸಾಕ್ಷಿಯಾಗಿದೆ. ಸಂಸ್ಕೃತದ ಸಾಂಗತ್ಯದಿಂದ ಕನ್ನಡ ಸಾಹಿತ್ಯಕ್ಕೆ ಒಂದು ತತ್ವಚಿಂತನೆ, ಕಾವ್ಯದ ಮೇಲ್ಪಂಕ್ತಿ ಲಭ್ಯವಾಗಿ ನಿತ್ಯನೂತನವಾಗುವಂತಹ ಮಾರ್ಗವನ್ನು ಪಡೆಯಿತು. ಕರ್ನಾಟಕದಲ್ಲಿ ಆರಂಭದ ಹೊತ್ತಿನಲ್ಲಿ ಜೈನ ಬರಹಗಾರರು ಪ್ರಾಕೃತದಲ್ಲಿ ಬರೆದರೂ ನಂತರ ಸಂಸ್ಕೃತವನ್ನು ಬಳಸಿದ್ದುಂಟು. ಇದೇ ನೆಲದ ಭಾಷೆಯಾದ ತುಳು ಕೂಡಾ ದ್ರಾವಿಡ ಕುಲಕ್ಕೆ ಸೇರಿದ ಭಾಷೆಯಾಗಿದೆ. ತುಳು ಮಾತಾಡುವ ಜನರನ್ನು ದಕ್ಷಿಣ ಕನ್ನಡ, ಉಡುಪಿ, ಕೇರಳದ ಕಾಸರಗೋಡು ಜಿಲ್ಲೆಯಲ್ಲಿ ಕಾಣಬಹುದು. ಉತ್ತರದಲ್ಲಿ ಕಲ್ಯಾಣಪುರ ನದಿ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ, ಪೂರ್ವದಲ್ಲಿ ಪಶ್ಚಿಮ ಘಟ್ಟ ಹಾಗೂ ದಕ್ಷಿಣದಲ್ಲಿ ಪಯಸ್ವಿನಿ ಚಂದ್ರಗಿರಿ ನದಿಯಿಂದ ತುಳುನಾಡು ಆವೃತವಾಗಿದೆ. ತುಳುವಿಗೆ ತನ್ನದೇ ಆದ ಭಾಷಾ ವೈಶಿಷ್ಟ್ಯಗಳಿದ್ದರೂ ಕನ್ನಡ ಹಾಗೂ ದ್ರಾವಿಡ ಭಾಷೆಗಳೊಂದಿಗೆ ಅನೇಕ ಗುಣಲಕ್ಷಣಗಳನ್ನು ಹಂಚಿಕೊಂಡಿದೆ. ತುಳು ಭಾಷೆಯ ಸಾಹಿತ್ಯ ಕೂಡಾ ಅತ್ಯಂತ ಸಮೃದ್ಧವಾಗಿದೆ. ಪಾಡ್ದನಗಳು, ಸಂಧಿ, ಪಡಿಪು, ನೃತ್ಯ–ಪದ್ಯ, ಗಾದೆ–ಒಗಟುಗಳು, ಜೋಗುಳ, ಅಜ್ಜಿಕತೆ ಹೀಗೆ ವಿಸ್ತೃತವಾದ ಜಾನಪದ ಸಂಪ್ರದಾಯವನ್ನು ತುಳುನಾಡು ತನ್ನ ಮಡಿಲಲ್ಲಿರಿಸಿಕೊಂಡಿದೆ.

ಇದರಂತೇ ಕನ್ನಡದ ಇತರ ಉಪಭಾಷೆಗಳಾದ ಕುಂದಾಪುರ ಕನ್ನಡ, ಹವಿಗನ್ನಡ, ಧಾರವಾಡ ಕನ್ನಡ, ಉತ್ತರ ಕರ್ನಾಟಕದ ಇತರ ಕನ್ನಡದ ಉಪಭಾಷೆಗಳು ತಮ್ಮ ಭಿನ್ನ ಸಂಸ್ಕೃತಿಗಳಿಂದ ಅದರದೇ ಆದ ಜಗತ್ತನ್ನು ಸೃಷ್ಟಿಸಿಕೊಂಡಿದೆ. ಕುಂದಾಪ್ರ ಕನ್ನಡದ

ಭಾಷೆಯನ್ನು ಅತ್ಯಂತ ಸಮರ್ಥವಾಗಿ ಬಳಸಿದವರು ಕನ್ನಡದ ಹಿರಿಯ ಕತೆಗಾರ್ತಿ ವೈದೇಹಿಯವರು. ಅವರ ಅಮ್ಮಚ್ಚಿ ಎಂಬ ನೆನಪು, ಕುಂದಾಪ್ರ ಕನ್ನಡದ ಅತ್ಯಂತ ಪರಿಣಾಮಕಾರಿಯಾದ ಕಥನವಾಗಿದೆ. ಉಡುಪಿ ಜಿಲ್ಲೆಯ ಕುಂದಾಪುರ, ಬ್ರಾಹ್ಮಾವರ, ಬೈಂದೂರು ಹೆಬ್ರಿ ಆಸುಪಾಸಿನಲ್ಲಿ ಮಾತಾಡುವ ಈ ಭಾಷೆಯನ್ನು ಕೋಟದ ಬ್ರಾಹ್ಮಣರು ಬಳಸುವ ಕಾರಣ ಕೂಟ ಕನ್ನಡ ಎಂದೂ ಕರೆಯುವುದುಂಟು. ಕಲ್ಯಾಣಪುರ ಹೊಳೆಯಿಂದ ಶಿರೂರು, ಭಟ್ಕಳ ತನಕ ಕೇಳಿ ಬರುವ ಒಂದು ವಿಶಿಷ್ಟ ಉಪಭಾಷೆ ಕುಂದಾಪ್ರ ಕನ್ನಡ ಸೀಮಿತ ಪ್ರದೇಶದ ಉಪಭಾಷೆಯಾಗಿದ್ದರೂ ಅದರ ಆಳ ವಿಸ್ತಾರವಾದುದು.ಸಿದ್ದಾಪುರದ ಕನ್ನಡಕ್ಕಿಂತ ಕೋಟ ಕೋಟೇಶ್ವರ ಕನ್ನಡ ಭಿನ್ನವಾದುದು. ತಲ್ಲೂರು, ಹೆಮ್ಮಾಡಿ, ಗಂಗೊಳ್ಳಿ, ಕನ್ನಡದಂತೇ ನಾವುಂದ, ಉಪ್ಪುಂದ, ಬೈಂದೂರು ಕನ್ನಡವಿಲ್ಲ. ಸಣ್ಣ ಸಣ್ಣ ವ್ಯತ್ಯಾಸಗಳು ಇಷ್ಟು ಸಣ್ಣ ಪ್ರದೇಶದಲ್ಲಿಯೂ ಕಾಣ ಸಿಗುತ್ತವೆ. ವರ್ಷದ ಹನ್ನೆರಡು ತಿಂಗಳುಗಳಿಗೆ ತನ್ನೇ ಆದ ಪ್ರತ್ಯೇಕ ಹೆಸರುಗಳನ್ನು ಕುಂದಾಪ್ರ ಕನ್ನಡ ಹೊಂದಿದೆ ಅನ್ನುತ್ತಾರೆ. ಶಿಷ್ಟ ಅಥವಾ ಗ್ರಾಂಥಿಕ ಕನ್ನಡದಲ್ಲಿ ಕಂಡು ಬಾರದ ಹಳಗನ್ನಡದ ಎಷ್ಟೋ ಪದಪ್ರಯೋಗಗಳು ಕುಂದಾಪ್ರ ಕನ್ನಡದಲ್ಲಿ ಇನ್ನೂ ಚಾಲ್ತಿಯಲ್ಲಿವೆ. ಪ್ರಾಚೀನತೆ ಹಾಗೂ ಭಾಷಾ ಸಿರಿವಂತಿಕೆಯಲ್ಲಿ ಕುಂದಾಪ್ರ ಕನ್ನಡ ಎಂಬ ಈ ಉಪಭಾಷೆ ತನ್ನ ಮುಖ್ಯಭಾಷೆಗೆ ಸರಿ ಮಿಗಿಲೆಂಬಂತಿದೆ. ಹವಿಗನ್ನಡ, ಹವ್ಯಕ ಕನ್ನಡ, ಹೈಗ ಕನ್ನಡ, ಹವ್ಯಕ ಜನಾಂಗದವರು ಬಳಸುವ ಕನ್ನಡ ಭಾಷೆ. ಇದು ಹಳೆಗನ್ನಡಕ್ಕೆ ಹತ್ತಿರವಿರುವ ಭಾಷೆಯಾಗಿದೆ. ಈ ಭಾಷೆಗೆ ಹವಿಗನ್ನಡ ಎಂದು ಹೆಸರಿಟ್ಟವರು ಕವಿ, ಸಾಹಿತಿ ವೆಂಕಟೇಶ ದೊಡ್ಮನೆಯವರು. ಒಂದು ಶತಮಾನಕ್ಕೂ ಹಿಂದೆ ಪ್ರಕಟವಾದ (1887) ಇಗ್ಗಪ್ಪ ಹೆಗಡೆ ವಿವಾಹ ಪ್ರಸಂಗ ಎನ್ನುವ ಕೃತಿಯಿಂದ ಹಿಡಿದು ಇದುವರೆಗೂ ಹಲವಾರು ನಾಟಕಗಳು, ಕನ್ನಡ ಸಾಹಿತ್ಯ ಲೋಕದಲ್ಲಿ ಅತ್ಯುತ್ತಮ ಎಂದು ಪರಿಗಣಿಸಲ್ಪಟ್ಟ ಕಾದಂಬರಿಯಾದ ವಿ ತಿ ಶೀಗೇಹಳ್ಳಿ ಅವರ ತಲೆಗಳಿ, ಕವನಗಳು, ಕಥೆಗಳು, ಹರಟೆಗಳು ಲೇಖನಗಳು ಹವಿಗನ್ನಡದಲ್ಲಿ ಬಂದಿದ್ದು ಆ ಪ್ರದೇಶದ ಸಂಸ್ಕೃತಿಯನ್ನು ಅದು ತುಂಬಿಕೊಂಡಿದೆ. ಇದಕ್ಕೆ ಶಿಖರಪ್ರಾಯವಾಗಿ 'ಧರ್ಮವಿಜಯ' ಎನ್ನುವ ಮಹಾಕಾವ್ಯ ಬಾಳಿಲ ಪರಮೇಶ್ವರ ಭಟ್ಟರು ಬರೆದು ಹವಿಗನ್ನಡದ ವಿಸ್ತಾರವನ್ನು ಇನ್ನೂ ಹಿಗ್ಗಿಸಿದ್ದಾರೆ. ಡಾ ಹರಿಕೃಷ್ಣ ಭರಣ್ಯ ಎನ್ನುವವರು 'ಈ ನೆಲದ ಕಂಪು' ಎನ್ನುವ ಕೃತಿಯನ್ನು ಬರೆದು ಹವಿಗನ್ನಡ ಸಾಹಿತ್ಯ ಚರಿತ್ರೆಯನ್ನು ದಾಖಲಿಸಿದ್ದಾರೆ. ಯಾವುದೇ ಭಾಷೆ ನಿರಂತರವಾಗಿ ಬೆಳೆಯಲು ಅದರ ಶಬ್ದಸಂಪತ್ತು ಹಿಗ್ಗಬೇಕು. ಓದುಗರಿಗೆ, ಬರಹಗಾರರಿಗೆ, ಅಧ್ಯಾಪಕರಿಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ, ಸಹಕಾರ ನೀಡುವಂತಹ ನಿಘಂಟುಗಳು ಬರಬೇಕು. ಭಾಷೆಯೊಂದು ಆಪ್ತವಾಗಲು ನಿಘಂಟುಗಳು ಅತ್ಯಂತ ಸಹಕಾರಿಯಾಗಿವೆ. ಆಗಲೇ ಶಬ್ದಗಳ ಅರ್ಥ ಮತ್ತು ವಿಸ್ತಾರದ ಅರ್ಥವೂ ಅರಿತು ಭಾಷಾ ಸಂಸ್ಕೃತಿಯ ಪರಿಚಯವೂ ಆಗಿ ಕನ್ನಡ ಮತ್ತಿತರ ಭಾಷೆಗಳು ವಿಕಾಸಕ್ಕೆ ಅನುಕೂಲವಾಗುತ್ತದೆ.

ಅಂತೆಯೇ ಅನುವಾದ ಸಾಹಿತ್ಯವೂ ಭಾಷಾ ಸಂಸ್ಕೃತಿಗೆ ಅತ್ಯಂತ ದೊಡ್ಡ ಕೊಡುಗೆಯಾಗಿದೆ. 'ಅವಳ ಉಡುಗೆ ಇವಳಿಗಿಟ್ಟು ನೋಡಬಯಸಿದೆ. ಇವಳ ತೊಡುವೆ ಅವಳಿಗಿಟ್ಟು ಹಾಡಬಯಸಿದೆ' ಎಂದು ಭಾಷಾಂತರ ಅಥವಾ ಅನುವಾದದ ಬಗ್ಗೆ ಬಿ ಎಂ. ಶ್ರೀಯವರು ಹೀಗೆ ಹೇಳಿದ್ದಾರೆ. 'ಭಾಷಾಂತರ ಎನ್ನುವುದು ಸೋಮಾರಿಗಳ ಕೆಲಸವಲ್ಲ, ಅದು ಪ್ರತಿಭಾವಂತರು ಕೈಗೊಳ್ಳಬೇಕಾದ ಕಾರ್ಯ' ಎಂದು ದೇ. ಜವರೇಗೌಡರು ಹೇಳಿದ್ದುಂಟು. ಇದನ್ನೆಲ್ಲ ನೋಡುವಾಗ ಅನುವಾದವೂ ಮೂಲಸೃಷ್ಟಿಯ ಮರುಸೃಷ್ಟಿಯಾಗಿದೆ ಎಂದೆನ್ನಬೇಕು. ಹಾಗೆ ನೋಡಿದರೆ ಕನ್ನಡ ಸಾಹಿತ್ಯ ಆರಂಭವಾಗಿದ್ದೂ ಅನುವಾದದಿಂದಲೇ ಎನ್ನುತ್ತಾರೆ ವಿದ್ವಾಂಸರು. ಹಳೆಗನ್ನಡ ಕಾವ್ಯಗಳಲ್ಲಿ ಬಹುತೇಕ ಕಾವ್ಯಕೃತಿಗಳು ಸಂಸ್ಕೃತದ ಪ್ರಭಾವದಿಂದ ರಚಿತವಾದವುಗಳಲ್ಲವೇ? ಕವಿರಾಜಮಾರ್ಗಕಾರನು ತನ್ನ ಕವಿರಾಜಮಾರ್ಗ ಕೃತಿಯಲ್ಲಿ ಬರುವ ಹಲವಾರು ಪ್ರಕರಣಗಳನ್ನು ವಿವಿಧ ಕೃತಿಗಳಿಂದ ಸ್ವೀಕರಿಸಿದ್ದಾನೆ. ನಾಟ್ಯಶಾಸ್ತ್ರದಿಂದ ರಸ ಪ್ರಕರಣ, ಕಾವ್ಯಾದರ್ಶದಿಂದ ಗುಣ ಪ್ರಕರಣ, ಭಾಮಹನಿಂದ ಅಲಂಕಾರ ಪ್ರಕರಣ ಇವುಗಳೆಲ್ಲವನ್ನೂ ಅನುವಾದಿಸಿ ನಂತರ ತನ್ನ ಪ್ರತಿಭೆಯಿಂದ ನೂತನವಾದ ಕಾವ್ಯ ರಚಿಸಿದ್ದಾನೆ ಎನ್ನುತ್ತಾರೆ ವಿದ್ವಾಂಸರು.

ಪಂಪನ ಆದಿಪುರಾಣ ಕೃತಿಗೆ ಜಿನಸೇನಾಚಾರ್ಯನ ಪೂರ್ವಪುರಾಣ ಮೂಲ ಆಕರವಾಗಿದೆ ಎನ್ನುವುದು ಅರಿತ ವಿಷಯವಾಗಿದೆ. ವ್ಯಾಸಭಾರತವು ಪಂಪಭಾರತ ಮತ್ತು ನಂತರ ಬಂದ ಅನೇಕ ಭಾರತಕತೆಗಳಿಗೆ ಮೂಲ ಆಕರವಾಗಿದೆ. ರನ್ನ, ಜನ್ನ, ಪೊನ್ನ , ನಾಗಚಂದ್ರ ಮುಂತಾದವರು ತಮ್ಮ ಕೃತಿಗಳ ರಚನೆಗೆ ಸಂಸ್ಕೃತ ಕವಿಗಳ ಹಲವು ಕೃತಿಗಳನ್ನು ಮೂಲ ಆಕರವಾಗಿ ಆಯ್ದುಕೊಂಡಿದ್ದು ತಿಳಿದ ವಿಷಯವೇ ಆಗಿದೆ. ಹೀಗೆ ಹಳಗನ್ನಡ ಕಾಲದಿಂದಲೂ ಪ್ರೇರಣೆ, ಅನುವಾದ ನಡೆದುಕೊಂಡೇ ಸಂಸ್ಕೃತಿಯ ಪರಿಚಯ ಮಾಡುತ್ತಲೇ ಬಂದಿರುವುದನ್ನು ಕಾಣಬಹುದು. ಹೊಸಗನ್ನಡ ಕಾಲದಲ್ಲಿ ಪಾಶ್ಚಾತ್ಯ ಕಾವ್ಯಗಳ ಪ್ರಭಾವವೂ ಕಂಡು ಬಂದಿರುವುದು ಸತ್ಯ. ಬಿ ಎಂ ಶ್ರೀಯವರು, ಪಂಜೆಯವರು, ಗೋವಿಂದ ಪೈಗಳು ಅಲ್ಲದೇ ಯುಗದ ಕವಿ ಕುವೆಂಪು ಅವರೂ ಷೇಕ್ಸ್ಪಿಯರನ ಹ್ಯಾಮ್ಲೆಟ್ ನಾಟಕವನ್ನು ರಕ್ತಾಕ್ಷಿ ಎಂಬ ಹೆಸರಿನಿಂದಲೂ ಟೆಂಪೆಸ್ಟ್ ನಾಟಕವನ್ನು ಬಿರುಗಾಳಿ ಎನ್ನುವ ಹೆಸರಿನಿಂದಲೂ ಅನುವಾದಿಸಿದ್ದಾರೆ. ಗಳಗನಾಥರು

ಮರಾಠಿ ಸಾಹಿತ್ಯದ ಅನೇಕ ಅತ್ಯುತ್ತಮ ಕಾದಂಬರಿಗಳನ್ನು ಸಶಕ್ತವಾಗಿ ಕನ್ನಡಕ್ಕೆ ತಂದಿದ್ದಾರೆ. ಅಂತಹ ಕಾದಂಬರಿಗಳು ಅದೆಷ್ಟು ಅದ್ಭುತವಾಗಿ ಅನುವಾದಗೊಂಡಿವೆ ಎಂದರೆ ಅವುಗಳನ್ನು ಓದುವಾಗ ಅವುಗಳು ಅನುವಾದ ಎನ್ನವ ಯಾವ ಸುಳಿವೂ ಸಿಗದಂತೇ ನಮ್ಮ ಭಾಷೆಯ ಲಯಕ್ಕೆ ಸರಿಯಾಗಿ ಅನುವಾದಗೊಂಡಿದೆ.

ಖ್ಯಾತ ಲೇಖಕರಾದ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ' ಅನ್ಯವನ್ನು ಒಳಗೊಳ್ಳುವುದೇ ಅನುವಾದದ ಮೂಲ ಆಶಯ' ಎಂದಿದ್ದಾರೆ. ಅನುವಾದವೆಂದರೆ ಬೇರೆ ಬೇರೆ ಜಗತ್ತುಗಳನ್ನು ಒಂದುಗೂಡಿಸುವುದು ಎಂಬ ವ್ಯಾಖ್ಯಾನವೂ ಇದೆ. ಇದು ಅನುವಾದಕಾರರ ಅತ್ಯಂತ ದೊಡ್ಡ ಸವಾಲು ಮತ್ತು ಸಾಮರ್ಥ್ಯಕ್ಕೆ ಬಿಟ್ಟ ವಿಷಯವಾಗಿದೆ. ಕೃತಿಯನ್ನು ರೂಪಿಸಿದ ಸಂಸ್ಕೃತಿ, ಸಂದರ್ಭ, ಭಾಷೆಯ ಒಳಗಿನ ನಿಜವಾದ ಧ್ವನಿ ಇವುಗಳೆಲ್ಲವೂ ಅನುವಾದದಲ್ಲಿಯೂ ಎಲ್ಲಿಯೂ ಮೂಲಕ್ಕೆ ಮತ್ತು ಅನುವಾದಗೊಳ್ಳಲಿರುವ ಭಾಷೆಯ ಸ್ವರೂಪಕ್ಕೆ ಧಕ್ಕೆಯಾಗದಂತೇ ಜಾಗರೂಕತೆಯಿಂದ ಅನುವಾದದ ಕಾರ್ಯ ನಡೆಯಲೇ ಬೇಕು. ಹೀಗೆ ಅನುವಾದದ ಕಾರಣ ನಮಗೆ ಇತರ ಸಂಸ್ಕೃತಿಗಳ ಪರಿಚಯ ಆಗುತ್ತದೆ ಜೊತೆಯಲ್ಲಿ ಮನುಷ್ಯನ ಪಾಡು ಯಾವುದೇ ಜಗತ್ತಿನಲ್ಲಿದ್ದರೂ ಅದು ಒಂದೇ ರೀತಿಯದು ಎನ್ನುವ ಅರಿವೂ ನಮಗಾಗುತ್ತದೆ.

ಕನ್ನಡವೆಂದರೆ ಬರಿ ನುಡಿ ಅಲ್ಲ ಎಂದವರು ಕವಿಗಳು. ಶಂಬಾ ಜೋಶಿಯವರೂ 'ಅದೊಂದು ಕೇವಲ ಶಬ್ದಜನಕ ನುಡಿಗಟ್ಟುಗಳ ಸಮೂಹವಲ್ಲ. ಕನ್ನಡ ಎಂದರೆ ಇಲ್ಲಿನ ಜನಪದರ ಭಾವನೆಗಳ ಸಂವಹನದ ಮಾಧ್ಯಮ. ಆಚಾರ ವಿಚಾರಗಳ ಅಮೂರ್ತ ಸಾಂಕೇತಿಕ ಪ್ರತಿಮೆಯಾಗಿದೆ ಎಂದಿದ್ದಾರೆ. ಸಂಸ್ಕೃತಿಯ ಅವಿಭಾಜ್ಯ ಅಂಗವೂ ಹೌದು. ಶಂಬಾರವರ ಪ್ರಕಾರ ಭಾಷೆ ಮತ್ತು ಸಂಸ್ಕೃತಿ ಒಂದು ಮತ್ತೊಂದರ ಪ್ರತಿಬಿಂಬವಾಗಿದೆ ಎನ್ನುತ್ತಾರೆ.

ಹೀಗೆ ಇಷ್ಟು ಸಮೃದ್ಧವಾಗಿ ಬೆಳೆದಿರುವ ಈ ಭಾಷೆ ಇಂದು ಎದುರಿಸುತ್ತಿರುವ ಸವಾಲುಗಳು ದೊಡ್ಡದೇ. ಎರವಲು ಪಡೆದ ಸಾಮಾಜಿಕ ಜೀವನ, ಸಾಂಸ್ಕೃತಿಕ ವೈಭವವೂ ಕೇವಲ ತೋರಿಕೆಗಾಗಿ ಎನ್ನುವ ಸ್ಥಿತಿಯಲ್ಲಿರುವಾಗ, ಹೊರಗಿನ ವಾತಾವರಣದ ಪ್ರಭಾವದಿಂದ ನಮ್ಮ ನಡೆನುಡಿಗಳಲ್ಲಿ ಆಗಿರುವ ಅಪಾರ ಬದಲಾವಣೆಗಳು ಈ ಭಾಷೆ ಮತ್ತದರ ಸಂಸ್ಕೃತಿಯನ್ನು ಎಲ್ಲಿಗೆ ಎಳೆದುಕೊಂಡು ಹೋಗುವುದೋ ಎನ್ನುವ ಅಧೀರತೆ ಪ್ರತಿ ಭಾಷೆಯ ಬಗ್ಗೆ ಕಾಳಜಿ ಇರುವವರ ಗೊಂದಲವಾಗಿದೆ. ಈ ಗೊಂದಲಗಳಿಂದಲೂ ಹೊರಬರಬೇಕಾದರೆ ಕೆಲವು ಮನಸ್ಥಿತಿಗಳನ್ನು ಬದಲಾಯಿಸಿಕೊಳ್ಳಬೇಕಾಗಿದೆ

ಸಂಸ್ಕೃತಿ ಯಾವತ್ತಿಗೂ ಬದಲಾಗುತ್ತಿರುವ ಮನುಷ್ಯನ ಅಂಶ. ಕಾಲಕಾಲಕ್ಕೆ ಅದು ಯುಗಧರ್ಮದ ಬಣ್ಣವನ್ನು ತಳೆದು ಹೊಸದಾದ ರೂಪದಲ್ಲಿ ನಮ್ಮೆದುರು ನಿಲ್ಲುವುದೂ ನಡೆದುಕೊಂಡೇ ಬಂದಿದೆ. ಹಾಗಿರುವಾಗ ಈ ಬದಲಾವಣೆಯನ್ನು ಸ್ವೀಕರಿಸುತ್ತಲೇ ಕನ್ನಡಸ ಸಂಸ್ಕೃತಿಯನ್ನು ಮರು ಸ್ಥಾಪಿಸಲೂ ಕನ್ನಡಿಗರು ಸಿದ್ಧಗೊಳ್ಳಬೇಕು. ಇದು ಪ್ರಾಯಶಃ ಎಲ್ಲ ಭಾಷೆಗಳಲ್ಲೂ ನಡೆಯುತ್ತಿರುವ ವಿದ್ಯಮಾನವಾಗಿದೆ. ಯಾವ ಭಾಷೆಯೂ ಯಾವತ್ತಿಗೂ ತನ್ನ ಮೂಲ ಸ್ವರೂಪದಲ್ಲೇ ಬಹಳ ಕಾಲ ಇರಲಾರದು. ಅದು ಇತರ ಭಾಷೆಗಳೊಂದಿಗೆ ಕೊಡುಕೊಳ್ಳುವಿಕೆಯನ್ನು ಮಾಡುತ್ತಲೇ ಬೆಳೆದಿರುವ ವಿಷಯವನ್ನು ಒಪ್ಪಿಕೊಂಡಂತೇ ಈ ಹೊಸ ತಲೆಮಾರಿನ ಸಂದರ್ಭದಲ್ಲಿ ಯುವಜನಾಂಗಕ್ಕೆ ಮಾತೃಭಾಷೆಯ ಮೇಲೆ ಅಕ್ಕರೆ ಹುಟ್ಟಿ ಅಕ್ಕರೆ ಉಳಿಯುವಂತೇ ಮಾಡಲು ಅವರ ಅಭಿರುಚಿಗಳನ್ನು ನೋಡಿಕೊಂಡು ಅವರ ಅಗತ್ಯಗಳಿಗೆ ತಕ್ಕಂತೇ ಸ್ಪಂದಿಸಿದರೆ ಭಾಷೆಯ ಉಳಿವು ಆಗಬಹುದೇನೊ! ಒಂದೂವರೆ ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯ ಚರಿತ್ರೆ ನೋಡಿದ ನಮಗೆ ಇದು ಅತ್ಯಂತ ಸಹಜವಾಗಿ ಅರ್ಥವಾಗಬೇಕಾದ ಸಂಗತಿ. ಭಾಷೆಯಲ್ಲಿ ಆದ ಬದಲಾವಣೆಗಳನ್ನು ನೋಡಿಕೊಂಡೇ ಬಂದಿದ್ದೇವೆ. ಹಾಗಾಗಿ ಬದಲಾವಣೆ ಎನ್ನುವುದು ಅತ್ಯಂತ ನೈಸರ್ಗಿಕ ಮತ್ತು ಸಹಜವಾಗಿದೆ. ಆದರೆ ಕೆಲವೊಂದು ಬದಲಾವಣೆಗಳು ಬೆಳವಣಿಗೆಯೂ ಆಗಬಹುದು. ಹಲವು ಅಂಶಗಳ ಬದಲಾವಣೆ ಬೆಳವಣಿಗೆ ಕೂಡಾ ಆಗಿರುತ್ತದೆ. ಅಂದರೆ ನಮ್ಮ ನಿಲುವುಗಳನ್ನು ಭಾಷೆಯ ಜೊತೆಗಿನ ನಡೆಯನ್ನೂ ಬದಲಾಯಿಸಿಕೊಳ್ಳಬೇಕು. ಇಲ್ಲಿ ನಾನು ಕೆ.ವಿ.ತಿರುಮಲೇಶರ ಸ್ವಲ್ಪ ದೀರ್ಘವಾದರೂ ಅತ್ಯಂತ ಸಮಂಜಸವೆನಿಸಿದ ಕಾರಣ ಅವರ ಲೇಖನದ ಒಂದು ಭಾಗವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಮುಂದಿನ ಮಾತುಗಳು ಭಾಷಾ ವಿಜ್ಞಾನಿಯಾದ ತಿರುಮಲೇಶರದು.

''ಭಾಷೆಯ ಬೆಳವಣಿಗೆಗೆ ಕೆಲವೊಂದು ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ ಅದು ನಮ್ಮಿಂದಲೇ ಆಗಬೇಕಾದ ಕೆಲಸ. ಮುಖ್ಯವಾದ ಸತ್ಯವೆಂದರೆ ಭಾಷೆ ಜೀವವರ್ಗದ ಹಾಗೆ. ಇದಕ್ಕೂ ಜೀವ ವಿಕಾಸದ ಮೂಲತತ್ವ ಅನ್ವಯವಾಗುತ್ತದೆ. 'ಹೊಂದಿಕೊ ಇಲ್ಲವೇ ನಾಶವಾಗು' ಎನ್ನುವ ತತ್ವ. ಭಾಷೆಯ ಉಳಿವು ಅಳಿವು ಅದರ ಅಗತ್ಯದ ಮೇಲೆ ಹೊಂದಿಕೊಂಡಿದೆ. ಅಗತ್ಯಗಳಿಗೆ ಅನುಸಾರ ಅದು ಬದಲಾಗುತ್ತಾ ಹೋಗುತ್ತದೆ. ಈ ಬದಲಾವಣೆಯೇ ಅದರ ಬೆಳವಣಿಗೆ. ಬದಲಾವಣೆ ಭಾಷೆಯ ಯಾವ ಅಂಶದಲ್ಲೂ ಆಗಬಹುದು.

ಧ್ವನಿಯಲ್ಲಿ, ಪದದಲ್ಲಿ, ಅರ್ಥದಲ್ಲಿ, ವ್ಯಾಕರಣದಲ್ಲಿ, ಬಳಕೆಯ ಕ್ಷೇತ್ರದಲ್ಲಿ. ಹೊಸ ಪದಗಳನ್ನದು ತನ್ನೊಳಗಿಂದ ಹೊಸೆದುಕೊಳ್ಳಬಹುದು. ಇದ್ದ ಪದಗಳಿಗೆ ಹೊಸ ಅರ್ಥಗಳನ್ನು ಕೊಡಬಹುದು, ಅಥವಾ ಬೇರೆ ಭಾಷೆಗಳಿಂದ (ಹೆಚ್ಚಾಗಿ ಸಂಪರ್ಕಕ್ಕೆ ಬಂದ ಭಾಷೆಗಳಿಂದ) ಪದಗಳನ್ನು ಹಾಗೆಯೇ ಇಲ್ಲವೇ ತುಸು ಬದಲಾವಣೆಗಳೊಂದಿಗೆ ಪಡೆದುಕೊಳ್ಳಬಹುದು. ಇದೆಲ್ಲ ಎಲ್ಲರಿಗೂ ಗೊತ್ತಿರುವುದೇ. ಆದರೆ ಇವಕ್ಕೆ ಸಂಬಂದಿಸಿದಂತೆ ಹೆಚ್ಚು ಗೊತ್ತಿಲ್ಲದ ಕೆಲವು ವಿಷಯಗಳು ಇವೆ. ಇದನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಾವು ಜೀವ ವಿಕಸನದಲ್ಲಿ ಪ್ರಧಾನವಾಗಿ ಮನುಷ್ಯನಿಗೆ ಸಂಬಂಧಿಸಿ ಎರಡು ಬಗೆಗಳನ್ನು ತಿಳಿದಿರಬೇಕು. ಒಳಮುಖ ಬೆಳವಣಿಗೆ ತನ್ನೊಳಗೆಯೇ ಬೆಳೆಯವುದು, ಹೊರಮುಖ ಬೆಳವಣಿಗೆ –ಹೊರಕ್ಕೆ ಬೆಳೆಯುವುದು, ಮನುಷ್ಯ ವಿಕಾಸದಲ್ಲಿ ಒಂದು ಹಂತದಲ್ಲಿ ಹೊರಮುಖ ಬೆಳವಣಿಗೆ ಆರಂಭವಾಯಿತು, ಎಂದರೆ ಮನುಷ್ಯ ಸಲಕರಣೆಗಳನ್ನು ಹತ್ಯಾರಗಳನ್ನು ಆವಿಷ್ಕರಿಸಿಕೊಂಡು ಬೆಳೆಯಲು ಶುರು ಮಾಡಿದ. ಗುಹೆಯಲ್ಲಿ ಜೀವಿಸುತ್ತಿದ್ದವ ಮನೆ ಕಟ್ಟಿ ಜೀವಿಸತೊಡಗಿದ. ಮರವನ್ನು ಹಾಗೇ ಏರುತ್ತಿದ್ದವ ಏಣಿಯನ್ನು ಆವಿಷ್ಕರಿಸಿ ಇತ್ಯಾದಿ ಇತ್ಯಾದಿ. ಈ ಹೊರಮುಖ ಬೆಳವಣಿಗೆಯೇ ಮನುಷ್ಯನಿಗೆ ಹೊಂದಾಣಿಕೆಯ ಅನಂತ ಸಾಧ್ಯತೆಗಳನ್ನು ಒದಗಿಸಿಕೊಟ್ಟಿತು.

ಒಂದು ಭಾಷೆಯ ಮಟ್ಟಿಗೂ ಇದು ನಿಜ. ಕನ್ನಡವನ್ನೇ ತೆಗೆದುಕೊಂಡರೆ ಅದು ಒಳಮುಖ ವಿಕಸನ ಸಾಧ್ಯತೆಯನ್ನು ಮುಗಿಸಿ ಹೊರಮುಖ ಸಾಧ್ಯತೆಯನ್ನು ಹುಡುಕುತ್ತಿದೆ. ಮೊದಲು ಅದು ಸಂಸ್ಕೃತದಿಂದ ಪಡೆದುಕೊಂಡಿತು. ವಾಸ್ತವದಲ್ಲಿ ಈ ಬೆಳವಣಿಗೆ ಕನ್ನಡದ ಇತಿಹಾಸಪೂರ್ವದಲ್ಲೇ ನಡೆದುದು. ಹೀಗೆ ಪಡೆಯುತ್ತ ಅದು ತತ್ಸಮ ತದ್ಭವ ತಂತ್ರಗಳನ್ನು ಬಳಸಿಕೊಂಡಿತು. ತನ್ನ ಧ್ವನಿರಚನೆ, ಪದರಚನೆ ಇತ್ಯಾದಿಗಳಲ್ಲಿ ಹಲವು ಬದಲಾವಣೆಗಳನ್ನು ಮಾಡಿಕೊಂಡಿತು. ನಂತರ ಅರೇಬಿಕ್, ಪರ್ಷಿಯನ್, ಉರ್ದು, ಮರಾಠಿ ಹಾಗೂ ಸದ್ಯ ಇಂಗ್ಲೀಷಿನಿಂದ ಕನ್ನಡ ಪಡೆದುಕೊಂಡಿದೆ. ಪಡೆದುಕೊಳ್ಳುತ್ತಿದೆ. ಇಂಗ್ಲೀಷ್ ಕೇವಲ ಕನ್ನಡ ಪದಸಂಪತ್ತನ್ನು ಹೆಚ್ಚಿಸುತ್ತಿದೆ ಮಾತ್ರವಲ್ಲದೇ ವಾಕ್ಯರಚನೆಯ ಮೇಲೂ ಪ್ರಭಾವ ಬೀರುತ್ತಿದೆ. ನಾವು ಯಾವುದನ್ನು ಪ್ರಭಾವ ಎಂದು ಕರೆಯುತ್ತೆವೆಯೋ ಅದು ಭಾಷೆಯೊಂದು ತನ್ನ ವಿಕಸನಕ್ಕೋಸ್ಕರ ನಡೆಸುತ್ತಿರುವ ಹೊಂದಾಣಿಕೆ."

ಮೇಲೆ ಹೇಳಿದ ಎಲ್ಲ ವಿಷಯಗಳ ಜೊತೆಗೆ ನಿರಂತರವಾಗಿ ನಾವು ಮಾತೃಭಾಷೆಯಲ್ಲಿ ಬದುಕು ಕಟ್ಟಿಕೊಳ್ಳುವುತ್ತಿರುವುದು ಮಾತ್ರವಲ್ಲದೇ ಹೇಗೆ ನಾವು ನಮ್ಮ ಬದುಕನ್ನು ಮೇಲ್ದರ್ಜೆಗೆ ಏರಿಸಲು ನಿರಂತರವಾಗಿ ಪ್ರಯತ್ನ ನಡೆಸುತ್ತಿರುತ್ತವೆಯೋ ಹಾಗೆಯೇ ಭಾಷೆಯ ಉಳಿವಿಗೆ ಅದರ ಹೊಸ ಮತ್ತು ಆಧುನಿಕ ಸ್ವರೂಪವನ್ನು ಸ್ವೀಕರಿಸಿದರೆ ಅದರ ಬೆಳವಣಿಗೆ ನೂತನವಾದಂತೇ ಕಾಣಬಹುದು. ಭಾಷೆ ಮತ್ತು ಸಂಸ್ಕೃತಿ ಎಂದಿಗೂ ನಿಂತ ನೀರಾಗುವುದಿಲ್ಲ. ಅದು ಹರಿಯುವ ನೀರಾಗಬೇಕು. ನಮಸ್ಕಾರ

ಗ್ರಂಥ ಋಣ :

1. ಸಂಸ್ಕೃತಿ– ಡಿ.ವಿ.ಜಿ
2. ಭಾರತೀಯ ಸಂಸ್ಕೃತಿ– ಡಾ. ಎಸ್ ಶ್ರೀಕಂಠಶಾಸ್ತ್ರಿ
3. ಇನ್ನಷ್ಟು ಕನ್ನಡ– ಕೆ. ವಿ. ತಿರುಮಲೇಶ್
4. ಕನ್ನಡಪ್ರಜ್ಞೆಯ ಸುತ್ತಮುತ್ತ– ಸಂಪಾದನೆ– ಡಾ ಗೀತಾ ಡಿ.ಸಿ, ನಾಗರೇಖಾ ಗಾಂವಕರ

***

ನಾಟ್ಯಾಣ್ವಾಂಶಗಳ ಮೂಲಕ ಭಾಷಾ ಕೌಶಲಗಳ ಕಲಿಕಾ ಪ್ರಯೋಗ

(ಕಥಾವಾದ ಚಟುವಟಿಕೆಯನ್ನು ಅನುಲಕ್ಷಿಸಿ)

***

ದಿವಾಕರ ಜೆ.

ಸಂಶೋಧನಾರ್ಥಿ

ಪ್ರದರ್ಶನ ಕಲಾ ವಿಭಾಗ

ಬೆಂಗಳೂರು ವಿಶ್ವವಿದ್ಯಾಲಯ.

ಭರತನ 'ನಾಟ್ಯಶಾಸ್ತ್ರ' ಶಿಕ್ಷಾ ಗ್ರಂಥವಾಗಿದ್ದು ಭಾಷಾ ಕಲಿಕೆಯ ಪ್ರಕ್ರಿಯೆಯಲ್ಲಿ ನಾಟ್ಯಶಾಸ್ತ್ರ ಅನೇಕ ಪ್ರಾಯೋಗಿಕ ಅಂಶಗಳನ್ನು ತಿಳಿಸುತ್ತದೆ. ಹಾಗಾಗಿ ನಾಟಕಕಲೆಯಲ್ಲಿರುವ ಅಂಶಗಳನ್ನು ಅಣು–ಅಂಶಗಳ ರೂಪದಲ್ಲಿ ಗ್ರಹಿಸಿ, ಭಾಷಾ ಕೌಶಲಗಳ ಕಲಿಕೆಗೆ ಅನ್ವಯಿಸಿ ನೋಡುವ ಪ್ರಯತ್ನ ಇದಾಗಿದೆ. ಈ ಹಿನ್ನಲೆಯಲ್ಲಿ ಶಾಲಾ ಶಿಕ್ಷಕರು ಭಾಷಾ ಪಠ್ಯಗಳನ್ನು ಆಕರ್ಷಕವಾಗಿ ಮತ್ತು ಪ್ರಭಾವಶಾಲಿಯಾಗಿ ಕಲಿಸುವಲ್ಲಿ ಭಾಷಾ ಕೌಶಲಗಳ ಬಹುಮುಖಿ ಪಾತ್ರಗಳನ್ನು ಅರ್ಥಮಾಡಿಕೊಂಡು ನಾಟಕಕಲೆಯ ಪ್ರಾಯೋಗಿಕ ಅಂಶಗಳ ಮೂಲಕ ಭಾಷಾ ಕೌಶಲಗಳ ಕಲಿಕೆಯಾದರೆ, ಮಕ್ಕಳು ಉತ್ತಮವಾಗಿ ಭಾಷೆಯನ್ನು ಕಲಿಯುತ್ತಾರೆ.

ಇದನ್ನು ಪರೀಕ್ಷಿಸಲು ಮೈಸೂರಿನ ಕ್ಯಾಟ್ಸ್ ಸಂಸ್ಥೆಯ ರಂಗಸಂಪನ್ಮೂಲ ವ್ಯಕ್ತಿಗಳಾದ ನಾ. ಶ್ರೀನಿವಾಸ ಮತ್ತು ಸಂಸ್ಥೆಯ ಕಾರ್ಯಕ್ರಮ ನಿರ್ದೇಶಕರಾದ ಶ್ರೀಮತಿ ರಾಧಾ ಕೊಡಗು ಅವರು ಪ್ರಯೋಗಕಾರರಾಗಿ, ಬಳ್ಳಾರಿ ಜಿಲ್ಲೆ, ಸಿರುಗುಪ್ಪ ತಾಲ್ಲೂಕು, ಸಿರಿಗೇರಿ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, 8ನೇ ತರಗತಿಯ 50 ವಿದ್ಯಾರ್ಥಿಗಳನ್ನು ಪ್ರಯೋಗಕ್ಕೆ ಒಳಪಡಿಸಿ, ಅಧ್ಯಯನ ಮಾಡಿ ಸಂಶೋಧಿಸಿದ ವಿಷಯಗಳನ್ನು ಈ ಮುಂದಿನಂತೆ ತಿಳಿಯಬಹುದು.

ಪ್ರಮುಖ ಪದಗಳು : ನಾಟ್ಯಾಣ್ವಾಂಶ, ಶಿಕ್ಷಾಗ್ರಂಥ, ಕಲಿಕಾಮಾರ್ಗ, ಪ್ರಯೋಜ್ಯನರು, ಪ್ರಯೋಗಕಾರ, ಕೌಶಲ, ಶ್ರೇಣಿ ಮಾನಕ.

ಅಧ್ಯಯನದ ಉದ್ದೇಶ :

ಪ್ರಸ್ತುತ ಲೇಖನವು ಸಾಮಾನ್ಯ ಉದ್ದೇಶಗಳೊಂದಿಗೆ ಪ್ರಮುಖವಾಗಿ

ಭಾಷಾ ಕೌಶಲಗಳಾದ ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ, ಬರವಣಿಗೆ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಬೆಳಸುವುದಾಗಿದೆ ಅದರ ಜೊತೆಗೆ ಈ ಕೆಳಕಂಡ ನಿರ್ದಿಷ್ಟ ಉದ್ದೇಶಗಳನ್ನು ಒಳಗೊಂಡಿದೆ.

* ನಾಟ್ಯಾಣ್ವಾಂಶಗಳ ಮೂಲಕ ಭಾಷಾ ಕೌಶಲಗಳ ಕಲಿಕೆಯ ಉದ್ದೇಶಗಳನ್ನು ತಿಳಿಯುವುದು.
* ಕಥಾವಾದ ಚಟುವಟಿಕೆ ಮೂಲಕ ಭಾಷಾ ಕೌಶಲಗಳ ಕಲಿಕೆ ಉಂಟಾಗುತ್ತದೆ ಎಂಬುದನ್ನು ಕಂಡುಕೊಳ್ಳುವುದು.

ಅಧ್ಯಯನದ ಸ್ವರೂಪ ಮತ್ತು ವಿಧಾನ :

ಈ ಸಂಶೋಧನಾ ಲೇಖನವು ಸಂಶೋಧನಾ ಅಧ್ಯಯನದ ವಿಧಿ–ವಿಧಾನಗಳನ್ನು ಅನುಸರಿಸಿ, ನಾಟಕಕಲೆಯ ಅಂಶಗಳನ್ನು ಅಣುರೂಪದಲ್ಲಿ ಗ್ರಹಿಸಿ, ಪ್ರಯೋಗಾತ್ಮಕ ವಿಧಾನದ ಮೂಲಕ 8ನೇ ತರಗತಿ ಮಕ್ಕಳ ಭಾಷಾ ಕೌಶಲಗಳ ಕಲಿಕೆಗೆ ಪೂರಕವಾಗುವಂತಹ ಅಂಶಗಳನ್ನು ಚರ್ಚಿಸುತ್ತದೆ. ಮತ್ತು ಮಕ್ಕಳ ಭಾಷಾ ಕೌಶಲಗಳ ಅಭಿವ್ಯಕ್ತಿಗೆ ಪ್ರೇರಕವಾಗಿರುವ ಕಥಾ ಪ್ರಸ್ತುತಿಯ ವಿವಿಧ ಹಂತಗಳನ್ನು ತಿಳಿಸುವ, ಕಥೆಗಳನ್ನು ಚರ್ಚಿಸಿ–ವಿವೇಚಿಸುವ ಕೌಶಲಗಳನ್ನು ಕಲಿಸುವ ಮಾರ್ಗಗಳ ಕಡೆ ಬೆಳಕು ಹರಿಸುತ್ತದೆ.
ಪ್ರಸ್ತುತ ಲೇಖನವು ಪ್ರಾಯೋಗಿಕ ವಿಧಾನದ ಜೊತೆಗೆ ಮಾಧ್ಯಮಿಕ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ಮಾಧ್ಯಮಿಕ ಮೂಲಗಳಾದ ಭಾಷೆ, ಕನ್ನಡ ಭಾಷಾ ಕೌಶಲಗಳು, ನಾಟಕ ಕಲೆ, ರಂಗ ಪ್ರಯೋಗಕ್ಕೆ ಸಂಬಂಧಿಸಿದ ಸಂಶೋಧನಾ ಲೇಖನ ಪ್ರಬಂಧಗಳು, ಕೃತಿಗಳು, ನಾಟಕ ಕಲೆಯ ವಿಮರ್ಶಾತ್ಮಕ ಲೇಖನಗಳು, ಹಾಗೂ ಅಂತರ್ಜಾಲ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ :

ಈ ಅಧ್ಯಯನವು ಕನ್ನಡ ಭಾಷಾ ಕೌಶಲಗಳ ಕಲಿಕೆಗೆ ಪೂರಕವಾಗುವಂತಹ ನಾಟಕಕಲೆಯ ನಾಟ್ಯಾಧಾರಾಂಶಗಳ ಸಾರ ಕುರಿತು ಚರ್ಚಿಸುತ್ತದೆ. ನಾಟಕ ಕಲೆಯ ಪ್ರಾಯೋಗಿಕ ಅಣು–ಅಂಶಗಳ ಮುಖೇನ ಭಾಷಾ ಕೌಶಲಗಳ ಕಲಿಕೆಗೆ ಪೂರಕವಾಗುವಂತಹ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ನಾಟಕಕಲೆಯಲ್ಲಿರುವ ನಾಟ್ಯಾಂಶಗಳಾದ ಆಂಗಿಕ, ವಾಚಿಕ, ಆಹಾರ್ಯ, ಸಾತ್ವಿಕ, ಮತ್ತು ರಸಭಾವಾಂಶಗಳ ಅಳವಡಿಕೆ ಮೂಲಕ ಭಾಷಾ ಕೌಶಲಗಳ ಕಲಿಕಾಸಾಧ್ಯತೆಗಳನ್ನು ಗುರುತಿಸಿಕೊಳ್ಳುವುದು. ಹಾಗೂ ಇದನ್ನು ಕಂಡುಕೊಳ್ಳಲು ಬಳ್ಳಾರಿ ಜಿಲ್ಲೆಯ 8ನೇ ತರಗತಿಯಲ್ಲಿ ಓದುತ್ತಿರುವ 50 ವಿದ್ಯಾರ್ಥಿಗಳಿಗೆ ನಾಟಕ ಕಲೆಯ ಪ್ರಾಯೋಗಿಕ ಅಣು–ಅಂಶಗಳ ಕಾರ್ಯಗಾರವನ್ನು ಹಮ್ಮಿಕೊಂಡು, ಪ್ರಯೋಗಕ್ಕೆ ಅಳವಡಿಸಿ, ವಿಶ್ಲೇಷಣೆ, ಕಾರಣ ಮತ್ತು ಪರಿಣಾಮಗಳನ್ನು ತುಲನೆ ಮಾಡುವುದರ ಮೂಲಕ ಭಾಷಾ ಕೌಶಲಗಳ ಕಲಿಕೆಯನ್ನು ವಿಶ್ಲೇಷಿಸಲಾಗುವುದು.

ಇದುವರೆಗೂ ನಡೆದ ಅಧ್ಯಯನಗಳು :

ವಿದೇಶದಲ್ಲಿ ಮತ್ತು ನಮ್ಮ ದೇಶದಲ್ಲಿ ನಡೆದ ಅಧ್ಯಯನಗಳನ್ನು ಗಮನಿಸಿದರೆ ಭಾಷೇತರ ವಿಷಯಗಳಾದ ಗಣಿತ, ವಿಜ್ಞಾನ, ಜೀವಶಾಸ್ತ್ರ, ಸಮಾಜ ವಿಜ್ಞಾನಗಳಿಗೆ ಸಂಬಂಧಿಸಿದಂತೆ ಕೌಶಲಗಳನ್ನು ಕುರಿತಾಗಿ ಅಧ್ಯಯನಗಳು ನಡೆದಿದೆ. ಎಲ್ಲಾ ಅಧ್ಯಯನಗಳಲ್ಲಿ ಉಪಕ್ರಮ ಪರಿಣಾಮವಾಗಿ ಧನಾತ್ಮಕ ಅಂಶಗಳನ್ನು ಸಾಧಿಸಿರುವುದು ಕಂಡು ಬಂದಿದೆ.

ಭಾಷಾ ವಿಚಾರಗಳ ಬಗ್ಗೆ ವಿದೇಶ ಮತ್ತು ಭಾರತದ ಶೈಕ್ಷಣಿಕ ರಂಗದಲ್ಲಿ ಇಂಗ್ಲೀಷ್, ಸಂಸ್ಕೃತ, ಹಿಂದಿ ಭಾಷೆಗೆ ಸಂಬಂಧಿಸಿದಂತೆ ಭಾಷಾ ಕಲಿಕೆ ಕುರಿತಾಗಿ ಅಧ್ಯಯನಗಳು ನಡೆದಿದೆ. ಕನ್ನಡ ಮಾಧ್ಯಮದಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದಂತೆ ಅನೇಕ ಸಂಶೋಧನೆಗಳು ನಡೆದರೂ ನಾಟ್ಯಾಂಶಗಳ ಮೂಲಕ ಭಾಷಾ ಕೌಶಲಗಳ ಕಲಿಕೆ (ಕಥಾವಾದ ಚಟುವಟಿಕೆಯನ್ನು ಅನುಲಕ್ಷಿಸಿ) ಯಾವುದೇ ಸಂಶೋಧನಾ ಪ್ರಯೋಗಗಳು ನಡೆದಿರುವುದು ಕಂಡು ಬಂದಿರುವುದಿಲ್ಲ. ಹಾಗಾಗಿ ಪ್ರಸ್ತುತ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲು ನಿರ್ಧರಿಸಲಾಯಿತು.

ನಾಟಕಕಲೆಯ ಅಣ್ವಾಂಶಗಳ ಮೂಲಕ ಭಾಷಾ ಕೌಶಲಗಳ ಕಲಿಕೆ :

ನಾಟಕ ಸಂಕೀರ್ಣ ಕಲೆಯಾಗಿರುವುದರಿಂದ ಈ ಕಲೆಯ ಕಲಿಕಾಂಶಗಳನ್ನು ಅಣು ಅಂಶಗಳ ರೂಪದಲ್ಲಿ ಗ್ರಹಿಸಿ ವಿವಿಧ ಕ್ಷೇತ್ರಗಳ ಸಂವಹನಾ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಉತ್ತಮಗೊಳಿಸಲು ನಾಟಕ ಅಣು–ಅಂಶಗಳ ಕಲಿಕಾ ಮಾದರಿ ರೂಪಿಸಲಾಗಿದೆ.

ಸಂಗತಿಗಳು ಮತ್ತು ಘಟನೆಗಳನ್ನು ಗುರುತಿಸಲು ಹಾಗೂ ಅವುಗಳ ನಡುವೆ ಇರುವ ಸಂಬಂಧಗಳನ್ನು ಹುಡುಕಲು; ಭಾಷೆಯನ್ನು ಕಲಿಯುವವರಿಗೆ ನಿಜ ಜೀವನದ ಸ್ಥಿತಿ ಮತ್ತು ಅನುಭವಗಳನ್ನು ಗಳಿಸಲು ಅನುಕೂಲವಾಗುವಂತಹ ನಕಲುರೂಪಗಳನ್ನು ಸೃಷ್ಟಿಸಿಕೊಳ್ಳಲು ಈ ನಾಟಕ ಅಣುಅಂಶಗಳ ಕಲಿಕಾ ಮಾದರಿ ಸಹಾಯ ಮಾಡುತ್ತದೆ. ಹೀಗಾಗಿ ಯಾವುದೇ ಕ್ಷೇತ್ರದ ಕಲಿಕಾರ್ಥಿಗಳಿಗೆ ಅವರು ತಮ್ಮ ಭಾವನೆಗಳ ಅಭಿವ್ಯಕ್ತಿ ಮತ್ತು ಸಂವಹನವನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಹೊರ ಹಾಕಲು ನಾಟಕ ರೂಪದ ಆಟವು ಅಥವಾ ಆಟ ರೂಪದ ನಾಟಕವು ಶಕ್ತಿ ನೀಡುತ್ತದೆ.

ಪ್ರಯೋಗ – ಭಾಷಾ ಕೌಶಲಗಳ ಕಲಿಕೆಯಲ್ಲಿ ಕಥಾವಾದ (ಸಮೂಹ ಪ್ರಯೋಗ)

ಪ್ರಯೋಗ ಕೈಗೊಂಡ ದಿನಾಂಕ: 26–03–2024

ವಾರ : ಮಂಗಳವಾರ

ಸ್ಥಳ : 8ನೇ ತರಗತಿ ಕೊಠಡಿ, ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಸಿರಿಗೇರಿ.

ಪ್ರಯೋಗಕಾರರ ಹೆಸರು : ನಾ. ಶ್ರೀನಿವಾಸ, ಶ್ರೀಮತಿ ರಾಧಾ ಕೊಡಗು

ಪ್ರಯೋಗಕ್ಕೆ ಒಳಪಡಿಸಿದ ಗುರಿ ಗುಂಪು : 8ನೇ ತರಗತಿಯ 50 ವಿದ್ಯಾರ್ಥಿಗಳು

ಪ್ರಯೋಗಕ್ಕೆ ತೆಗೆದುಕೊಂಡ ಸಮಯ : 15 ರಿಂದ 20 ನಿಮಿಷಗಳು

ಗುರಿ : ನಾಟಕ ಪ್ರಕ್ರಿಯೆಯ ಅಣು–ಅಂಶವಾದ ಕಥೆಯ ಮೂಲಕ ಭಾಷಾ ಕೌಶಲಗಳ ಕಲಿಕೆ

ಪ್ರಯೋಗದ ಕಾರ್ಯಾಗಾರಗಳ ಸಂಖ್ಯೆ : ಒಂದು (5 ಹಂತದ ಚಟುವಟಿಕೆ)

ಬೇಕಾದ ಸಲಕರಣೆಗಳು : ನಿಲುಗಡಿಯಾರ, 8ನೇ ತರಗತಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ,
ಒಂದು ಅಭ್ಯಾಸ ಪುಸ್ತಕ, ಒಂದು ಲೇಖನಿ

ಕಥಾವಾದ :

ಎಲ್ಲರ ಮನೆಗಳಲ್ಲಿ ಕಥೆಗಳಿರುತ್ತವೆ. ಕಥೆಗಳು ಮನಸ್ಸಿಗೆ ಉಲ್ಲಾಸ, ನೆಮ್ಮದಿಯನ್ನುಂಟು ಮಾಡುತ್ತವೆ. ಕಥೆಗಳು ಎಲ್ಲರಿಗೂ ಇಷ್ಟವಾಗುತ್ತವೆ. ಕಥೆಗಳಲ್ಲಿ ಅನೇಕ ವಿಧಗಳಿವೆ. ಭಾಷಾ ಕೌಶಲಗಳ ಕಲಿಕೆಯಲ್ಲಿ ಕಥೆಗಳ ಪಾತ್ರ ಮುಖ್ಯವಾಗಿದೆ. ಶಿಕ್ಷಕರು ಪಾಠ ಬೋಧನ ಸಂದರ್ಭದಲ್ಲಿ ಕಥೆ ಹೇಳುತ್ತಿದ್ದರೆ; ವಿದ್ಯಾರ್ಥಿಗಳು ತುಂಬಾ ಆಸಕ್ತಿಯಿಂದ ಪಾಠವನ್ನು ಆಲಿಸುತ್ತಾರೆ. ನಾಟಕದಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕಥೆಗಳಿರುತ್ತವೆ. ಈ ಕಥೆಗಳ ಸುತ್ತ ನಾಟಕ ಸುತ್ತಿಕೊಂಡಿರುತ್ತದೆ. ಕಥೆಯಲ್ಲಿ ಬರುವ ಪಾತ್ರಗಳು ವಿಭಿನ್ನ ಮತ್ತು ವಿಶೇಷವಾಗಿರುತ್ತವೆ. ಈ ಕಥೆಯ ಅಣು–ಅಂಶವನ್ನು ತೆಗೆದುಕೊಂಡು ಪ್ರಯೋಗಕಾರ ಒಂದು ಕಥೆ ಹೇಳಿ, ಅದನ್ನು ಚರ್ಚೆಗೆ ಹಚ್ಚುತ್ತಾರೆ. ಇದರಿಂದ ಭಾಷಾ ಕೌಶಲಗಳನ್ನು ಗಳಿಸಿಕೊಳ್ಳುವ ಪ್ರಯತ್ನ ಮಾಡುವುದು.

ಕಾರ್ಯಾಗಾರದ ಪಕ್ಷಿನೋಟ

ಕ್ರ. ಸಂ	ಕಾರ್ಯಾಗಾರದ ಹಂತಗಳು	ತೆಗೆದುಕೊಂಡ ಸಮಯ
1	ಪೂರ್ವಸಿದ್ಧತೆ	60 ಸೆಕೆಂಡುಗಳು
2	ಕಥೆ ಹೇಳುವುದು	120 ಸೆಕೆಂಡುಗಳು
3	ಪಾತ್ರಗಳ ವಿಶ್ಲೇಷಣೆ	360 ಸೆಕೆಂಡುಗಳು
4	ವಾದ ಮಂಡನೆ	360 ಸೆಕೆಂಡುಗಳು
5	ಮುಕ್ತಾಯ	60 ಸೆಕೆಂಡುಗಳು
		ಒಟ್ಟು 960 ಸೆಕೆಂಡುಗಳು

ಪ್ರಯೋಗ ವಿಧಾನ : ಎಲ್ಲಾ ವಿದ್ಯಾರ್ಥಿಗಳನ್ನು ಆರಂಭದಲ್ಲಿ ಸಾಲಾಗಿ ಕುಳ್ಳಿರಿಸಿ, ಕಥಾ ಪ್ರಸ್ತುತಿ ನಂತರ ಗುಂಪುಗಳಾಗಿ ವಿಂಗಡಿಸಿ, ಪ್ರಯೋಗ ಕೈಗೊಳ್ಳುವುದು. ಇದಕ್ಕೆ ಸಂಬಂಧಿಸಿದ ವಿವಿಧ ಹಂತಗಳನ್ನು ಈ ಕೆಳಗಿನಂತೆ ತಿಳಿಯುವುದು.

ಹಂತ – 1: ತರಗತಿಯ ಎಲ್ಲಾ ವಿದ್ಯಾರ್ಥಿಗಳು, ಅರಾಮಸ್ಥಿತಿಯಿಂದ ಎಚ್ಚರದ ಸ್ಥಿತಿಗೆ ಬರುವುದು.

ಹಂತ – 2: ಈ ಹಂತದಲ್ಲಿ ಪ್ರಯೋಜ್ಯನರು, ಪ್ರಯೋಗಕಾರನ ಸೂಚನೆಯಂತೆ, ಮೌನಸ್ಥಿತಿಯಲ್ಲಿ ಕುಳಿತುಕೊಳ್ಳುವರು. ಪ್ರಯೋಗಕಾರ

ಕಥೆಯನ್ನು ಹಾವಭಾವ, ಧ್ವನಿಯ ಏರಿಳಿತಗಳೊಂದಿಗೆ ಎಲ್ಲರಿಗೂ ಕೇಳಿಸುವಂತೆ ಹೇಳುವುದು. ಪ್ರಯೋಜ್ಯನರು ಕಥೆಯನ್ನು ಆಲಿಸುವರು.

ಹಂತ – 3: ಈ ಹಂತದಲ್ಲಿ ಪ್ರಯೋಗಕಾರ ಕಥೆಯಲ್ಲಿ ಬರುವ ಅತೀ ಕೆಟ್ಟ ಪಾತ್ರ ಯಾವುದು? ಎಂದು ಪ್ರಶ್ನಿಸಿ, ಉತ್ತರಗಳನ್ನು ಆಧರಿಸಿ, ವಿವಿಧ ಗುಂಪುಗಳನ್ನು ಮಾಡುವನು.

ಹಂತ – 4: ಈ ಹಂತದಲ್ಲಿ ಆರು ನಿಮಿಷದೊಳಗೆ ಪ್ರಯೋಜ್ಯನರು, ಪ್ರಯೋಗಕಾರನ ಸೂಚನೆಯಂತೆ, ತಮ್ಮ ವಾದವನ್ನು ಮಂಡಿಸುವರು. ಈ ಚಟುವಟಿಕೆಯಲ್ಲಿ ಪರಸ್ಪರ ಚರ್ಚೆ, ಕಾರಣ, ಪರಿಣಾಮಗಳ ಬಗ್ಗೆ ವಾದ ಮಂಡಿಸುವುದು.

ಹಂತ – 5: ಈ ಹಂತದಲ್ಲಿ ಎಲ್ಲರ ವಾದವನ್ನು ಕೇಳಿ ಪ್ರಯೋಗಕಾರ ಸಮಾಧಾನದ ಉತ್ತರ ನೀಡಿ, ಎಲ್ಲರನ್ನೂ ಅಭಿನಂದಿಸಿ ಮುಕ್ತಾಯಗೊಳಿಸುವನು.

ಪ್ರಯೋಜ್ಯನರ ತಂಡಗಳು ಪಡೆದ ಶ್ರೇಣಿಮಾನಕಗಳ ಕೊಷ್ಟಕ :

ಕಥಾವಾದ			
ಕ್ರ. ಸಂ.	ತಂಡಗಳು	ಪಾತ್ರ ವಿಶ್ಲೇಷಣೆ	ವಾದ ಮಂಡಣೆ
1	ರಂಗು	ಸಾಧಾರಣ	ಉತ್ತಮ
2	ಕಾಯ	ಸಾಧಾರಣ	ಸಾಧಾರಣ
3	ವೃತ್ತ	ಉತ್ತಮ	ಸಾಧಾರಣ
4	ಬಣ್ಣ	ಉತ್ತಮ	ಉತ್ತಮ

ಅಂತರಾವಲೋಕನ:

ಈ ಚಟುವಟಿಕೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಲ್ಗೊಂಡರು. ತಂಡಗಳಲ್ಲಿ ಇರುವುದರಿಂದ ತಂಡದ ಎಲ್ಲಾ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಕಥೆಯಲ್ಲಿ ಬರುವ ಪಾತ್ರಗಳು ಹಲವಾರು ಆದರೆ ಸನ್ನಿವೇಶಕ್ಕೆ ತಕ್ಕಂತೆ ಪಾತ್ರಗಳ ಸ್ವಭಾವವಿರುತ್ತದೆ. ಅದರಲ್ಲಿ ಅತೀ ಕೆಟ್ಟ ಮತ್ತು ಅತೀ ಒಳ್ಳೆಯ ಪಾತ್ರ ಯಾವುದು ಎಂದು ನಿರ್ದರಿಸಲು ಕಷ್ಟ ಸಾಧ್ಯವಾಯಿತು. ಆದರೂ ವಿದ್ಯಾರ್ಥಿಗಳ ತಿಳಿವಿನ ಮಟ್ಟದಲ್ಲಿ ಉತ್ತರಿಸಿದರು. ಎಲ್ಲಾ ತಂಡಗಳು ಉತ್ಸಾಹದಿಂದ ಭಾಗವಹಿಸಿದರು. ವಾದ ಮಂಡಣೆಯಲ್ಲಿ ಕೆಲವು ಅಂಶಗಳು ಪುನರಾವರ್ತನೆಯಾಯಿತು. ಪಾತ್ರಗಳ ವಿಶ್ಲೇಷಣೆಯ ನೋಟ ವಿಭಿನ್ನವಾಗಬಹುದಿತ್ತು. ಆದರೂ ವಿದ್ಯಾರ್ಥಿಗಳು ಉತ್ತಮವಾಗಿ ತಮ್ಮ ವಾದವನ್ನು ಮುಂದಿಟ್ಟರು. ವಿದ್ಯಾರ್ಥಿಗಳು ಪ್ರತಿ ಹಂತದಲ್ಲೂ ಕುತೂಹಲಭರಿತರಾಗಿ ಈ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಕಥೆ ಆಲಿಸುವ ಸಮಯದಲ್ಲಿ ಮೂರು ವಿದ್ಯಾರ್ಥಿಗಳ ಮುಖಭಾವ ಸಪ್ಪೆಯಾಗಿತ್ತು. ಕಾರಣ ಕಥೆಯಲ್ಲಿ ಬಂದ ಪದಗಳು ಅರ್ಥವಾಗಲಿಲ್ಲ ಎಂಬ ಅಭಿಪ್ರಾಯ ಕಥೆಯ ನಂತರ ಹಂಚಿಕೊಂಡರು.

ಮುನ್ನೆಚ್ಚರಿಕೆಗಳು:

ಈ ಎಲ್ಲಾ ಹಂತಗಳಲ್ಲಿ ಪ್ರಯೋಜ್ಯನರು, ಪ್ರಯೋಗಕಾರನ ಸೂಚನೆಗಳನ್ನು ಸರಿಯಾಗಿ ಪಾಲಿಸತಕ್ಕದ್ದು.

ಪ್ರಯೋಗವನ್ನು ಆರಂಭಿಸಿದ ಮೇಲೆ ಪ್ರಯೋಜ್ಯನರಿಗೆ ಮಧ್ಯದಲ್ಲಿ ಯಾವುದೇ ಅಡೆತಡೆಯನ್ನುಂಟು ಮಾಡಬಾರದು.

ಚರ್ಚೆ, ವಿಶ್ಲೇಷಣೆ, ನಿರ್ಣಯ:

ಪ್ರಯೋಜ್ಯನರು ನಾಲ್ಕು ತಂಡಗಳಾಗಿ ವಿಂಗಡಣೆಯಾದ ನಂತರ ಪಡೆದ ಶ್ರೇಣಿಮಾನಕಗಳ ಕೊಷ್ಟಕವನ್ನು ಗಮನಿಸಿದ ಮೇಲೆ ರಂಗು, ವೃತ್ತ ತಂಡಗಳು ಎರಡು ಹಂತಗಳಲ್ಲಿ ಸಾಧಾರಣ ಮತ್ತು ಉತ್ತಮ ಮಾನಕಗಳನ್ನು ಪಡೆದರೆ, ಕಾಯ ತಂಡ ಎರಡು ಹಂತಗಳಲ್ಲಿ ಸಾಧಾರಣ, ಬಣ್ಣ ತಂಡ ಎರಡು ಹಂತಗಳಲ್ಲಿ ಉತ್ತಮ ಮಾನಕಗಳನ್ನು ಪಡೆದುಕೊಂಡಿದೆ.

ರಂಗು, ಕಾಯ ತಂಡಗಳು ಪಾತ್ರ ವಿಶ್ಲೇಷಣೆಯಲ್ಲಿ ಸಾಧಾರಣ ಮಾನಕಗಳನ್ನು ಗಳಿಸಿಕೊಂಡಿದೆ. ವೃತ್ತ ಮತ್ತು ಬಣ್ಣ ತಂಡಗಳು ಉತ್ತಮ ಮಾನಕಗಳನ್ನು ಗಳಿಸಿಕೊಂಡಿದೆ. ವಾದ ಮಂಡಣೆಯಲ್ಲಿ ಬಣ್ಣ ಮತ್ತು ರಂಗು ತಂಡಗಳು ಉತ್ತಮ ಮಾನಕಗಳನ್ನು ಪಡೆದುಕೊಂಡಿದೆ.

ಕಾಯ ಮತ್ತು ವೃತ್ತ ತಂಡಗಳು ಸಾಧಾರಣವಾದ ಮಾನಕಗಳನ್ನು ಪಡೆದುಕೊಂಡಿದೆ. ಸಾಧಾರಣವಾದ ಮಾನಕಗಳನ್ನು ಪಡೆದ ತಂಡಗಳು ವಾದ ಮಂಡಣೆಯಲ್ಲಿ ಇನ್ನೂ ಹೆಚ್ಚಿನ ಅಂಶಗಳನ್ನು ಕಲೆಹಾಕುವುದು ಅವಶ್ಯಕವಾಗಿತ್ತು. ಅವರ ಅರಿವಿನ ಮಟ್ಟ ಇನ್ನೂ ವಿಸ್ತರಿಸಬಹುದಾಗಿತ್ತು. ಆದರೆ ಅವರು ಅಲ್ಲಿಗೆ ವಿರಾಮ ನೀಡಿದರು. ಒಂದು ತಂಡ ಪಾತ್ರಗಳ ವಿಶ್ಲೇಷಣೆಯಲ್ಲಿ ಸರಿಯಾಗಿ ಅರ್ಥಮಾಡಿಕೊಳ್ಳದ ಕಾರಣ ಅವರ ವಾದ ಅಪೂರ್ಣವಾಯಿತು. ಇಲ್ಲಿ ಅವರ ಮಾತೃಭಾಷೆ, ಅವರ ಮನೆ ಪರಿಸರ ಪರಿಣಾಮ ಬೀರಿರಬಹುದು.

ಈ ಚಟುವಟಿಕೆ ಒಮ್ಮೆ ಮಾತ್ರ ನಡೆಯಿತು. ಒಂದಕ್ಕಿಂತ ಹೆಚ್ಚುಬಾರಿ ನಡೆದಿದ್ದರೆ ಇನ್ನೂ ಮಾನಕಗಳಲ್ಲಿ ವ್ಯತ್ಯಾಸವಾಗಬಹುದಿತ್ತು. ಈ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳ ಮಧ್ಯೆ ಸಹಕಾರ ಕಲಿಕೆ, ಭಾಷಾ ಕೌಶಲಗಳ ಪ್ರದರ್ಶನ, ತಾರ್ಕಿಕ ಶಕ್ತಿ, ವಾದ ಮಂಡಣೆ ಶೈಲಿ, ಕಲ್ಪನಾಶೀಲತೆ, ಅನ್ವಯಿಸುವ ಕೌಶಲ ಇತ್ಯಾದಿ ಕೌಶಲಗಳು ವಿಭಿನ್ನ ಆಯಾಮ ಪಡೆದಿದ್ದು ಕಂಡು ಬಂದಿದೆ.

ವಿದ್ಯಾರ್ಥಿಗಳು ಕಥೆ ಕೇಳುವ ಸಂದರ್ಭದಲ್ಲಿ ಕಥೆಯ ನಿರೂಪಣಾ ಕ್ರಮವನ್ನು ಆಲಿಸುವುದು, ಪಾತ್ರ ವಿಶ್ಲೇಷಣೆ ಮಾಡುವ ಸಂದರ್ಭದಲ್ಲಿ ಓದು, ಬರವಣಿಗೆ ಕೌಶಲಗಳ ಕಲಿಕೆ ಮತ್ತು ಪರಸ್ಪರ ಚರ್ಚೆ, ವಾದ ಮಂಡಣೆಯ ಸಮಯದಲ್ಲಿ ಮಾತುಗಾರಿಕೆ ಕೌಶಲಗಳ ಕಲಿಕೆಯಾಗುತ್ತಿರುತ್ತದೆ. ಇದೇ ರೀತಿ ಒಂದಕ್ಕಿಂತ ಹೆಚ್ಚು ಸಲ ಕಥೆ ಕೇಳಿ, ಹೇಳುವ, ಪರಸ್ಪರ ಚರ್ಚಿಸುವ ಚಟುವಟಿಕೆ ನಡೆದರೆ, ವಿದ್ಯಾರ್ಥಿಗಳ ಭಾಷಾ ಕೌಶಲಗಳ ಕಲಿಕೆಯಾಗುತ್ತದೆ ಎಂದು ಈ ಪ್ರಯೋಗದಿಂದ ಸಾಕ್ಷೀಕರಿಸಬಹುದು.

ವಿದ್ಯಾರ್ಥಿಗಳು ವಿಷಯ ಸಂಗ್ರಹಿಸಿ, ಅದನ್ನು ಪರಿಷ್ಕರಿಸಿದ ರೀತಿ ಉತ್ತಮವಾಗಿತ್ತು. ವಿಷಯ ವಿಸ್ತರಣೆ ಮತ್ತು ವಾದ ಮಂಡಿಸುವಲ್ಲಿ ಸಂಶೋಧಕರ ಪಾತ್ರ ನಿರ್ವಹಿಸಿದ್ದು ಕಂಡು ಬಂದಿದೆ. ಕುತೂಹಲದಿಂದ ಸಂಪೂರ್ಣ ವಿಷಯ ಸಂಗ್ರಹದ ವಿವಿಧ ಮಾರ್ಗಗಳ ಬಗ್ಗೆ ಪ್ರಯೋಗಕಾರರ ಬಳಿ ಚರ್ಚಿಸಿರುವುದು ಉಲ್ಲೇಖಾರ್ಹವಾಗಿದೆ.

ಪ್ರಯೋಗಕ್ಕೆ ಒಳಗಾದ ಎಲ್ಲಾ ಸದಸ್ಯರುಗಳು ಕಥೆ ಆಲಿಸುವ ಸಮಯದಲ್ಲಿ ಟಿಪ್ಪಣಿ ಮಾಡಿಕೊಂಡಿದ್ದು ಅವರ ವಾದ ಮಂಡಣೆಯಲ್ಲಿ ಸಹಾಯಕ್ಕೆ ಬಂದಿದೆ. ವಾದ ಮಂಡಣೆಯ ರೀತಿನೀತಿಗಳ ಬಗ್ಗೆ ಕಾರ್ಯಕಾರಣಗಳ ಬಗ್ಗೆ ವಿಶೇಷ ಕಾಳಜಿವಹಿಸಿದ್ದು ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ತೋರಿಸುತ್ತದೆ. ಇದನ್ನು ಮುಂದುವರಿಸಿದರೆ ಮುಂದಿನ ದಿನಗಳಲ್ಲಿ ಉತ್ತಮ ಕಲಿಕೆಯಾಗಬಹುದು. ವಾದ ಮಂಡಣೆಯ ಸಂದರ್ಭದಲ್ಲಿ ಎದುರಾಳಿಗಳ ವಾದವನ್ನು ಶಾಂತರೀತಿಯಲ್ಲಿ ಆಲಿಸಿ, ಕೆಲ ಉತ್ತಮಾಂಶಗಳನ್ನು ಉಲ್ಲೇಖಿಸಿ, ನುಡಿಗಟ್ಟುಗಳನ್ನು ಪ್ರಯೋಗಿಸಿದ್ದು ಗುರುತಿಸಬಹುದು.

ಒಟ್ಟಾರೆಯಾಗಿ ಕಥಾವಾದ ಚಟುವಟಿಕೆ ವಿದ್ಯಾರ್ಥಿಗಳ ಭಾಷಾ ಕೌಶಲಗಳ ಕಲಿಕೆಗೆ ಪ್ರೇರಕ ಮತ್ತು ಪೂರಕವಾಗಿದೆ. ಇದರಿಂದ ತರಗತಿ ವಾತಾವರಣದಲ್ಲಿ ಸಹಕಾರ ಕಲಿಕೆ, ಪರಸ್ಪರ ಹೊಂದಾಣಿಕೆ, ಕೊಡುಕೊಳ್ಳುವಿಕೆ, ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳನ್ನು ಬೆಳಸಿಕೊಳ್ಳಲು ಸಹಾಯಕವಾಗಿದೆ.

ಅಧ್ಯಯನದ ಫಲಿತಗಳು:

ಪ್ರಸ್ತುತ ಅಧ್ಯಯನದ ಫಲಿತಗಳಲ್ಲಿ ಕಂಡು ಬಂದ ಅಂಶಗಳಲ್ಲಿ ಪ್ರಮುಖವಾಗಿ ವಿದ್ಯಾರ್ಥಿಗಳ ಭಾಷಾ ಕೌಶಲಗಳ ಕಲಿಕಾ ಸಾಮಾರ್ಥ್ಯ ಹೆಚ್ಚಾಗುತ್ತಿರುವುದು ಜೊತೆಗೆ ಈ ಕೆಳಗಿನ ಅಂಶಗಳನ್ನು ಗುರುತಿಸಬಹುದು.

* ಕಲಿಕಾರ್ಥಿಗಳು ವಸ್ತು–ವಿಷಯ–ಘಟನೆಗಳನ್ನು ಕಥೆಯ ರೂಪದಲ್ಲಿ ನಿರೂಪಿಸುವ ಸಾಮರ್ಥ್ಯಗಳಿಸಿಕೊಳ್ಳುತ್ತಾರೆ.

* ಸೀಮಿತ ಸ್ಥಳದಲ್ಲಿ ಗರಿಷ್ಟ ಸೃಜನಶೀಲ ಬಳಕೆಯಾಗುತ್ತದೆ. ಮತ್ತು ಹೇಳುಗ, ಮಾಡುಗ ಹಾಗೂ ಕೇಳುಗರಿಗೂ ಅನುಭವಾಧಾರಿತ ಅಂತರಕ್ರಿಯಾತ್ಮಕ ಸಂವಹನೆಗೆ ಸಹಕರಿಸುತ್ತದೆ.

* ನಾಟಕಕಲೆಯ ಅಣು–ಅಂಶಗಳು ಅಭಿವ್ಯಕ್ತಿಯ ಪ್ರತೀಕ, ನವರಸ, ನವಭಾವಗಳ ಪ್ರಕಟಣೆಗೆ, ಕಲ್ಪನೆ, ನಾವೀನ್ಯ, ಸ್ವಂತಿಕೆ, ಆವಿಷ್ಕಾರಗುಣಕ್ಕೆ ಸಹಾಯ ಮಾಡುತ್ತದೆ.

* ಭಾಷಾ ಕೌಶಲಗಳನ್ನು ಕಲಿಯಲು ಮತ್ತು ವೈಯಕ್ತಿಕ ಅಥವಾ ಸಾಮಾಜಿಕ ಸಮಸ್ಯೆಗಳ ಕುರಿತಾಗಿ ಪರಿಣಾಮಕಾರಿಯಾಗಿ ಆಲೋಚಿಸುವ, ಆಲೋಚಿಸಿದ್ದನ್ನು ಅಭಿವ್ಯಕ್ತಿಸುವ ದಾರಿಯನ್ನು ಕಂಡುಕೊಳ್ಳಲು ಈ ಮಾದರಿಯು ಸಹಾಯ ಮಾಡುತ್ತದೆ.

ಉಪಸಂಹಾರ :

ಭಾಷಾ ಕಲಿಕೆಯಲ್ಲಿ ನಾಟಕಕಲೆ ಮೂಲಭೂತ ಚಟುವಟಿಕೆಯಾಗಿದೆ. ಭಾಷಾ ಕೌಶಲಗಳಾದ ಆಲಿಸುವ, ಮಾತುಗಾರಿಕೆ,

ಓದುಗಾರಿಕೆ, ಬರವಣಿಗೆಯಲ್ಲಿ ನಾಟಕಕಲೆಯ ಕಥಾಣ್ವಾಂಶಗಳನ್ನು ಅಳವಡಿಸಿಕೊಂಡು ಕಲಿಕಾಪ್ರಕ್ರಿಯೆ ನಡೆದರೆ ಮಕ್ಕಳ ಕಲಿಕಾ ಸಾಮರ್ಥ್ಯ ಹೆಚ್ಚಾಗುತ್ತದೆ. ಆಂಗಿಕ ಭಾಷೆ, ಶಾಬ್ದಿಕ ಗ್ರಹಿಕೆ, ಆಲಿಸುವ, ಓದುವ, ಗ್ರಹಿಸುವ, ಮಾತನಾಡುವ ಕೌಶಲ, ಮನನಮಾಡುವ, ಕಲ್ಪಿಸಿಕೊಳ್ಳುವ ಕೌಶಲ, ಹೊಂದಾಣಿಕೆ, ಅಭಿವ್ಯಕ್ತಿ ಕೌಶಲದ ಅಭಿವೃದ್ಧಿ ಮತ್ತು ಆಟ, ಮನರಂಜನೆ, ವಿಷಯಜ್ಞಾನ, ಸೃಜನಶೀಲತೆ, ಭಾಷಾ ಸಾಮರ್ಥ್ಯ, ಸಾಮಾಜಿಕ ಸಂವಹನ, ಕೌಶಲಗಳ ಗಳಿಕೆಯಲ್ಲಿ ಈ ಅಧ್ಯಯನ ಪ್ರಮುಖವಾಗಿದೆ ಎಂದು ತಿಳಸಬಹುದು.

ಪರಾಮರ್ಶನ ಗ್ರಂಥಗಳು :

1. ನಾರಾಯಣ ಕೆ. ವಿ. (ಸಂ), 2019, ಭಾಷೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ವಿವಿಧ ಲೇಖಕರು, 2014, ರಾಷ್ಟ್ರೀಯ ವಿಚಾರ ಸಂಕಿರಣ ಶಾಲಾ ಶಿಕ್ಷಣದಲ್ಲಿ ದೇಶಭಾಷೆಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರಿ ಬೆಂಗಳೂರು.
3. ಪ್ರೊ. ಎಂ. ಅಬ್ದುಲ್ ರೆಹಮಾನ್ ಪಾಷ, 2023, ಕನ್ನಡ ಭಾಷಾ ಕೌಶಲ ಕಲಿಕೆ–ಬೋಧನೆ, ಕ್ರಿಯಾ ಮಾಧ್ಯಮ ಪ್ರಕಾಶನ, ಬೆಂಗಳೂರು.
4. ಕೃಷ್ಣಶಾಸ್ತ್ರೀ ಎ. ಆರ್. 1990, ಸಂಸ್ಕೃತ ನಾಟಕ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
5. ಎನ್. ಎಸ್. ವೆಂಕಟರಾಮ್, 2021, ರಂಗಭೂಮಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
6. Alavander R., 1992, A study of selected variables relating to English reading competency of high school pupils, 5th survey of research in education. Vol. II,
7. Article: Gulnar Guliyeva, 2011, The Role of Drama in Language Teaching, Language Teaching coordinating unit,Qafqaz University, Azerbaijan
8. ರಂಗತಜ್ಞ ನಾ. ಶ್ರೀನಿವಾಸ ಅವರೊಂದಿಗೆ ನಡೆದ ಚರ್ಚಾ ಮಾಹಿತಿ.

ಅನುಬಂಧ – 1 ಛಾಯಾ ಚಿತ್ರಗಳು:

ಕಥೆ ಆಲಿಸುತ್ತಿರುವುದು

ಕಥೆಯಲ್ಲಿ ಬಂದ ಪಾತ್ರಗಳ ಬಗ್ಗೆ ಚರ್ಚಿಸುತ್ತಿರುವುದು

ವಾದ ಮಂಡಣೆಯಲ್ಲಿ ತೊಡಗಿರುವುದು

ಮಾರ್ಗದರ್ಶಕರು :

ಡಾ. ಶಿವಣ್ಣ ಎಸ್.

ಸ. ಪ್ರಾಧ್ಯಾಪಕರು, ಪ್ರದರ್ಶನ ಕಲಾ ವಿಭಾಗ

ಬೆಂಗಳೂರು ವಿಶ್ವವಿದ್ಯಾಲಯ.

ಸಂಪನ್ಮೂಲ ವ್ಯಕ್ತಿಗಳು : ನಾ. ಶ್ರೀನಿವಾಸ, ರಾಧ ಕೊಡಗು ಕ್ಯಾಟ್ಸ್ ಸಂಸ್ಥೆ, ಮೈಸೂರು.

ಮಹಿಳಾ ಅಂಕಣ ಬರಹಗಳಲ್ಲಿ ಸಾಮಾಜಿಕ ಚಿಂತನೆ

***

ಭವ್ಯ ಎಂ. ಎಸ್
ಸಂಶೋಧಕರು, ಕನ್ನಡ ವಿಭಾಗ
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
bhavyams645@gmail.com

ಕಾಲದಿಂದ ಕಾಲಕ್ಕೆ ಸಮಾಜವನ್ನು ಬಾಧಿಸುತ್ತಾ ಬಂದಿರುವ ಅನೇಕ ಸಮಸ್ಯೆಗಳು ಇಂದು ಸಹ ಕಾಡುತ್ತಲೇ ಇದೆ. ಅದರಲ್ಲಿ ಬಹುಮುಖ್ಯವಾದ ಸಮಸ್ಯೆಗಳೆಂದರೆ ಬಾಲ್ಯವಿವಾಹ, ಹೆಣ್ಣು ಭ್ರೂಣಹತ್ಯೆ, ಲಿಂಗ ಅಸಮಾನತೆ, ವರದಕ್ಷಿಣೆ, ಅತ್ಯಾಚಾರ, ಕೌಟುಂಬಿಕ ಹಿಂಸೆ, ಕುಟುಂಬದ ಪಾಲನೆ–ಪೋಷಣೆ, ಅಧಿಕಾರಶಾಹಿ, ಲಿಂಗಾಧಾರಿತ ಶ್ರಮ ವಿಭಜನೆ, ಲೈಂಗಿಕ ಹಿಂಸೆ ಮೊದಲಾದವು ಮಹಿಳೆಯರ ಬದುಕು ಸಹಜವಾದ ರೀತಿಯಲ್ಲಿ ಸಾಗದಂತೆ ತಡೆಯೊಡ್ಡುತ್ತಲೇ ಇವೆ. ಆಧುನಿಕ ಕಾಲಘಟ್ಟದಲ್ಲಿಯು ಹೊಸ ಹೊಸ ರೂಪಗಳಲ್ಲಿ, ಅದೊಂದು ಮಹಾವಿಕೃತಿಯಾಗಿ ಸಮಾಜವನ್ನು ಆವರಿಸಿಕೊಳ್ಳುತ್ತಿರುವುದು ಅಘಾತಕಾರಿ ಸಂಗತಿಯಾಗಿದೆ.

ಮಹಿಳಾ ಸಮಾನತೆಯೆಂದರೆ ಪುರುಷ ದ್ವೇಷವಲ್ಲ. ಬದಲಿಗೆ ಎಲ್ಲರನ್ನೂ ತಾರತಮ್ಯ ಹಾಗೂ ಭೇದಕ್ಕೆಡೆಯಿಲ್ಲದಂತೆ ಒಳಗೊಳ್ಳುವ ಸಾಮಾಜಿಕ ಚಿಂತನೆಯಾಗಿದೆ. ಮಹಿಳೆ ಮತ್ತು ಪುರುಷರಿಬ್ಬರಿಗೂ ಸ್ವಾತಂತ್ರ್ಯ ಹೊಂದಲು, ಬದುಕಿನ ಆಯ್ಕೆಗಳನ್ನು ಮಾಡಿಕೊಳ್ಳಲು ಸಮಾನ ಹಕ್ಕುಗಳಿವೆ. ಆರೋಗ್ಯವಂತ ಸಮಾಜದ ಬೇರುಗಳಂತಿರುವ ಮಹಿಳೆ ಮತ್ತು ಪುರುಷರಿಬ್ಬರೂ ಸಮಾನ ಗೌರವ ಪಡೆಯುವಂತಾಗಬೇಕು. ಸಮಾಜದ ಸಂಪನ್ಮೂಲಗಳ ಸಮಾನ ಹಂಚಿಕೆಯಾಗಿ, ಸಮಾನತೆಯ ಭಾವನೆಗಳು ದಿನನಿತ್ಯದ ಬದುಕಿನ ಭಾಗವಾಗಬೇಕೆಂಬ ಹಿನ್ನೆಲೆಯಲ್ಲಿಯೇ ಸಾಮಾಜಿಕ ಚಿಂತನೆಯುಳ್ಳ ಲೇಖನಗಳು ಇಲ್ಲಿನ ಕೇಂದ್ರವಾಗಿದೆ.

ಎಲ್ಲಾ ಕೆಲಸಗಳು ಸಮಾನ ಎಂಬ ಅರಿವಿನ ನಿಲುವಲ್ಲಿ ರಚನಾತ್ಮಕ ಬದಲಾವಣೆಯಾಗುತ್ತದೆ. ಪೌರ ಕಾರ್ಮಿಕರ ಶುಚಿತ್ವದ

ಕಾಯಕವನ್ನು ಕೀಳು ಎಂದು ಭಾವಿಸಿ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತಿದೆ. ಉಪಕಾರ ಮಾಡಿದವರನ್ನು ಕೀಳರಿಮೆಗೆ ನೂಕಿ ಹಿಂಸಿಸಬಾರದು. ಕರ್ಮಗಳಲ್ಲಿ ಮೇಲು ಕೀಳು ಎಂಬುದು ಇಲ್ಲ ಎಂಬ ಅಶ್ವತ್ಥರ ಧೋರಣೆಯನ್ನು ಕುರಿತು ಎಚ್.ಎಸ್. ಸುಜಾತ ಅವರು ಹೇಳುವಾಗ ನಮ್ಮ ನಿತ್ಯ ಜೀವನ ನಿರ್ಮಲವಾಗಿರಬೇಕಾದರೆ, ನಾವು ಮಾಡುವ ಕೆಲಸಗಳಲ್ಲಿ ತಾರತಮ್ಯ, ಭೇದಭಾವನೆಗಳು ಇರಬಾರದೆಂಬ ಆಶಯ 'ಬಿಂದು' ಅಂಕಣದಲ್ಲಿ ಎದ್ದು ಕಾಣುತ್ತದೆ.

ಸಮಾಜದಲ್ಲಿನ ಜಾತಿ ವ್ಯವಸ್ಥೆ ಬಡವನನ್ನು ಕಡುಬಡವನನ್ನಾಗಿಸುತ್ತದೆ. ಬ್ಯಾಂಕಿನಿಂದ ಕೆಳಜಾತಿಯ ಗುಂಪಿಗೆ ಸಾಲಕೊಟ್ಟು ಆತ ಜೀವನ ಮಾಡಲು ನೆರವಾದರು. ಆದರೆ ಆ ಹಣದಿಂದ ಎಮ್ಮೆ ಕೊಂಡ ವ್ಯಕ್ತಿ ಮೇಲೇರಲಾರದೆ ಹೋದ. ಅದಕ್ಕೆ ಕಾರಣ ಸಮಾಜದಲ್ಲಿನ ಜಾತಿ ವ್ಯವಸ್ಥೆ. ಜಾತಿಹೀನನ ಮನೆಯ ಹಾಲನ್ನು ಕೊಳ್ಳುವವರಿಲ್ಲದೆ ಸಂಕಷ್ಟಕ್ಕೆ ಸಿಲುಕಿದ. ಇಲ್ಲಿ ಸಮಾಜದ ಮೂಲಭೂತ ಪರಿವರ್ತನೆಯೇ ಆಗದ ಮೇಲೆ, ಜಾತಿಯ ಈ ಮೌಢ್ಯವನ್ನು ಹೇಗೆ ನಿವಾರಿಸಿಕೊಳ್ಳಬಲ್ಲೆವು? ಸಮಾಜದ ಪರಿವರ್ತನೆ ಎಂದರೆ ಮನುಷ್ಯನ ಆಲೋಚನಾ ಶೈಲಿಯಲ್ಲಾಗುವ ಸಮಗ್ರ ಪರಿವರ್ತನೆ. ತನಗಿಂತ ಕೆಳಗಿನವ ಸ್ವತಂತ್ರವಾಗಿ ಬದುಕು ಪಡೆಯುವುದೆಂದರೆ ತನ್ನ ಮರ್ಯಾದೆಗೆ ಕುಂದೆಂದೋ ಅಥವಾ ಆತನ ಅಂತಸ್ತು ತನಗಿಂತ ಏರುವುದೆಂಬ ಭೀತಿಯಿಂದಲೋ, ಜೀತದಲ್ಲಿದ್ದವನನ್ನು ಬಿಡಿಸಿ ಒಕ್ಕಲುತನಕ್ಕಿಳಿಸಿ ಬದುಕಿನಲ್ಲಿ ಇತರರೊಂದಿಗೆ ಸಮಾನವಾಗಿ ಕಾಣಲು ಎಷ್ಟೇ ಪ್ರಯತ್ನಿಸಿದರು ಮೇಲ್ವರ್ಗ ಆತನಿಗೆ ಬದುಕಲು, ಬೆಳೆಯಲು ಬಿಡದೆ 'ಮೊನ್ನೆ ಮೊನ್ನೆ ಜೀತಕ್ಕಿದ್ದವ ಒಕ್ಕಲುತನಕ್ಕೆ ಇಳಿಯುವುದೆಂದರೆ ಏನು! ಮೀಸೆ ಹೊತ್ತು ಏನು ಬಂತು?' ಎಂದು ಒಕ್ಕಲುತನಕ್ಕೆ ಅವಕಾಶ ಕೊಡದ ಸಮಾಜದ ಒಂದು ವರ್ಗದ ಅವ್ಯವಸ್ಥೆ ಜಾತಿಯ ಹೆಸರಿನಲ್ಲಿ ಸಮಾನತೆ ಕಾಣದೆ, ಆಧುನಿಕ ಬದುಕಿನಲ್ಲಿ ಬದಲಾವಣೆ ಇಲ್ಲದೆ ಸೊರಗಿರುವುದನ್ನು ಕುರಿತು 'ಅವ್ಯಕ್ತ ಅಂತರ್ಜಡತೆ' ಅಂಕಣದಲ್ಲಿ ವೈದೇಹಿ ಅವರು ವ್ಯವಸ್ಥೆಯ ಅಭದ್ರತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

'ಇಲಿ ಮತ್ತು ಬೋನು' ಅಂಕಣದಲ್ಲಿ ಸಮಾಜದಲ್ಲಿನ ಲಂಚಾವತಾರ ಮತ್ತು ಭ್ರಷ್ಟಾಚಾರವನ್ನು ಕುರಿತು ಹೇಳಿದ್ದಾರೆ. ಅಲ್ಲದೆ ದೊಡ್ಡ ದೊಡ್ಡ ಅಪರಾಧಿಗಳ ಅವ್ಯವಹಾರವನ್ನು ಕುರಿತು ಚರ್ಚಿಸಿದ್ದಾರೆ. ಹೆಣ್ಣು ಭ್ರೂಣ ಹತ್ಯೆ, ಅತ್ಯಾಚಾರ, ಅನಾಚಾರಗಳಂತಹ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯದಂತಹ ದಾರುಣ ದುರಂತಗಳು ಸಮಾಜದಲ್ಲಿ ಸಾರಸಗಟಾಗಿ ನಡೆಯುತ್ತಿವೆ. ಇಂತಹ ದೌರ್ಜನ್ಯಗಳ ವಿರುದ್ಧ ಎಷ್ಟೇ ಹೋರಾಟಗಳು ನಡೆಯುತ್ತಿದ್ದರು ಸಂಪೂರ್ಣವಾಗಿ ತಡೆಯುವಲ್ಲಿ ವ್ಯವಸ್ಥೆ ವಿಫಲವಾಗಿದೆ. ಅವುಗಳಿಂದ ಹೊರ ಬರುವ ಬಗೆಯಾದರೂ ಹೇಗೆ? ವ್ಯವಸ್ಥೆಯನ್ನು ಬದಲಿಸಬೇಕಾದ ಅಧಿಕಾರವರ್ಗ ವಿಫಲವಾಗಿದ್ದು ಗಾಂಧೀಜಿಯವರ ರಾಮರಾಜ್ಯದ ಕನಸು ನಿರ್ಮಾಣ ಮಾಡಲು ಸಾಧ್ಯವಿಲ್ಲ. ಕಳ್ಳತನ, ವರದಕ್ಷಿಣೆ, ಭ್ರೂಣಹತ್ಯೆಗಳಂತಹ ಸಮಸ್ಯೆಗಳು ನಿರಂತರವಾಗಿ ನಿಯಂತ್ರಣವಿಲ್ಲದೆ ಸಾಗುತ್ತಿದೆ. ಸಮಾಜಕ್ಕೆ ಇದು ಮಾರಕ ಅಪಾಯ, ಹೀಗೆ ಸಾಗಿದರೆ ಸಾಮಾಜಿಕ ವ್ಯವಸ್ಥೆ ಮತ್ತಷ್ಟು ಹದಗೆಡುತ್ತದೆ. ಉತ್ತಮ ಸಮಾಜ ನಿರ್ಮಿಸುವಲ್ಲಿ ಇಂದು ಕೆಲಸ ಮಾಡಬೇಕಿದೆ. ಇಲ್ಲವಾದರೆ ವ್ಯಾಪಕವಾಗಿ ಬೆಳೆದು ನಮ್ಮ ಸುತ್ತಲಿನ ವಾತಾವರಣವು ಹದಗೆಡುತ್ತದೆ ಎಂಬ ಕಳವಳವನ್ನು ವ್ಯಕ್ತಪಡಿಸಿದ್ದಾರೆ.

'ಸೂರ್ಯಗ್ರಹಣವೊ ಬುದ್ಧಿಗೆ ಭ್ರಮಣವೋ' ಅಂಕಣದಲ್ಲಿ ವಿಜಯಲಕ್ಷ್ಮಿ ಬಾಳೆಕುಂದ್ರಿ ಅವರು ಜನರ ಮೌಢ್ಯಗ್ರಹಣವನ್ನು ಅಪಹಾಸ್ಯ ಮಾಡಿದ್ದಾರೆ. ಸಾಮಾಜಿಕ ಹಿತದೃಷ್ಟಿಯಿಂದ ಜಾತೀಯತೆ ತೊಲಗಿ, ಮಾನವೀಯತೆಗೆ ಪಟ್ಟಕಟ್ಟಬೇಕೆಂಬ ಆಶಯ ಮೆಚ್ಚುವಂತದ್ದು. ಅನ್ನ ಅಕ್ಷರ ದಾಸೋಹಕ್ಕಿಂತ ಮಿಗಿಲಾದ ಧರ್ಮವಿಲ್ಲವೆಂಬ ಸಿದ್ಧಗಂಗೆಯ ಶ್ರೀ ಶಿವಕುಮಾರ ಮಹಾಸ್ವಾಮಿಯರ ಮಾತು ವೇದವಾಕ್ಯದಂತೆ ಎಂಬುದು ನಿಜಕ್ಕೂ ಸತ್ಯ. ಶರಣ ಸಂಸ್ಕೃತಿಯಲ್ಲಿ ಸಮಾಜ ಸೇವೆಯ ಪರಾಕಾಷ್ಠೆಯನ್ನು ಕಾಣಬಹುದು ; ಸ್ವಂತಕ್ಕೆ ಅಲ್ಪ, ಸರ್ವಸ್ವವೂ ಸಮಾಜಕ್ಕೆ ಎಂಬ ಪರಿಕಲ್ಪನೆ ಜಾರಿಗೆ ಬಂದಾಗ ದೇಶದಲ್ಲಿ ಶಾಂತಿ ಕ್ಷೇಮಗಳು ನೆಲಸುತ್ತವೆಂಬ ಶರಣರ ಆಶಯ ನಿಜವಾಗುವುದು.

ಸಮಾಜ ಪರಿವರ್ತನೆ ಆಗಬೇಕೆಂದರೆ ತಂದೆ–ತಾಯಿಯರು, ಶಿಕ್ಷಕರು ಮಕ್ಕಳಿಗೆ ಶಿಕ್ಷಣದ ಜೊತೆಗೆ ಶಿಸ್ತು, ಶಿಷ್ಟಾಚಾರ ಕಲಿಸಬೇಕು. ದುರಭ್ಯಾಸಗಳಿಂದ ದೂರವಿಟ್ಟು ಮಕ್ಕಳ ದಿನನಿತ್ಯದ ಚಟುವಟಿಕೆಯ ಕಡೆಗೆ ಗಮನಹರಿಸಬೇಕು. ಸರಿತಪ್ಪಿನ ಅರಿವು ಮೂಡಿಸಿ ಮದ್ಯಪಾನ–ಮಾದಕ ವಸ್ತುಗಳಿಂದ ಆಗುವ ಕೆಡುಕುಗಳ ಬಗ್ಗೆ ಮನವರಿಕೆ ಮಾಡಿ ಮಾನವ ಸಂಪತ್ತನ್ನು ರಕ್ಷಿಸಬೇಕು. ನಮ್ಮ ದೇಶ, ಸಂಪ್ರದಾಯ, ನೆಲ, ಜಲ, ಭಾಷೆ ಇವುಗಳ ಮಹತ್ವವನ್ನು ತಿಳಿಸಿ, ಪ್ರತಿಯೊಬ್ಬರಲ್ಲೂ ಸಮಾಜದ ಬಗ್ಗೆ ಚಿಂತನೆ ಮೂಡುವಂತೆ ಮಾಡಬೇಕು ಎಂದು ಸಮಾಜದ ಬಗ್ಗೆ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.

ಆರ್. ಇಂದಿರಾ ಅವರು ಸಾಮಾಜಿಕ ವಿಚಾರಗಳ ಬಗ್ಗೆ ಸಾರ್ವಜನಿಕ ವಲಯದಲ್ಲಿ ನಿರಂತರವಾಗಿ ಬರೆಯುತ್ತಾ ಬಂದವರು. ಕಾನೂನು–ಕಾಯಿದೆಗಳ ಬಗ್ಗೆ ಮಾತನಾಡುವ ಮೂಲಕ ಜನರು ಸರಿಯಾಗಿ ಅರ್ಥ ಮಾಡಿಕೊಂಡು ಬಳಸಿಕೊಂಡರೆ ಹೊಸ ಕಾಯಿದೆಗಳ ಅಗತ್ಯವೇ ಇರುವುದಿಲ್ಲ. ಜನರ ಹಕ್ಕು ರಕ್ಷಣೆಗೆ ಅಗತ್ಯವಾದ ಹಲವು ಕಾಯಿದೆಗಳು ಈಗಾಗಲೇ ರಚನೆಯಾಗಿವೆ. ಆದರೆ ಅವುಗಳ ಬಗ್ಗೆ

ಜನರಿಗೆ ಮಾಹಿತಿಯ ಕೊರತೆಯಿದೆ. ಜನರ ಹಕ್ಕುಗಳು, ಅವರಿಗಾಗಿ ಇರುವ ಕಾನೂನು ಕಾಯಿದೆಗಳ ಬಗ್ಗೆ ಮಾಹಿತಿ ಪಸರಿಸುವ ಕೆಲಸವಾಗಬೇಕು ಎಂಬ ನಿಟ್ಟಿನಲ್ಲಿ 'ಹೊಸ ಕಾಯಿದೆಗಳು – ಹಳಸಲು ಮನಸ್ಸುಗಳು' ಅಂಕಣದಲ್ಲಿ ಸ್ತ್ರೀಯರ ಹಕ್ಕುಗಳನ್ನು ಎತ್ತಿ ಹಿಡಿದ ಕಾಯಿದೆಗಳನ್ನು ಕುರಿತು ಮಹಿಳೆಯರ ಬದುಕಿನ ನಿಜಸ್ಥಿತಿಗಳನ್ನು ವಿಶ್ಲೇಷಿಸಿದ್ದಾರೆ. ಹೊಸದಾರಿ, ಮಹಿಳೆ ಹಕ್ಕು ಮತ್ತು ಹೋರಾಟ ಎಂಬ ಅಂಕಣ ಸಂಕಲನಗಳಲ್ಲಿ ಸುದೀರ್ಘವಾಗಿ ಈ ಬಗ್ಗೆ ಚರ್ಚಿಸಿದ್ದಾರೆ. ಅಲ್ಲದೆ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸಿ ಜನರ ನೋವು ನಲಿವುಗಳಿಗೆ ಸ್ಪಂದಿಸುವ ಕೆಲಸ ಮಾಡಿದ್ದಾರೆ.

"ಆಧುನಿಕ ಸಂಸ್ಕೃತಿಯಿಂದ ಗಿರಿಜನರ ಸಾಂಪ್ರದಾಯಿಕ ಜೀವನಕ್ಕೆ ಯಾವ ರೀತಿಯಲ್ಲೂ ಧಕ್ಕೆಯಾಗಬಾರದು. ಗಿರಿಜನರ ಅಭಿವೃದ್ಧಿಗಾಗಿ ರೂಪಿಸಿರುವ ಎಲ್ಲಾ ಯೋಜನೆಗಳಲ್ಲೂ ಅವರ ತನವನ್ನು ಉಳಿಸಿ, ಬೆಳೆಸುವ ಕೆಲಸ ಸರ್ಕಾರದಿಂದ ಆಗಬೇಕು. ಆಧುನೀಕತೆಯು ಅವರನ್ನು ಬುಡಮೇಲು ಮಾಡಬಾರದು. ಗಿರಿಜನರ ಅಭಿವೃದ್ಧಿ ಕಾಡಿನಲ್ಲಿರುವುದರಲ್ಲೇ ಇದೆಯೋ ಆಧುನಿಕ ಬದುಕನ್ನು ಒಪ್ಪಿಕೊಳ್ಳುವುದರಲ್ಲಿಯೋ ಎಂಬುದನ್ನು ಅರ್ಥ ಮಾಡಿಕೊಂಡು ಅವರ ಆಯ್ಕೆ ಮತ್ತು ಅಗತ್ಯಗಳಿಗೆ ಆದ್ಯತೆ ನೀಡಬೇಕು".1 ನಾವು ಸರಿ ಎಂದುಕೊಂಡದ್ದನ್ನು ಅವರ ಮೇಲೆ ಹೇರಬಾರದು ಎಂದು ಗಿರಿಜನರ ಜೀವನ–ಹಕ್ಕು ಬಾಧ್ಯತೆಗಳ ಬಗೆಗೆ ಕಾಳಜಿವಹಿಸಿದ್ದಾರೆ.

ಸಮಕಾಲೀನ ಪರಿಸ್ಥಿತಿಯಲ್ಲಿ 'ಭ್ರಷ್ಟತೆ ಎಂಬುದು ಬರೀ ಹಣ ಆಸ್ತಿಗೆ ಸೀಮಿತಗೊಳ್ಳದೆ, ಇತರ ತಪ್ಪುಗಳಿಗೂ ವಿಸ್ತೃತವಾಗಿದೆ. ನಾಗರೀಕ ಸಮಾಜದಲ್ಲಿ ಎಲ್ಲರೂ ಈ ಬಗ್ಗೆ ಧ್ವನಿಯೆತ್ತಬೇಕು. ಆದರೆ ಯಾವುದನ್ನು ಪ್ರತಿಭಟಿಸದೆ ಮೌನವಾಗಿ ಕಾಣುತ್ತಿದ್ದು ಭ್ರಷ್ಟ ವ್ಯವಸ್ಥೆಯನ್ನು ಸಮರ್ಥಿಸಿಕೊಂಡಂತಿದೆ. ಇಂದಿರಾ ಅವರು ಇಂತಹ ಭ್ರಷ್ಟಾಚಾರದ ಬಗ್ಗೆ ಇಲ್ಲಿ ಪ್ರಶ್ನಿಸಿದ್ದಾರೆ.

ಭೂತ–ವರ್ತಮಾನಗಳಲ್ಲಿ ಸ್ತ್ರೀ ಅನುಭವಿಸಿದ, ಅನುಭವಿಸುತ್ತಿರುವ ನಲಿವುಗಳಿಗಿಂತ ಮುಖ್ಯವಾಗಿ ನೋವುಗಳಿಗೆ ಕಾರಣಗಳನ್ನು ಸೋಂದಾ ಅವರು ತಿಳಿಸಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆ ಸೃಷ್ಟಿ ಮಾಡಿರುವ ಮಾನದಂಡಗಳಿಂದ ಬದುಕನ್ನು ಅಳೆಯಬಾರದೆನ್ನುವ ಎಚ್ಚರಿಕೆಯನ್ನು ನೀಡಿದ್ದಾರೆ. 'ಸುಖ, ದುಃಖ, ನೋವು–ನಲಿವುಗಳು ಲಿಂಗ ಸಂಬಂಧಿಯಲ್ಲ; ಮಾನವ ಸಹಜ ಭಾವನೆಗಳು' ಎಂದು ಹೇಳುವ ಮೂಲಕ ಸ್ತ್ರೀ ಮಾತ್ರ ನೋವು–ದುಡಿಮೆಗೆ ಬದ್ದಳಲ್ಲ ಎಂಬುದನ್ನು ಸೋಂದಾ ಅವರು ಸ್ಪಷ್ಟಪಡಿಸಿದ್ದಾರೆ. ಅಸಮ ವಿವಾಹ, ಬಂಜೆತನ, ಹೆಣ್ಣು ಭ್ರೂಣ ಹತ್ಯೆ, ಕನ್ಯತ್ವದ ಪ್ರಶ್ನೆ, ಕೌಟುಂಬಿಕ ನಿರ್ವಹಣೆಯಲ್ಲಿ ಸಹಭಾಗಿತ್ವ, ಹೆಣ್ಣು ಮಕ್ಕಳ ಮಾರಾಟ, ಬಾಲ್ಯವಿವಾಹ, ಸರಕು ಸಂಸ್ಕೃತಿಗಳಲ್ಲಿ ಸ್ತ್ರೀ–ಮುಂತಾದ ಸಾಮಾಜಿಕ ಸಮಸ್ಯೆಗಳ ಬಗ್ಗೆ 'ನಾರೀ ಮಿಡಿತ' ಅಂಕಣ ಕೃತಿಯಲ್ಲಿ ಆರೋಗ್ಯಕರವಾದ ಚಿಂತನೆ ಮಾಡಿದ್ದಾರೆ. 'ಕುವರಿಯಾದೊಡೆ ಕುಂದೇನು?' ಲೇಖನದಲ್ಲಿ ಹೆಣ್ಣು ಹೆತ್ತಳೆಂದು ಪತ್ನಿಯನ್ನೇ ಬಿಟ್ಟು ಹೋದ ಪತಿ, ಇಲ್ಲಿ ಹೆಣ್ಣಿನ ತಪ್ಪೇನು? ಎಂದು ಪ್ರಶ್ನೆ ಕಾಡುತ್ತದೆ. ಸಮಾಜದಲ್ಲಿ ಹೆಣ್ಣು–ಗಂಡು ಎಂಬ ಭೇದವಿಲ್ಲದೆ ಸಮಾನತೆಯಿಂದ ಕಾಣಬೇಕು ಎಂಬ ಅಂಶವನ್ನು ತಿಳಿಸುತ್ತ ಅಸಮತೋಲನದಿಂದ ಮಹಿಳೆಯರ ಕೊರತೆ ಉಂಟಾಗಿ ಮಹಿಳೆಯರ ಅಪಹರಣ, ಅತ್ಯಾಚಾರಗಳು ಹೆಚ್ಚಾಗುತ್ತಿವೆ. ಆ ಮೂಲಕ ಮಹಿಳೆಯ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿವೆ. ಹೀಗೆ ಸಾಗಿದರೆ ಮುಂದೆ ಸಮಾಜದಲ್ಲಿ ಮಹಿಳೆಯರ ಅನುಪಾತ ಕಡಿಮೆಯಾಗಿ ಸಮಾಜ ತೊಂದರೆಗೆ ಒಳಗಾಗುತ್ತದೆ ಎಂಬ ಕಳವಳವನ್ನು ವ್ಯಕ್ತಪಡಿಸಿದ್ದಾರೆ.

ಮಹಿಳೆಯ ಹಕ್ಕು, ಅವಳಿಗೆ ಸಿಗಬೇಕಿರುವ ಸವಲತ್ತು, ಸಮಾನತೆಯನ್ನು ನೀಡಿದ್ದೇವೆ ಎನ್ನುತ್ತಲೇ ಅಸಮಾನತೆಯ ನೆಲೆಯಿಂದ ಅವಳನ್ನು ಕಾಣುತ್ತಿರುವ ಪರಿ, ಅವಳ ಮೇಲಿನ ದೌರ್ಜನ್ಯ ಹಾಗೂ ಅವಳ ಸಾಧನೆಗಳನ್ನು ಕುರಿತಂತೆ ಬರೆದ ಅಂಕಣ ಬರೆಹದ ಸಂಗ್ರಹ 'ಉಭಯವ ಕಳೆದ ಬಳಿಕ'. ಇಲ್ಲಿನ ಲೇಖನಗಳಲ್ಲಿ ಮಹಿಳೆಯ ಮೇಲಿನ ಅತ್ಯಾಚಾರ ಮತ್ತೆ ಮತ್ತೆ ಪ್ರಸ್ತಾಪವಾಗಿವೆ. ಕಳೆದ ಅರ್ಧಶತಮಾನದಲ್ಲಿ ಮಹಿಳೆಗೆ ಸಾಕಷ್ಟು ಅವಕಾಶ, ಅನುಕೂಲಗಳು ದೊರೆತಿದ್ದರೂ ಅವಳ ಮೇಲಿನ ದೌರ್ಜನ್ಯ ವಿವಿಧ ರೂಪದಲ್ಲಿ ನಡೆಯುತ್ತಲೇ ಇವೆ. ಜಾಗತೀಕರಣವೂ ಸೇರಿದಂತೆ ಸಾಮಾಜಿಕ ಬದುಕಿನ ಹಲವು ತಲ್ಲಣಗಳ ಕಾರಣದಿಂದ ಮಹಿಳೆಯ ಮೇಲಿನ ದೌರ್ಜನ್ಯದ ಸ್ವರೂಪ ಬದಲಾಗಿದೆಯೇ ವಿನಃ ಅವಳು ನಿರಾಳವಾಗಿ ಬದುಕುವ ಪರಿಸರ ಇನ್ನೂ ನಿರ್ಮಾಣವಾಗಿಲ್ಲ. ಮಹಿಳೆಯ ಅಸ್ತಿತ್ವವನ್ನೇ ಅಲ್ಲಾಡಿಸುವ ಅತ್ಯಾಚಾರ ಪ್ರಕರಣಗಳು ಅವಳ ಅಸ್ಮಿತೆಗೆ ಕೊಡುವ ಪೆಟ್ಟು ಅತ್ಯಂತ ಘೋರವಾದ ಸಂಗತಿ. ಇದು ಸಮಾಜದ ಅಂತಃಪ್ರಜ್ಞೆಯನ್ನು ಎಚ್ಚರಿಸುತ್ತದೆ.

ಇಂದು ನಾವು ಜೀವಿಸುತ್ತಿರುವ ಭಾರತ ಅಂಬೇಡ್ಕರ್ ಕನಸಿನ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಭಾರತವಾಗಿಲ್ಲ. ಪ್ರೀತಿಯಿಂದ, ಸೃಷ್ಟಿಯಿಂದ ಈ ಜಗತ್ತನ್ನು ಹಿಂಸೆ ಆಳುತ್ತಿದೆಯೇ ಎಂಬ ಕಳವಳಗಳು ಇತ್ತೀಚಿನ ಘಟನೆಗಳಲ್ಲಿ ಕಂಡುಬರುತ್ತಿದೆ. ಈ ಸಮಾಜ ಹೀಗೇಕಿದೆಯೆಂದು ಪ್ರಶ್ನಿಸಿ, ಬದಲಾಯಿಸುವ ಉದ್ದೇಶದಿಂದ ಆ ಕಾಲದಿಂದಲೂ ಪ್ರತಿಭಟನೆ, ಹೋರಾಟ, ಚರ್ಚೆಗಳು ನಡೆಯುತ್ತಲೇ ಇವೆ. ಇಂತಹ ಕೆಟ್ಟ ಜಾತಿ ಪದ್ಧತಿ ಮತ್ತು ಅದರ ದುಷ್ಟತನಗಳನ್ನು ಬುದ್ಧ, ಬಸವಣ್ಣ, ಕಬೀರ, ನಾನಕ್ ಮೊದಲಾದವರು ಪ್ರಶ್ನಿಸಿ

ಶತಮಾನಗಳಷ್ಟು ಹಿಂದೆಯೇ ಬದಲಾಯಿಸಲು ಪ್ರಯತ್ನಿಸಿದ್ದಾರೆ. ಅಂಬೇಡ್ಕರ್ ಅವರು ಸಹ ಈ ನೆಲದ ಒಳ ಸಂಕಟಗಳನ್ನು ಅನುಭವಿಸಿ ಸ್ವತಃ ತಾವೇ ತಿಳಿದವರಾಗಿ ಕಿವುಡು ಕಿವಿಗೂ ಕೇಳುವಂತೆ ಸ್ಪಷ್ಟವಾಗಿ, ಗಟ್ಟಿಯಾಗಿ ವಿರೋಧಿಸುವ ದನಿಯಾದರು. ಜನ ಸಂಘಟನೆ, ಶಿಕ್ಷಣ, ಪ್ರಾತಿನಿಧ್ಯ, ಬುದ್ಧನ ಧರ್ಮವೇ ಮೊದಲಾಗಿ ಶೋಷಿತ ನೆಲೆಯಿಂದ ಸಮಾಜ ಬದಲಾವಣೆ ಸಾಧ್ಯವಾಗುವಂತಹ ಹೊಸ ದಾರಿಗಳನ್ನರಸಿದರು. ಎಲ್ಲರೂ ಸಮಾನವಾಗಿ ಬದುಕಲು ಸಾಧ್ಯವಾಗುವಂತಹ ಸಂವಿಧಾನ ರಚಿಸಿದರು. ಆದರೆ ಇಂದು ನಾವು ಜೀವಿಸುತ್ತಿರುವ ಭಾರತ ಅಂಬೇಡ್ಕರ್ ಕನಸಿನ ಸ್ವಾತಂತ್ರ್ಯ–ಸಮಾನತೆ–ಭ್ರಾತೃತ್ವದ ಭಾರತವಾಗಿಲ್ಲ. ಪ್ರೀತಿಯಿಂದ ಸೃಷ್ಟಿಯಾದ ಈ ಜಗತ್ತನ್ನು ಜಾತಿ ಆಳುತ್ತಿದೆಯೆ ಎಂಬ ಕಳವಳವಾಗುವಂತೆ ಇತ್ತೀಚಿನ ಆಗುಹೋಗುಗಳಾಗಿವೆ.

ಇವರ 'ಬುದ್ಧ ಬೆಳಕಿನಲ್ಲಿ ಅಂಬೇಡ್ಕರ್ ಭಾರತ' ಅಂಕಣ ಕೃತಿಯು ಸಮಾಜದಿಂದ ಶೋಷಣೆ–ದೌರ್ಜನ್ಯಕ್ಕೆ ಒಳಗಾದ ನೊಂದು ಖಿನ್ನತೆಗೊಳಗಾದ ಶೋಷಿತರ ದನಿಯಾಗಿದೆ. ಅಲ್ಲದೆ ಬುದ್ಧ, ಅಂಬೇಡ್ಕರ್ ಅವರ ಪ್ರೀತಿ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವವನ್ನು ಎತ್ತಿ ಹಿಡಿದಿದೆ. ಇಲ್ಲಿನ ವಿಚಾರಗಳು ಜಾತಿಪದ್ಧತಿ, ಅಸ್ಪೃಶ್ಯತೆಯ ಆಚರಣೆ, ಗ್ರಾಮೀಣ ಸಮಾಜ, ಅಲೆಮಾರಿಗಳ ಕುರಿತ ಬರಹವೇ ಇರಲಿ ಎಲ್ಲವೂ ಭಿನ್ನವಾದ ಗ್ರಹಿಕೆಗೆ ಸಿಲುಕಿದವು. ಕಾಲದ ಸಂಕಟಗಳನ್ನರಿಯಲು, ಪರಿಹಾರದ ಹೊರದಾರಿಗಳನ್ನು ಕಂಡುಕೊಳ್ಳಲು ಬಾಬಾ ಸಾಹೇಬರ ಚಿಂತನಾ ಕ್ರಮ ಮತ್ತು ಬುದ್ಧತತ್ವಗಳು ಹೊಸದಿಕ್ಕು ಕೊಟ್ಟಿದೆ. ಇವರ ಲೇಖನಗಳಲ್ಲಿ ನ್ಯಾಯಪರತೆಯು, ಸರಳವಾಗಿದ್ದು ಬುದ್ಧ ಮತ್ತು ಅಂಬೇಡ್ಕರ್ ಅವರ ಚಿಂತನಾ ಮಾರ್ಗಗಳನ್ನು ಒಳಗೊಂಡಿವೆ.

'ಸಂವಿಧಾನ ಮತ್ತು ಮಹಿಳೆ' ಎಂಬ ಅಂಕಣ ಕೃತಿಯು ಸಮಾಜದ ಅಭಿವೃದ್ಧಿಗೆ ಮಹಿಳೆಯ ಪಾತ್ರ ಮಹತ್ವವಾದುದು. ಭಾರತದ ಏಳ್ಗೆಗಾಗಿ ಮತ್ತೆ ನಾವು ಸಂವಿಧಾನ ಓದಬೇಕಿದೆ. ಸಂವಿಧಾನ ಕುರಿತು ಮಾತನಾಡಲೇ ಬೇಕಿದೆ. "ದೇಶವಾಸಿಗಳೆಲ್ಲರನ್ನು ಒಟ್ಟು ನಡೆಸುವ ಉದಾತ್ತ ಆಶಯದ, ಪ್ರೀತಿ–ಸಹಬಾಳ್ವೆಯೇ ಆಧಾರವಾದ ಸಂವಿಧಾನಕ್ಕೆ ಅಪಾಯ ಬಂದೆರಗಿದರೆ ಅದು ನಮಗೆ, ಮಹಿಳೆಯರಿಗೇ ಬಂದಂತೆ. ಎಂದೇ ವಿಶೇಷವಾಗಿ ನಾವು ಮಹಿಳೆಯರು ಎಚ್ಚೆತ್ತು ಹೇಳಬೇಕಿದೆ. 'ಇಲ್ಲ, ನೀವಿದನ್ನು ಸುಡಲಾರಿರಿ, ಬದಲಾಯಿಸಲಾರಿರಿ... ಈ ಸಂವಿಧಾನ ನಮ್ಮದು' ಎಂದು ಸಂವಿಧಾನ ಬದಲಾಯಿಸಬೇಕೆಂದು ಇಂದು ಧ್ವನಿ ಎತ್ತಿರುವ ಕೆಲವು ರಾಜಕಾರಣಿಗಳನ್ನು ಕುರಿತು ಸಂವಿಧಾನದ ಬಗ್ಗೆ ಚರ್ಚಿಸುತ್ತ ಸಮಾಜಕ್ಕೆ, ಮಹಿಳೆಗೆ ಸಂವಿಧಾನದ ಮಹತ್ವವೆಂತದ್ದು ಎಂಬುದರ ಅರಿವು ಮೂಡಿಸಿದ್ದಾರೆ.

ಸಮಾಜ ಸೇವೆ ಮಾಡಲು ನಾವು ಶ್ರೀಮಂತರೇ ಆಗಬೇಕೆಂದಿಲ್ಲ. ಒಳ್ಳೆಯ ಮನಸ್ಸು, ಮಾನವೀಯ ಗುಣ, ತಾಯಿಯ ಹೃದಯ ಇದ್ದರೆ ಸಾಕು. ಇದಕ್ಕೆ ಪೂರಕವಾಗಿ 'ತಾಯಾದವಳು ಹುಡುಗಿ, 52 ಮಕ್ಕಳಿಗೆ' ಅಂಕಣದಲ್ಲಿ ನೇಮಿಚಂದ್ರ ಅವರು 'ಸುಮಂಗಲಿ ಸೇವಾಶ್ರಮ'ದಲ್ಲಿ ಸುಶೀಲಮ್ಮನವರ ಆಶ್ರಯದಲ್ಲಿ ಬದುಕನ್ನು ಕಂಡುಕೊಂಡ ಜ್ಯೋತಿ ಎಂಬ ಹೆಣ್ಣಿನ ತಾಯಿ ಹೃದಯದ ಸಮಾಜ ಸೇವಕಿಯ ಬದುಕಿನ ಚಿತ್ರಣವನ್ನು ನಿರೂಪಿಸಿದ್ದಾರೆ. ಭಾರತೀಯ ಗ್ರಾಮೀಣ ಸಮಾಜ ಸಂಘದಲ್ಲಿ 600 ರೂಪಾಯಿ ಸಂಬಳಕ್ಕೆ ಗುಮಾಸ್ತೆಯಾಗಿ ಸೇರಿಕೊಂಡು ತನ್ನ ಕಾಲಮೇಲೆ ನಿಂತು ಬದುಕನ್ನು ಕಟ್ಟಿಕೊಂಡ ಜ್ಯೋತಿ, ತನ್ನ ತಂಗಿಯನ್ನು ಅಬಲಾಶ್ರಮದಲ್ಲಿ ಇರಿಸಿ ದುಡಿಮೆಗೆ ತೊಡಗಿದಳು. ಕೇಶವ ಮೂರ್ತಿಯವರೊಂದಿಗೆ ವಿವಾಹವಾಗಿ ಕಡಿಮೆ ಸಂಬಳದಲ್ಲಿಯೇ ಸರಳವಾಗಿ ಬದುಕುತ್ತ, ತಂಗಿಯನ್ನು ಒಳ್ಳೆಯ ಕಡೆ ವಿವಾಹ ಮಾಡಿದಳು. ತಾವು ಗುಮಾಸ್ತೆಯಾಗಿ ಕೆಲಸ ಮಾಡುತ್ತಿದ್ದ ಆಶ್ರಮದ ನಿರ್ಗತಿಕ ಮಕ್ಕಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು.

ಪತಿ ಕೇಶವ ಮೂರ್ತಿಯವರ ಸಹಕಾರದೊಂದಿಗೆ 'ತಾಯಿ ಮನೆ' ಟ್ರಸ್ಟ್ ಅನ್ನು ತೆರೆದು ತನ್ನಂತೆಯೇ ಬಡತನದಲ್ಲಿ ನೊಂದ, ಬದುಕಿನ ಅವಕಾಶಗಳಿಂದ ವಂಚಿತರಾದ ಮಕ್ಕಳಿಗೆ, ಒಲವಿನ ಆಸರೆ ಒದಗಿಸಲು ಮುಂದಾದರು. ಒಂದು ಒಳ್ಳೆಯ ಕೆಲಸಕ್ಕೆ ಸಹಾಯ ಅನಿರೀಕ್ಷಿತ ದಿಕ್ಕಿನಿಂದ ಹನಿ ಹನಿಯಾಗಿ ಹರಿದು ಬರುತ್ತದೆ ಎಂಬಂತೆ ಹಲವಾರು ದಾನಿಗಳು ಸಹಾಯ ನೀಡಿದ್ದಾರೆ. ಅಲ್ಲದೆ ಕೆಲವು ಸಹೃದಯ ಮನಸ್ಸುಗಳು ಇಲ್ಲಿನ ಮಕ್ಕಳಿಗೆ ನೀತಿಕತೆ, ಸಂಗೀತ, ಸ್ಪೋಕನ್ ಇಂಗ್ಲೀಷ್, ಉಚಿತ ಆರೋಗ್ಯ ತಪಾಸಣೆಯನ್ನು ನಡೆಸಿಕೊಡುವ ಮೂಲಕ ಈ ಮಕ್ಕಳ ಬದುಕನ್ನು ಉತ್ತಮವಾಗಿ ರೂಪಿಸಲು ಸಹಾಯಕರಾಗಿದ್ದಾರೆ. ಈ ಆಶ್ರಮದಲ್ಲಿ ಯಾವುದೇ ಜಾತಿ–ಧರ್ಮದ ಭೇದವಿಲ್ಲದೆ ಎಲ್ಲಾ ಮಕ್ಕಳನ್ನು ಸಮಾನವಾಗಿ ಕಾಣುವ ಮೂಲಕ ಎಲ್ಲಾ ಹಬ್ಬ, ಆಚರಣೆಗಳನ್ನು ನಡೆಸುವ ಮೂಲಕ ಜಾತ್ಯಾತೀತವಾಗಿ ಬೆಳೆಸುತ್ತಿದ್ದಾರೆ.

ನೇಮಿಚಂದ್ರರ ಬಳಿ ಸಹಾಯ ಬೇಡಿ ಬಂದ ಆ ಸಣ್ಣ ಹುಡುಗಿ ಜ್ಯೋತಿ ಇಂದು ಮಹಾತಾಯಿಯಾಗಿ 52 ಮಕ್ಕಳನ್ನು ಬೆಳೆಸುತ್ತಿರುವುದು ದೊಡ್ಡ ಸಾಧನೆಯೇ ಆಗಿದೆ. ಬದುಕಿನಲ್ಲಿ ಬರುವ ತೊಂದರೆಗಳು ವ್ಯಕ್ತಿತ್ವವನ್ನು ಬದಲಾಯಿಸುತ್ತದೆ. ಬದುಕು ತನಗೆ ಕೊಟ್ಟ ಸಣ್ಣ ಅವಕಾಶವನ್ನು ಉತ್ತಮವಾಗಿ ಬಳಸಿಕೊಂಡು 52 ಮಕ್ಕಳಿಗೆ ಬದುಕುವ, ಕಲಿಯುವ, ಓದಿ ಬೆಳೆಯುವ ದೊಡ್ಡ ಅವಕಾಶವನ್ನು

ನೀಡುತ್ತಿದ್ದಾಳೆ!. ತೀವ್ರ ನೋವಿನ ಹಾದಿ ಸಂತಸದ ತಾಣಕ್ಕೆ ಆಸರೆಯಾಗುತ್ತದೆ. ಬದುಕಿನಲ್ಲಿ ಭರವಸೆಯನ್ನು ನೀಡುತ್ತದೆ. ಸಿಕ್ಕ ಅವಕಾಶಗಳನ್ನು ಉತ್ತಮವಾಗಿ ಬಳಸಿಕೊಂಡು ಸಮಾಜಕ್ಕೆ ಮಾದರಿಯಾಗಬೇಕು ಎಂದು ಜ್ಯೋತಿಯವರ ಸಮಾಜಸೇವೆಯನ್ನು ಕುರಿತು ಶ್ಲಾಘಿಸಿದ್ದಾರೆ.

ನೇಮಿಚಂದ್ರ 'ಹಚ್ಚೋಣ ಹಣತೆಗಳ....., ನೆನಪಿರಲಿ ಬಡವರಿದ್ದಾರೆ....' ಲೇಖನಗಳಲ್ಲಿ ನೋವು, ನಲಿವು, ಬಡತನಗಳ ನಿಟ್ಟುಸುರಿನ ತುಣುಕುಗಳಿವೆ. ಈ ಬದುಕು ನಡೆಯುತ್ತದೆ ಎಂಬುದನ್ನು ಬಡತನ, ಸೋಲು, ನೋವು, ನಿರಾಶೆಯನ್ನು ಕೆಲವೊಮ್ಮೆ ತನ್ನ ತಪ್ಪಿಲ್ಲದಿದ್ದರೂ ಒದಗಿ ಬರುವ ಅಪಮಾನವನ್ನು ಹೇಗೆ ಎದರಿಸಬೇಕು ಎಂಬುದನ್ನು ಈ ಲೇಖನಗಳು ತಿಳಿಸಿವೆ. ಇಬ್ಬರು ಬಾಲೆಯರು ತಮ್ಮ ಕುಟುಂಬದ ಏಳು ಜನರ ಬದುಕಿನ ಹೊರೆಯನ್ನು ಹೊತ್ತು ಕಾಯಿಲೆ ತಾಯಿ, ಕುಡುಕ ತಂದೆ, ವಯಸ್ಸಾದ ಅಜ್ಜಿಯರು, ಪುಟ್ಟ ತಮ್ಮನ ಶಾಲೆಯ ಖರ್ಚು ಇವೆಲ್ಲವನ್ನು ಹದಿನೈದು ವರ್ಷದ ಮಾದೇವಿ ಮತ್ತು ಹದಿನಾಲ್ಕು ವರ್ಷದ ಸವಿತಾ ನೋಡಿಕೊಳ್ಳುತ್ತಿದ್ದಾರೆ. ಓದುವ ವಯಸ್ಸಿನಲ್ಲಿ ಇಷ್ಟು ಕಷ್ಟಪಡುತ್ತಿರುವುದನ್ನು ಕಂಡಾಗ ಮಕ್ಕಳು ಓದಿ ಪೊಲೀಸರಾಗುವ ಕನಸಿನ ನಡುವೆ ಬಡತನ, ಹಸಿವು, ಆರ್ಥಿಕ ಸಮಸ್ಯೆಗಳು ಆ ಮಕ್ಕಳ ಬದುಕನ್ನು ಹೇಗೆ ದುಸ್ಥರಗೊಳಿಸಿವೆ ಎಂಬುದನ್ನು ತಿಳಿಸುತ್ತಲೇ ಅವರ ಜೀವನಕ್ಕೆ ಬೇಕಾದ ನೆರವನ್ನು ನೀಡುವ ಮೂಲಕ ಮಾನವೀಯತೆಯನ್ನು ಮೆರೆದಿದ್ದಾರೆ. ನೇಮಿಚಂದ್ರರ ಸಾಮಾಜಿಕ ಕಳಕಳಿ ಈ ಲೇಖನದಲ್ಲಿ ವ್ಯಕ್ತವಾಗಿದೆ.

ಮತ್ತೊಂದೆಡೆ ಕೇವಲ ನಲವತ್ತು–ಐವತ್ತು ಸಾವಿರ ಸಾಲಕ್ಕೆ ಜೀವ ತೆಗೆದುಕೊಳ್ಳುವ ರೈತರ ಬದುಕನ್ನು ತಿಳಿದು ಮರುಕಗೊಂಡಿದ್ದಾರೆ. ಬೆಂಗಳೂರಿನಂತಹ ನಗರಗಳಲ್ಲಿ ಉದ್ಯಮ ಮಾಡುವ ತಮಗೆ ಅದು ಅಷ್ಟು ದೊಡ್ಡ ಮೊತ್ತವಲ್ಲದಿದ್ದರೂ ಬಡವರಿಗೆ ಅದು ಅತೀ ದೊಡ್ಡದೆನಿಸುತ್ತದೆ. ಸಮಾಜದ ಒಂದು ವರ್ಗದ ಬಡತನ, ಮತ್ತೊಂದು ವರ್ಗದ ಆಡಂಬರದ ಜೀವನದೊಂದಿಗೆ ನಿದರ್ಶನದ ಮೂಲಕ ಹೋಲಿಸಿ ಬಡವರ ಬದುಕಿನ ದುಃಸ್ಥಿತಿಯನ್ನು ಕಂಡು ಉಳ್ಳವರು ಇಲ್ಲದವರಿಗೆ ನೆರವಾಗುವ ಮೂಲಕ ಸಮಾಜದ ಕಂದರವನ್ನು ತಗ್ಗಿಸುವಂತೆ ಕಳಕಳಿ ವ್ಯಕ್ತಪಡಿಸಿದ್ದಾರೆ. ಶ್ರೀಮಂತರು ಅತಿಯಾಗಿ ದುಂದುವೆಚ್ಚ ಮಾಡುವಾಗ 'ನಮಗೆ ನೆನಪಿರಬೇಕು ಬಡವರಿದ್ದಾರೆ....' ಎಂದು, ನಮ್ಮ ಮಕ್ಕಳಿಗೂ ಮನವರಿಕೆ ಮಾಡಬೇಕು ಎಂದು ತಮ್ಮ ಗೆಳತಿಗೆ ಹೇಳುವ ಮೂಲಕ ಶ್ರೀಮಂತ, ಆಡಂಬರದ ಬದುಕನ್ನು ಸಾಗಿಸುತ್ತ ದುಂದುವೆಚ್ಚ ಮಾಡುತ್ತಿರುವ ವರ್ಗವನ್ನು ಎಚ್ಚರಿಸಿದ್ದಾರೆ. ಈ ಸಮಾಜದ ಸಾಮಾಜಿಕ ಅಸಮಾನತೆಯ ಬಗ್ಗೆ ಸೂಕ್ಷ್ಮವಾಗಿ ಗುರುತಿಸುವ ಮೂಲಕ ಸಮಾಜದ ಬದಲಾವಣೆಗೆ ನಮ್ಮಿಂದಲೇ ಸಣ್ಣ ಪ್ರಯತ್ನಗಳು ಆರಂಭವಾಗಬೇಕೆಂದು ಸಮಾಜ ಸೇವೆಗೆ ಹೆಚ್ಚು ಒತ್ತನ್ನು ನೀಡಿದ್ದಾರೆ. ಸಾಮಾಜಿಕ ಕಳಕಳಿಯುಳ್ಳ ಇವರ ಬರಹಗಳು ಮಾನವೀಯ ಬದುಕಿನ ವೈವಿಧ್ಯಮಯ ಮಗ್ಗಲುಗಳ ಪರಿಚಯ ಮಾಡಿಕೊಟ್ಟಿವೆ.

ಸ್ತ್ರೀ ಸಂವೇದನೆಯ ಅಭಿವ್ಯಕ್ತಿಯಾಗಿ, ಸ್ವತಃ ಒಬ್ಬ ಹೆಣ್ಣಾಗಿ ಲೋಕವಾಸ್ತವವನ್ನು ಕಂಡು ವಿಶ್ಲೇಷಣೆಯ ಮೂಲಕ ಸ್ತ್ರೀ ಸಂವೇದನೆಯ ದಿಟ್ಟ ನೆಲೆಯಲ್ಲಿ ಎಂ.ಎಸ್. ಆಶಾದೇವಿ ಅವರು ಲೇಖನಗಳನ್ನು ರಚಿಸಿದ್ದಾರೆ. ಹೊಸ ತಲೆಮಾರಿನ ಸಮಕಾಲೀನ ಚಿಂತನೆಗಳನ್ನು, ತಾತ್ವಿಕ ನೆಲೆಯಲ್ಲಿ ಚಳುವಳಿ ಮತ್ತು ಹೋರಾಟದ ಭಾಗವಾಗಿ ಹೆಣ್ಣಿನ ನೋವು ಪ್ರತಿರೋಧಗಳನ್ನು ಪುರುಷವಾದಿ ಸಮಾಜದ ಬಿತ್ತಿಯಲ್ಲಿಟ್ಟು ಕಾಣುವ ಕ್ರಮ ಇವರ ಬರಹದ್ದಾಗಿದೆ. ವರ್ತಮಾನದಲ್ಲಿ ಜನರ ಆಲೋಚನೆ ಮತ್ತು ವರ್ತನೆಗಳನ್ನು ಪ್ರಭಾವಿಸುತ್ತಿರುವ ಮಾರುಕಟ್ಟೆ ಆರ್ಥಿಕತೆಯ ಚೌಕಟ್ಟನ್ನು ಕಡೆಗಣಿಸಿದೆ ಅನಿಸುತ್ತದೆ. ಸಮಾಜದ ಚಿಂತನೆಗೆ ಹೆಚ್ಚು ಒತ್ತು ಕೊಟ್ಟಿರುವುದನ್ನು ಇಲ್ಲಿ ಗಮನಿಸಬಹುದು.

ಸಮಾಜದಲ್ಲಿ ಗಂಡು–ಹೆಣ್ಣಿಗೆ ಪ್ರಕೃತಿಯಲ್ಲಿ ಸಮಾನವಾಗಿ ಬದುಕುವ ಹಕ್ಕಿರುವಂತೆ, ಗಂಡು–ಹೆಣ್ಣು ಎಂಬ ಎರಡು ಲಿಂಗಗಳನ್ನು ಮಾತ್ರ ಒಪ್ಪಿಕೊಂಡು ಅದರ ಆಧಾರದಿಂದ ಎಲ್ಲಾ ಬಗೆಯ ವ್ಯವಸ್ಥೆಯನ್ನು ರೂಪಿಸಿಕೊಂಡಿರುವ ಮಾನವರು ಲೈಂಗಿಕ ಅಲ್ಪಸಂಖ್ಯಾತರು, ಲಿಂಗಾಂತರಿಗಳು ಅಥವಾ ತೃತೀಯ ಲಿಂಗಿಗಳ ಬದುಕಿನ ಬಗ್ಗೆ ಆಲೋಚಿಸದಿರುವುದು, ಅವರಿಗೂ ಸಮಾಜದಲ್ಲಿ ಇತರರಂತೆ ವ್ಯವಸ್ಥೆಯೊಳಗೆ ಬದುಕುವ ಹಕ್ಕಿದೆ ಎಂಬುದನ್ನು ಮರೆತಂತಿದೆ. ಸಮಾಜದಿಂದ ದೂರ ಉಳಿದಿರುವ ತೃತೀಯ ಲಿಂಗಿಗಳು ಲಿಂಗ ತಾರತಮ್ಯಕ್ಕೆ ಒಳಗಾಗಿ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಈ ಕುರಿತು ರೂಪಾ ಹಾಸನ ಅವರು 'ನಮ್ಮಂತೆಯೇ ಮನುಷ್ಯರೆಂದು ಒಪ್ಪಿಕೊಂಡರೆ...' ಅಂಕಣದಲ್ಲಿ ಲಿಂಗ ತಾರತಮ್ಯ ವ್ಯವಸ್ಥೆಯನ್ನು ಕುರಿತು ಚರ್ಚಿಸಿದ್ದಾರೆ. ಸಾಮಾನ್ಯ ಮನುಷ್ಯರಾಗಿರುವ ತೃತೀಯ ಲಿಂಗಿಗಳು ಸಮಾಜದಿಂದ, ಕುಟುಂಬದಿಂದ ವಂಚಿತರಾಗಿದ್ದು, ಇದರ ಜೊತೆಗೆ ಅಶ್ಲೀಲ, ಅಸಭ್ಯ ಪದಗಳಿಂದ ಗುರುತಿಸಿ, ನೋಯಿಸುವ, ಹಿಂಸಿಸುವ ಪದ್ಧತಿ ಹಿಂದಿನಿಂದಲೂ ನಡೆದು ಬಂದಿದೆ. ಗಂಡು ದೇಹದಲ್ಲಿರುವ ಹೆಣ್ಣು ಮನಸ್ಸಿನ, ಹೆಣ್ಣಿನ ಸಂವೇದನೆಯುಳ್ಳ ಈ ಲಿಂಗತ್ವ ಅಲ್ಪಸಂಖ್ಯಾತರು ತಮ್ಮ ಕುಟುಂಬ, ಸಮಾಜದಿಂದ ಅನುಭವಿಸುವ ನೋವು, ತಾತ್ಸರಗಳು ಭಾಷೆಯನ್ನು ಮೀರಿದ್ದು. ಬುದ್ಧಿಭಾವಗಳು ಹೆಣ್ತನದಿಂದ ಕೂಡಿದ್ದು, ತಾವು ಗಂಡು ದೇಹದಿಂದ ಮುಕ್ತಿ ಹೊಂದಿ ಹೆಣ್ಣಾಗಲು, ಸಹಜವಾಗಿಯೇ ಹೆಣ್ಣಿನಂತೆ ಬದುಕಲು ಪಡುವ ಯಾತನೆ,

ಗಂಡು–ಹೆಣ್ಣಿನ ನಡುವೆ ಇರುವ ದೈಹಿಕ, ಮಾನಸಿಕ, ಜೈವಿಕ ವ್ಯತ್ಯಾಸಗಳಿಗೆ ಜೀವಂತ ಸಾಕ್ಷಿಯಾಗಿ ನಮಗೆ ಕಾಣುತ್ತದೆ.

ಮುಖ್ಯವಾಗಿ ನಿರ್ದಿಷ್ಟ ಲಿಂಗ, ನಿರ್ಧಾರವಾಗದ ಕಾರಣ ಅವರು ಬಾಲ್ಯದಿಂದಲೂ ಕುಟುಂಬದ ಪ್ರೀತಿ, ಶಿಕ್ಷಣ, ಉದ್ಯೋಗ, ಆರೋಗ್ಯ, ಕಾನೂನು, ಸಾಮಾಜಿಕ ಸ್ಥಾನಮಾನ ಎಲ್ಲದರಲ್ಲಿಯೂ ತಾರತಮ್ಯಕ್ಕೆ ಒಳಗಾಗುತ್ತಾರೆ. ಇಂತಹವರಿಗೆ ಓಟಿನ ಹಕ್ಕಾಗಲಿ, ಆಸ್ತಿಯ ಹಕ್ಕಾಗಲಿ ಹಿಂದೆ ಇರಲಿಲ್ಲ. ಈ ಕುರಿತು ಸಮುದಾಯದ ಅವಿರತ ಹೋರಾಟದಿಂದ ಅವರಿಗೆ ಗುರುತುಗಳನ್ನು ನೀಡುವ ಪ್ರಯತ್ನಗಳು ಇಂದು ನಡೆಯುತ್ತಿವೆ. ಆದರೆ ಇವರು ಮನುಷ್ಯರು ಎಂಬ ಮಾನವೀಯತೆ ಇಲ್ಲದಂತೆ ಕುಟುಂಬ ಮತ್ತು ಸಮಾಜವು ಎಲ್ಲರಂತೆ ಕಾಣದೆ ಪ್ರೀತಿಯಿಂದ ವಂಚಿತರಾಗಿದ್ದಾರೆ. ತಮ್ಮ ಅಸ್ಥಿತ್ವಕ್ಕಾಗಿ ಬದುಕಿನುದ್ದಕ್ಕೂ ಹೋರಾಡುವ ಇವರು ಕುಟುಂಬ ಮತ್ತು ಸಮಾಜದ ಒಂದಿಷ್ಟು ಪ್ರೀತಿಗೆ ಹಾತೊರೆಯುತ್ತಾರೆ. ಸಾಕು ಪ್ರಾಣಿಗಳನ್ನು ಪ್ರೀತಿಯಿಂದ ಕಾಣುವ ಜನರು ಇವರನ್ನು ಮಾತ್ರ ಅಸಡ್ಡೆಯಿಂದ ಕಾಣುತ್ತಾರೆ.

ಮುಖ್ಯವಾಹಿನಿಯಿಂದ ತೀವ್ರ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಇವರು, ಇತರರಂತೆ ಸಹಜವಾಗಿ ಬಾಳುವುದಕ್ಕೆ ಹೋರಾಟ ನಡೆಸುತ್ತಿದ್ದಾರೆ. ಕೆಲವೊಮ್ಮೆ ಲೈಂಗಿಕ ಕಿರುಕುಳ, ದೌರ್ಜನ್ಯಕ್ಕೂ ಒಳಗಾಗುತ್ತಿದ್ದಾರೆ. ಇಂತಹವರಿಗೆ ಸಮಾಜದಲ್ಲಿ ಎಲ್ಲರಂತೆ ಬದುಕುವ ಸಾಮಾಜಿಕ ಹಕ್ಕನ್ನು ಸರ್ಕಾರಗಳು ನೀಡಿ, ಗೌರವಯುತವಾಗಿ ಬದುಕಲು ಸೌಕರ್ಯಗಳನ್ನು ಕಲ್ಪಿಸಬೇಕು. ಸರ್ಕಾರ ಮತ್ತು ಸಮಾಜದಿಂದ ಸೂಕ್ತ ಬದಲಾವಣೆಗಳು ಜರುಗಬೇಕು. ಪ್ರಕೃತಿದತ್ತ ಸಮಸ್ಯೆಯನ್ನು ಎಲ್ಲರೂ ಅರಿತು ತೃತೀಯ ಲಿಂಗಿಗಳು ನಮ್ಮಂತೆಯೇ ಎಂದು ಒಪ್ಪಿಕೊಳ್ಳುವ ಮನಸ್ಥಿತಿಯನ್ನು ಎಲ್ಲರೂ ಬೆಳೆಸಿಕೊಳ್ಳಬೇಕು ಎಂದು ತೃತೀಯ ಲಿಂಗಿಗಳ ಬಗೆಗಿನ ಕಾಳಜಿ ಇಲ್ಲಿ ವ್ಯಕ್ತವಾಗಿದೆ.

'ಆತಂಕದಲ್ಲಿ ತಲ್ಲಣಿಸುತ್ತಿರುವ ಕಂದಮ್ಮಗಳು, ನಾವೂ ಮಕ್ಕಳು.... ರಕ್ಷಿಸಿ ಈ ಅಸಹಾಯಕ ಬಾಲೆಯರನು' ಈ ಅಂಕಣಗಳಲ್ಲಿ ಚಿಕ್ಕ ಮಕ್ಕಳ ಮೇಲೆ ನಡೆದಿರುವ ಅತ್ಯಾಚಾರ ಪ್ರಕರಣಗಳು ಸಮಾಜವನ್ನು ಬೆಚ್ಚಿ ಬೀಳಿಸುತ್ತವೆ. ಆಟ ಆಡುವ ಹಸುಗೂಸುಗಳನ್ನು ಬಿಡದ ಕಾಮುಕರು ಮಕ್ಕಳ ಮೇಲೆ ದೌರ್ಜನ್ಯವೆಸಗಿದ್ದಾರೆ. ಆಗಷ್ಟೇ ಋತುಮತಿಯಾಗಿ ಆರು ತಿಂಗಳೂ ಕಳೆದಿಲ್ಲದ 11 ವರ್ಷದ ಎಳೆಬಾಲೆಯ ಮೇಲೆ ಸಂಬಂಧಿಯಿಂದಲೇ ಅತ್ಯಾಚಾರವಾಗಿದೆ. "ಲೈಂಗಿಕತೆ ಎಂದರೇನು? ಎಂದೇ ಅರಿಯದ, ಪ್ರೀತಿ–ಪ್ರೇಮವೆಂದರೆ ಏನೆಂದು ತಿಳಿಯದ ಮುಗ್ಧ ಹುಡುಗಿಯನ್ನು ಶಾಲೆಗೆ ಬಿಡಲು ಕರೆದುಕೊಂಡು ಹೋಗಿ ಅತ್ಯಾಚಾರವೆಸಗಿದ್ದಾನೆ. ಮೈ ಮನಸುಗಳೆರಡೂ ಜರ್ಜರಿತವಾಗಿ ನಡುಗುತ್ತಿರುವ ಆ ಕಂದಮ್ಮ ಇದನ್ನು, ಅವನು ಕೊಟ್ಟ ಶಿಕ್ಷೆ ಎಂದೇ ಭಾವಿಸಿದ್ದಾಳೆ. 'ನಾನೇನೂ ತಪ್ಪು ಮಾಡಿಲ್ಲದಿದ್ದರೂ, ಮಾಮ ನನಗೆ ಈ ಶಿಕ್ಷೆ ಯಾಕೆ ಕೊಟ್ಟರು? ಎಂಬ ಪ್ರಶ್ನೆಗೆ ಏನು ಉತ್ತರಿಸುವುದೆಂಬ ಅರಿವಿಲ್ಲದೇ ಕಂಗಳು ತುಂಬುತ್ತವೆ".2

ಹೆಣ್ಣು ಮಕ್ಕಳ ಮೇಲೆ ಪ್ರತಿ 20 ನಿಮಿಷಕ್ಕೊಂದು ಅತ್ಯಾಚಾರ ನಡೆಯುತ್ತಿದೆ ಎಂಬ ದಾಖಲೆಗಳ ವರದಿಯು ಅತ್ಯಂತ ಆತಂಕಕಾರಿ ಬೆಳವಣಿಗೆಯಾಗಿದೆ. ಮತ್ತೊಂದು ಪ್ರಕರಣದಲ್ಲಿ ಬಡವರ ಹಳ್ಳಿ ಹುಡುಗಿ ಶಾಲೆಗೆ ಹೋಗುವ ಸಂದರ್ಭದಲ್ಲಿ ಅತ್ಯಾಚಾರಕ್ಕೆ ಒಳಗಾಗಿದೆ. ಇದರ ಜೊತೆಗೆ ಕೊಲೆ ಬೆದರಿಕೆಯಿಂದ ನಾಲ್ಕು ತಿಂಗಳು ಯಾರಿಗೂ ಹೇಳದೆ ಗರ್ಭಿಣಿಯಾಗಿ ಪೊಲೀಸರಿಗೆ ಪೋಷಕರು ಕಂಪ್ಲೆಂಟ್ ನೀಡುತ್ತಾರೆ. ಪೊಲೀಸರು, ವೈದ್ಯರ ಅಸಡ್ಡೆಯ ಮಾತುಗಳು, ಅವಮಾನದಿಂದ ಮಾಡದ ತಪ್ಪಿಗೆ ಚಿತ್ರಹಿಂಸೆ ಅನುಭವಿಸುತ್ತಾಳೆ. ಸಮಾಜದ ನಿರ್ಲಕ್ಷ್ಯ ಮತ್ತು ತಾತ್ಸಾರದಿಂದ ಎಳವೆಯಲ್ಲೇ ಅತ್ಯಾಚಾರಕ್ಕೊಳಗಾಗಿ, ಲೈಂಗಿಕ ದಂಗೆಗೆ ಒಳಗಾದವರು ಮತ್ತೆ ಹಲವರು. ಇಂತಹ ದೌರ್ಜನ್ಯ ಘಟನೆಗಳು ನಿಜಕ್ಕೂ ಸಮಾಜವನ್ನು ಬೆಚ್ಚಿ ಬೀಳುವಂತೆ ಮಾಡಿವೆ. ರೂಪ ಹಾಸನ ಅವರು ಇಂತಹ ಹಲವಾರು ನೈಜ ಸಂಗತಿಗಳನ್ನು ತಮ್ಮ ಅಂಕಣಗಳಲ್ಲಿ ವರದಿ ಮಾಡುವ ಮೂಲಕ ಶೋಷಣೆಗೆ ಒಳಗಾದ ಹೆಣ್ಣುಮಕ್ಕಳಿಗೆ ನ್ಯಾಯ ಸಿಗುವಂತೆ, ಸರ್ಕಾರಕ್ಕೆ ತಲುಪಿಸುವಲ್ಲಿ ಈ ಲೇಖನಗಳು ಪ್ರಮುಖ ಪಾತ್ರವಹಿಸಿವೆ. ನಿಜಕ್ಕೂ ಸರ್ಕಾರಕ್ಕೆ ಮನುಷ್ಯತ್ವವಿದ್ದರೆ, ತಕ್ಷಣ ಇಂತಹ ದಂಧೆಯೊಳಗೆ ಬಿದ್ದಿರುವ ಅಂಗವಿಕಲರು, ಅತ್ಯಾಚಾರಕ್ಕೊಳಗಾದ ಹೆಣ್ಣುಮಕ್ಕಳು ಮತ್ತು ಸಾವಿರಾರು ಎಳೆಯ ಬಾಲೆಯರನ್ನು ಪ್ರಥಮ ಆದ್ಯತೆಯಾಗಿ ರಕ್ಷಿಸಿ ಅವರಿಗೆ ಗೌರವ ಜೀವನ ರೂಪಿಸಲು ಸರ್ಕಾರ ನೆರವಾಗುವಂತೆ, ಶೋಷಿತರ ಗಟ್ಟಿಧ್ವನಿಯಾಗಿ, ಧ್ವನಿ ಎತ್ತಿ ಸಮಾಜದಲ್ಲಿ ಹಾಗೂ ಸರ್ಕಾರದ ಮಟ್ಟದಲ್ಲಿ ಜಾಗೃತಿಯನ್ನುಂಟು ಮಾಡಿದ್ದಾರೆ.

'ಜಲಾಂದೋಲನವೊಂದೇ ಬರಕ್ಕೆ ಪರಿಹಾರ...' ಅಂಕಣದಲ್ಲಿ ಜೀವ ಜಲವಾದ ನೀರಿನ ಲಭ್ಯತೆಯ ಪ್ರಮಾಣ ದಿನದಿಂದ ದಿನಕ್ಕೆ ಕುಸಿಯುತ್ತಿದ್ದು ಜಲಕ್ಷಾಮ ಆವರಿಸುತ್ತಿದೆ. ಬರ ಪರಿಸ್ಥಿತಿ ಆವರಿಸಿದ್ದು ಅದರ ತೀವ್ರತೆ ಹೆಚ್ಚುತ್ತಿದೆ. ರಾಜ್ಯದ ಹಲವು ಭಾಗಗಳಲ್ಲಿ ಕುಡಿಯುವ ನೀರಿನ ಆಹಾಕಾರವಿದೆ. ಇದಕ್ಕೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲು ತಿಳಿಸಿದ್ದಾರೆ. ಮಳೆ ನೀರಿನ ರಕ್ಷಣೆ, ಅಂತರ್ಜಲ ಹೆಚ್ಚಿಸುವಿಕೆಯ ಮೂಲಕ ರಾಜ್ಯದಲ್ಲಿ ಜಲಾಂದೋಲನವನ್ನು ರೂಪಿಸುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಜಲಸಂರಕ್ಷಣೆಯ ಕುರಿತು ಮನವರಿಕೆ ಮಾಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ನೆಲೆಯಲ್ಲಿ ಜೀವ ಜಲದ ರಕ್ಷಣೆಯ ಬಗ್ಗೆ ಕಾಳಜಿ ತೋರಿದ್ದಾರೆ.

'ಹೋರಾಟಕ್ಕಾಗಿ ಪಿಂಚಣಿಯೆ? ಪಿಂಚಣಿಗಾಗಿ ಹೋರಾಟವೆ?' ಅಂಕಣದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡುವ ಪಿಂಚಣಿಯನ್ನು ತಮಿಳುನಾಡಿನ ಎ.ಕೆ. ಮಾಣಿಕ್ಕಂ ಪಿಳ್ಳೈರವರ ಪಿಂಚಣಿಗೆ ಸಂಬಂಧಿಸಿದಂತೆ ಧರಣಿದೇವಿ ಮಾಲಗತ್ತಿ ಅವರು ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ ವ್ಯವಸ್ಥೆಯನ್ನು ಕುರಿತು ಚರ್ಚಿಸಿದ್ದಾರೆ. ವಯಸ್ಸಾದ ವ್ಯಕ್ತಿ ಸುಪ್ರೀಂ ಕೋರ್ಟ್ ಹಂತದವರೆಗೆ ತನ್ನ ಪಿಂಚಣಿಗಾಗಿ ಹೋರಾಟ ಮಾಡಿದ ಹಿರಿಯ ಸ್ವಾತಂತ್ರ್ಯ ಹೋರಾಟಗಾರನ ಬದುಕು ಮತ್ತು ಹಲವು ಹೋರಾಟಗಾರರು ಈ ಸೌಲಭ್ಯವನ್ನು ಪಡೆದುಕೊಳ್ಳದೆ ನಿರಾಕರಿಸಿರುವ ಸಂಗತಿಗಳನ್ನು ಇಲ್ಲಿ ಚರ್ಚಿಸಿದ್ದಾರೆ. ಸಮಾಜದಲ್ಲಿ ದೇಶಕ್ಕಾಗಿ ಹೋರಾಡಿದ ಹಿರಿಯರಿಗೆ ನೀಡುವ ಪಿಂಚಣಿ ವ್ಯವಸ್ಥೆಯೇ ಈ ರೀತಿಯಾದರೆ; ಇತರ ಪಿಂಚಣಿಗಳ ಸಾಮಾನ್ಯ ವೃದ್ಧರ ಗತಿಯೇನು? ಎಂಬ ಪ್ರಶ್ನೆ ನಮ್ಮನ್ನು ಕಾಡದೆ ಇರದು.

ಸುನಂದ ಪ್ರಕಾಶ ಕಡಮೆ ಅವರು 'ಪಡುವಣದ ಕಡಲು' ಎಂಬ ಅಂಕಣ ಸಂಕಲನದ 'ರೆಕ್ಕೆ ಬಿಚ್ಚಿದ ಬಣ್ಣದ ಹಕ್ಕಿ' ಅಂಕಣದಲ್ಲಿ ಬಾಲ್ಯ ಮುಗಿದು ಯೌವನಕ್ಕೆ ಕಾಲಿಡುವ ಹುಡುಗ – ಹುಡುಗಿಯರ ಮನಸ್ಸಿನ ಭಾವನೆಗಳನ್ನು ಗುರುತಿಸಲಾಗಿದೆ. ಹುಡುಗಿಯು ಹರಯಕ್ಕೆ ಬಂದರೆ ಭಾವನೆಗಳಲ್ಲಿ ಆಕರ್ಷಣೆ ಮೂಡಿ, ಕುತೂಹಲ, ಸೆಳೆತ, ಸ್ವಚ್ಛಂದ ವರ್ತನೆಗಳು ಕಾಣುತ್ತವೆ. ಇದು ಹೆತ್ತವರಿಗೆ ಆತಂಕವನ್ನು ಮೂಡಿಸುತ್ತದೆ. ಮನೆ ಮಂದಿಯೆಲ್ಲಾ ಆಕೆಯ ಬಗ್ಗೆ ಎಚ್ಚರವಹಿಸುತ್ತಾರೆ. ಜೊತೆಗೆ ಇತ್ತೀಚಿನ ದಿನಗಳಲ್ಲಿ ಹರೆಯದ ಹುಡುಗಿಯರನ್ನು ಹೆತ್ತವರೇ ಮದುವೆ ಸಮಾರಂಭಗಳಿಗೆ ಕರೆದೊಯ್ಯುತ್ತಾರೆ. ಹುಡುಗರು ನೋಡಿ ಆಕರ್ಷಿತರಾದರೆ ಮದುವೆಗೆ ಸೂಚನೆಗಳೂ ಸಿಗಬಹುದು ಎಂಬ ಇಂತಹ ವ್ಯವಹಾರವು ಸಾಮಾಜಿಕ ಬದುಕಿನ ವಾಸ್ತವ ಚಿತ್ರಣವಾಗಿದೆ.

ಈ ಮೇಲಿನ ಅಂಕಣ ಬರಹಗಳಲ್ಲಿ ಸಮಾಜದ ಹಲವಾರು ಘಟನೆಗಳನ್ನು ಕುರಿತು ಚರ್ಚಿಸಲಾಗಿದೆ. ಜೊತೆಗೆ ಸಮಸ್ಯೆಗೆ ಕಾರಣ ಹಾಗೂ ಪರಿಹಾರವನ್ನು ಕುರಿತು ವಿವರಿಸಲಾಗಿದೆ. ಎಚ್.ಎಸ್.ಸುಜಾತ, ವೈದೇಹಿ, ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ, ಆರ್.ಇಂದಿರಾ, ಚಂದ್ರಮತಿ ಸೋಂದಾ, ಎಂ.ಎಸ್.ಆಶಾದೇವಿ, ಎಚ್.ಎಸ್.ಅನುಪಮಾ ಈ ಪ್ರಮುಖ ಅಂಕಣಕಾರ್ತಿಯರ ಅಂಕಣ ಬರಹಗಳ ವಿಶ್ಲೇಷಣೆಯ ಅವರ ಬರವಣಿಗೆಯಲ್ಲಿ ಮೂಡಿ ಬಂದಿರುವ ಸಮಾಜಪರ ನಿಲುವುಗಳನ್ನು ವಿವರಿಸುವ ಮೂಲಕ ಸಮಾಜದ ಸಾಮಾಜಿಕ ಚಿಂತನೆಗಳನ್ನು ಕುರಿತಂತೆ ಈ ಲೇಖನದಲ್ಲಿ ಪ್ರಸ್ತುತ ಪಡಿಸಲಾಗಿದೆ.

ಕೊನೆಟಿಪ್ಪಣಿಗಳು :

1. (ಸಂ.) ಎಚ್.ಡಿ. ಪ್ರಶಾಂತ, ಪಿ. ವೀರಭದ್ರನಾಯ್ಕ : ಸಾಮಾಜಿಕ ತಲ್ಲಣಗಳು, ಕಾಳಜಿಗಳು – ಕನಸುಗಳು ; ಪುಟ ಸಂಖ್ಯೆ 17.
2. ರೂಪ ಹಾಸನ : ನಾನೊಂದು ಮಗು ನನ್ನ ಭವಿಷ್ಯ ನಿಮ್ಮ ಬೊಗಸೆಯಲ್ಲಿ ; ಪುಟ ಸಂಖ್ಯೆ 52.

ಉಸುರಿನ ಪರಿಮಳವಿರಲು

***

ಡಾ. ರವಿಶಂಕರ್ ಎ.ಕೆ.
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಕೆ. ನಾರಾಯಣಪುರ, ಬೆಂಗಳೂರು
ravishankar@kristujayanti.com

ಒಂದು ವಚನವು ಕಾವ್ಯ – ಮಹಾಕಾವ್ಯವು ನಿರೂಪಿಸುವ, ಕಥೆ – ಕಾದಂಬರಿ ಅಭಿವ್ಯಕ್ತಪಡಿಸುವ ಇಲ್ಲವೆ, ಅನುಭವ – ಅನುಭಾವ ಅಭಿವ್ಯಕ್ತಿಸಬಲ್ಲ ಕಥನವನ್ನು ತೆರೆದಿಡಬಲ್ಲದು ಎಂಬುದನ್ನು ನಿರೂಪಿಸಬಲ್ಲೆ. ಈ ವಾಕ್ಯವನ್ನು ಶ್ರೇಷ್ಠ ವಿದ್ವಾಂಸರು ಹೇಳಿದಾಗ ಮಹತ್ವದೆಂದು ಉಲ್ಲೇಖಿಸುವ ಬದಲು, ಒಮ್ಮೆ ಒಂದು ವಚನವನ್ನು ತಳಸ್ಪರ್ಷಿಯವಾಗಿ ಅಧ್ಯಯನಮಾಡುವ ಪ್ರತಿ ಅಧ್ಯಯನಕಾರರಿಗೂ ಈ ಒಳಹು ಲಭಿಸುತ್ತದೆ.

ವಚನಗಳು ಈ ಪ್ರಕೃತಿಯ ಸಹಜ ಆಕೃತಿಗಳು. ಜನಪದರು ವಿವೇಚಿಸಿದ ಜ್ಞಾನಕ್ಕೆ ವಿಜ್ಞಾನ–ತತ್ತ್ವ ಅನುಭಾವಗಳು ಬೆರೆತ ಸಮಗ್ರೀಯ ಮನೋ ಉಲ್ಲೇಖಗಳು. ಅಂತರಂಗದ ಪ್ರಯಾಣಗಳು. ವಿಶ್ವಕ್ಕೆ ಕನ್ನಡ ಸಾಹಿತ್ಯ ನೀಡಿರುವ ಪ್ರಮುಖ ಕೊಡುಗೆಗಳಲ್ಲಿ ವಚನಗಳು ದೀಪದಂತೆ ಬೆಳಗುತ್ತಿವೆ. ಅನುವಾದಕ್ಕೂ ಸಿಗದೆ, ರೂಪಾಂತರಗೊಳ್ಳಬಲ್ಲ ಶಕ್ತಿಯುತ ಪದಪುಂಜಗಳು.

ನಾವು ಯಾರು? ಏಕೆ ಜೀವಿಸಿದ್ದೇವೆ? ನಮ್ಮನ್ನು ನಾವು ಅರಿಯುವುದು ಹೇಗೆ? ನಮ್ಮ ಕರ್ತವ್ಯಗಳೇನು? ನಮ್ಮ ಬಾಳ್ವೆಯ ತೃಪ್ತಿ ಯಾವುದು ಈ ಎಲ್ಲಾ ಪ್ರಶ್ನೆಗಳಿಗೆ ವಚನಗಳ ಒಂದೊಂದು ಸಾಲು ಸಂಕ್ಷಿಪ್ತವಾಗಿ ವಿವರಿಸಬಲ್ಲದು. ಆದ್ದರಿಂದಲೇ ವಚನಗಳು, ತ್ರಿಪದಿಗಳು ಹಾಗೂ ಗಾದೆಯಂತಹ ನುಡಿಯುಕ್ತಿಗಳು ಮಹಾಕಾವ್ಯಗಳ ಸಮನಾಗಿ ಓದುಗರಲ್ಲಿ ಸ್ಥಾನ ಪಡೆದಿವೆ.

ತನ್ನನ್ನು ತಾನು ಅರಿಯುವ ಜ್ಞಾನದಲ್ಲಿಯೇ ವಿಶ್ವದ ಎಲ್ಲಾ ಪರಿಧಿಗಳು ಅಡಗಿವೆ. ಅದರಲ್ಲಿಯೇ ವಾಸ್ತದ ಪ್ರಯಾಣವಿರುವುದು.

ಇದನ್ನು ತಿಳಿಯಲು ಈ ಲೇಖನದಲ್ಲಿ ಅಕ್ಕಮಹಾದೇವಿಯವರ ಒಂದು ವಚನದ ನಿರ್ವಚನವನ್ನು ಇಲ್ಲಿ ಸರಳವಾಗಿ ನಿರೂಪಿಸಲಾಗಿದೆ.

ಉಸುರಿನ ಪರಿಮಳವಿರಲು
ಕುಸುಮದ ಹಂಗೇಕಯ್ಯಾ?
ಕ್ಷಮೆ ದಮೆ ಶಾಂತಿ ಸೈರಣೆಯಿರಲು
ಸಮಾಧಿಯ ಹಂಗೇಕಯ್ಯಾ?
ಲೋಕವೆ ತಾನಾದ ಬಳಿಕ
ಏಕಾಂತದ ಹಂಗೇಕಯ್ಯಾ ಚೆನ್ನಮಲ್ಲಿಕಾರ್ಜುನಾ?
(ಅಕ್ಕಮಹಾದೇವಿ) ವಚನ ಸಂಖ್ಯೆ 84, ಪು. ಸಂಖ್ಯೆ 796

ಅಕ್ಕಮಹಾದೇವಿಯು ಮನಸ್ಸಿನ ಆರೋಗ್ಯ ಕುರಿತು ಚಿಂತಿಸಿದ ಶರಣೆ. ಭಾವನಾತ್ಮಕ ಚಿಕಿತ್ಸೆಯನ್ನು ತನ್ನೊಳಗೆ ರೂಪಿಸಿಕೊಂಡ ಆತ್ಮವಲೋಕದಂತೆ ಈಕೆಯ ವಚನಗಳು ಕಂಡುಬರುತ್ತವೆ. ಈ ವಚನವು ತನ್ನೊಳಗಿನ ಅಂತರಂಗ ಶಕ್ತಿಯ ಮರೆತು ಬಾಹ್ಯ ಹುಡುಕಾಟಗಳನ್ನು ಕುರಿತು ತೊಳಲಾಡುವ ಮನಸ್ಸುಗಳಿಗೆ ಪ್ರಶ್ನಿಸಿರುವುದನ್ನು ಕಾಣಬಹುದಾಗಿದೆ.

ನಮ್ಮ ಆಲೋಚನೆಗಳು ಹಿತವಿದ್ದಾಗ, ನಿಸ್ವಾರ್ಥದ ಕ್ಷಮೆ, ದಯೆಗಳು ತುಂಬಿರುವಾಗ ನಮ್ಮ ಉಸಿರು ಕೂಡ ಇನ್ನೊಬ್ಬರಿಗೆ ಹಿತವೆನಿಸುತ್ತದೆ. ನಮ್ಮ ನುಡಿ, ಕಾರ್ಯಗಳು ಇಷ್ಟಪಡುತ್ತಾರೆ. ಇಂತಹ ಉಸುರಿನ ಪರಿಮಳವನ್ನು ನಾವು ಅರಿಯಲು ಬಾಹ್ಯ ಜಗತ್ತಿನ ಹೂವಿನ ಪರಿಮಳ ಆಸ್ವಾದದ ಹುಡುಕಾಟ ಅಗತ್ಯವಿರುವುದಿಲ್ಲ. ನಮ್ಮಲ್ಲಿ ಇನ್ನೊಬ್ಬರನ್ನು ಕ್ಷಮಿಸುವ, ದಯೆ ತೋರುವ, ಶಾಂತಿ ಸೈರಣೆಯಿಂದ ವರ್ತಿಸುವ ಗುಣವನ್ನು ಬೆಳಸಿಕೊಂಡಾಗ ಸಮಾಧಿ ಸ್ಥಿತಿಗಳಾದ ಧ್ಯಾನ, ಯೋಗ ಮೊದಲಾದ ವಿಚಾರಗಳನ್ನು ಹುಡುಕಿ ಪಡೆಯುವ ಅಗತ್ಯವಿಲ್ಲ. ಈ ಲೋಕವೇ ತಾನೆಂದು ಭಾವಿಸಿದಾಗ ನಮಗೆ ಯಾರ ಹಂಗಾಗಲೀ, ಏಕಾಂತವಿರುವೆನೆಂಬ ಭಯವಾಗಲಿ ಇರುವುದಿಲ್ಲ. ಆದ್ದರಿಂದ ಜಂಗಮ ಸ್ವರೂಪಿಗಳಾಗಿ ಆಲೋಚಿಸಬೇಕಿದೆ. ಸಾಧ್ಯವಾದಷ್ಟು ಚಿಕ್ಕ ಚಿಕ್ಕ ಕಾರಣಗಳಿಗೂ ಬೇಸರಿಸದೆ, ಇನ್ನೊಬ್ಬರಿಗೆ ತೊಂದರೆ ನೀಡದೆ ಬದುಕಬೇಕಿದೆ. ಅಕ್ಕಮಹಾದೇವಿಯು ಹುಡುಕಿದ ಚೆನ್ನಮಲ್ಲಿಕಾರ್ಜುನನು ಆಕೆಯೊಳಗಿನ ಅರಿವು. ನಮ್ಮೊಳಗಿನ ಅರಿವು ತಿಳಿಯಾಗಿ ತಿಳಿದರೆ ನಮ್ಮ ಉಸಿರು ಕೂಡ ಪರಿಮಳವಾಗಿ ನಾವು ಆನಂದ ಪಡೆಯಬಹುದು.

"ಈ ವಚನ ಜೀವಪರ ಧೋರಣೆಯ ಪ್ರತೀಕವಾಗಿದೆ. ಅಕ್ಕಮಹಾದೇವಿ ಈ ವಚನದಲ್ಲಿ 'ಸಮಾಧಿ' ಮತ್ತು 'ಏಕಾಂತ'ದ ಅರ್ಥವಿಸ್ತಾರ ಮಾಡಿದ್ದಾಳೆ. ವ್ಯಷ್ಠಿ ಪ್ರಜ್ಞೆಯ ಈ ಪದಗಳು ಅಕ್ಕನ ವಚನದಲ್ಲಿ ಸಮಷ್ಟಿ ಪ್ರಜ್ಞೆಯ ಪ್ರತೀಕವಾಗಿ ಮಾನವೀಯ ಚಿಂತನೆಗೆ ಹಚ್ಚುತ್ತವೆ**"** ಎಂದು ರಂಜಾನ್ ದರ್ಗಾ ಅವರು ಅಭಿಪ್ರಾಯಪಟ್ಟಿದ್ದಾರೆ.

ವಚನ ಸಾಹಿತ್ಯದಲ್ಲಿಯೇ ಇದೊಂದು ವಿಭಿನ್ನ ವಚನವಾಗಿದೆ. ಉಸುರು, ಕ್ಷಮೆ, ದಮೆ, ಶಾಂತಿ, ಲೋಕ ಈ ಎಲ್ಲವೂ ಅಂತರಂಗದ ಆತ್ಮಶಕ್ತಿಗಳು. ಅಲೌಕಿಕ ಪ್ರಕ್ರಿಯೆಗಳು. ಸರಳವಾಗಿ ಹೇಳುವುದಾದರೆ, ನಮ್ಮಿಂದಲೇ ಸಾಧ್ಯವಾಗುವ ನಮ್ಮೊಳಗಿನ ಶಕ್ತಿಗಳು. ಇವುಗಳನ್ನು ಕಾಣದ ನಾವು ಪರ್ಯಾಯವಾಗಿ ಅಲೌಕಿಕ ಜಗತ್ತಿನಲ್ಲಿ ಬಾಹ್ಯ ಹುಡುಕಾಟಗಳಿಗೆ ತೊಡಗಿರುತ್ತೇವೆ. ಕುಸುಮದ ಹಂಗು, ಸಮಾಧಿಯ ಹಂಗು, ಏಕಾಂತದ ಹಂಗು ಈ ಮೂರರಲ್ಲಿ ಸ್ವಾತಂತ್ರ್ಯವಿಲ್ಲ. ಅದು ಹಂಗಿನ ಪ್ರಕ್ರಿಯೆಗಳು. ಋಣದಲ್ಲಿಯೇ ಬದುಕುವ ಹಂಬಲಗಳು. ಇಂತಹ ಅವಲಂಬನೆಯ ಸುಖವು ಅನಗತ್ಯವಾಗಿದೆ. ಯಾವಾಗಲೂ ಸ್ವಾತಂತ್ರ್ಯದ ತತ್ವವನ್ನು ಅಕ್ಕ ತನ್ನ ವಚನಗಳಲ್ಲಿ ನಿರೂಪಿಸಲು ಹಂಬಲಿಸುತ್ತಾರೆ. ಚೆನ್ನಮಲ್ಲಿಕಾರ್ಜುನವೆಂಬುದೇ ಒಂದು ಬಿಡುಗಡೆ. ಬಂಧನಗಳ ಆಚೆಯ ಸುಖವು ಅದೆಷ್ಟು ನಿರ್ಮಲವೆಂಬುದನ್ನು ಅಕ್ಕನ ವಚನಗಳು ನಿರೂಪಿಸುತ್ತವೆ.

ಈ ವಿಚಾರವನ್ನು ಆಸನದಿಂದ ಕುದಿದು ವ್ಯಸನದಿಂದ ಬೆಂದು ಅತೀ ಆಸೆಯಿಂದ ಬಳಲಿ ವಿಷಯಕ್ಕೆ ಹರಿವಜೀವಿಗಳು ನಿಮ್ಮನರಿಯರು ಕಾಲಕಲ್ಪಿತ ಪ್ರಳಯಜೀವಿಗಳೆಲ್ಲ ನಿಮ್ಮನೆಂತು ಬಲ್ಲರಯ್ಯ ಚನ್ನಮಲ್ಲಿಕಾರ್ಜುನ? ಎನ್ನುವರು. ಈ ಲೌಕಿಕ ಬದುಕನ್ನು ನಿರಾಕರಿಸುವ ಅಕ್ಕನವರು ಇದರಲ್ಲಿ ತೊಳಲುವವರನ್ನು ಭವಿಗಳೆಂದು ಸಾಮಾನ್ಯೀಕರಿಸಿದ್ದಾರೆ.

ಕ್ಷಮೆ, ದಮೆ, ಶಾಂತಿ, ಸೈರಣೆ ಕುರಿತು ಕೂಡ ತನ್ನಿತರ ವಚನಗಳಲ್ಲಿ ಚರ್ಚಿಸುತ್ತಲೇ ಈ ಬಾಹ್ಯ ಹುಡುಕಾಟದ, ತೋರಿಕೆಯ ಭವ ಜೀವನವನ್ನು ನಿರಾಕರಿಸುವುದನ್ನು ಕಾಣಬಹುದಾಗಿದೆ. ಭವ ಎಂದರೆ, ಈ ಲೋಕ. ಸ್ವಾರ್ಥವಾಗುವ ಪ್ರಕ್ರಿಯೆ. ಅಭವವೆಂದರೆ ಈ ಲೋಕವನ್ನು ಗೆದ್ದು, ನಿಸ್ವಾರ್ಥವಾಗಿ ಬದುಕುವುದು. ಪರಮಾತ್ಮನೆಂಬ ಮನೋಬಲವನ್ನು ಆಸ್ವಾದಿಸುವುದು. ಇಂದು ಲೌಕಿಕ ಒತ್ತಡಗಳಲ್ಲಿ ಸಿಲುಕಿರುವ ಈ ಮನುಷ್ಯನು ಬದುಕಿನ ಏಕಾಂತಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದಾನೆ. ಅದಕ್ಕಾಗಿ ಹಂಬಲಿಸುತ್ತಿದ್ದಾನೆ. ಈ ಹುಡುಕಾಟದಲ್ಲಿ

ತಾನೊಂದು ವಸ್ತುವಾಗುವ ಮನುಷ್ಯ ಮನೋದೌರ್ಬಲ್ಯಕ್ಕೆ ಈ ವಚನವು ಆತ್ಮಸ್ಥೈರ್ಯ ತುಂಬುತ್ತದೆ.

ಅಂತರಂಗ – ಬಹಿರಂಗ

ಅಕ್ಕನ ವಚನಗಳೆಲ್ಲವೂ ಈ ಅಂತರಂಗ – ಬಹಿರಂಗಗಳ ನಡುವಿನ ಭೇದವನ್ನು ವಿಭಾಗಿಸುವ ಪರಿಯೇ ಆಗಿದೆ. ಅದನ್ನು ಪ್ರತಿ ವಚನದಲ್ಲಿಯೂ ಬಿಡಿಸುತ್ತಾ ಸ್ಪಷ್ಟಪಡಿಸುವ ಫಲಿತಗಳಿವೆ. ಭವ ಅಭವಗಳೆಂಬ ನಾಮದಲ್ಲಿ ಮಲ್ಲಿಕಾರ್ಜುನನೆಂಬ ಸಂಕೇತದಲ್ಲಿ ಸೇರುವ ಈ ವಚನಗಳ ಪರಿಧಿ ಅತ್ಯಂತ ತಾರ್ಕಿಕವಾದುದು. ಅಂತರಂಗದಲ್ಲಿನ ಮನಸ್ಸು ಎಂದಿಗೂ ಬಹಿರಂಗದ ಹುಡುಕಾಟದಲ್ಲಿ ಇರಕೂಡದೆಂಬ ನಿಲುವು ಅಕ್ಕನಲ್ಲಿತ್ತು. ಆಕೆಯ ಕನಸು ಕೂಡ ಅಂತರಂಗದ ಪ್ರಯಾಣವೇ ಆಗಿದೆ. ಚೆನ್ನಮಲ್ಲಿಕಾರ್ಜುನನ ಸಾಮಿಪ್ಯವೇ ಅತ್ಯಂತ ಚಿರಂತನವಾದುದು.

ಲೋಕವೆ ತಾನಾದ ಬಳಿಕ ಏಕಾಂತದ ಹಂಗೇಕಯ್ಯಾ

ಈ ಸಾಲು ವಿಶೇಷ ಎನಿಸಬಹುದು. ಮನೋ ಚಿಂತನೆಯಲ್ಲಿ ಏಕಾಂತವನ್ನು ನಿರಾಕರಿಸಲಾರರು. ಆದರೆ, ಅಕ್ಕನ ಚಿಂತನೆಗಳೇ ವಿಶೇಷ. ಸಂತೆಯೊಳಗೊಂದು ಮನೆಯ ಮಾಡಿ, ಶಬ್ದಕ್ಕೆ ನಾಚಿದೊಡೆ ಎಂತಯ್ಯ ಎನ್ನುವ ಅಕ್ಕ, ಲೋಕವೇ ತಾನಾಗುವ ಪರಿಯನ್ನು ಅರಿತವರು. ಲೋಕವನ್ನು ಅರಿಯುವ ಕಣ್ಣಿಗೆ ಲೋಕದ ಗೊಡವೆಯ ಚಿಂತೆ ಇರಲಾರದು. ಈ ಲೋಕವನ್ನು ಅರಿಯಲು ಏಕಾಂತದ ಮೊರೆಯ ಅಗತ್ಯವಿಲ್ಲ. ಲೋಕವೆಂಬುದು ಬಯಲು. ಈ ಬಯಲನ್ನು ಅರಿಯುವ ನಿರ್ದಿಷ್ಟ ಪರಿಧಿಗಳನ್ನು ಕಳಚುತ್ತಾರೆ. ಏಕಾಂತಕ್ಕಾಗಿ ಈ ಪ್ರಪಂಚವು ಶಿಕ್ಷಣ, ಆರೋಗ್ಯ, ಸ್ಥಳ ನೀತಿಗಳನ್ನು ಬೆನ್ನತ್ತಿದೆ. ಇದೊಂದು ಹಂಗು. ಈ ಹಂಗನ್ನು ತೊರೆದು ಮುಕ್ತವಾಗುವ ಅಭವ ಶಕ್ತಿಯನ್ನು ಅಕ್ಕಮಹಾದೇವಿ ಹುಡುಕಿದ್ದಾರೆ.

ಈ ವಚನವನ್ನು ಸರಳವಾಗಿ ಶ್ರೀಸಾಮಾನ್ಯರಿಗೆ ತಿಳಿಸುವುದು ಹೇಗೆ ಎಂದು ಆಲೋಚಿಸಿದಾಗ, ನಿನ್ನೊಳಗೆ ಅದ್ಭುತ ಶಕ್ತಿಯಿದೆ, ಅದೇ ನಿನ್ನ ಉಸುರಿನ ಪರಿಮಳವಾಗಿದೆ. ನೀನು ಅನ್ಯರ ಬೆಂಬಲ, ಪ್ರೇರಣೆಯನ್ನು ಬಯಸಬೇಡ ಅದು ಯಾವಾಗಲೂ 'ಹಂಗಿನ' ಕಾರ್ಯ. ಇನ್ನೊಬ್ಬರ ಋಣವದು. ನಿನ್ನೊಳಗಿನ ಶಕ್ತಿಯನ್ನು ನೀನೆ ಕಂಡುಕೊಳ್ಳಬೇಕು. ನಿನ್ನೊಳಗೆ ಕ್ಷಮಿಸುವ ಗುಣ, ಇಂದ್ರಿಯ ನಿಗ್ರಹ, ಶಾಂತ ಚಿತ್ತತೆ, ಸಹಿಸುವ ಗುಣಗಳೆಲ್ಲಾ ಇರುವಾಗ ನೀನು ಇವುಗಳನ್ನು ಹೊರಗಿನಿಂದ ಕಲಿಯಲು ಏಕೆ ಹಂಬಲಿಸುವೆ? ಅದು ಕೂಡ ಹಂಗಲ್ಲವೆ. ಲೋಕವೇ ನಿನ್ನೊಳಗೆ ಇರಲು, ಏಕಾಂತದ ಅಗತ್ಯವಿಲ್ಲ. ಸಂತೆಯೊಳಗೆ ಮನೆಯ ಮಾಡಿದ ಮೇಲೆ ಶಬ್ಧಕ್ಕೆ ನಾಚುವ ಅಗತ್ಯವಿಲ್ಲ.

ಒಟ್ಟಾರೆಯಾಗಿ ಅತಿ ಹೆಚ್ಚು ಚಿಂತನೆಗಳನ್ನು ಪಡೆದಿರುವ ಈ ವಚನವು ಕಿರು ಸ್ವರೂಪದ ಅಖಂಡ ಪ್ರದೀಪಿಕೆ. ಬೆಳಗಿದಷ್ಟೂ ಬೆಳಕು. ದರ್ಶನ ಸಾಂಗತ್ಯ.

ಅಧ್ಯಯನ ಕೃತಿಗಳು :

1. ಬಸವಯುಗದ ವಚನ ಮಹಾಸಂಪುಟ., ಎಂ.ಎಂ ಕಲಬುರ್ಗಿ(ಸಂ)., 1993, 2001, 2016., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

***

ಸುಧಾ ಮೂರ್ತಿಯವರ ಕಾದಂಬರಿಗಳಲ್ಲಿ ಪತ್ತೆದಾರಿಯ ತಂತ್ರ (ಋಣ ಕಾದಂಬರಿ ಅನುಲಕ್ಷಿಸಿ)

***

ಡಾ. ಮಹಾಂತೇಶ್ ದುರಗಣ್ಣವರ
ಕನ್ನಡ ಅತಿಥಿ ಉಪನ್ಯಾಸಕರು,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ,
ಸ್ನಾತಕೋತರ ಕೇಂದ್ರ ಯಲಬುರ್ಗಾ, ಕೊಪ್ಪಳ ಜಿಲ್ಲೆ.
ಪಿನ್ ಕೋಡ್: 583236
mahanteshnkst@gmail.com

ಪ್ರಸ್ತುತ ಲೇಖನವೂ ಸುಧಾ ಮೂರ್ತಿಯವರ ಋಣ ಕಾದಂಬರಿಯಲ್ಲಿ ಪತ್ತೆದಾರಿಯ ತಂತ್ರದ ಕುರಿತು ಗ್ರಹಿಸಲಾಗಿದೆ. ಇಲ್ಲಿ ಒಬ್ಬರನ್ನೊಬ್ಬರು ಹೋಲಿಕೆಯಿಂದ ಪತ್ತೆದಾರಿಯ ಮಾರ್ಗದ ಅನುಸರಣೆ ಕಂಡುಬರುತ್ತದೆ. ಅಕಸ್ಮಾತಾಗಿ ಘಟಿಸಿದ ಸಂಗತಿಗಳು ವೆಂಕಟೇಶ್ ರಾಯರಿಗೆ ಈ ಸಂಶೋಧನೆಯ ಮಾರ್ಗಕ್ಕೆ ಇಳಿಸುತ್ತದೆ. ಉತ್ತರ ಕರ್ನಾಟಕದ ಶಂಕರ ಮಸ್ತಾರನ ಹೋಲಿಕೆಯಂತೆ ಇರುವ ದಕ್ಷಿಣ ಕರ್ನಾಟಕ ಭಾಗದ ಬ್ಯಾಂಕ್ ಮ್ಯಾನೇಜರ್ ಆದ ವೆಂಕಟರಾಯರು. ಇವರು ಹುಬ್ಬಳ್ಳಿಗೆ ವರ್ಗಾವಣೆಯಾಗಿ ಬಂದಿರುವಾಗ ಶಂಕರ್ ಮಾಸ್ತರವರ ಹೋಲಿಕೆಯಂತೆ ಇರುವುದರಿಂದ ಹಲವಾರು ಜನರು ಇವರನ್ನು ಶಂಕರ ಮಾಸ್ತಾರ. ಶಂಕರ್ ಮಸ್ತಾರ. ಎಂದು ಕರೆಯುತ್ತಾ ಪೇಚಿಗೆ ಸಿಲುಕಿಸಿದ್ದಾರೆ. ಇದರಿಂದ ತನ್ನ ಹೋಲಿಕೆಯನ್ನು ಹೋಲುವ ಅದು ಯಾವುದು ಇನ್ನೊಂದು ಮುಖದ ವ್ಯಕ್ತಿ ಎಂದು ಸಂಶಯಕೀಡಾಗುತ್ತಾರೆ. ಇಂತಹ ಹಲವಾರು ಘಟನೆಗಳಿಂದ ಎಚ್ಚೆತ್ತುಕೊಂಡು; ಪತ್ತೆದಾರಿಗೆ ಮುಂದಾಗುತ್ತಾನೆ. ಹುಬ್ಬಳ್ಳಿಯ ಹತ್ತಿರ ಇರುವ ಸೋದೆಯ ಮಠ ನೋಡಲು ಹೊರಡುತ್ತಾರೆ. ಹೀಗೆ ಮಾರ್ಗ ಮಧ್ಯೆ ಸ್ವಾದಿಯ ಕ್ಷೇತ್ರಕ್ಕೆ ಹೋದಾಗ ಮಧ್ಯಾಹ್ನ ಊಟದ ಸಮಯ ಆಗಿರುತ್ತದೆ. ವೆಂಕಟೇಶ್ ರಾಯರು ಊಟಕ್ಕೆಂದು ಭೋಜನ ಶಾಲೆಯಲ್ಲಿ ಕೂಳಿತಿರುವಾಗ ಅಲ್ಲಿ ಅಜ್ಜಿಯೊಬ್ಬರು "ಯಾನೋ ಶಂಕರ ಯಾವಾಗ ಬಂದಿ" ಎಂದು ಕೇಳುತ್ತಾಳೆ. ಇದರಿಂದ ವೆಂಕಟೇಶ್ ರಾಯರು ಮತ್ತಷ್ಟು ಕುತೂಹಲ ಬರಿತರಾಗಿ ಆ ಕಾಣದೇ ಇರುವ ಶಂಕರನ

ಬಗ್ಗೆ ಪತ್ತೆದಾರಿಯ ತಂತ್ರವನ್ನು ರಚಿಸುತ್ತಾನೆ. ಶಂಕರ್ ಮಸ್ತಾರ ಹಾಗೂ ಅವರ ಇಡೀ ವಂಶವನ್ನು ಪತ್ತೆಹಚ್ಚುವುದಕ್ಕೆ ವಿವಿಧ ಸಾಕ್ಷ್ಯಾಧಾರಿತ ವಸ್ತುಗಳನ್ನು ಗುರುತಿಸುತ್ತಾನೆ. ಮೊದಲಿಗೆ ಹುಬ್ಬಳ್ಳಿಯಲ್ಲಿ ಅವರು ವಾಸವಾಗಿದ್ದ ಮನೆಯನ್ನು ಪತ್ತೆ ಮಾಡಿದರು. ಅಲ್ಲಿಂದ ಶಂಕರ ಮಾಸ್ತರ ತಾಯಿಯೊಂದಿಗೆ ವಿಚಾರ ಮಾಡಲು ಶಿಶುನಾಳಗೆ ಬರುತ್ತಾರೆ. ಅಂದು ಅವರ ಮನೆಯಲ್ಲಿ ನಡೆದ ಶ್ರಾದ್ಧ ಮಂತ್ರದೊಂದಿಗೆ ಮತ್ತಷ್ಟು ಸುಳಿವನ್ನು ಪಡೆಯುತ್ತಾರೆ. ಶ್ರಾದ್ಧ ಮಾಡಿಕೊಂಡು ಬಂದಿರುವ ವರ್ಷಗಳ ಆಧಾರದ ಮೇಲೆ ಶಂಕರ ಮಾಸ್ತರ ಯಾರು ಎಂಬುದನ್ನು ಅರಿಯಲು ಮುಂದಾಗುತ್ತಾರೆ. ಭಾಗವ್ವನಿಂದ ಸೇತು ಮಾಧವರಾಯರಿಗೆ ಸಂಬಂಧಿಸಿದ ಕಾಲೇಜಿನ ಐಡೆಂಟಿ ಕಾರ್ಡಿನ ಫೋಟೋ ಗುರ್ತಿಸುವನು. ಇದಲ್ಲದೆ ಭಾಗವ್ವನ ಮದುವೆಯಲ್ಲಿ ಅವರ ತಂದೆಯ ಹೆಸರಿನ 'ಭ'ಅಂತ ಸಂಸ್ಕೃತದಲ್ಲಿ ಬರೆದಿರುವ ಬಂಗಾರದ ಉಂಗುರವನ್ನು ನೀಡಿರುವ ಆಧಾರದ ಮೇಲೆ ವೆಂಕಟೇಶರಾಯರಿಗೆ ಸಂಶಯ ಬಂದಿರುವ ಸಂಗತಿಗಳನ್ನು ಸಂಶೋಧನೆಗೆ ಒಳಪಡಿಸುತ್ತಾನೆ. ಇಂತಹ ಹಲವಾರು ಪತ್ತೆದಾರಿ ತಂತ್ರದ ಮೂಲಕ ಶಂಕರ ಮಾಸ್ತರ ಯಾರು ಎಂಬ ಸತ್ಯ ಸಂಗತಿಯನ್ನು ತಿಳಿಯುತ್ತಾನೆ.

ವೆಂಕಟೇಶ ರಾಯರು ಸಿರಸಿಯ ಮಾರಿಕಾಂಬಾ ದೇವಾಲಯದ ವೀಕ್ಷಣೆಯ ನಂತರ ಸ್ವಾದಿಯನ್ನು ತಲುಪಿದಾಗ ಮಧ್ಯಾಹ್ನವಾಗಿತ್ತು. ಊಟ ಮಾಡಲೆಂದು ಭೋಜನ ಶಾಲೆಯಲ್ಲಿ ಕುಳಿತುಕೊಂಡರು. ಅವರ ಪಕ್ಕದಲ್ಲಿ ಎಲೆ ಹಿಡಿದು ಕುಳಿತ ಮುದಿಕಿಯು ವೆಂಕಟೇಶರಾಯರಿಗೆ "ಯಾನೋ ಶಂಕರ ಯಾವಾಗ ಬಂದಿ?"[1] ಎಂದು ಕೇಳುತ್ತಾಳೆ. ಇದರಿಂದ ವೆಂಕಟೇಶ್ ರಾಯರಿಗೆ ಈಗಾಗಲೇ ಇಂತಹ ಆರೇಳು ಘಟನೆಗಳು ನಡೆದು ಹೋಗಿದ್ದವು. ಆದ್ದರಿಂದ ವೆಂಕಟೇಶ ಎಚ್ಚೆತ್ತುಕೊಂಡು ತಾನು ಶಂಕರನಲ್ಲ ನೀವು ಹೇಳುವ ಶಂಕರ ಎಲ್ಲಿ ಇರುತ್ತಾರೆ. ಎಂದು ಪ್ರಶ್ನಿಸುತ್ತಾನೆ ಅದಕ್ಕೆ ಪ್ರತಿಯಾಗಿ ಮುದುಕಿ ಶಂಕರ ಮಾಸ್ತರ ಕುಟುಂಬದೊಂದಿಗೆ ಆತ್ಮೀಯವಾಗಿ ಇದ್ದುದರ ಬಗ್ಗೆ ವಿವರಿಸುತ್ತಾಳೆ. ಆ ಎಲ್ಲಾ ವಿಷಯವನ್ನು ಗ್ರಹಿಸುತ್ತಾನೆ. ಹೇಗಾದರೂ ಮಾಡಿ ತನ್ನ ಪ್ರತಿರೂಪದ ಶಂಕರನನ್ನು ಕಾಣುವ ಆತುರದಿಂದ ಮುದುಕಿ ತಿಳಿಸಿದ ವಿಳಾಸವನ್ನು ಹುಡುಕಿಕೊಂಡು ಹುಬ್ಬಳ್ಳಿಯ ಗಣೇಶ ಥಿಯೇಟರಿನ ಹತ್ತಿರ ಇರುವ ದಿವಟೇಚಾಳಿಗೆ ಬರುತ್ತಾರೆ. ಶಂಕರ ಮಾಸ್ತರ ವಾಸವಾಗಿರುವ ವ್ಯವಸ್ಥೆ ಕುರಿತು ಹೀಗೆ ಹೇಳುತ್ತಾರೆ. "ಆ ಚಾಳ್ ಒಳಗೆ ಹೋಗೋದು ಕಠಿಣ. ಚಿಕ್ಕ ವಠಾರ ಒಂದೇ ನಲ್ಲಿ ನಾಲ್ಕು ಸಾರ್ವಜನಿಕ ಶೌಚಾಲಯಗಳು, ಹತ್ತಾರು ಸಂಸಾರಗಳು ಅಲ್ಲಿ ವಾಸವಾಗಿದ್ದವು. ಮಣ್ಣಿನ ಗೋಡೆ ಮಸಿ ಹಿಡಿದಿದೆ, ಎಷ್ಟೋ ವರ್ಷ ಬಣ್ಣ ಸುಣ್ಣ ಮಾಡಿಸೆ ಇಲ್ಲ ಅಂದರೂ ತಪ್ಪಿಲ್ಲ. ತಡಿಕೆಯ ಬಾಗಿಲಿನ ಸ್ನಾನದ ಮನೆ. ಒಬ್ಬರ ಮನೆಯ ಪಿಸು ಮಾತು ಇನ್ನೊಬ್ಬರ ಮನೆಗೂ ಕೇಳಿಸುತ್ತದೆ. ಹೊರಗೆ ವಿಪರೀತ ಟ್ರಾಫಿಕ್ ಇಲ್ಲಿ ಯಾಕೆ ಬಂದೇನಪ್ಪಾ ಅನಿಸಿತು."[2] ಬಡ ಮೇಷ್ಟ್ರು ವಾಸವಾಗಿರುವ ವ್ಯವಸ್ಥೆಯನ್ನು ಸೂಚ್ಯವಾಗಿ ವಿವರಿಸಿದ್ದಾನೆ. ಅಂತಹ ಇಕ್ಕಟ್ಟಾದ ವಠಾರದಲ್ಲಿ ಬಾಡಿಗೆ ಇರಲು ಅವರ ಆರ್ಥಿಕ ಸ್ಥಿತಿಗತಿ ತುಂಬಾ ಚಿಂತಾಜನಕವಾಗಿರುವುದು ತಿಳಿಯುತ್ತದೆ. ಮೊದಲೇ ದೊಡ್ಡ ಪಟ್ಟಣ ಪ್ರದೇಶವಾಗಿರುವುದರಿಂದ ಆ ವಠಾರದ ಮಾಲೀಕ ಬಾಡಿಗೆಯ ವ್ಯಾಮೋಹದಿಂದ ಚಿಕ್ಕಚಿಕ್ಕದಾಗಿರುವ ವಸತಿ ಗೃಹಗಳನ್ನು ನಿರ್ಮಾಣ ಮಾಡಿಸಿರುವನು. ಇಲ್ಲಿ ಬಾಡಿಗೆದಾರರ ಸಮಸ್ಯೆಗಳಿಗಿಂತ ಮುಖ್ಯವಾಗಿ ತಮಗೆ ಪ್ರತಿ ತಿಂಗಳು ಇಂತಿಷ್ಟು ಬಾಡಿಗೆ ಸಂದಾಯವಾದರೆ ಸಾಕೆನ್ನುವ ಮನಸ್ಥಿತಿಯನ್ನು ಹೊಂದಿರುವುದು ತೋರುತ್ತದೆ. ಅಲ್ಪಸಲ್ಪ ವೇತನ ಇರುವಂತವರು ಅನಿವಾರ್ಯವಾಗಿ ಇಂತಹ ಗೊಂದಲದ ಗೂಡಿನಲ್ಲಿ ವಾಸಿಸುವದಾಗಿದೆ.

"ಏನು ಇಲ್ಲ ನನ್ನನ್ನು ನೋಡಿ ಅನೇಕರು ನಿಮ್ಮನ್ನ ಅಂತ ತಿಳ್ಕೊಂಡ್ರು ಅದಕ್ಕೆ ನಿಮ್ಮನ್ನು ನೋಡೋಣ ಅಂತ ಬಂದೆ"[3] ಎಂದು ವೆಂಕಟೇಶರಾಯರು ಶಂಕರ ಮಾಸ್ಟರ್ ಅವರನ್ನು ಕುರಿತು ಮಾತನಾಡುತ್ತಾರೆ. ಈ ತಮ್ಮ ಇಬ್ಬರ ಮುಖ ಚಹರೆಯ ಒಂದೇ ತರಹದ ಹೋಲಿಕೆಯಿಂದ ಮತ್ತಷ್ಟು ಚಿಂತಾಮಗ್ನರಾಗುತ್ತಾರೆ. ಅದು ಹೇಗೆ ನಾವು ಒಂದೇ ತರಹ ಇರಲು ಸಾಧ್ಯವೇ ಎಂದು ಇದರ ಮೂಲವನ್ನು ತಿಳಿಯಲು ಪತ್ತೆದಾರಿಗೆ ಮುಂದಾಗುತ್ತಾರೆ. ಶಂಕರ ಮಾಸ್ತರಿಗೆ ನಾನು ನಿಮ್ಮ ತಾಯಿಯನ್ನು ನೋಡಬೇಕೆಂದು ಕೇಳಿಕೊಳ್ಳುತ್ತಾನೆ. ಅವರು ಶಿಶುನಾಳದಲ್ಲಿ ಇರುವರು ಎಂಬುದು ವಿಷಯ ತಿಳಿದು ಅವರ ಮನೆಗೆ ಹೋಗುತ್ತಾನೆ. ಆ ಸಂದರ್ಭದಲ್ಲಿ ಶಂಕರ ಮಾಸ್ತರ ತಮ್ಮ ತಂದೆಯ ಶ್ರಾದ್ಧಾವನ್ನು ನೆರವೇರಿಸುತ್ತಿರುವನು. ಹೀಗೆ ಶ್ರಾದ್ಧದ ಮಂತ್ರಗಳು ಮನೆಯೊಳಗಡೆ ಮತ್ತೆ ನಡೆದೆ ನಡೆಯುತ್ತಿದ್ದು. ಅವು

"ಅಸ್ಮತು ಪಿತೃ, ಪಿತಾಮಹ, ಪ್ರಪಿತಾಮಹ
ಸೇತು ಶರ್ಮನ್, ಶ್ರೀನಿವಾಸ ಶೆರ್ಮನ್ ವಿರೂಪಾಕ್ಷ ಶರ್ಮನ್।
ಶಾಂಡಿಲ್ಯಸ್ಯ ಗೋತ್ರಂ ವಸುರುದ್ರ ಆದಿತ್ಯ ರೂಪ ಶರ್ಮಾಣಂ,
ಉದ್ದಿಶ್ಯ ಪ್ರತಿ ಸಂವತ್ಸರಂ ಶಂಕರ ಶರ್ಮ ಶ್ರದ್ಧಾ ಕರಿಷ್ಯ"[4]

ಅಂದ್ರೆ ಮುತ್ತಾತ ವಿರುಪಾಕ್ಷ ಶರ್ಮ, ತಾತ ಶ್ರೀನಿವಾಸ ಶರ್ಮ, ತಂದೆ ಶೇತುಶರ್ಮರ ಮಗನಾದ ಶಂಕರ ಶರ್ಮನು ಸ್ಯಾಂಡಿಲ್ಯ ಗೋತ್ರದವನು ಪ್ರತಿವರ್ಷ ಶ್ರಾದ್ಧ ಮಾಡುತ್ತಾನೆ. ಸಂಶೋಧನಾ ಪ್ರವೃತ್ತಿ ಹಾಗೂ ಪತ್ತೆದಾರಿಯ ಧೋರಣೆಯನ್ನು ಹೊಂದಿರುವ

ವೆಂಕಟೇಶ ರಾಯರಿಗೆ ತಕ್ಷಣ ಮಂತ್ರದ ಕಡೆಗೆ ಗಮನ ಹರಿಸುತ್ತಾನೆ. ತಾವೂ ಹೀಗೆ ಅನ್ನುವುದಿಲ್ಲವೇ, ಆದರೆ ಎರಡು ಶಬ್ದಗಳು ಬೇರೆ ಉಪಯೋಗಿಸ್ತೀವಿ. ಆ ಎರಡು ಶಬ್ದಗಳು ತಂದೆ ಮಾಧವ ಶರ್ಮ ಹಾಗೂ ನಾನು ವೆಂಕಟೇಶ್ ಶರ್ಮ ಅಲ್ಲವೇ..? ಎಂದು ಸಂಶಯ ತಾಳಿ ತಾವು ಪಠಣ ಮಾಡುವ ಶ್ರದ್ಧಾಮಂತ್ರವನ್ನು ಪುನರ್ ಮನನ ಈ ರೀತಿ ಮಾಡುವನು: "ಅಸ್ಮತು ಪಿತೃ, ಪಿತಾಮಹ, ಪ್ರಾಪಿತ ಮಹಾ ಮಾಧವ ಶರ್ಮನ್, ಶ್ರೀನಿವಾಸ ಶೆರ್ಮನ್ ವಿರೂಪಾಕ್ಷ ಶರ್ಮನ್। ಸ್ಯಾಂಡಿಲ್ಯ ಗೋತ್ರಂ ವಸುರುದ್ರ ಆದಿತ್ಯ ರೂಪ ಶರ್ಮಾಣಂ ಉದ್ದಿಶ್ಯ ಪ್ರತಿ ಸಂವತ್ಸರಂ ವೆಂಕಟೇಶ ಶರ್ಮ ಶ್ರದ್ಧಾ ಕರಿಷ್ಯಾ॥"[5] ಈ ಮಂತ್ರದಿಂದ ವೆಂಕಟೇಶರಾಯರು ಸ್ಪಷ್ಟವಾದ ನಿರ್ಧಾರಕ್ಕೆ ಬರುತ್ತಾರೆ. ಮುಖ ಹೋಲಿಕೆಗಳು ನೋಡಲು ಒಂದೇ ತರಹ ಇರುವದು ಆಕಸ್ಮಿಕವಾದರೆ, ಈ ಮಂತ್ರದಲ್ಲಿ ಬರುವ ಇಷ್ಟೊಂದು ಹೆಸರುಗಳು ಒಂದೇ ತರ ಆಗುವದು ಆಕಸ್ಮಿಕವೇ? ಅದು ಎಂದೂ ಸಾಧ್ಯವಿಲ್ಲ. ತಾತ ಮುತ್ತಾತರ ಹೆಸರು ಒಂದೇ ಅಲ್ಲವೇ? ಹಾಗಿದ್ದರೆ ಶಂಕರ ಯಾರು? ಮತ್ತು ತನಗೇನು ಆಗಬೇಕು? ತಂದೆ ಹೆಸರು ಮಾತ್ರ ಸ್ವಲ್ಪ ಬೇರೆಯಾಗಿದೆ. ತಾನು ಮಾಧವ ಎಂದು, ಅವರು 'ಸೇತು' ಎಂದು ಹೇಳುತ್ತಾರೆ. ಇದರಿಂದ ವೆಂಕಟೇಶರಾಯರ ಪತ್ತೇದಾರಿಯ ಮಾರ್ಗ ಸುಲಭವಾಯಿತು.

ವೆಂಕಟೇಶ್ ರಾಯರಿಗೆ ಶಂಕರ ಮಾಸ್ಟರ್ ಕುಟುಂಬದ ಬಗ್ಗೆ ನೂರಾರು ಪ್ರಶ್ನೆಗಳು ಅವರ ಮನಸ್ಸಿನಲ್ಲಿ ಮೂಡಿದವು. ಮಾಸ್ತರಿಗೆ ಪ್ರಶ್ನೆ ಕೇಳುತ್ತ "ನೀವು ಎಷ್ಟು ವರ್ಷದಿಂದ ಶ್ರದ್ಧಾ ಮಾಡುತ್ತಿದ್ದೀರಿ"? "ನನಗೆ ಮಂಜವಿ ಆದಾಗಿನಿಂದ ಮಾಡುತ್ತಿದ್ದೀನಿ ಈಗ ನನಗೆ 55 ವರ್ಷ ಆಯ್ತು ನೋಡ್ರಿ. ಅದರಾಗ ಎಂಟು ತೆಗೆಯಿರಿ, 47 ವರ್ಷದಿಂದ ನಡೆದಾದ. ತಾನು ತಿಳಿದ ಸಂಬಂಧವೇ ನಿಜವಾದರೆ 47–22 = 25, ಇಪ್ಪತ್ತೈದು ವರ್ಷಗಳ ಹಿಂದೆ ಅಪ್ಪ ಬದುಕಿದ್ದಾಗಲೂ ಅವರ ಹೆಸರಿನಿಂದ ಶ್ರದ್ಧಾ ನಡೆಯುತ್ತಿತ್ತು. ಎಂಥ ವಿಧಿ ಆಟ."[6] ಬ್ರಾಹ್ಮಣ ಸಂಸ್ಕೃತಿಯ ಆಚರಣೆಯಲ್ಲಿ ಒಂದು ಮುಖ್ಯವಾದದ್ದು ಈ ಶ್ರಾದ್ಧ. ಈ ಸಂಪ್ರದಾಯಗಳು ಇವರಲ್ಲಿ ವಂಶ ಪರಂಪರೆಯಾಗಿ ನಡೆಸಿಕೊಂಡು ಬಂದಿರುವುದು ತಿಳಿಯುತ್ತದೆ. ವೆಂಕಟೇಶ್ ರಾಯರು ಶಂಕರ್ ಮಾಸ್ತರು ನಡೆಸಿಕೊಂಡು ಬಂದಿರುವ ಅವರ ತಂದೆಯ ಶ್ರದ್ಧಾದ ಅವಧಿಗಳನ್ನು ಲೆಕ್ಕ ಹಾಕಿ, ಕೂಡಿಸಿ, ಕಳೆದು ತಮ್ಮ ತಂದೆಯು ಬದುಕಿರುವಾಗಲೇ ಶ್ರದ್ಧಾ ನಡೆದಿರುವುದು ತಿಳಿಯುತ್ತದೆ. ಇದರಿಂದ ಶಂಕರ್ ಮಾಸ್ತರು ಹಾಗೂ ತಮ್ಮ ಮುಖ ಹೋಲಿಕೆಯ ಸಾಮಿಪ್ಯದ ಸುಳಿವು ಮತ್ತಷ್ಟು ದೊರೆಯುತ್ತದೆ.

ಭಾಗವ್ವನನ್ನು ಪ್ರಶ್ನಿಸುತ್ತಾ ವೆಂಕಟೇಶ್ ರಾಯರು "ನೀವು ಹೇಳ್ರಿ ಶಂಕರನ ತಂದೆ ಹೇಗೆ ತೀರಿಕೊಂಡರು ? ಯಾಕಂದ್ರೆ ಅವರಿಂದ ಅನೇಕ ಸುದ್ದಿ ಸಮಾಚಾರ ಗೊತ್ತು ಆಗ್ತಾವ. ನನಗೆ ತಿಳಿದಂತೆ ನಮ್ಮ ತಂದೆಗೆ ಯಾರು ನೆಂಟರು ಈ ಕಡೆ ಇರಲಿಲ್ಲ. ನಾವು ಮೈಸೂರಿನ ಸಂಸ್ಥಾನದಲ್ಲಿ ಜರಗನಹಳ್ಳಿ ಅವರು, ನಿಮಗೂ ನಮ್ಮ ಪರಿಚಯ ಇಲ್ಲ, ಅದಕ್ಕೆ ನೀವು ಹೇಳಬೇಕು"[7] ಭಾಗವನ ಪತಿಯು ತೀರಿಕೊಂಡಿರುವ ರೀತಿ ಗೊತ್ತಾದರೆ ಇನ್ನೊಂದಿಷ್ಟು ತನ್ನ ಪತ್ತೆದಾರಿಗೆ ಸುಲಲಿತವಾದಂತ ಮಾರ್ಗವಾಗುವುದೆಂದು ತಿಳಿಯುತ್ತಾನೆ. ಶಂಕರ ಮಾಸ್ತರ ಹಾಗೂ ತನಗೂ ಈ ರೀತಿಯ ಒಂದೇ ತರಹ ಹೋಲಿಕೆಗೆ ಏನೋ ಒಂದು ಸೂಕ್ಷ್ಮವಾದ ಸಂಬಂಧವಿದೆ ಎಂಬುದನ್ನು ವೆಂಕಟೇಶರಾಯರು ತಿಳಿಯುತ್ತಾರೆ. ಭಾಗವನಿಂದ ಸುಮಾರು ಐವತ್ತು ವರ್ಷಗಳ ಹಿಂದಿನ ಧಾರುಣ ದುರಂತದ ಘಟನೆಗಳನ್ನು ಕೇಳುತ್ತಾ ತನ್ನ ಕುತೂಹಲದ ವಿಷಯಕ್ಕೆ ಮೂರ್ತತೆಯನ್ನು ಪಡೆಯುತ್ತಾನೆ.

ವೆಂಕಟೇಶ್ ರಾಯರು ತಾವು ಪತ್ಯೆದಾರಿಗೆ ಆಯ್ದುಕೊಂಡ ವಿಷಯವು ಇನ್ನಷ್ಟು ಗಟ್ಟುಗೊಳ್ಳಬೇಕಾದರೆ ಹೆಚ್ಚು ಹೆಚ್ಚು ಪ್ರಶ್ನೆಗಳನ್ನು ಭಾಗವನ್ಗೆ ಕೇಳುತ್ತಾರೆ. ಇಂತಹ ಹಲವಾರು ಪ್ರಶ್ನೆಗಳಿಂದ ಸತ್ಯ ಸಂಗತಿ ಏನೆಂಬುದು ತಿಳಿಯುತ್ತದೆ ಎಂದು ಭಾಗವನಿಗೆ "ನಿಮ್ಮ ಯಜಮಾನ್ರು ತೀರಿಕೊಂಡಿದ್ದು ನಿಮಗೆ ಚೆನ್ನಾಗಿ ಗೊತ್ತಿದೆಯಾ"?, ಅಪ್ಪ, ವೆಂಕಟೇಶ ನಮ್ಮ ದೇಶದಾಗ ಯಾವ ಹೆಂಗಸು ಎಂದೂ ಸುಳ್ಳ 'ಗಂಡ ಸತ್ತ' ಅಂತ ಹೇಳೋದಿಲ್ಲ. ಗಂಡನಿಂದ ದೂರ ಇದ್ರೂ, ಗಂಡ ಚೆಲ್ಲಿದ್ರೂ ಚಿಂತಿಲ್ಲ. ಕುಂಕುಮ ಹಚ್ಚಿಕೊಂಡು ಮಂದಿ ಒಳಗ ಮುತ್ತೈದೆ ಅನಿಸಿಕೊಳ್ಳೋಕೆ ಪ್ರಯತ್ನ ಮಾಡ್ತಾಳೆ. ಅಂತದ್ರಾಗ ಪೇಪರ್ ದಾಗ ಬಂದು ಸುದ್ದಿ ಸುಳ್ಳೇನು..? ಅದನ್ನ ನಂಬ್ಲಿಕ್ಕೆ ಇರದನ ಆಗ್ಬೈತೇನು ತಡೆಯಿರಿ ನಾನು ಒಂದು ಗಂಟು ಇಟ್ಟಿದ್ದೀನಿ ತೋರಿಸ್ತೀನಿ"[8] ಬಾಗವ್ವಾ ತಮ್ಮ ಯಜಮಾನ್ರು ತೀರಿಕೊಂಡಿರುವುದರ ಬಗ್ಗೆ ಚೆನ್ನಾಗಿ ಗೊತ್ತಿದ್ರೆ ಇನ್ನು ಕರಾರು ಒಕ್ಕಾದ ಮಾಹಿತಿ ಲಭ್ಯವಾಗುತ್ತದೆ ಎಂಬ ಆಶಾಮನೋಭಾವನೆಯನ್ನು ವೆಂಕಟೇಶ್ ರಾಯರು ಹೊಂದಿದ್ದಾರೆ. ಅದರಿಂದ ಭಾಗವಳಿಗೆ ಪ್ರಶ್ನಿಸಿದಾಗ ಪತ್ನಿಯರು ತಮ್ಮ ಪತಿಯರ ಬಗ್ಗೆ ಇರುವ ಪವಿತ್ರ ಬಾಂಧವ್ಯ ಬೆಸುಗೆಯ ವಿಚಾರವನ್ನು ತಿಳಿಪಡಿಸುವಳು. ಪತ್ನಿಯಾದವಳಿಗೆ ತನಗೆ ಮುತ್ತೈದೆಯ ಭಾಗ್ಯ ಎಷ್ಟು ಮುಖ್ಯವಂಬದನ್ನು ತೋರ್ಪಡಿಸಿದ್ದಾಳೆ. ಭಾಗವ್ವ ನನಗೂ ಕೂಡ ಆ ಮುತ್ತೈದೆಯ ಭಾಗ್ಯವನ್ನು ಬಿಟ್ಟು ಕೊಡುವುದಕ್ಕೆ ಸಿದ್ದಳಿಲ್ಲದ ಭಾವನೆಗಳನ್ನು ಹೊರಗಾಕುತ್ತಾಳೆ. ಆದರೆ ಏನು ವಿಧಿ ಆಟ ಪೇಪರಲ್ಲಿ ಬಂದಿರುವ ಸಂಗತಿ ಸತ್ಯವೆಂದು ತಿಳಿದು ವಿಧವೆಯಾಗಿದ್ದಾಳೆ. ಈ ಘಟನೆಯಿಂದ 'ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡು' ಎಂಬ ಗಾದೆ ಮಾತು ಇಲ್ಲಿ ಪ್ರಸ್ತುತ.

ಭಾಗವ್ವ ತಮ್ಮ ಯಜಮಾನರು ತೀರಿಕೊಂಡಿರುವದರ ಬಗ್ಗೆ ಖಚಿತತೆ ಪಡಿಸಲು ಒಂದು ಮುರುಕು ಟ್ರಂಕಿನಿಂದ ಹರಕು ಬಟ್ಟೆಯಿಂದ ಕಟ್ಟಿದ ಗಂಟನ್ನು ತಂದು ತೋರಿಸುವಳು. ಅದರಲ್ಲಿ "ರಟ್ಟಿಗೆ ಅಂಟಿಸಿದ ಪೇಪರ್ ಮತ್ತು ಅದರ ಜೊತೆಗೆ ಇನ್ನೊಂದು ಕವರ್ ಕೂಡ ಇತ್ತು. ಇದ ನೋಡ್ರಪ್ಪ ಮಾರಾಠಿ ಪೇಪರ್ ಹನುಮ ತಂದದ್ದು. ಇದರ ಒಳಗ ಲಿಸ್ಟ್ ಅದಾ ಇವರ ಹೆಸರು ಕೆಳಗೆ ಮಸಿಯಿಂದ ಗೆರೆ ಕೂಡ ಎಳ್ದಾರ"[9] ಭಾಗವ್ವ ತಮ್ಮ ಯಜಮಾನ್ರು ನೆನಪಿನಗೋಸ್ಕರವಾಗಿ ಸುಮಾರು 50ವರ್ಷಗಳ ಕಾಲ ಪೇಪರ್ ಸುದ್ದಿಯನ್ನು ಕಾಯ್ದಿರಿಸಿದ್ದಾಳೆ, ತನ್ನ ಪತಿಯ ಜೊತೆಗೆ ಸಂಸಾರ ನಡೆಸಿರುವುದು ಕೇವಲ 15ದಿನಗಳು ಆದರೂ ಅವರ ಪ್ರೀತಿಯ ನೆನಪನ್ನು ತನ್ನ ಹುಸಿರು ಇರುವರೆಗೂ ಕಾಪಿಟ್ಟುಕೊಂಡು ಬಂದಿದ್ದಾಳೆ. ಆ 50ವರ್ಷಗಳ ನಡುವಿನ ಕಾಲಘಟ್ಟ ಅವಳ ಜೀವನವನ್ನೇ ತಲ್ಲಣಗೊಳಿಸಿರುವ ದಿನಗಳ ದಿನಗಳಾಗಿರಬಹುದು. ಆದರೂ ಸೇತು ಮಾಧವರಾಯರು ಸಾವಿನ ವರದಿಯಾದ ಪೇಪರ್ ಪ್ರತಿಯನ್ನು ಜೀವಂತವಾಗಿಟ್ಟುಕೊಂಡು ಬಂದಿದ್ದಾಳೆ. ಆ ಪೇಪರ್ ಜೊತೆಗೆ ಇರುವ ಇನ್ನೊಂದು ಕವರ್ ವೆಂಕಟೇಶ್ ರಾಯರ ಪತ್ತೇದಾರಿ ಎಂಬ ನಿರ್ಜೀವ ತಂತ್ರಕ್ಕೆ ಜೀವ ಚೈತನ್ಯ ನೀಡಿದಂತಾಯಿತು. ಏನೋ ಹುಡುಕಲು ಹೋಗಿ ಏನೋ ಮತ್ತೊಂದು ಸಿಕಂತಾದುದ್ದು. ಸೇತು ಮಾಧವರಾಯರ ಕಾಲೇಜಿನ ಐಡೆಂಟಿ ಕಾರ್ಡ್ ಇದನ್ನು ಗಮನಿಸಿದ ವೆಂಕಟೇಶ್ ರಾಯರು ಅದರಲ್ಲಿ ಮಸುಕಾದ ಫೋಟೋ ನೋಡಿ ಇದು ತನ್ನ ತಂದೆಯದು ಅನ್ನುವುದರಲ್ಲಿ ಯಾವ ಸಂಶಯ ಇರಲಿಲ್ಲ. ಆದರೆ ಐಡಿ ಕಾರ್ಡಿನಲ್ಲಿ ಸೇತು ಮಾಧವರಾಯ ಆಗಿದ್ದು, ಅಲ್ಲಿ ವೆಂಕಟೇಶ್‌ರ ತಂದೆಯಾಗಿದ್ದಾಗ ಮಾಧವರಾಯರು ಆದದ್ದು ಹೇಗೆಂದು ಪತ್ತೆದಾರಿಯ ತಂತ್ರವನ್ನು ಮುಂದುವರಿಸುತ್ತಾರೆ.

ಸೇತು ಮಾಧವರಾಯರ ಗುರುತಿನ ಚೀಟಿ ಫೋಟೋ ಭಾಗವ್ವಳತ್ರ ದೊರೆಯುತ್ತದೆ. ಅದು ಸ್ಪಷ್ಟವಾಗಿ ಗೋಚರಿಸದಂತೆ ಅವಸ್ಥೆಯಲ್ಲಿದೆ. ಅದು ಅವರ ಯಜಮಾನರು ಎಂಬುದನ್ನು ಖಚಿತತೆ ಪಡಿಸಿಕೊಳ್ಳಲು ವೆಂಕಟೇಶ್ ರಾಯರು ಪ್ರಶ್ನಿಸಿದಾಗ ಭಾಗವ್ವ ಈ ರೀತಿಯಾಗಿ ನುಡಿಯುತ್ತಾಳೆ. "ನಮ್ಮ ಲಗ್ನದಾಗ ಫೋಟೋ ತೆಗೆಸುವ ಪದ್ಧತಿ ಇರ್ಲಿಲ್ಲ, ಆಗ ಇವರು ಊರಿಗೆ ಹೋಗುವಾಗ ಈ ಫೋಟೋ ಕೊಟ್ಟಿದ್ದರು. ಒಂದೊಂದು ಸಾರಿ ಮಾರಿನ ಮತರ್ಂಗ ಅನಿಸುತ್ತದೆ. ಆಗ ಈ ಫೋಟೋ ನೋಡ್ತೀನಿ. ನಮ್ಮ ಶಂಕರನ್ನು ಈ ವಯಸ್ನಾಗ ಹಿಂಗ ಕಾಣುತ್ತಿದ್ದ"[10]. ಭಾಗವ್ವಳು ತನ್ನ ಕಾಲದ ಮದುವೆಯಲ್ಲಿ ಛಾಯಾಚಿತ್ರದ ತೆಗೆಯುವಂತಹ ತಂತ್ರಜ್ಞಾನಗಳು ಮುಂದುವರೆದಿಲ್ಲವೇ ಎಂಬುದನ್ನು ಗೊತ್ತು ಪಡಿಸುತ್ತಾಳೆ. ಇದರಿಂದ ವೆಂಕಟೇಶಗೆ ಸಿಕ್ಕಿರುವ ಐಡಿ ಕಾರ್ಡ್ ಫೋಟೋದ ಬಗ್ಗೆ ನಿಖರವಾದ ಸತ್ಯ ತಿಳಿಯುತ್ತದೆ. ಭಾಗವಳು ತಮ್ಮ ಯಜಮಾನ ಫೋಟೋ ತನ್ನ ಹತ್ತಿರದಲ್ಲಿ ಬಚ್ಚಿಟ್ಟುಕೊಂಡಿರುವುದನ್ನು ಗಮನಿಸಿದರೆ, ಅವರಿಬ್ಬರೂ ಒಬ್ಬರನ್ನೊಬ್ಬರು ಎಷ್ಟು ಮನಸ್ಸಿಗೆ ಹಚ್ಚಿಕೊಂಡಿದ್ದರು ಎಂಬುದನ್ನು ಅರಿಯಬಹುದು. ಭಾಗವ್ವ ಸಹಜವಾಗಿಯೇ ಮಾತನಾಡುತ್ತಾ ತಮ್ಮ ಯಜಮಾನರಂತೆ ತಮ್ಮ ಮಗ ಶಂಕರ್ ಮಾಸ್ತರ ವಯಸ್ಸಿನಲ್ಲಿ ಹೀಗೆ ಇದ್ದು ಎಂದು ಹೇಳುತ್ತಾಳೆ. ಇದರಿಂದ ವೆಂಕಟೇಶರಾಯರಿಗೆ ತಾವು ಕೈಗೊಂಡಿರುವ ಪತ್ತೆದಾರಿಗೆ ಮತ್ತಷ್ಟು ಹಿಂಬು ಸಿಕ್ಕಂತಾಯಿತು.

ವೆಂಕಟೇಶ ರಾಯರಿಗೆ ಶಂಕರ್ ಮಾಸ್ತರ್ ಬಗ್ಗೆ ಒಂದೊಂದೇ ಸುಳಿವು ಸಿಕ್ಕಂತೆಲ್ಲ ಇನ್ನೂ ಹೆಚ್ಚಿನ ಪ್ರಶ್ನೆಗಳನ್ನು ಭಾಗವ್ವಳಿಗೆ ಕೇಳುತ್ತಾನೆ. "ನಿಮ್ಮ ಯಜಮಾನರ ಹೆಸರೇನು?" "ನಮಗಂತೂ ಲಗ್ನವಾದಾಗ ಶೇತುರಾಯರು ಅಂತ ಹೇಳಿದ್ದರು ನಾನು ಲಗ್ನದ ಒಗಟಾನು ಅದ ಹೆಸರಲ್ಲಿ ಹೇಳಿದ್ದೆ" ಈ ಮಾತಿಗೆ ಪ್ರತಿಯಾಗಿ ವೆಂಕಟೇಶ್ ರಾಯರು ಮರಳಿ ಭಾಗವ್ವಳಿಗೆ ಸೇತುನೋ ?, ಸೇತು ಮಾಧವನೋ ?"[11] ಈ ರೀತಿಯಾಗಿ ವೆಂಕಟೇಶ್ ರಾಯರು ತಮ್ಮ ಪತ್ತೆದಾರಿ ತಂತ್ರಕ್ಕೆ ಮರು ಉತ್ತರವನ್ನು ಪಡೆಯುತ್ತಾರೆ. ಸೇತುರಾಯ ಹಾಗೂ ಸೇತುಮಾಧವರಾಯನು ಎಂಬ ಈ ಎರಡು ಹೆಸರುಗಳ ಮಧ್ಯೆ ಪತ್ತೆದಾರಿಗೆ ಸ್ಪಷ್ಟ ಮಾರ್ಗಕ್ಕೆ ಗೊಂದಲಕ್ಕೆ ಈಡಾದಾಗ ಅದರ ಸ್ಪಷ್ಟತೆಯನ್ನು ಪಡೆಯುತ್ತಾನೆ. ಭಾಗವ್ವಳು ತಮ್ಮ ಯಜಮಾನರು ಅವರ ಹೆಸರನ್ನು ಒಗಟಿನ ಸಾಕ್ಷ್ಯಾಧಾರ ಸಹಿತವಾಗಿ ಹೇಳಿರುವುದನ್ನು ವೆಂಕಟೇಶರಾಯರ ಗಮನಕ್ಕೆ ತರುತ್ತಾಳೆ. ಇದಿಷ್ಟು ಮಾಹಿತಿಯನ್ನು ಪಡೆದಿದ್ದಲ್ಲದೆ ಇನ್ನೂ ಆತನ ಹೆಸರಿನ ಸ್ಪಷ್ಟತೆಗಾಗಿ ಮತ್ತಷ್ಟು ಕೆದ್ದುತ್ತಾನೆ." "ಮನೆಯಲ್ಲಿ ಚಂಪಕ ಮಗನ್ನ ಏನಂತ ಕರೀತಿದ್ರು ?" "ಮನೆಯಾಗ ಯಾವಾಗಲೂ ಬಾಳು ಅನ್ನುತ್ತಿದ್ದರು."[12] ಭಾಗವ್ವನ ಮಾತಿನಿಂದ ವೆಂಕಟೇಶ್ವ ರಾಯರು ತನ್ನ ಬಾಲ್ಯ ಜೀವನಕ್ಕೆ ಹಿಮ್ಮರಳಿ ಎಲ್ಲದನ್ನು ಮೆಲುಕು ಹಾಕುತ್ತಾನೆ. ಅಂದಿನ ಕಾಲಘಟ್ಟದಲ್ಲಿ ಚಂಪಕ್ಕ ತನ್ನ ತಂದೆಗೆ ಪ್ರೀತಿಯಿಂದ 'ಬಾಳು' ಎಂದು ಕರೆಯುವುದು, ತನ್ನನ್ನು 'ವೆಂಕಟೇಶ ಬಾಳು ರಾವ್' ಎಂದು ಕರೆದಿರುವುದನ್ನು ನೆನಪಿಸಿಕೊಳ್ಳುತ್ತಾನೆ. ಪ್ರಸ್ತುತ ಭಾಗವ್ವಳ ಮಾತುಗಳಿಂದ ತನ್ನ ಬಾಲ್ಯದ ಜೀವನದ ಮಾತುಗಳನ್ನು ತಾಳೆ ಹಾಕಿ ನೋಡುತ್ತಾನೆ. ಭಾಗವ್ವನ್ನ ಯಜಮಾನ್ರ ಅಂದಿನ ಹೆಸರು ಹಾಗೂ ವೆಂಕಟೇಶ್ ರಾಯರ ಬಾಲ್ಯದಲ್ಲಿ ತನ್ನ ಅಜ್ಜಿ ಚಂಪಕರು ಕರೆಯುತ್ತಿರುವ ಮಾತುಗಳು ಒಂದೇ ಎಂದು ಖಾತ್ರಿ ಯಾಗುತ್ತವೆ.

ಸತ್ಯವನ್ನು ವರಿಗಚ್ಚಿ ನೋಡುವ ಹಂಬಲದಿಂದ ವೆಂಕಟೇಶ್ವ ರಾಯರು ಭಾಗವ್ವಳ ವರದಕ್ಷಣೆ ಪರೋಪಚಾರವಾಗಿ ಈ

ರೀತಿಯಾಗಿ ವಿಚಾರಿಸುತ್ತಾರೆ. "ನಿಮ್ಮ ಮದುವೆಯಲ್ಲಿ ನಿಮ್ಮ ಮನೆಯವರು ಸೇತು ಮಾಧವರಾಯರಿಗೆ ಏನಾದರೂ ಕೊಟ್ಟಿದ್ದರೆ ಏನು?" ಎಂದರು. ಇದರಿಂದ ವೆಂಕಟೇಶನಿಗೆ ಏನಾದರೂ ಅಂತ ವಸ್ತು ತಮ್ಮ ಮನೆಯಲ್ಲಿ ಇದೆಯಾ ಎಂದು ನೋಡುವ ತವಕ '.ಅದಕ್ಕೆ ಪ್ರತಿಯಾಗಿ ಭಾಗವ್ವನು "ನಾವು ಬಡವರು ನಮ್ಮ ಮಾವ ಏನು ಕೊಟ್ಟಾರು?; ಅಲ್ಲದನ ಎಷ್ಟು ವರ್ಷಗಳ ಹಿಂದಿನ ಮಾತು. ಒಂದು ನೂರು ರೂಪಾಯಿ ವರದಕ್ಷಣೆ ಕೊಟ್ಟ ನೆನಪು ಮತ್ತು ಒಂದು ಉಂಗುರ" ಎಂದು ಹೇಳಿದಾಗ ಮರು ಮಾತಿನಲ್ಲಿ ಎಂಥ "ಉಂಗುರ"? ಎಂದು ವೆಂಕಟೇಶ್ ರಾಯರು ಕೇಳುವರು. ಅದಕ್ಕೆ ಪ್ರತಿಯಾಗಿ ಭಾಗವ್ವಳು "ನಮ್ಮಪ್ಪನ ಹೆಸರು ಭಗೀರಥರಾಯರು ಅಂತಿತ್ತು ಅವರ ಒಂದು ಉಂಗುರ ಮನೆಯಲ್ಲಿತ್ತು, ಅದರ ಮೇಲೆ 'ಭ' ಅಂತ ಸಂಸ್ಕೃತದಲ್ಲಿ ಬರೆದಿತ್ತು. ಅದನ್ನು ಅಳಿಯನಿಗೆ ಕೊಟ್ಟಿದ್ರು."[13]. ಭಾಗವ್ವಳ ಕಾಲದಲ್ಲಿಯೂ ವರದಕ್ಷಿಣೆ ಹಾಗೂ ವರೋಪಚಾರ ಎಂಬ ಕೋಡುಕೊಳ್ಳುವಿಕೆಯ ಸಂಸ್ಕೃತಿ ಜೀವಂತವಿರುವ ಬಗ್ಗೆ ತಿಳಿಯುತ್ತದೆ. ಇಲ್ಲಿ ವೆಂಕಟೇಶ್ ರಾಯರಿಗೆ ವರದಕ್ಷಣೆ ಹಾಗೂ ವರೋಪಚಾರ ಪಡೆಯುವುದು ಮುಖ್ಯವಾಗಿರಲಿಲ್ಲ. ತಮ್ಮ ತಂದೆಯೇ ಶಂಕರ್ ಮಾಸ್ತರ್ ತಂದೆ ಎಂಬುದು ತಿಳಿಯುವುದು ಮುಖ್ಯವಾಗಿತ್ತು. ಆದ್ದರಿಂದ ಅದರ ಗುರುತಿಗಾಗಿ ಏನಾದರೂ ಸಾಕ್ಷಿಗಳು ದೊರೆಯುತ್ತವೆ ಎಂಬುದನ್ನು ಈತನ ಪತ್ತೆದಾರಿಯ ತಂತ್ರ. ಭಾಗವ್ವಳು ವ್ಯಕ್ತಪಡಿಸುವ ಬಡತನದ ವರದಕ್ಷಣೆ ಒಂದು ನೂರು ರೂಪಾಯಿಗಿಂತ ಒಂದು ಬಂಗಾರದ ಉಂಗುರ ಮುಖ್ಯ. ಅದರಲ್ಲಿರುವ 'ಭ' ಎಂಬ ಸಂಸ್ಕೃತದ ಅಕ್ಷರ ಎಂಬುದುರ ಒಂದು ಎಳೆಯ ಹಿಡಿದುಕೊಂಡು ವೆಂಕಟೇಶ್ ರಾಯರು ಪತ್ತೆದಾರಿಯ ಒಂದು ಹೆದ್ದಾರಿಯನ್ನೇ ಹುಡುಕುತ್ತಾರೆ.

ಸೇತು ಮಾಧವರಾಯರು ರೈಲ್ವೆ ಆಕ್ಸಿಡೆಂಟ್‌ನಲ್ಲಿ ತೀರಿ ಹೋದರು ಎಂಬ ವಿಚಾರ ತಿಳಿದು ಮೇಲೆ, ಅವರಿಗೆ ಸಂಬಂಧಿಸಿದ ಏನಾದರೂ ಕುರುಹು ಇರಬಹುದು ಎಂದು ಊಹಿಸುತ್ತಾರೆ. ವೆಂಕಟೇಶ್. ಇದರಿಂದ ಭಾಗವ್ವಳಿಗೆ ಹೀಗೆ ಪ್ರಶ್ನಿಸುತ್ತಾರೆ. "ರೈಲ್ವೆ ಆಕ್ಸಿಡೆಂಟ್ ಆದಮೇಲೆ ಅವರ ಆಸ್ತಿಪಾಸ್ತಿ, ಸಾಮಾನವೆಲ್ಲ ಏನಾದ್ವು?" ಕೇಳಿದಾಗ ಭಾಗವ್ವ "ನಮಗೇನು ಗೊತು"? ನಮ್ಮ ವಸ್ತುನ ನನಗೆ ತಿರಸ್ಕಾರ ಮಾಡಿ ಚೆಲ್ಲಿದರು. ನಮ್ಮ ಮನೆನ್ಯಾಗ ತಿರುಗಿ ಮುಂಬೈಗೆ ಹೋಗೋರ್ಯಾರು ? ಅವರಿಗೆ ಅಂಥಾ ಆಸ್ತಿ–ಪಾಸ್ತಿನೂ ಇರಲಿಲ್ಲ. ಅವರ ಮೌಸಿ ಗುಂಡಕ್ಕ ಉಳಿದಿದ್ದೆಲ್ಲಾ ತಗೊಂಡಿರಬೇಕು. ನಮಗೇನು ಗೊತ್ತಿಲ್ಲ. ಆ ದುಃಖದಾಗ ನಾವೇನೂ ಕೇಳಲೂ ಇಲ್ಲ"[14] ತಂದೆ ತಾಯಿ ಇಲ್ಲದ ಮಕ್ಕಳ ಬಾಳು ಗೋಳು ಎನ್ನುವಂತೆ ಭಾಗವ್ವನ ಜೀವನವು ಇದಕ್ಕೆ ಹೊರತಾಗಿಲ್ಲ. ಅನಾಥೆ ಬಾಗವ್ವಳನ್ನು ಅವರ ಸೋದರ ಮಾವ ಕೊಡಬೇಕಾದರೆ ಯಾವುದನ್ನು ಲೆಕ್ಕಿಸದೆ ಧಾರೆಯದಿರುವುದು ತಿಳಿಯುತ್ತದೆ. ವರದಕ್ಷಿಣೆ ವಿಚಾರ ಬಂದಾಗ ಅವರವರ ಮಕ್ಕಳು ಅವರೇ ಜವಾಬ್ದಾರಿಯನ್ನುವಂತೆ ಅವರ ತಂದೆಯ ಉಂಗುರವನ್ನೇ ಕೊಟ್ಟು ವಿವಾಹ ಮಾಡಿರುವುದನ್ನು ಗಮನಿಸಲಾಗಿದೆ. ಭಾಗವ್ವಳ ಗಂಡನ ಸಾವಿನ ಸುದ್ದಿಯಲ್ಲಿದ್ದಾಗ ಆಸ್ತಿ ಪಾಸ್ತಿಗಿಂತ ತನಗೆ ಯಜಮಾನ್ರೆ ಮುಖ್ಯವೆಂದು ತಿಳಿದು ಅವರೇ ಇಲ್ಲವೆಂದ ಮೇಲೆ ಆಸ್ತಿಯ ಮೇಲಿನ ಆಸೆಯನ್ನು ತೊರೆದಳು.

ವೆಂಕಟೇಶ್‌ರಾಯರು ತಮ್ಮ ಯೋಚನೆಯ ಪರಿಧಿಯನ್ನು ಇನ್ನೊಂದಿಷ್ಟು ವಿಸ್ತರಿಸಿದರು. ಮಾಧವರಾಯರು ತೀರಿದರು ಎಂಬ ಸುದ್ದಿ ಹರಡಿದಾಗ ಭಾಗವ್ವಳು ದಿಗ್ಭ್ರಾಂತಳಾಗುತ್ತಾಳೆ. ಸೇತು ಮಾಧವರಾಯರ ಆಸ್ತಿಯ ಆಸೆಯನ್ನು ತೊರೆಯುತ್ತಾಳೆ. ಹಂಗೇನಾದರೂ ಅವರ ಆಸ್ತಿಪಾಸ್ತಿ ಇದ್ದರೆ ಅವರ ಚಿಕ್ಕಮ್ಮ ಗುಂಡಕ್ಕನ್ನ ಪಾಲಾಗಿರಬಹುದು ಎಂದು ಊಹಿಸುತ್ತಾಳೆ. ಈ ಗುಂಡಾಕನ್ನು ತನ್ನ ಪತ್ತೆದಾರಿ ತಂತ್ರಕ್ಕೆ ಏನಾದರೂ ಸಹಾಯವಾಗುವಳೆಂದು ಯೋಚಿಸುತ್ತಾರೆ ವೆಂಕಟೇಶ್ವರಾಯರು. ಗುಂಡಕ್ಕನ ಬಗ್ಗೆ ಅಜ್ಜಿ ಚಂಪಕ್ಕ ಆಗಾಗ ಕೆಲವು ವಿಚಾರಗಳನ್ನು ಹೇಳಿದ್ದು ವೆಂಕಟೇಶ್ ರಾಯರಿಗೆ ಮರು ಕರುಳಿಸಿದವು. ಗುಂಡಕ್ಕ ತಮ್ಮ ತಂದೆಯ ವಯಸ್ಸಿನವಳು ಆಗಿರುವುದರಿಂದ ಬಹುಶಃ ಇನ್ನೂ ಬದುಕಿರಬಹುದು ಎಂದು ತಿಳಿಯುತ್ತಾನೆ. ತನ್ನ ತಂದೆಯ ಹಳೆಯ ಡೈರಿಯಲ್ಲಿ ಗುಂಡಕ್ಕನ ವಿಳಾಸವನ್ನು ಪತ್ತೆ ಹಚ್ಚುತ್ತಾನೆ. ಅದರಲ್ಲಿರುವ "ಕೇರ್ ಆಫ್ ಅಸುಂಡಿ ಚಾಳ್ ದೊಂಬಿವಲಿ ಈಸ್ಟ್"ಎಂಬ ವಿಳಾಸಕ್ಕೆ ಒಂದು ಪತ್ರವನ್ನು ಹಾಕಿಯೂ ಸತ್ಯವನ್ನು ಪಡೆಯಲು ಪ್ರಯತ್ನಿಸುತ್ತಾನೆ. ಅಂದರೆ ಮನುಷ್ಯ ಸತ್ಯವನ್ನು ಕಂಡುಕೊಳ್ಳಲು ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸಬೇಕು. ತನ್ನ ಪತ್ರದ ಉತ್ತರಕ್ಕೆ ಮರು ಉತ್ತರ ಪಡೆದುಕೊಳ್ಳುವನು. ಇದರಿಂದ ವೆಂಕಟೇಶರಾಯರಿಗೆ ಪತ್ತೆದಾರಿ ಆಸೆ ಕೆರಳಿತು ಒಂದು ಸಂಗತಿ ಬಗ್ಗೆ ಸತ್ಯವನ್ನು ಕಂಡುಕೊಳ್ಳಲು ವಿವಿಧ ಆಯಾಮದಲ್ಲಿ ಪರೀಕ್ಷಿಸಬೇಕೆಂಬುದು ತೋರುತ್ತದೆ. ಆ ಪತ್ರ ಬಂದಿರುವ ಸ್ಥಳಕ್ಕೆ ಹೋಗಲು ತೀರ್ಮಾನಿಸುತ್ತಾನೆ, ಕೊನೆಗೆ ಬಿಜಾಪುರಕ್ಕೆ ಬಂದು ಗುಂಡಕ್ಕನನ್ನು ಭೇಟಿ ಮಾಡಿ ಈ ರೀತಿ ವಿಚಾರಿಸುತ್ತಾನೆ. "ಅಜ್ಜಿ ನೀವು ನಮ್ಮ ಅಪ್ಪನ ವಯಸ್ಸಿನವರಾದರೂ ನನಗೆ ಅಜ್ಜಿ ತರಹ. ಈಗ ನಿಮ್ಮನ್ನು ಬಿಟ್ಟರೆ ನಮ್ಮ ಮನೆಯಲ್ಲಿ ಯಾರು ಹಿರಿಯರು ಉಳಿದಿಲ್ಲ. ಹಳೆಯ ಸುದ್ದಿಯನ್ನು ಹೇಳಬಲ್ಲವರು ನೀವು ಒಬ್ಬರೇ, ಅದಕ್ಕೆ ನಾನು ಕೇಳುವುದಕ್ಕೆ ನೀವು ಸತ್ಯವನ್ನು ಮಾತ್ರ ಹೇಳಬೇಕು"[15]. ತಮ್ಮ ಅಪ್ಪನ ವಯಸ್ಸಿನವರು ಮೇಲಾಗಿ ತಮ್ಮ ಅಜ್ಜಿಯ ತಂಗಿಯು ಆದ್ದರಿಂದ ಸರಿಯಾದಂತಹ ಮಾಹಿತಿ ಲಭ್ಯವಿವೆಂದು ಕಾತುರನಾಗುತ್ತಾನೆ. ತಮ್ಮ

ತಂದೆ ಸೇತು ಮಾಧವರಾಯರ ಮೊದಲ ಲಗ್ನ ಸುದ್ದಿಯನ್ನು ವಿಚಾರಿಸುತ್ತಾನೆ. "ಅದಾ ಅದಕ್ಕ ನನಗೂ ಚಂಪಕಗೂ ರಗಳಿ ಆದದ್ದು, ಅದಕ್ಕ ಮತ್ತಾಕ ಸಂಬಂಧನ ಬಿಡ್ತು. ಯಾವುದೋ ಬಡ ಹುಡುಗಿ ಸಲುವಾಗಿ ಜಗಳಾತು."[16] ಗುಂಡಕ್ಕನ ಈ ಮಾತಿನಿಂದ ತಾನು ಅಂದುಕೊಂಡಿದ್ದೆ ಸರಿಯಾದ ಸಾಕ್ಷಿಯಾದ ಮಾತಿನ ಸುಳಿವು ಎಂಬುದು ತಿಳಿಯುತ್ತಾನೆ

ಗುಂಡಕ್ಕಗೆ ವೆಂಕಟೇಶ ರಾಯರು ಪ್ರಶಿಸುತ್ತಾನೆ. ನಮ್ಮ ಅಜ್ಜಿ ಚಂಪಕ್ಕ ನಿಮಗೆ ಯಾಕೆ ಸಿಟ್ಟಿಗೆದ್ಲು? ಎಂದು ಅದಕ್ಕೆ ಗುಂಡಕ್ಕ "ಯಾಕಂದ್ರೆ ಬಾಗಿನ ಹುಡುಕಲಿಕ್ಕೆ ನಿಮ್ಮಪ್ಪನ ಜೋಡಿ ನಮ್ಮನೆಯವರು ಹೋಗಿದ್ದಕ್ಕೆ ಚಂಪಕ್ಕ ಕಡಕ್ ಹೆಂಗಸು. ನಮ್ಮ ಸಂಬಂಧನ ಮುರುಕೊಂಡ್ಲು ನಿಮ್ಮಪ್ಪ ಮತ್ತ ಇನ್ನೊಂದು ಲಗ್ನ ಆಗುವುದಿಲ್ಲ ಅಂತ ಹಠ ಮಾಡಿದನಂತ; ಯಾವಾಗ ಬಾಗವ್ವ ಸತ್ತಾಳಂತ ತಿಳಿತೋ ಆಮೇಲೆ ಹೂ.. ಅಂದನಂತ."[17] ಭಾಗವ್ವನ ಗರ್ಭದ ಬಗ್ಗೆ ತಪ್ಪು ಕಲ್ಪನೆ ಇಟ್ಟುಕೊಂಡಿರುವುದರಿಂದ ಚಂಪಕ್ಕ ತನ್ನ ಸಹೋದರಿಯ ಸಂಬಂಧವನ್ನು ತಿರಸ್ಕರಿಸುತ್ತಾಳೆ. ತನ್ನ ಮಗನಿಗೆ ಇನ್ನೊಂದು ಮದುವೆ ಮಾಡಬೇಕೆಂದು ನಿರ್ಧರಿಸಿದರಿಂದ ಮೊದಲನೇ ಮದುವೆ ವಿಚಾರ ಗುಂಡಕ್ಕನಿಂದ ಮುಂದೆ ಬೀಗತನ ಮಾಡುವವರಿಗೆ ತಿಳಿಯಬಾರದೆಂಬ ಮನೋವೃತ್ತಿಯನ್ನು ಹೊಂದಿದ್ದಳು. ಇದರಿಂದ ವೆಂಕಟೇಶರಿಗೆ ತಮ್ಮ ಹಾಗೂ ಶಂಕರ ಮಾಸ್ತಾರವರ ಜೀವನ ವೃತ್ತಾಂತ ಸುಲಭವಾಗಿ ತಿಳಿಯಿತು.

ಭಾಗವ್ವನ ಮದುವೆಯಲ್ಲಿ ಒಂದು ಚಿನ್ನದ ಉಂಗುರ ವರದಕ್ಷಣೆಯಾಗಿ ನೀಡಿದರ ಬಗ್ಗೆ ವೆಂಕಟೇಶ ರಾಯರಿಗೆ ತಿಳಿಸಿರುವುದರಿಂದ, ಅದನ್ನು ಹರ ಸಾಹಸ ಪಟ್ಟು ಹುಡುಕುತ್ತಾರೆ. ಇದರ ಜೊತೆಗೆ ಇನ್ನೊಂದು ಸಾಕ್ಷ್ಯ ಸಹಿತವಾದ ಮನಿ ಆರ್ಡರ್ ಫಾರ್ಮ್ ಸಿಗುತ್ತದೆ. ಅದು "ಭಾಗೀರಥಿಬಾಯಿ ಜೋಷಿ, ಪೋಸ್ಟ್ ಶೂರ್ಪಾಲಿ, ಜಮಖಂಡಿ ತಾಲೂಕು"[18]. ಎಂದು ಅಡ್ರೆಸ್ ಇದ್ದು, ಮೊತ್ತ ಹತ್ತು ರೂಪಾಯಿಗಳು ಇದ್ದಿದ್ದು, ಅದರ ಮೇಲಿನ ಒಕ್ಕಣಿಕೆ ಸೇತು ಮಾಧವರಾಯ ಎಂದು ವೆಂಕಟೇಶ್ ರಾಯರು ಗುರುತಿಸಿದರು. ಪತ್ರದಲ್ಲಿರುವ ವಿಷಯವನ್ನು ಗಮನಿಸುತ್ತಾನೆ. "ನನ್ನನ್ನು ಕ್ಷಮಿಸು ಆರೋಗ್ಯ ಚೆನ್ನಾಗಿ ನೋಡಿಕೋ. ನನ್ನ ಮೊದಲ ಪಗಾರದಲ್ಲಿ ಹಣ ಕಳಿಸ್ತಿದ್ದೀನಿ; ನನ್ನ ಆಫೀಸಿಗೆ ತಕ್ಷಣ ಕಾಗದ ಬರೆ, ಎಲ್ಲಾ ವಿವರ ಬರೆ; ನಾನು ಮುಂದಿನದರಲ್ಲಿ ಎಲ್ಲಾ ಬರೀತೀನಿ"[19]. ಎಂದಿತ್ತು ಸೇತು ಮಾಧವರಾಯರು ತನ್ನ ತಾಯಿಯ ಭಯ, ಭಕ್ತಿ, ಗೌರವದಿಂದ ತನ್ನ ವೈಯಕ್ತಿಕ ಸ್ವಾತಂತ್ರ್ಯದಿಂದ ವಂಚಿತರಾಗಿದ್ದು ತಿಳಿಯುತ್ತದೆ. ಪತ್ನಿಯ ಋಣ ಭಾರದಂತೆ ಅವರಿಗೆ ಪತ್ರ ಬರೆದು ಯೋಗಕ್ಷೇಮ ಹಾಗೂ ತನ್ನ ಕೈಲಾದ ಮಟ್ಟಿಗೆ ಹಣ ನೀಡುವುದರೊಂದಿಗೆ ಋಣಮುಕ್ತನಾಗಲು ಬಯಸುತ್ತಾನೆ.

ಒಟ್ಟಾರೆಯಾಗಿ ಋಣ ಕಾದಂಬರಿಯಲ್ಲಿ ವೆಂಕಟೇಶ್ ರಾಯರ ಸೂಕ್ಷ್ಮ ಗ್ರಹಿಕೆಯ ಕೌಶಲ ತಿಳಿಯುತ್ತದೆ. ತನ್ನ ಜೀವನದಲ್ಲಿ ನಡೆದಿರುವ ವಿಸ್ಮಯ ಸಂಗತಿಯನ್ನು ಎಳೆಎಳೆಯಾಗಿ ಹಿಡಿದಿಡುವಲ್ಲಿ ಯಶಸ್ವಿಯಾಗಿದ್ದಾನೆ. ಹರಿದು ಹಂಚಿಹೋಗಿರುವ ತನ್ನ ಕರುಳು ಬಳ್ಳಿಯನ್ನು ಜೋಡಿಸುವಲ್ಲಿ ಹಾತೊರಿದಿದ್ದಾನೆ. ಅಚಾನಕವಾಗಿ ತಮ್ಮನ್ನೇ ಶಂಕರ್ ಮಾಸ್ತರ್ ಎಂದು ಬೆರಗುಗೊಳಿಸಿದ ಘಟನೆಯಿಂದ ಪತ್ತೆದಾರಿಗೆ ಇಳಿಯುತ್ತಾನೆ. ವೆಂಕಟೇಶ್ ರಾಯರು ಮೊದಲಿಗೆ ಶಂಕರ ಮಾಸ್ತರ ಯಾರು? ಏನು? ಎಂಬುದನ್ನು ತಿಳಿಯುತ್ತಾನೆ. ಅವರು ವಾಸಿಸುವ ಸ್ಥಳವನ್ನು ಪತ್ತೆ ಮಾಡುತ್ತಾರೆ. ಶಂಕರ ಮಾಸ್ತಾರರ ತಾಯಿಯಿಂದ ಅವರ ಹಿಂದಿನ ಜೀವನದ ಘಟನೆಗಳನ್ನು ಆಲಿಸುತ್ತಾನೆ. ಶ್ರಾದ್ಧ ಮಾಡುವ ಮಂತ್ರದ ಪಠಣದಿಂದ ಮತ್ತಷ್ಟು ಸತ್ಯ ಸಂಗತಿಯತ್ತ ಪ್ರಯತ್ನಿಸುತ್ತಾನೆ. ಭಾಗವ್ವನ ಮದುವೆಯಲ್ಲಿ ಹಾಕಿರುವ ಉಂಗುರ ಹಾಗೂ ಗುಂಡಕ್ಕನ ವಿಳಾಸವನ್ನು ಪತ್ತೆ ಹಚ್ಚಿ ಸತ್ಯಶೋಧನೆಯನ್ನು ಮುಂದುವರಿಸುತ್ತಾನೆ. ವೆಂಕಟೇಶ್ ರಾಯರ ತಂದೆಯವರು ಭಾಗವ್ವಳ್ಳಿಗೆ ಬರೆದ ಪತ್ರ ಹಾಗೂ ಮನಿ ಆರ್ಡರ್ ಮಾಡಿರುವ ವಿಷಯದಿಂದ ಪತ್ತೆದಾರರಿಗೆ ಮುಂದಾದ ಅವರು ತಮ್ಮ ಹಾಗೂ ಶಂಕರ ಮಾಸ್ತರರ ಒಂದೇ ತರದ ಹೋಲಿಕೆಯ ಸತ್ಯ ಸಂಗತಿಯನ್ನು ಪತ್ತೆ ಮಾಡುತ್ತಾರೆ.

ಕೊನೆಯ ಟಿಪ್ಪಣಿಗಳು :

1. ಸುಧಾ ಮೂರ್ತಿ, ಋಣ, ಪುಟ ಸಂಖ್ಯೆ– 35
2. ಅದೇ. ಪು.ಸಂ.–37
3. ಅದೇ. ಪು.ಸಂ.–39
4. ಅದೇ. ಪು.ಸಂ.–50
5. ಅದೇ. ಪು.ಸಂ.–50
6. ಅದೇ. ಪು.ಸಂ.–51
7. ಅದೇ. ಪು.ಸಂ.–54

8. ಅದೇ. ಪು.ಸಂ.–73
9. ಅದೇ. ಪು.ಸಂ.–73
10. ಅದೇ. ಪು.ಸಂ.–74
11. ಅದೇ. ಪು.ಸಂ.–74
12. ಅದೇ.ಪು.ಸಂ.–74
13. ಅದೇ. ಪು.ಸಂ.–75
14. ಅದೇ.ಪು.ಸಂ.–75
15. ಅದೇ.ಪು.ಸಂ.–101
16. ಅದೇ.ಪು.ಸಂ.–102
17. ಅದೇ.ಪು.ಸಂ.–103
18. ಅದೇ.ಪು.ಸಂ.–94
19. ಅದೇ.ಪು.ಸಂ.–94

ಪರಾಮರ್ಶನ ಗ್ರಂಥಗಳು :

1. ವೆಂಕಟ ಸುಬ್ಬಯ್ಯ. ಜಿ. (ಸಂ), ರಾಜಶ್ರೀ ಸತೀಶ್(ಸ.ಸಂ.), 2010, ಕನ್ನಡ ಕ್ಲಿಷ್ಟ, ಪದಕೋಶ, ಪ್ರಿಸಂ ಬುಕ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು.
2. ಶಿವರಾಮ್ ಕಾರಂತ್ ಕೆ. 1990, ಸಿರಿಗನ್ನಡ ಅರ್ಥಕೋಶ – ಕನ್ನಡ – ಕನ್ನಡ, ಎಸ್ ಬಿ ಎಸ್ ಪ್ರಕಾಶನ – ಬೆಂಗಳೂರು.
3. ಸುಧಾ ಮೂರ್ತಿ, ಜುಲೈ– 2019, ಋಣ, ಸಪ್ನಾ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

***

Translation and Trans Creation: Recreating History in Vasudhendra's "Tejo Tunga Bhadra''

***

Dr. Jayashree B.
Assistant Professor of English
Government First Grade College,
Haleyangadi
bjayashree97@gmail.com

Translation is a significant part of our day to day existence. India being a heterogeneous ,poly glottal nation,most of our communication systems are based on translation at various levels right from the vernacular langauge at the grocery store,up to the bi lingual teaching epistemologies. Whether it is national language policy or the introduction of English at government primary schools, translation and trans creation have become a part and parcel of Karnataka landscape at various levels. Hindi, English and numerous dialects of Kannada with their various accents have become the norm .

In this regard, literature and media play a pivotal role in promoting this synchronisation between languages and translation. Translation has the ability to unravel the multiple realities of a population, both from the present and the past era.

At another level, Translation of ideas and lingo is necessary for the growth of any culture, nation or civilisation, as it helps us to become better individuals with a spirit of altruism. It is a form of self discovery also. However, as India is a nation that consists of more than 780 languages, by and large, English has become the link language, connecting multifarious interests, languages and literary histories. In a way, it is a window to the multiple cultures of the sub-continent. As Sujit Mukherjee says, " English has made it possible for an Indian text to be read or discovered" in translation, more widely than it could be in any other language.

This paper is an attempt to analyse Vasudhedra's Tejo Tunga Bhadra as a work of trans creation, a work which recreates history. The novel looks at the lives of common men during the time of Vijaya Nagara Empire as well as Lisbon,Portugal at that time. It is a perfect example of a text which could be studied from new historicism perspective.,a successful recreation of Vijaya Nagara empire .

'Tejo Tungabhadra' is a much documented work of Vasudhendra. The was published in the year 2019 and has seen more than 10 reprints. It has a haunting quality due to its historic insights, crisp narration and rich depiction of the Vijayanagara empire aswella as the Portugese conquest during that time.

The novel raises many contemporary issues of the time which paved the way for foreign conquest. It also draws our attention to the power struggles and power structures which have been the same throughout dynasties and nationalities.

The story is about Gabriel, who travels in Albuquerque's' ship as an engraver cum historian. He records the happenings of the voyage on a daily basis. It is for his beloved Bella's sake that he takes up this decision to travel to a new land. The brutalities that he encounters during this voyage depict the inhumanity meted out to the native people by the colonisers. Parallel to the story of Gabriel, there is the love story of Hampamma and Keshava, who is a sculptor turns soldier in Vijayanagara Empire.

From a historical perspective, the novel takes place during the time of Vasco Da Gama's arrival in to India, his prestigious return to Portugal and the invasion of Albuquerque afterwards. Within Indi, there were wars between Krishna Deva Raya and Adil Shah. Then there are references to the Zamorin kings of Kerala. The novel, roughly set in the late 15th and early 16th century ie it is a story of two rivers Tejo and Tungabhadra, whose souls are bound together by history. It is also the story of the rulers who determine the course of history of a nation.

Gabriel's story becomes our own story and makes us reflect on destiny and the helplessness of the lovers when encountered by historical forces. In a way it is about the crisscross pattern of

tragedies which some unfortunate souls experience throughout their lives. Though the story is fictional, as history and the present are interlinked, it raises many questions as to the nature of religious conversion, exploitation of women, relationship between the rulers and army. Trade and the undercurrents of imperial expansion.

The novel depicts the horrors of the wars, rape and exploitation of women during the war times and the conversion of the people during along the sea route. At a philosophical level the novel seeks answers to existential questions like the meaning of life and what constitutes 'greatness'.

The central character Gabriel undergoes scathing experiences in the crucible called 'life'. Gabriel, who wants to acquire wealth in order to marry his beloved Bella, leaves to India. But he loses everything, even his ears and nose get mutilated by the brutal conquerors. The novel depicts the harsh truth of hierarchies present between the rich and poor, stratified social structures, disputes and superiority based on caste, nationalities. It also says that only altruism can conquer these evils.

Parallel to Gabriel's character, there is the character of Keshava, who migrates to Vijayapura from Belur.However, in his bid to win Hampamma, he has to fight and win against the local wrestelerof Tembakapra, Mapala Nayaka, who dies in the duel. This results in a deep psychological war within himself and he turns away from life itself. He makes the drastic mistake of becoming a 'Lenka' in Krishna Deva Raya's army, and is bound by the condition that he has t6o behead himself if a baby boy is born to the king. In a way he finds hs purpose in his ow martyrdom.

The novel makes us reflect on the numerous ' Mastikattes' amd ' Veera gallus' ie stone inscriptions erected on behalf of the Satis and soldiers who have been killed alive. Yet another factor to be noticed is that even the kings who ruled them were ready to face those perils and lived a lived a luxurious, lecherous life, perhaps to compensate for their short life span.

The novelist has depicted the historical wrongs done to women in the name of religion, prestige and kingship. Wrestlers who fight for the sake of a beautiful woman like Hampama, brothers who push their own sisters to Sati pyre in order to get their wealth, and the brutal ways in which elite women had to die in the case of their husband's death.

The novel throws light on many truths of the time. Vijaya Nagara empire, which used to pearls and precious stones on streets had been the house of many royal prostitutes. They did not have to undergo Sati. Very ironically, Hampamma, who was about to undergo Sati elicits a promise from her friend that her daughter should become a courtesan, so as to avoid Sati.

The novel effectively portrays how Indian emperors allowed the Portuguese and other conquerors to plunder this prosperous land. From a tourist vantage pint, a reading of the novel will give fresh insights on the subject prior to a visit to Hampi. The rivers 'Tejo' and 'Tungabhadra' depicted in the novel are symbolic of life as well as civilisation, connecting the East and the West.

In conclusion, 'Tejo Tunga Bhadra' is a novel which makes the readers to think deeply about the history of this nation. Though the novel is written in Kannada, a translation of this novel is indeed commendable and justifies Sujit Mukherjee's phrase " Translation as discovery".

References:

1. Barry, Peter. Beginning Theory An Introduction to literary and cultural theory.Manchestger and
New York: Manchester University Press, 2009.
2. Mukherjee, Sujit. Translation as Discovery and Other Essays in English Translation. New Delhi:Allied Publishers Private Limited, 1981.
3. Vasudendra. Tejo Tungabhadra Tributaries of Time. Trans. Maithreyi Karnoor. Haryana: Pengui
Random House India, 2022.

***

ಪ್ರತಿಸ್ಪಂದ ಓದುಗರಿಗೆ ಸೂಚನೆ

ಈ ಪತ್ರಿಕೆಯು ಮುದ್ರಣ ಸ್ವರೂಪದಲ್ಲಿದ್ದು, ಮುದ್ರಣ ರೂಪದ ISSN ನಂಬರ್ ಹೊಂದಿದೆ. ನಮ್ಮ ಪ್ರತಿಸ್ಪಂದ ಜಾಲತಾಣದಲ್ಲಿ ಓದುಗರಿಗೆ ಉಚಿತವಾಗಿ ಲಭ್ಯವಾಗುತ್ತದೆ. ಸಂಶೋಧನ ಲೇಖನ ಪ್ರಕಟಿಸುವವರಿಗೆ ಶುಲ್ಕವಿದ್ದು, ಆಯಾ ಸಂಚಿಕೆಯ ಪ್ರಕಟಣೆಯಲ್ಲಿ ಸರಿಯಾಗಿ ಗಮನಿಸಿ, ಲೇಖನ ರಚಿಸಿ ಶುಲ್ಕ ಪಾವತಿಸಿ. ಈ ಪತ್ರಿಕೆಯಲ್ಲಿ ನಿಮ್ಮ ಕೃತಿಗಳು ಅಧ್ಯಯನಕ್ಕೆ ಒಳಪಡುವ ಆಸಕ್ತ ಲೇಖಕರು ನಮ್ಮ ಈ ವಿಳಾಸಕ್ಕೆ ಕಳುಹಿಸಿಕೊಡಿ.

ಡಾ. ರವಿಶಂಕರ್ ಎ.ಕೆ
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಕೆ. ನಾರಾಯಣಪುರ, ಬೆಂಗಳೂರು

ಪತ್ರಿಕೆಯಲ್ಲಿ ಪ್ರಕಟವಾಗುವ ಪ್ರತಿ ಬರಹವು ಆಯಾ ಲೇಖಕರ ಹಕ್ಕುಗಳಿಗೆ ಸಂಬಂಧಿಸಿರುತ್ತದೆ. ಇಲ್ಲಿನ ವಿಚಾರಗಳು ಆಯಾ ಲೇಖಕರ ಅಧ್ಯಯನಗಳು. ಪತ್ರಿಕೆಯು ಯಾವುದೇ ಜವಾಬ್ದಾರಿಯನ್ನು ಹೊಂದಿರುವುದಿಲ್ಲ.

ISSN: 2320-9941

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
LITERATURE, CULTURE - RESEARCH QUARTERLY
PEER - REVIEWED JOURNAL
ISSN: 2320-9941

ಪ್ರತಿಸ್ಪಂದ

ಪ್ರಕಟಣೆ :
ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
ತೋಟದ ಮನೆ ನಂ 107(25)
ಕಂಚಾಫಟ್ಟ ಹೊಸ ಬಡಾವಣೆ
ತಿಪಟೂರು 572201
E-MAIL: PRATHISPANDHA@GMAIL.COM
WEBSITE : HTTPS://PRATHISPANDHA.WORDPRESS.COM/